ಕೂಡಲಸಂಗಮ : ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು
ಗೋಡಿಹಾಳ ಕಾಂತೇಶರೆಡ್ಡಿ ರಾಮರಡ್ಡಿ



ಮಾರ್ಗದರ್ಶಕರು
ಡಾ. ಕೆ. ರವೀಂದ್ರನಾಥ
ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಭಾಷಾನಿಕಾಯ
ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ
ಕೂಡಲಸಂಗಮ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೧೯

ಕೂಡಲಸಂಗಮ : ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಗೋಡಿಹಾಳ ಕಾಂತೇಶರೆಡ್ಡಿ ರಾಮರಡ್ಡಿ

ಮಾರ್ಗದರ್ಶಕರು

ಡಾ. ಕೆ. ರವೀಂದ್ರನಾಥ

ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಭಾಷಾನಿಕಾಯ

ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ

ಕೂಡಲಸಂಗಮ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೯

ಡಾ. ಕೆ. ರವೀಂದ್ರನಾಥ
ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

"ಕೂಡಲಸಂಗಮ : ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಗೋಡಿಹಾಳ ಕಾಂತೇಶರೆಡ್ಡ** ರಾಮರಡ್ಡಿ ಅವರು ನನ್ನ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಕೆ. ರವೀಂದ್ರನಾಥ
ಪ್ರಾಧ್ಯಾಪಕರು/ಮಾರ್ಗದರ್ಶಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : ೧೮-೨-೨೦೧೮
ಸ್ಥಳ : ವಿದ್ಯಾರಣ್ಯ

ಪ್ರಮಾಣ ಪತ್ರ

"ಕೂಡಲಸಂಗಮ : ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪ್ರಾಧ್ಯಾಪಕರಾದ **ಡಾ. ಕೆ. ರವೀಂದ್ರನಾಥ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯದ ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ, ಕೂಡಲಸಂಗಮದಲ್ಲಿ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ಗೋಡಿಹಾಳ ಕಾಂತೇಶರೆಡ್ಡಿ ರಾಮರಡ್ಡಿ

ಸಂಶೋಧನಾ ವಿದ್ಯಾರ್ಥಿ

ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ
ಕೂಡಲಸಂಗಮ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ : 19/3/2019

ಸ್ಥಳ : ಹಂಪಿ

<u>ಪರಿವಿಡಿ</u>

ಅಧ್ಯಾಯ : ೧

೧.೧. ಅಧ್ಯಯನದ ಉದ್ದೇಶ
೧.೨. ಅಧ್ಯಯನ ವ್ಯಾಪ್ತಿ
೧.೩. ಅಧ್ಯಯನದ ವಿಧಾನ
೧.೪. ಅಧ್ಯಯನದ ಸ್ವರೂಪ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

೧.೧. ಅಧ್ಯಯನದ ಉದ್ದೇಶ

ಕನ್ನಡ ನಾಡಿನಲ್ಲಿ ಅನೇಕ ಪವಿತ್ರ ಸ್ಥಳಗಳಿವೆ. ಅವುಗಳಿಗೆ ತನ್ನದೇ ಆದ ಇತಿಹಾಸ ಮತ್ತು ಪರಂಪರೆಯಿದೆ. ನದಿಯ ಪ್ರದೇಶದಲ್ಲಿ ಉದಯಿಸಿದ ಪುಣ್ಯಕ್ಷೇತ್ರಗಳು ವಿಶೇಷವಾಗಿ ಹೆಚ್ಚು ಮಹತ್ವ ಪಡೆದಿವೆ. ಇದಕ್ಕೆ ಕೂಡಲ ಸಂಗಮ ಕ್ಷೇತ್ರವು ಹೊರತಾಗಿಲ್ಲ. ಈ ಕ್ಷೇತ್ರ ಅಧ್ಯಯನ ಮಾಡುವುದು ಇಲ್ಲಿಯ ಐತಿಹಾಸಿಕ ಘಟನೆಗಳ ಮೇಲೆ ಬೆಳಕು ಚೆಲ್ಲುವುದು ಮುಖ್ಯ ಉದ್ದೇಶವಾಗಿದೆ. ಕೂಡಲಸಂಗಮ ಕ್ಷೇತ್ರದ ಶಾಸನಗಳು, ದೇವಸ್ಥಾನದ ವಾಸ್ತುಶಿಲ್ಪ, ಸ್ಥಳನಾಮ ಅಧ್ಯಯನ, ಸಾಂಸ್ಕೃತಿಕ ಅಧ್ಯಯನ, ಶೈಕ್ಷಣಿಕ ಅಧ್ಯಯನ, ಧಾರ್ಮಿಕ ಅಧ್ಯಯನ ಮಾಡುವುದರ ಮೂಲಕ ಬೆಳಕು ಚೆಲ್ಲುವುದು ಅಧ್ಯಯನದ ಸ್ಪಷ್ಟ ಉದ್ದೇಶವಾಗಿದೆ. ಹಾಗೆಯೇ ಈ ಕ್ಷೇತ್ರದ ಜೊತೆಗೆ ಶರಣರು ಇಟ್ಟುಕೊಂಡ ಅವಿನಾಭಾವ ಸಂಬಂಧವನ್ನು ವ್ಯಕ್ತಪಡಿಸುವ ಉದ್ದೇಶವನ್ನು ಹೊಂದಲಾಗಿದೆ.

ಬಸವಣ್ಣನವರ ಕುರಿತ ಶಾಸನಗಳು ಸಾಹಿತ್ಯಿಕ ವಿವರಗಳು, ಕಾವ್ಯ-ಪುರಾಣಗಳ ಉಲ್ಲೇಖಗಳು ಅದರಿಂದ ರಚಿಸಲ್ಪಟ್ಟ ಸಾಹಿತ್ಯವನ್ನು ಅವಲೋಕಿಸಿ ಚರ್ಚಿಸಲಾಗಿದೆ. ಈ ಕ್ಷೇತ್ರಕ್ಕೆ ಸಂಬಂಧಿಸಿದ ಸುಮಾರು ಐದು ಶಾಸನಗಳು, ಕಾವ್ಯ-ಪುರಾಣಗಳಾದ ಬಸವ ಪುರಾಣ, ಸಿಂಗಿರಾಜ ಪುರಾಣ, ಚೆನ್ನಬಸವ ಪುರಾಣ, ಗರಣಿಬಸವೇಶ್ವರ ಚಾರಿತ್ರ್ಯ, ಅಮಲ ಬಸವ ಚಾರಿತ್ರ್ಯ, ಬಸವರಾಜ ದೇವರ ರಗಳೆ, ಚೆನ್ನಬಸವಣ್ಣನವರ ವಚನಗಳು, ಬಸವಣ್ಣನವರ ವಚನಗಳು, ಪ್ರಭುಲಿಂಗ ಲೀಲೆ, ಶಿವತತ್ತ್ವ ಚಿಂತಾಮಣಿ ಹೀಗೆ ಅನೇಕ ವೀರಶೈವ ಮತ್ತು ವೀರಶೈವೇತರ ಕಾವ್ಯಗಳು ಇನ್ನಿತರ ಪೂರಕವಾದ ಗ್ರಂಥಗಳ ಉಲ್ಲೇಖಗಳನ್ನು ಬಳಸಿಕೊಂಡು ವ್ಯವಸ್ಥಿತವಾದ ಅಧ್ಯಯನಕ್ಕೆ ಮಹತ್ವ

ಕೊಡಲಾಗಿದೆ. ಕ್ಷೇತ್ರ ಕುರಿತು ಹೆಚ್ಚು ಮಹತ್ವ ಬೀರುವ ಕೃತಿಗಳು ಕಡಿಮೆ ಇವೆಯಾದರೂ ದೊರೆತ ಪ್ರಮುಖ ಆಕರಗಳ ಸಹಾಯದಿಂದ ಇಂತಹ ಒಂದು ಅಧ್ಯಯನದ ಪ್ರಯತ್ನವನ್ನು ಮಾಡಲಾಗಿದೆ.

ಕೂಡಲಸಂಗಮ ಕ್ಷೇತ್ರವನ್ನು ಕುರಿತು ಬರೆದ ಕೃತಿಗಳು ವಿರಳ. ಈ ಕೆಲಸವನ್ನು ಮಾಡಿದ ಕೀರ್ತಿ ಜ.ಚ.ನಿ ಅವರಿಗೆ ಸಲ್ಲುತ್ತದೆ. ಕೂಡಲಸಂಗಮ ಬಹುಮುಖ ಹಿರಿಮೆಯಿಂದ ಬೆಳಗಿದ ಮಹಾಕ್ಷೇತ್ರವೆನಿಸಿದೆ. ಶ್ರೀಗಳೇ ಹೇಳುವಂತೆ 'ಈ ಕ್ಷೇತ್ರ ಕೃಷ್ಣ–ಮಲಪ್ರಭೆಯರ ಸಂಗಮ, ಗುರು–ಶಿಷ್ಯರ ಸಂಗಮ, ಭಕ್ತ–ಜಂಗಮರ ಸಂಗಮ, ಅಂಗ–ಲಿಂಗಗಳ ಸಂಗಮ ಅಷ್ಟೇ ಅಲ್ಲ ಈ ಸಂಗಮವು ಉಗಮಸ್ಥಾನವೂ ಹೌದು, ಕಲ್ಯಾಣದ ಉಗಮ ಸಂಗಮವೂ ಹೌದು. ಈ ಸ್ಥಳವು ಶರಣರ ಧರ್ಮ ಸಂಸ್ಕೃತಿಯನ್ನು ಹುಟ್ಟುಹಾಕಿರುವುದು. ಬಸವಣ್ಣನಂತಹ ವಿಶ್ವಗುರುವನ್ನು ಕಾಣಿಕೆಯಿತ್ತ ಪುಣ್ಯಭೂಮಿಯಾಗಿದ್ದು, ಮಾನವ ಕುಲ ಕಲ್ಯಾಣ ಬಸವಣ್ಣನನ್ನು ರೂಪಿಸಿದ ಜಾತವೇದ ಮುನಿಗಳ ತಪೋಭೂಮಿಯಾಗಿದೆ ಸಂಗಮ.

ಕೂಡಲಸಂಗಮವು ಹಲವು ಮುಖಗಳ ಸಂಗಮವನ್ನು ಅನುಭಾವಿಗಳಾಗಿ ರೂಪಿಸಿಕೊಂಡಿದ್ದು ಸಂಶೋಧಕರಾಗಿ ಪ್ರಬಂಧಕಾರರಾಗಿ ವಿಶ್ಲೇಷಿಸಿದ ಹಲವಾರು ಶರಣರಿದ್ದಾರೆ. ಈ ಕ್ಷೇತ್ರದ ನೆಲ–ಜಲ, ಕಲ್ಲು–ಮಣ್ಣುಗಳನ್ನು ಆಧ್ಯಾತ್ಮಿಕ ಕಾಂತಿಯಿಂದ ಜೀವಂತವಾಗಿ ನಿಲ್ಲಿಸಿದ ಪುಣ್ಯಕ್ಷೇತ್ರ ಈ ಕೂಡಲಸಂಗಮವಾಗಿದೆ. ಭಾರತ ಅನೇಕ ಪುಣ್ಯಕ್ಷೇತ್ರಗಳ ಮತ್ತು ತೀರ್ಥಕ್ಷೇತ್ರಗಳ ತವರುಮನೆ. ಅಂತಹ ಕ್ಷೇತ್ರಗಳಲ್ಲಿ ಕೂಡಲಸಂಗಮ ಕ್ಷೇತ್ರವೂ ಒಂದು. ಈ ಕ್ಷೇತ್ರದ ಅಂತರಾರ್ಥ, ಹಿರಿಮೆ–ಗರಿಮೆ, ನೆಲ–ಜಲಗಳ ಸ್ವಭಾವ–ಪ್ರಭಾವಗಳು ಕೂಡಲ ಧರೆಯು ತಿರುಗುತ್ತ ಮಹಿಮರ ಸಂಪನ್ನತೆಗಳು ಕೂಡಲ ಕ್ಷೇತ್ರದಲ್ಲಿ ಒಡಮೂಡಿವೆ. ಕೃಷ್ಣೆ–ಪ್ರಭೆಯರ ಕೂಡಲ–ಸಂಗಮಗಳ ಕಪ್ಪಡಿ–ಕೂಡಲಗಳ ವಿಶಿಷ್ಟ ಅರ್ಥವ್ಯಾಪ್ತಿ ಪಡೆದಿವೆ. ಕೃತಯುಗದಲ್ಲಿ ಭಾಸ್ಕರ ಕ್ಷೇತ್ರವಾಗಿದ್ದು, ತ್ರೇತಾಯುಗದಲ್ಲಿ ಪರಶುರಾಮ ಕ್ಷೇತ್ರವಾಗಿದ್ದು, ದ್ವಾಪರದಲ್ಲಿ ಕಪಿಲ ಕ್ಷೇತ್ರವಾಗಿದ್ದು, ಕಲಿಯುಗದಲ್ಲಿ ಕೂಡಲಸಂಗಮವಾಗಿ ರಂಜಿಸುತ್ತಿರುವ ಕ್ಷೇತ್ರದ ಪುಣ್ಯಕಥೆ ರಮ್ಯವಾದುದೇ ಸರಿ. ಕೂಡಲ ಸಂಗಮ ಕ್ಷೇತ್ರದ ವಿವರಣೆ ಕಣ್ಣಿಗೆ ಕಟ್ಟುವಂತಿದೆ. ಕೂಡಲಸಂಗಮನಾಥ, ಜಾತವೇದ ಮುನಿಗಳು, ಶಿವಕಾರುಣ್ಯದ ಬಸವಣ್ಣ, ಗಂಗಾಂಬಿಕೆ, ಅಕ್ಕ ನಾಗಲಾಂಬಿಕೆ, ಚೆನ್ನಬಸವಣ್ಣ, ಇವರೆಲ್ಲರಿಂದ ಶೋಭಿತವಾಗಿದೆ.

ಕನ್ನಡ ನಾಡಿನ ಕ್ಷೇತ್ರದೊಳು ತುಂಬ ಜಾಗೃತ ಸ್ಥಳಗಳು ಮಾನವನ ಬಾಳು, ಬದುಕನ್ನು ಹಸನಗೊಳಿಸಬಲ್ಲ ಬಸವಣ್ಣ, ಬುದ್ಧ, ಮಹಾವೀರ, ಪ್ರಭುದೇವ, ಮಹಾದೇವಿಯಕ್ಕ, ಚೆನ್ನಬಸವಣ್ಣ, ಚಂದ್ರಾವತಿ ಮೊದಲಾದವರನ್ನು ಮಹಾನುಭಾವರನ್ನಾಗಿ ರೂಪಿಸುವಲ್ಲಿ ಕ್ಷೇತ್ರಗಳ ಪಾತ್ರ ಹಿರಿದಾಗಿದೆ. ಅಂತೆಯೇ ದೇಶ, ಕಾಲ, ವಸ್ತುಗಳಿಂದೀಶ ಒಲಿವನು. ಎಂದು ನಿಜಗುಣ ಶಿವಯೋಗಿಗಳು ಹಾಡಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಈ ಪುಣ್ಯ ಕ್ಷೇತ್ರ ಕುರಿತು ಮಾಯಿದೇವ ಶಿವಾಚಾರ್ಯರು ಹೀಗೆ ಹಾಡಿದ್ದಾರೆ,

'ಗುರುದೈವಂ ವರಪುಣ್ಯ ತೀರ್ಥ ಮಮಲ ಕ್ಷೇತ್ರಂ ಸಮಾನಂ ಗಡಾ
ಗುರುವಂ ದೈವಮನಾಹ ಕಾಲ್ಮರೆದು ಸುಂಕಲ್ಪಾಪಮೆಂಬಾಗಳಾ-
ಗುರುದೈವಕ್ಕೆಣೆಯಾದ ತೀರ್ಥ ಪರಮಕ್ಷೇತ್ರಂಗಳಂ ಮೆಟ್ಟುಬಾ
ನರಿರ್‍ಗಿನ್ನೆಲ್ಲಿಯ ಮುಕ್ತಿ ಭಕ್ತಿರಹಿತರ್ಗ್ಗಯ್ಯೋ ಶಿವಾವಲ್ಲ ಭಾ'

ಎಂದು ಹೇಳುತ್ತಾ ಒಳ್ಳೆಯ ಪುಣ್ಯ ತೀರ್ಥಕ್ಷೇತ್ರದೊಳು ಗುರುದೇವನಿಗೆ ಸಮಾನವೆನಿಸುತ್ತವೆ. ಕನ್ನಡ ನಾಡಿನ ಪುಣ್ಯಕ್ಷೇತ್ರಗಳಲ್ಲಿ ಕೂಡಲಸಂಗಮ ಕ್ಷೇತ್ರದ ಮಹಿಮೆ ಅತ್ಯಂತ ಹಿರಿದಾದದ್ದು. ಭಕ್ತಿಭಂಡಾರಿ ಬಸವಣ್ಣನಂತಹ ಮಹಾಮಹಿಮ ಇಲ್ಲಿದ್ದು ತನ್ನ ಭವ್ಯ ಜೀವನವನ್ನು ರೂಪಿಸಿಕೊಂಡಿರುವುದು ಅಲ್ಲದೆ ಬಸವಣ್ಣನ ಗುರುಗಳಾದ ಜಾತವೇದ ಮುನಿ ಆ ಕ್ಷೇತ್ರದ ಅಧಿಪತಿಯಾಗಿ ಸಂಗಮನಾಥನ ಸೇವೆ ಪೂಜೆಗಳಿಂದ ಶಿಕ್ಷಣ ಮತ್ತು ಸಂಸ್ಕಾರಗಳಿಂದ ಲೋಕೋತ್ತರವಾದ ಸಿದ್ಧಿಯನ್ನು ಪಡೆದವನು. ಭಕ್ತಿಯ ಪ್ರತೀಕವಾಗಿ ತ್ರಿವಿಧ ದಾಸೋಹಿಯಾಗಿ ಕಾಯಕ ಯೋಗಿಯಾಗಿ, ಕ್ರಾಂತಿ ಪುರುಷನಾಗಿ, ಅಸ್ಪೃಶ್ಯೋದ್ಧಾರಿಯಾಗಿ, ಕರಣಿಕನಾಗಿ, ಸರ್ವರಿಗೆ ಸತ್ಯ ಸಹಜವಾದ ಮಾರ್ಗವನ್ನು ತೋರಿರುವ ಸರ್ವ ಸಮರ್ಥನಾಗಿ ಮಾನವರಲ್ಲಿ ಹೊಸ ಸ್ಫೂರ್ತಿಯನ್ನು, ಹೊಸ ಚೈತನ್ಯವನ್ನು, ತುಂಬಿದರು. ಈ ಕಾರಣದಿಂದಾಗಿ ಸಾಹಿತ್ಯಿಕ, ಸಾಮಾಜಿಕ, ನೈತಿಕ ಕ್ಷೇತ್ರಗಳಲ್ಲಿ ಯುಗಪುರುಷನೆನಿಸಿದನು. ಕಲ್ಯಾಣವನ್ನು ಭೂಕೈಲಾಸವನ್ನಾಗಿ ಮಾಡಿ ಅನುಭವ ಮಂಟಪವನ್ನು ರಚಿಸಿ ಅನುಭಾವಿಗಳನ್ನು ಒಂದೆಡೆಯಲ್ಲಿ ಕೂಡಿಸಿ ಅನುಭಾವದ ಪ್ರಭೆಯು ಪರಪ್ರಾಂತ್ಯಗಳಲ್ಲಿಯೂ ಹರಡುವಂತೆ ಮಾಡಿದ ಕೀರ್ತಿ ಬಸವಣ್ಣನವರದ್ದಾಗಿದೆ. ಇಂತಹ ವಿಶ್ವ ಮಾನವನನ್ನು ರೂಪಿಸಿ ಬೆಳೆಸಿದ ಕೀರ್ತಿ ಕೂಡಲಸಂಗಮ ಕ್ಷೇತ್ರಕ್ಕಿದೆ. ಪುಣ್ಯ ಪುರುಷರ ಕ್ಷೇತ್ರಗಳೊಡನೆ ಕ್ಷೇತ್ರತೀರ್ಥಗಳ ಸಂಬಂಧ ಇದ್ದು, ಸಾಧಕರ ಸಾಧನೆಗೆ ಸಿದ್ಧಿಯನ್ನು ಒದಗಿಸಿವೆ. ಕ್ಷೇತ್ರ ಚರಿತ್ರೆ ನಿಜಕ್ಕೂ ಜಡವಾದುದಲ್ಲ. ಆ ವಾತಾವರಣದಲ್ಲಿ ವಿಶಿಷ್ಟ ಪ್ರಭೆ ಇರುತ್ತದೆ. ಸಾಧಕನ ಪ್ರಗತಿಗೆ ಆಶ್ರಯ ತಾಣವಾಗಿ ಪಾವಿತ್ರ್ಯತೆಯಿಂದ ಕೂಡಿ ಕಲಾತ್ಮಕವಾಗುತ್ತದೆ. ಜನಸಮುದಾಯವನ್ನು ಒಳ್ಳೆಯ ಮಾರ್ಗದತ್ತ ಕೊಂಡೊಯ್ಯುತ್ತದೆ. ಸಂಕಲ್ಪ ಸಿದ್ಧಿಯನ್ನು ಒದಗಿಸುವುದರ ಮೂಲಕ ಆರ್ಥಿಕ ವ್ಯವಹಾರಕ್ಕೂ ಕಾರಣವಾಗಿದೆ. ಕಲಾಕ್ಷೇತ್ರ, ಸಂಸ್ಕೃತಿ ಕ್ಷೇತ್ರ, ಶೈಕ್ಷಣಿಕ ಕ್ಷೇತ್ರ, ಕೃಷಿ ಕ್ಷೇತ್ರ, ಭಕ್ತಿ, ಜ್ಞಾನ, ದಾಸೋಹ, ಸಮಾನತೆ ಮುಂತಾದ ಎಲ್ಲ ಬಗೆಯ ಶಕ್ತಿ ಈ ಕೂಡಲಸಂಗಮ ಕ್ಷೇತ್ರಕ್ಕಿದೆ.

ಸ್ಥಳ ಮಾಹಾತ್ಮೆ ಅಧ್ಯಯನ ಸಣ್ಣಕೆಲಸವಲ್ಲ. ಅದರಲ್ಲಿ ಎಲ್ಲ ಬಗೆಯ ವಿಷಯಗಳ ಸಂಗ್ರಹ ಅಡಗಿರುತ್ತದೆ. ಆ ಸ್ಥಳ ತನ್ನದೇ ಆದ ವಿಶಿಷ್ಟ ಚರಿತ್ರೆಯನ್ನು ಹೊಂದಿರುತ್ತದೆ. ಈ ಹಿನ್ನೆಲೆಯಲ್ಲಿ ಶ್ರೀಗಿರಿ ತಿರುಪತಿ, ಧರ್ಮಸ್ಥಳ, ಕಾಶಿ, ವಾರಣಾಸಿ, ಹೇಮಕೂಟ, ಹಿಮಾಚಲ, ಕಂಚಿಯಂತಹ ಮುಂತಾದ ಪವಿತ್ರ ಕ್ಷೇತ್ರಗಳನ್ನು ನೆನಪಿಸಿಕೊಂಡಾಗ ಈ ಕ್ಷೇತ್ರ ಮಹತ್ವವು ಅದರೊಂದಿಗೆ

ಹೊಂದಿಕೊಂಡಿರುವಂತೆ ಭಾಸವಾಗುತ್ತದೆ. ಈ ಎಲ್ಲ ಕ್ಷೇತ್ರ ದರ್ಶನದಿಂದ ತೀರ್ಥಸ್ನಾನದಿಂದ ಲಿಂಗಾರ್ಚನೆಯಿಂದ, ಶಾರೀರಿಕ, ಮಾನಸಿಕ ರೋಗಗಳು ತೊಲಗುವಂತೆ ಕ್ಷೇತ್ರ ಪ್ರಜ್ಞೆಯಿಂದ ಬೌದ್ಧಿಕ ರೋಗಗಳು ಮಾಯವಾಗುತ್ತವೆ.

ಕೂಡಲ ಸಂಗಮ ಕ್ಷೇತ್ರವು ಸಂಗಮನಾಥ ದೇವನಿಂದ ಪ್ರಸಿದ್ಧಿಯನ್ನು ಪಡೆದದ್ದಾಗಿದೆ. ಸಂಗಮನಾಥ ಎಂಬ ಪದ ವಿವೇಚನೆಯನ್ನು ಮಾಡಿದಾಗ ಈ ಸ್ಥಳಕ್ಕೆ ಪ್ರಾಚೀನ ಕಾಲದಲ್ಲಿ ನಾಥ ಸಂಪ್ರದಾಯದ ಹಿನ್ನೆಲೆ ಇರುವುದನ್ನು ಗುರುತಿಸಬಹುದಾಗಿದೆ. ಇದಕ್ಕೆ ಪೂರಕವೆಂಬಂತೆ ಸಂಗಮನಾಥ ದೇವಾಲಯದ ಹೊರಭಾಗದಲ್ಲಿ ಅನೇಕ ಮಿಥುನ ಶಿಲ್ಪಗಳು ಇರುವುದನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಕೂಡಲಸಂಗಮ ಕ್ಷೇತ್ರವು ಪ್ರಾಚೀನ ಕಾಲದ ಒಂದು ನಾಥ ಸಂಪ್ರದಾಯ ಕೇಂದ್ರ ಎಂದು ಈ ಸಂಶೋಧನೆಯ ಮೂಲಕ ತಿಳಿಯಪಡಿಸುವ ಉದ್ದೇಶವಿದೆ.

ಕೂಡಲ ಸಂಗಮ ಕ್ಷೇತ್ರವು ಪಾವನ ಸ್ಥಳ, ಪುಣ್ಯಸ್ಥಳ, ಕನ್ನಡ ಕ್ಷೇತ್ರ, ಸಾಂಸ್ಕೃತಿಕ ಸಂಪತ್ತಿನಿಂದ ಕೂಡಿದ ಕ್ಷೇತ್ರ, ಶ್ರೀಜಾತವೇದಮುನಿ ಪರಮ ಭಕ್ತನಾದ ಬಸವಣ್ಣನ ಪಾದಸ್ಪರ್ಶದಿಂದ ಯುಗಯುಗಗಳಿಂದ ಇತಿಹಾಸ ಚರಿತ್ರೆಯನ್ನು ಒಳಗೊಂಡು ವಿಮುಕ್ತ ಕ್ಷೇತ್ರವಾಗಿದೆ. ಅನೇಕ ಮಹಾತ್ಮರ ವಾಸದಿಂದ ಅವರ ಸಂಚರಣದಿಂದ ಅಲ್ಲಿನ ಧೂಳಿನ ಕಣ-ಕಣವೂ ದಿವ್ಯವಾಗಿದೆ. ಅಲ್ಲಿನ ಆ ವಾತಾವರಣ ಶುದ್ಧವಾಗಿದೆ. ಸಲಿಲ ವಿಮಲವಾಗಿದೆ. ಅವಲೋಕನೀಯ, ಆದರಣೀಯ ಕ್ಷೇತ್ರವಾಗಿದ್ದು, ಪುರಾತನ ಕಾಲದಿಂದಲೂ ಪ್ರಸಿದ್ಧವಾದ ಕ್ಷೇತ್ರವಾಗಿರುವ ಬದಾಮಿ, ಬನಶಂಕರಿ, ಬಾಗೇವಾಡಿ, ಪಟ್ಟದಕಲ್ಲು, ಐಹೊಳೆಗಿಂತ ಹೆಚ್ಚು ಹೆಸರುವಾಸಿಯಾಗಿದೆ. ಈ ಕ್ಷೇತ್ರ ಚರಿತ್ರೆಯನ್ನು ಕುರಿತು ಸರ್ವಜ್ಞ ಹೀಗೆ ಹೇಳಿದ್ದಾನೆ,

ರಾತ್ರಿಯೊಳ್ ಶಿವರಾತ್ರಿ, ಜಾತ್ರೆಯೊಳ್ ಶ್ರೀ ಗಿರಿ
ಕ್ಷೇತ್ರದೋಳ್ ಕೂಡಲಸಂಗಮ
ಸ್ತೋತ್ರದೋಳಧಿಕ ಶಿವತತ್ವ ಸರ್ವಜ್ಞ

ಈ ಮಾತುಗಳು ಕೂಡಲ ಕ್ಷೇತ್ರದ ಮಹತ್ವವನ್ನು ಇನ್ನಷ್ಟು ಹೆಚ್ಚಿಸಿದೆ.

ಈ ಕ್ಷೇತ್ರ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನಿಂದ ಸುಮಾರು ೨೦ಕಿ.ಮೀ ದೂರದಲ್ಲಿ ನಿಸರ್ಗದ ಮಡಿಲಿನಲ್ಲಿ ಮೈವೆತ್ತಿ ನಿಂತಿದೆ. ಇಲ್ಲಿ ಸಂಗಮೇಶ್ವರ ಶಿವ ದೇವಾಲಯವಿದ್ದು, ಕೂಡಲ ಕ್ಷೇತ್ರಕ್ಕೆ ಆತನೇ ಆದಿದೇವರು. ಇದರಿಂದಾಗಿ ಕೂಡಲಸಂಗಮವೆಂಬ ಹೆಸರು ಬರಲು ಕಾರಣವಾಗಿದೆ. ಕೂಡಲ ಸ್ಥಳದ ಹೆಸರು ನಿಸರ್ಗವಾಚಿಯಾಗಿದ್ದು, ಇನ್ನೊಂದು ಅರ್ಥದಲ್ಲಿ ನೋಡಿದಾಗ ಜಲವಾಚಿಯಾಗಿರುವುದು ಕಂಡುಬರುತ್ತದೆ. ಕಾರಣ ಎರಡು ನದಿಗಳು ಕೂಡುವುದು ಒಂದು ಜಲವಾಚಿ ಅರ್ಥ. ಇನ್ನೊಂದು ದೈವವಾಚಿ ಸಂಗಮನಾಥ ದೈವೀಸ್ವರೂಪಿಯಾಗಿದ್ದು

ಆತನ ಹೆಸರಿನಿಂದ ಸಂಗಮ ಎಂಬ ಪದ ಬಳಕೆಗೊಂಡಿದೆ. ಕೂಡಲ ನದಿ ಸಂಧಿಸುವ ಅರ್ಥವನ್ನು ಸೂಚಿಸಿದರೆ ಸಂಗಮವೆನ್ನುವುದು ದೈವಸ್ವರೂಪವನ್ನು ಸೂಚಿಸುತ್ತದೆ. ಹೀಗಾಗಿ ಒಂದರ ಬಿಂಬ ಇನ್ನೊಂದು ಎಂಬಂತೆ ಎರಡು ಪದಗಳು ಒಂದೇ ಅರ್ಥವನ್ನು ಸೂಚಿಸುತ್ತವೆ. ಕೂಡಲಸಂಗಮನಾಥ ಎಂದರೆ ಕೂಡಲ ಊರಿನೊಳಗಿರುವ ಸಂಗಮನಾಥ ಎಂದರ್ಥ ಇದು ವಾಸ್ತವವಾಗಿದ್ದು ಈ ಪದವನ್ನೇ ಬಸವಣ್ಣನವರು ತಮ್ಮ ವಚನ ಅಂಕಿತವನ್ನಾಗಿಟ್ಟುಕೊಂಡು 'ಕೂಡಲಸಂಗಮದೇವಾ' ಎಂದು ಸ್ವಾಭಾವಿಕವಾಗಿ ಭಕ್ತಿಯ ದ್ಯೋತಕವಾಗಿ ಬಳಸಿಕೊಂಡಿದ್ದಾರೆ.

ಸಂಗಮನಾಥ ದೇವಾಲಯ ಅತ್ಯಂತ ಪ್ರಾಚೀನವಾದುದು ಸುಮಾರು ೮೦೦ ವರ್ಷಗಳ ಇತಿಹಾಸವನ್ನು ಸಾರುತ್ತಿದ್ದು, ಚಾಲುಕ್ಯ ಶೈಲಿಯ ಭವ್ಯವಾದ ಕಟ್ಟಡವನ್ನು ಹೊಂದಿದೆ. ಇತಿಹಾಸ ಮತ್ತು ಸಾಹಿತ್ಯಾಧಾರಗಳಿಂದ ತಿಳಿದುಬರುವಂತೆ ದ್ಯಾವನಾಯಕ ಎಂಬ ಭಕ್ತನು ಭಕ್ತಿ ಶ್ರದ್ಧಾ ಪೂರ್ವಕವಾಗಿ ಕಟ್ಟಿಸಿದ್ದಾನೆ ಎಂಬ ಅಂಶ ತಿಳಿಯುತ್ತದೆ. ದೇವಸ್ಥಾನ ಬೃಹದಾಕಾರವಾಗಿದ್ದು ಗರ್ಭಗುಡಿ ಸುಖಾಸನ ರಂಗಮಂಟಪದಿಂದ ಕೂಡಿದ್ದು, ಸುಂದರವಾದ ಶೃಂಗಾರ ರೂಪದ ಸೂಕ್ಷ್ಮ ಕುಸುರಿ ಕೆಲಸದಿಂದ ಅನೇಕ ಶಿಲ್ಪಕಲೆ ಮಹಾಭಾರತದ ಕಥೆಗಳು, ಶಿವ ಪಾರ್ವತಿಯರ ಕಥೆಗಳು, ಗಣಪತಿ, ಲಕ್ಷ್ಮೀ, ನಂದಿ, ಪಾರ್ವತಿಯರ ಚಿತ್ರಗಳಿಂದ ನಾಲ್ಕು ಕಂಬಗಳು ಮನೋಹರವಾಗಿ ಮೂಡಿಬಂದಿವೆ. ಇದರ ಸಮಗ್ರ ಅಧ್ಯಯನವನ್ನು ಮಾಡುವುದರ ಮೂಲಕ ಅಧ್ಯಯನವನ್ನು ಪರಿಪೂರ್ಣಗೊಳಿಸುವುದು ಅಧ್ಯಯನದ ಉದ್ದೇಶವಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಕೂಡಲಸಂಗಮ ಕ್ಷೇತ್ರವು ಪ್ರಾಚೀನ ಕಾಲದಿಂದ ಇತ್ತೀಚಿನವರೆಗೆ ಅನೇಕ ರೀತಿಯಲ್ಲಿ ತನ್ನ ಅಸ್ತಿತ್ವವನ್ನು ಕಾಯ್ದುಕೊಂಡಿದೆ. ಅವನ್ನು ನೋಡುವುದಾದರೆ ಲಿಖಿತ ಮತ್ತು ಮೌಖಿಕವೆಂದು ವಿಭಾಗಿಸಬಹುದಾಗಿದೆ. ಕೂಡಲಸಂಗಮವನ್ನು ಒಂದು ಸಾಮಾನ್ಯ ಗ್ರಾಮವಾಗಿ ನಾವು ನೋಡಬಹುದಾದರೂ ಅದು ತನ್ನನ್ನು ಚಾಚಿಕೊಂಡ ಬಗೆ-ಭಾವ ಭಿನ್ನವಾಗಿದೆ ಮತ್ತು ವಿಸ್ತಾರವಾಗಿದೆ. ಈ ಹಿನ್ನೆಲೆಯಲ್ಲಿ ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗಿಂತ ಮೂಲ ಸಂಬಂಧವನ್ನು ಮಾತ್ರ ಇಲ್ಲಿ ಚರ್ಚಿಸಲಾಗುವುದು. ಅವುಗಳೆಂದರೆ ಕೂಡಲಸಂಗಮಕ್ಕೆ ಸಂಬಂಧಿಸಿದ ಶಾಸನಗಳು, ಪುರಾಣಕಾವ್ಯಗಳು ಮತ್ತು ಗೆಜೆಟಿಯರ್‌ಗಳು, ವಚನಗಳು ಮತ್ತು ಮೌಖಿಕ ಆಕರಗಳಾದ ಐತಿಹ್ಯ-ವದಂತಿಗಳು, ಜಾನಪದ ಕಥನ ಕಾವ್ಯಗಳು ಹೀಗೆ ಅನೇಕವನ್ನು ಅಧ್ಯಯನಿಸಿ ಅಲ್ಲಿ ಬೇರೆಲ್ಲ ವಿಷಯಗಳಿಗಿಂತ ಕೂಡಲಸಂಗಮದ ಕುರಿತಾದ ವಿಷಯ ವಿಸ್ತಾರತೆಯನ್ನು ಮಾತ್ರ ಇಲ್ಲಿ ಅಧ್ಯಯನಿಸಲಾಗಿದ್ದು. ಇದಕ್ಕೆ ಹೆಸರು ತಂದು ಕೊಟ್ಟ ಇಲ್ಲವೇ ಬೇರೊಂದು ಕಡೆಗೆ ಗುರುತಿಸಲು ಸಹಕಾರಿಯಾದ ವಸ್ತು-ವಿಷಯವನ್ನು ಮಾತ್ರ ಇಲ್ಲಿ ಅಧ್ಯಯನಕ್ಕೆ ಆಯ್ದುಕೊಂಡು ಅವುಗಳಷ್ಟೇ ಈ ಅಧ್ಯಯನದ ವ್ಯಾಪ್ತಿಯಾಗಿವೆ.

೧.೩. ಅಧ್ಯಯನದ ವಿಧಾನ

ಈ ಅಧ್ಯಯನಕ್ಕೆ ಪ್ರಧಾನ ಆಕರ, ಪೂರಕ ಆಕರ, ಆನುಷಂಗಿಕ ಆಕರಗಳೆಂಬ ಮೂರು ರೀತಿಯ ಆಕರಗಳನ್ನು ಸಂಗ್ರಹಿಸಲಾಗಿದೆ. ಈ ಮೂರೂ ರೀತಿಯ ಆಕರಗಳನ್ನು ಬೇರೆ ಬೇರೆ ಪಟ್ಟಿಕೆಗಳಲ್ಲಿ ದಾಖಲಿಸಿಕೊಂಡು ಅಗತ್ಯ ಕಂಡುಬಂದಲ್ಲಿ ಬಳಸಿಕೊಳ್ಳಲಾಗಿದೆ. ಕೂಡಲ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಾಚೀನ ಕೃತಿಗಳನ್ನು ಪ್ರಧಾನ ಆಕರವೆಂದೂ, ತದನಂತರದ ಕೃತಿಗಳ ಕುರಿತಾದ ಅಧ್ಯಯನಗಳನ್ನು ಅಥವಾ ಕೃತಿಗಳನ್ನು ಪೂರಕ ಆಕರಗಳೆಂದೂ, ಸಂದರ್ಶನ ಮತ್ತು ಮಾರ್ಗದರ್ಶಕರೊಂದಿಗಿನ ಚರ್ಚೆಗಳು ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಸಂಬಂಧಿಸಿದ ಕೃತಿಗಳನ್ನು ಆನುಷಂಗಿಕ ಆಕರಗಳೆಂದು ಪರಿಗಣಿಸಿ ಅಧ್ಯಯನಕ್ಕೊಳಪಡಿಸಲಾಗಿದೆ. ಈ ಅಧ್ಯಯನಕ್ಕೆ ಚಾರಿತ್ರಿಕ ವಿಧಾನ, ಸಾಮಾಜಿಕ ವಿಶ್ಲೇಷಣಾ ವಿಧಾನ, ಮನೋವೈಜ್ಞಾನಿಕ ವಿಧಾನ, ಅನ್ವಯಿಕ ವಿಧಾನಗಳನ್ನು ಅನ್ವಯಿಸಲಾಗಿದೆ. ಸಾಹಿತ್ಯದಲ್ಲಿನ ಕೂಡಲಸಂಗಮದ ಸಂಬಂಧ ಗುರುತಿಸುವುದಕ್ಕಾಗಿ ಹಿಂದಣ ಸಾಹಿತ್ಯದಲ್ಲಿ ಈ ಬಗೆಯ ಸಂಬಂಧ ಹೇಗೆ ಮೂಡಿಬಂದಿದೆ ಎಂಬುದನ್ನು ಚಾರಿತ್ರಿಕ ವಿಧಾನದ ಮೂಲಕ ವಿಶ್ಲೇಷಣೆ ಮಾಡಲಾಗಿದೆ. ಸಾಹಿತ್ಯ ಮತ್ತು ಸಮಾಜದ ಸಂಬಂಧದೊಂದಿಗೆ ವಚನಕಾರರು ಮತ್ತು ವಚನಗಳ ಸ್ಥಿತಿ-ಗತಿಗಳ ಕುರಿತಾಗಿ ಹೇಳುವಾಗ ಮತ್ತು ಕಾಲಗಳ ಸ್ತರಗಳನ್ನು ತಿಳಿಯುವ ಹಂತದಲ್ಲಿ ಶೈವ ವೈಷ್ಣವ ವೀರಶೈವ ನಾಥ ಪಂಥಗಳಲ್ಲಿ ಹೇಗೆ ಮೂಡಿಬಂದಿವೆ ಎನ್ನುವುದನ್ನು ವಿಶ್ಲೇಷಣೆ ಮಾಡುವಾಗ ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ವಿವರಿಸಲಾಗಿದೆ.

ಮಾನವನ ಸ್ವಭಾವ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿದ್ದು ಅವುಗಳ ನೆಲೆಗಳನ್ನು ಪ್ರತಿನಿಧಿಸುವ ವಿವಿಧ ಪಾತ್ರಗಳನ್ನು ಮನೋವೈಜ್ಞಾನಿಕ ದೃಷ್ಟಿಕೋನದಿಂದ ಪರಿಶೀಲಿಸುವ ಬಗೆ ಇಲ್ಲಿದೆ. ವಚನಗಳು ಮತ್ತು ಅವುಗಳೊಂದಿಗೆ ಸಮಾಜ ಮುಖಾಮುಖಿಯಾದ ಚಿಂತನೆಗಳು ಮತ್ತು ಆಲೋಚನೆಗಳನ್ನು ಪ್ರತಿಪಾದಿಸುವಾಗ ಅನ್ವಯಿಕ ವಿಧಾನದಿಂದ ವಿವರಿಸಲಾಗಿದೆ.

ಒಟ್ಟಾರೆ ಈ ಅಧ್ಯಯನವು ವಿಶ್ಲೇಷಣಾತ್ಮಕವಾದ ವಿಧಾನವನ್ನು ಅನುಸರಿಸಿ ರಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕೂಡಲಸಂಗಮ : ಸಾಂಸ್ಕೃತಿಕ ಅಧ್ಯಯನ ಎಂಬ ವಿಷಯವನ್ನು ಪಿಎಚ್.ಡಿ ಸಂಶೋಧನಾ ಅಧ್ಯಯನಕ್ಕೆ ವಸ್ತುವನ್ನಾಗಿ ಆಯ್ಕೆ ಮಾಡಿಕೊಂಡು ಸಂಶೋಧನಾ ಮಹಾಪ್ರಬಂಧವನ್ನು ರಚಿಸಲಾಗಿದೆ. ಪ್ರಸ್ತುತ ಈ ಸಂಶೋಧನಾ ಮಹಾಪ್ರಬಂಧದ ಯೋಜನೆ ಈ ಕೆಳಗಿನಂತಿದೆ.

೧.೪. ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನದ ಹಿತದೃಷ್ಟಿಯಿಂದ ಒಟ್ಟು ಒಂಬತ್ತು ಅಧ್ಯಾಯಗಳನ್ನು ವಿಭಾಗಿಸಿಕೊಂಡು ಇಲ್ಲಿ ಅಧ್ಯಯನಿಸಲಾಗಿದೆ. ಅವುಗಳನ್ನು ಹೀಗೆ ಸಂಕ್ಷೇಪಿಸಲಾಗಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಮತ್ತು ಸ್ವರೂಪ ಈ ಅಧ್ಯಾಯದಲ್ಲಿ ಒಟ್ಟು ಅಧ್ಯಯನದ ಉದ್ದೇಶವನ್ನು ಪರಾಮರ್ಶಿಸಲಾಗಿದೆ. ಈ ಹಿಂದೆ ಯಾವುದೇ ರೀತಿಯಲ್ಲಿ

ಈ ಕುರಿತ ಅಧ್ಯಯನಗಳು ನಡೆದಿಲ್ಲವಾದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಹೆಚ್ಚಿನ ಮಹತ್ವ ಇರುವುದನ್ನು ಮತ್ತು ಇದು ಸಾಹಿತ್ಯಿಕ ಕೊಡುಗೆಯಾಗುವುದರಿಂದ ಇದೇ ರೀತಿಯಲ್ಲಿ ಅಧ್ಯಯನಿಸಬೇಕೆಂದು ಉದ್ದೇಶವನ್ನಿಟ್ಟುಕೊಂಡಿರುವುದನ್ನು ಇಲ್ಲಿ ತಿಳಿಸಲಾಗಿದೆ. ಮತ್ತು ವ್ಯಾಪ್ತಿಯನ್ನು ನೋಡುವಾಗ ವಚನ ಸಾಹಿತ್ಯ ಮತ್ತು ವಚನಕಾರರು ಈ ಅಧ್ಯಯನದಲ್ಲಿ ತಳುಕು ಹಾಕುವುದರಿಂದ ವ್ಯಾಪ್ತಿಯು ಹಿಗ್ಗುವ ಹಂತ ಕಂಡು ಬಂದಿರುವುದರಿಂದ ಆದಷ್ಟು ಅಧ್ಯಯನಕ್ಕೆ ಅವಶ್ಯವಿರುವ ಕೂಡಲ ಸಂಗಮವನ್ನು ಪ್ರಧಾನವಾಗಿ ಇಟ್ಟುಕೊಂಡು ಈ ಹಿನ್ನೆಲೆಯಲ್ಲಿ ಅಧ್ಯಯನಿಸಿರುವುದನ್ನು ತಿಳಿಸಲಾಗಿದೆ. ಇನ್ನು ಸ್ವರೂಪದಲ್ಲಿ ಪ್ರಸ್ತುತವಾಗಿ ಆಯ್ದುಕೊಂಡ ಅಧ್ಯಾಯಗಳು ಮತ್ತು ಅವುಗಳಲ್ಲಿ ಅಧ್ಯಯನಿಸಿದ ವಿಚಾರಗಳ ಕುರಿತಾಗಿ ತಿಳಿಸಲಾಗಿದೆ.

ಅಧ್ಯಾಯ ಎರಡರಲ್ಲಿ ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆಯನ್ನು ಮಾಡಲಾಗಿದೆ. ಪ್ರಮುಖವಾಗಿ ಕೂಡಲಸಂಗಮ ಪ್ರದೇಶವನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾಗಿರುವ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಸ್ವಾಮಿಗಳು 'ಕೂಡಲ ಸಂಗಮ ಅಳಿವು ಉಳಿವು' ಎಂಬ ಕೃತಿಯಲ್ಲಿ ಕೂಡಲಸಂಗಮ ಕೃಷ್ಣಾ ನದಿಯ ಹಿನ್ನೀರಿನಿಂದ ಮುಳುಗಡೆಯ ಸಂದರ್ಭದಲ್ಲಿ ಸಂಗಮನಾಥ ದೇವಾಲಯವನ್ನು ಅದು ಇರುವಲ್ಲಿಯೇ ರಕ್ಷಣೆ ಮಾಡಬೇಕೆಂದು ನಾಡಿನ ಮಠಾಧೀಶರ ಮತ್ತು ಸಂಶೋಧಕರ ಅಭಿಪ್ರಾಯಗಳನ್ನು ಸಂಗ್ರಹಿಸಿ ಬರೆದಿರುವಂತಹ ಕೃತಿಯಾಗಿದೆ. ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿದ್ದ ಎಸ್.ಎಂ.ಜಾಮದಾರ್ ಅವರು 'ಕೂಡಲಸಂಗಮ ಪುನರುತ್ಥಾನದ ಪಕ್ಷಿನೋಟ' ಎಂಬ ಕೃತಿಯಲ್ಲಿ ಪ್ರಾಧಿಕಾರದ ಯೋಜನೆಗಳನ್ನು ಮತ್ತು ಕೂಡಲಸಂಗಮದ ಮಾಹಿತಿಯನ್ನು ತಿಳಿಸಿದ್ದಾರೆ. ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದ ಧನಸಹಾಯದ ದೃಷ್ಟಿಯಿಂದ ಕಲ್ಲಯ್ಯ ಹಿರೇಮಠ ಅವರು ಕೂಡಲಸಂಗಮ ಸಾಂಸ್ಕೃತಿಕ ಅಧ್ಯಯನ' ಎಂಬ ಕೃತಿಯನ್ನು ರಚಿಸಿದ್ದು, ಅದು ಕೆಲವೊಂದಿಷ್ಟು ಮಾಹಿತಿಯನ್ನು ಈ ಕ್ಷೇತ್ರದ ಬಗ್ಗೆ ನೀಡುತ್ತದೆ. ಎ.ಎಂ. ಗೊರಚಿಕನವರು ರಚಿಸಿರುವ ಕೂಡಲಸಂಗಮೇಶ್ವರನ 'ಬಂಗಾರದ ಕಳಸ' ಎಂಬ ಕೃತಿಯಲ್ಲಿ ಸಂಗಮೇಶ್ವರನ ಜಾತ್ರೆಯ ಸಂದರ್ಭದಲ್ಲಿ ಬಂಗಾರದ ಕಳಸವನ್ನು ಬಾಗಲಕೋಟೆಯಿಂದ ತರುವ ವಿಚಾರಗಳನ್ನು ಮತ್ತು ಜಾತ್ರೆಗೆ ಸಂಬಂಧಿಸಿದ ಅಂಶಗಳನ್ನು ಈ ಕೃತಿಯಲ್ಲಿ ತಿಳಿಸಿದ್ದಾರೆ. ಹೀಗೆ ಕೂಡಲಸಂಗಮ ಕ್ಷೇತ್ರ ಕುರಿತಂತೆ ಆನುಷಂಗಿಕವಾಗಿ ನಡೆದ ಅಧ್ಯಯನಗಳನ್ನು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಕೂಡಲಸಂಗಮ ಸ್ಥಳನಾಮ ಅಧ್ಯಯನ ಈ ಅಧ್ಯಾಯದಲ್ಲಿ ಅನೇಕ ರೀತಿಯ ಅಧ್ಯಯನ ವಿಧಾನಗಳಿದ್ದು, ಪ್ರಧಾನವಾಗಿ ಲಿಖಿತ ಮತ್ತು ಮೌಖಿಕ ಆಕರಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದ್ದು, ಕೂಡಲಸಂಗಮದ ಆರಂಭಿಕ ನಾಮ ಮತ್ತು ಅದರಲ್ಲಿ ಕಾಲಕಾಲಕ್ಕೆ ಆದ ಬದಲಾವಣೆಯನ್ನು ಸವಿಸ್ತಾರವಾಗಿ ತಿಳಿಸಲಾಗಿದೆ. ಇಲ್ಲಿ ಬರುವ ಶಾಸನಗಳು ಮತ್ತು ವಚನಗಳು ಮತ್ತು ಕಾವ್ಯ-ಪುರಾಣಗಳನ್ನು ಸಂಪೂರ್ಣವಾಗಿ ಅಧ್ಯಯನಿಸಿ ಅದರಿಂದ

ಬಂದ ಅನೇಕ ಫಲಿತಗಳನ್ನು ಪರಾಮರ್ಶಿಸಲಾಗಿದೆ. ಮತ್ತು ಮೌಖಿಕ ದಾಖಲೆಗಳನ್ನು ಈ ಅಧ್ಯಾಯದಲ್ಲಿ ಪರಿಗಣಿಸಿ ಸೂಕ್ತವಾದುದನ್ನು ಆಯ್ದುಕೊಂಡು ತಿಳಿಸಲಾಗಿದೆ. ಐತಿಹ್ಯಗಳು–ವದಂತಿಗಳು ಆಯಾ ಕಾಲಕ್ಕೆ ಬದಲಾವಣೆಗೊಳ್ಳುತ್ತಿದ್ದರೂ ಇಂದಿಗೂ ಉಳಿದು ಬಂದ ನಂಬಲಾರ್ಹವಾದ ಅಂಶಗಳನ್ನು ಇಲ್ಲಿ ತಿಳಿಸಲಾಗಿದೆ. ಮತ್ತು ಜನಪದರ ಕಥೆಗಳು ಧಾರ್ಮಿಕ ಭಾವನೆಗಳಿಂದ ಕೂಡಿ ತಮ್ಮಲ್ಲಿನ ವಿಶೇಷತೆಗಳನ್ನು ಅದಕ್ಕೆ ತಳುಕು ಹಾಕಿದ್ದರೂ ಸ್ಥಳನಾಮದ ದೃಷ್ಟಿಯಿಂದ ಸೂಕ್ತವಾದುದನ್ನು ಇಲ್ಲಿ ತಿಳಿಸಲಾಗಿದೆ. ಇನ್ನಿತರೆ ಪೂರಕವಾದ ಮಾಹಿತಿಯನ್ನು ಇಲ್ಲಿ ಕಂಡರಿಸಿ ಅಧ್ಯಯನಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಕೂಡಲಸಂಗಮ ಧಾರ್ಮಿಕ ಸಂಪ್ರದಾಯಗಳು ಯಾವುದೇ ಕ್ಷೇತ್ರಗಳು ಒಂದು ಪುರಾತನವಾದ ಸಂಸ್ಕೃತಿಯ ನೆಲೆಗಟ್ಟಿನಲ್ಲಿ ತನ್ನನ್ನು ಗುರುತಿಸಿಕೊಂಡು ಉಳಿದು ಬೆಳೆದಿರುತ್ತವೆ. ಆ ಮೂಲಕ ಈ ಅಧ್ಯಾಯದಲ್ಲಿ ನಾಥ ಸಂಪ್ರದಾಯದ ಉಗಮ ವಿಕಾಸವನ್ನು ಮತ್ತು ಅಲ್ಲಿ ಅದು ಕಂಡುಕೊಂಡ ನೆಲೆ–ಬೆಲೆಯನ್ನು ಚರ್ಚಿಸಲಾಗಿದೆ. ಮತ್ತು ಕೂಡಲಸಂಗಮವೂ ಈ ನಾಥಸಂಪ್ರದಾಯದೊಂದಿಗೆ ಬೆಳೆದ ಬಗೆಯನ್ನು ಸೂಕ್ತವಾಗಿ ಪರಾಮರ್ಶಿಸಲಾಗಿದೆ. ಮತ್ತು ಒಂದು ಸಂಪ್ರದಾಯದಿಂದ ಮುಂದಿನ ಬೆಳವಣಿಗೆಗಳು ಪ್ರಭಾವಕ್ಕೊಳಗಾದ ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದೆ. ಅಲ್ಲದೆ ಶೈವ ಮತ್ತು ವೀರಶೈವಕ್ಕೆ ಇದು ಕೊಟ್ಟ ಕೊಡುಗೆಯನ್ನು, ಬೆಳೆಸಿದ ಬಗೆಯನ್ನು ಇಲ್ಲಿ ಕೂಲಂಕಷವಾಗಿ ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಕೂಡಲಸಂಗಮ ಸ್ಮಾರಕಗಳು ಮತ್ತು ಆಚರಣೆಗಳು ಈ ಅಧ್ಯಾಯದಲ್ಲಿ ಪ್ರಮುಖವಾಗಿ ದೇವಾಲಯಗಳು ಅವುಗಳ ಇತಿಸ್ಥಿತಿಗಳು ನಿರ್ಮಾಣ, ದಾನ–ದತ್ತಿ ಮತ್ತು ಅಲ್ಲಿನ ವೈಶಿಷ್ಟ್ಯ ಮತ್ತು ನಾಡಿನೊಂದಿಗೆ ಗುರುತಿಸಿಕೊಂಡ ಬಗೆಯನ್ನು ಇಲ್ಲಿ ಪರಾಮರ್ಶಿಸಲಾಗಿದೆ. ಮತ್ತು ಮೂರ್ತಿಗಳನ್ನು ಶಿಲ್ಪಕಲೆಯ ಹಿನ್ನೆಲೆಯಲ್ಲಿ ಮೂಡಿಬಂದ ಬಗೆ ಮತ್ತು ಧಾರ್ಮಿಕವಾಗಿ ಬದಲಾವಣೆಗೊಳಪಟ್ಟ ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದ್ದು, ಅವುಗಳನ್ನು ನಾಡಿನ ಅನೇಕ ಧಾರ್ಮಿಕ ಅಂಶಗಳೊಂದಿಗೆ ಮತ್ತು ಮತದೊಂದಿಗೆ ಹೋಲಿಸಿ ವಿಷದಪಡಿಸಲಾಗಿದೆ. ಮತ್ತು ಮಠಮಂದಿರಗಳು ಹುಟ್ಟು ಬೆಳವಣಿಗೆ ಅವುಗಳು ನಾಡಿಗೆ ಎಷ್ಟರ ಮಟ್ಟಿಗೆ ಪೂರಕವಾಗಿವೆ ಎಂಬುದನ್ನು ಮತ್ತು ಆ ಮಠದಲ್ಲಿನ ವಿಧಿ–ವಿಧಾನಗಳನ್ನು ಹೇಳಲಾಗಿದೆ. ಮತ್ತು ಒಟ್ಟಾರೆಯಾದ ಆಚರಣೆಗಳೊಂದಿಗೆ ಹಬ್ಬ–ಹರಿದಿನಗಳು ಜಾತ್ರೆಗಳನ್ನು ಬಹು ಸೂಕ್ತವಾಗಿ ಮತ್ತು ಸೂಕ್ಷ್ಮವಾಗಿ ಇಲ್ಲಿ ಚರ್ಚಿಸಲಾಗಿದೆ. ಮತ್ತು ಕಾಲದಿಂದ ಕಾಲಕ್ಕಾದ ಬದಲಾವಣೆಯನ್ನು ಮತ್ತು ಅವುಗಳು ಗಳಿಸಿ ಉಳಿಸಿದ ಸಂಸ್ಕೃತಿಯನ್ನು ಈ ಮೂಲಕ ಅಧ್ಯಯನಿಸಿಲಾಗಿದೆ.

ಅಧ್ಯಾಯ ಆರರಲ್ಲಿ ಕೂಡಲಸಂಗಮ ಇತರ ಸಾಂಸ್ಕೃತಿಕ ಕೇಂದ್ರಗಳ ಸಂಬಂಧ ಈ ಅಧ್ಯಾಯದಲ್ಲಿ ಕೂಡಲಸಂಗಮದೊಂದಿಗೆ ಪ್ರಾಚೀನ ಕಾಲದಿಂದಲೂ ಹಲವು ಕ್ಷೇತ್ರಗಳು ಅವಿನಾಭಾವ ಸಂಬಂಧಗಳನ್ನು ಇಟ್ಟುಕೊಂಡುಬಂದಿವೆ. ಅವುಗಳಲ್ಲಿ ಪ್ರಮುಖವಾಗಿ ತಂಗಡಗಿ, ಬಸವಕಲ್ಯಾಣ

ಮತ್ತು ಬಸವನಬಾಗೇವಾಡಿ ಪ್ರಮುಖವಾದ ಕೇಂದ್ರವಾಗಿವೆ. ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನಲ್ಲಿರುವ ಗ್ರಾಮ ತಂಗಡಗಿ. ನೀಲಾಂಬಿಕೆಯು ಇಲ್ಲಿ ಬಂದು ತಂಗಿದ್ದರ ನೆನಪಿಗಾಗಿ ತಂಗಡಗಿ ಎಂದು ಈ ಊರಿಗೆ ಹೆಸರು ಬಂದಿದೆ ಎನ್ನಲಾಗುತ್ತಿದೆ. "ತಂಗಿ ಅಡಗಿದ ಊರು ತಂಗಡಗಿ" ಎನ್ನುವ ಪ್ರತೀತಿ ಇದೆ. ಕಲ್ಯಾಣ ಕ್ರಾಂತಿಯ ನಂತರ ನೀಲಾಂಬಿಕೆ ಹಡಪದ ಅಪ್ಪಣನವರು ಜೊತೆಗೂಡಿ ಇಲ್ಲಿಗೆ ಬಂದಳೆಂಬ ಸಂಗತಿ ಮೊದಲಿನಿಂದಲೂ ಇದೆ. ಬಸವಕಲ್ಯಾಣವು ಬಸವಣ್ಣನವರ ಕಾರ್ಯ ಕ್ಷೇತ್ರವಾಗಿ ಪ್ರಸಿದ್ಧಿಯನ್ನು ಗಳಿಸಿ ಕಾಯಕ ತತ್ವದ ಹಿನ್ನೆಲೆಯಲ್ಲಿ ಸರ್ವರನ್ನು ಸಮಾನವಾಗಿ ಕಾಣುವಲ್ಲಿ ಹಾಗೂ ಅಸಮಾನತೆಯ ವಿರುದ್ಧ ಕ್ರಾಂತಿಯ ಕೇಂದ್ರವಾಗಿ ಇಡೀ ವಚನ ಪರಂಪರೆಗೆ ಸಾಕ್ಷಿಯಾಗಿ ನಿಂತಂತ ಕ್ಷೇತ್ರವಾಗಿದೆ. ಕೂಡಲಸಂಗಮದೊಂದಿಗೆ ಹಲವಾರು ಅಂಶಗಳಲ್ಲಿ ಹೊಂದಾಣಿಕೆಯಾಗುತ್ತ ಬಸವಣ್ಣವರಿಗೆ ಎರಡೂ ಕ್ಷೇತ್ರಗಳು ಎರಡು ಕಣ್ಣಗಳಾಗಿ ತೋರಿದ್ದು ಎರಡು ಕ್ಷೇತ್ರಗಳ ಸಂಬಂಧ ಗಟ್ಟಿಗೊಳಿಸುತ್ತದೆ. ಅದೇ ರೀತಿ ಬಾಗೇವಾಡಿಯೂ ಸಹ ಕುಡಲಸಂಗಮದೊಂದಿಗೆ ಅವಿಭಾವ ಸಂಬಂಧ ಹೊಂದಿದ್ದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಏಳರಲ್ಲಿ ಕೂಡಲ ಸಂಗಮ ಬಸವಣ್ಣನ ಸಂಬಂಧವನ್ನು ಕುರಿತು ತಳಿಸಲಾಗಿದೆ. ಇಲ್ಲಿ ಇಡೀ ನಾಡೇ ಮೆಚ್ಚಿದ ವ್ಯಕ್ತಿ ಬಸವಣ್ಣ ತನ್ನ ನೆಲೆಯನ್ನು ಕಂಡುಕೊಂಡಿರುವುದನ್ನು ಮತ್ತು ಆ ಮೂಲಕ ಕೂಡಲಸಂಗಮಕ್ಕೆ ದೊರಕಿದ ಪ್ರಾಶಸ್ತ್ಯವನ್ನು ಚರ್ಚಿಸಲಾಗಿದೆ. ಮತ್ತು ಅವನ ಆಗಮನ ಅಲ್ಲಿನ ಒಡನಾಟ ಬೆಳವಣಿಗೆ ಮತ್ತು ಸಂಬಂಧಗಳನ್ನು ಬಹು ಸೂಕ್ತವಾಗಿ ಇಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಎಂಟರಲ್ಲಿ ಕೂಡಲಸಂಗಮ ಅಭಿವೃದ್ಧಿ ಮಂಡಳಿ ಈ ಅಧ್ಯಾಯದಲ್ಲಿ ಕೂಡಲ ಸಂಗಮಕ್ಕೆ ದಕ್ಕಿದ ಪ್ರಾಶಸ್ತ್ಯವನ್ನು ಪರಿಗಣಿಸಿ ಸರ್ಕಾರ ಇನ್ನಿತರೇ ಅಭಿವೃದ್ಧಿಗಾಗಿ ಮಾಡಿದ ಪ್ರಾಧಿಕಾರದಂತಹ ಸಂಸ್ಥೆಗಳನ್ನು ಮತ್ತು ಅವುಗಳ ಕಾರ್ಯವೈಖರಿಗಳನ್ನು ಇಲ್ಲಿ ತಿಳಿಸಲಾಗಿದೆ. ಮತ್ತು ಅವುಗಳಿಂದಾದ ಬದಲಾವಣೆಯಿಂದ ಪ್ರಸ್ತುತದಲ್ಲಿ ಅದು ಪ್ರವಾಸಿ ಕೇಂದ್ರವಾದ ಬಗೆಯನ್ನು ಹೇಳಲಾಗಿದೆ. ಮತ್ತು ಅಭಿವೃದ್ಧಿ ಮಂಡಳಿಯ ಬೇಕು-ಬೇಡಗಳು ಮತ್ತು ಅದರ ನಿರ್ಮಾಣದ ಅವಶ್ಯಕತೆ, ಅದು ಇಲ್ಲಿಯವರೆಗೆ ಕೈಗೊಂಡ ಕಾರ್ಯಗಳ ಯಾದಿ ಹೀಗೆ ಅನೇಕ ಬಗೆಯ ವಿಚಾರಗಳನ್ನು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಅಧ್ಯಾಯ ಒಂಬತ್ತು ಸಮಾರೋಪವಾಗಿದ್ದು, ಪ್ರಸ್ತುತ ಅಧ್ಯಾಯದಲ್ಲಿ ಈವರೆಗಿನ ಅಧ್ಯಯನದ ಫಲಶೃತಿಯನ್ನು ನೋಡಲಾಗಿದೆ. ಮತ್ತು ಅದರ ಫಲಿತಗಳನ್ನು ವಿಭಾಗಿಸಿ ಮುಂದಿನ ಸಾಧ್ಯತೆಗಳನ್ನು ಇಲ್ಲಿ ಕೊಡಲಾಗಿದೆ. ಮುಂದಿನ ಅಧ್ಯಯನಗಳಿಗೆ ಮತ್ತು ಹೊಸ ಹೊಳಹುಗಳಿಗೆ ಇದು ಅನುಕೂಲವಾಗಿದೆ. ಮತ್ತು ಅನೇಕ ಅಧ್ಯಯನಗಳಿಂದ ಕಂಡುಕೊಂಡ ಸತ್ಯಾಂಶಗಳನ್ನು ಇದರೊಂದಿಗೆ ತೌಲನೀಕರಿಸಿ ಮುಂದಿನ ಅಧ್ಯಯನದ ಮಾರ್ಗಸೂಚಿಯನ್ನು ಈ ಮೂಲಕ ಸಿದ್ಧಪಡಿಸಲಾಗಿದೆ.

ಅನುಬಂಧ : ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಶಾಸನಗಳು, ಹಾಡುಗಳು, ವಕ್ತೃ ವಿವರ, ಛಾಯಾಚಿತ್ರಗಳು ಮತ್ತು ಪರಾಮರ್ಶನ ಗ್ರಂಥಗಳನ್ನು ಉಲ್ಲೇಖಿಸುವುದರ ಮೂಲಕ ಅಧ್ಯಯನಕ್ಕೆ ಸಹಕಾರಿಯಾದ ಎಲ್ಲಾ ವಿಷಯದ ಮಾಹಿತಿಗಳನ್ನು ಇಲ್ಲಿ ತಿಳಿಸಲಾಗಿದೆ. ಅನುಬಂಧಗಳಲ್ಲಿ ಮತ್ತು ಅಧ್ಯಯನಕ್ಕೆ ಆಯ್ದುಕೊಂಡ ಗ್ರಂಥಗಳ ಮಾಹಿತಿಯನ್ನು ಗ್ರಂಥಋಣದಲ್ಲಿ ಮತ್ತು ಸಂಬಂಧಿಸಿದ ಮತ್ತು ಸೂಕ್ತವೆನಿಸಿದ ಚಿತ್ರಪಟಗಳನ್ನು ಚಿತ್ರಪಟಗಳಲ್ಲಿ ತಿಳಿಸಿ ವಿಷದಪಡಿಸಲಾಗಿದೆ. ಇದು ಈ ಅಧ್ಯಯನದ ಸ್ವರೂಪವಾಗಿದೆ.

ಅಧ್ಯಾಯ : ೨

ಇದುವರೆಗಿನ ಅಧ್ಯಯನದ ಸಮೀಕ್ಷೆ

ಅಧ್ಯಾಯ : ಎರಡು

ಇದುವರೆಗಿನ ಅಧ್ಯಯನದ ಸಮೀಕ್ಷೆ

ಕೂಡಲಸಂಗಮ ಕ್ಷೇತ್ರವು ಪ್ರಾಚೀನ ಕಾಲದಿಂದಲೂ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿದ್ದು, ಕಾಲಕಾಲಕ್ಕೆ ಈ ಕ್ಷೇತ್ರವನ್ನು ಕುರಿತು ಹಲವಾರು ಸಾಹಿತ್ಯ ಸೃಷ್ಟಿಯಾಗಿದೆ. ಇಂದಿಗೂ ಸಹಿತ ಕವಿಗಳು ಸಾಹಿತಿಗಳು ಇಲ್ಲಿಯ ಮಹಿಮೆಯನ್ನು ಕೊಂಡಾಡಿದ್ದಾರೆ. ಸಂಶೋಧನೆಯ ದೃಷ್ಟಿಯಿಂದ ಅಧ್ಯಯನವನ್ನು ಮಾಡಿದ್ದು ಬಹಳ ಕಡಿಮೆ. ಪ್ರಾಸಂಗಿಕವಾಗಿ ಹಲವು ನಡೆದರೂ ಅವು ಅಸಮಗ್ರವಾಗಿವೆ. ವೀರಣ್ಣ ರಾಜೂರ ಅವರು ಸಂಪಾದಿಸಿದ ಕಲ್ಯಾಣ ಸಂಗಮ ಕೃತಿಯಲ್ಲಿ ಕೆಲವೊಂದು ಲೇಖನಗಳು ಕೂಡಲಸಂಗಮಕ್ಕೆ ಸಂಬಂಧಪಟ್ಟಿವೆ. ಆದರೆ ಅವು ಕಡಿಮೆ ವ್ಯಾಪ್ತಿಯಿಂದ ಅಸಮಗ್ರವಾಗಿವೆ. ಸ್ಥಳೀಯವಾಗಿ ಕೆಲವು ಕೃತಿಗಳು ರಚನೆಯಾಗಿದ್ದು, ಅವು ಸಂಶೋಧನೆಯ ದೃಷ್ಟಿಯಿಂದ ರಚನೆಯಾದವುಗಳಲ್ಲ. ಅವು ಕೇವಲ ಮಾಹಿತಿ ಪುಸ್ತಕಗಳಾಗಿವೆ.

ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಸ್ವಾಮಿಗಳು 'ಕೂಡಲಸಂಗಮ ಅಳಿವು ಉಳಿವು' ಎಂಬ ಕೃತಿಯಲ್ಲಿ ಕೂಡಲಸಂಗಮ ಕೃಷ್ಣಾ ನದಿಯ ಹಿನ್ನೀರಿನಿಂದ ಮುಳುಗಡೆಯ ಸಂದರ್ಭದಲ್ಲಿ ಸಂಗಮನಾಥ ದೇವಾಲಯವನ್ನು ಅದು ಇರುವಲ್ಲಿಯೇ ರಕ್ಷಣೆ ಮಾಡಬೇಕೆಂದು ನಾಡಿನ ಮಠಾಧೀಶರ ಮತ್ತು ಸಂಶೋಧಕರ ಅಭಿಪ್ರಾಯಗಳನ್ನು ಸಂಗ್ರಹಿಸಿ ಬರೆದಿರುವಂತಹ ಕೃತಿಯಾಗಿದೆ. ಈ ಕೃತಿಯು ಸಂಗಮನಾಥನ ದೇವಾಲಯ ಮರುನಿರ್ಮಾಣ ಆಗುವ ವಿಚಾರಗಳನ್ನು ಕುರಿತಂತೆ ನಾಡಿನ ಖ್ಯಾತ ವಿದ್ವಾಂಸರು ಮತ್ತು ಮಠಾಧೀಶರು ಬೆಂಬಲವನ್ನು ನೀಡುವ ಮುಖಾಂತರ ದೇವಾಲಯವನ್ನು ಉಳಿಸಬೇಕು ಮತ್ತು ಅದರ ಸಾಂಸ್ಕೃತಿಕ ಇತಿಹಾಸವು ಯಾವತ್ತು ಅಳಿಸಬಾರದು ಎಂಬ ಕಳಕಳಿಯಿಂದ ಪತ್ರ ವ್ಯವಹಾರಗಳ ಮೂಲಕ ನಾಡಿನ ಎಲ್ಲಾ ಗಣ್ಯರಿಗೆ ಮಾಹಿತಿಯನ್ನು ನೀಡಿದ ಬಗೆಯು ಈ ಕೃತಿಯಲ್ಲಿದೆ. ಇದಕ್ಕೆ ಉತ್ತರವೆಂಬಂತೆ ಗಣ್ಯರು ಸಹ ಇವರಿಗೆ ಉತ್ತರವನ್ನು ನೀಡುವುದರ ಮೂಲಕ ಕೂಡಲಸಂಗಮನಾಥ ದೇವಾಲಯವು ಇರುವಲ್ಲಿಯೇ

ಅದನ್ನು ಕಾಪಾಡಬೇಕು ಸರಕಾರ ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಂಡು ಕೃಷ್ಣಾ ನದಿಯ ಮುಳಗಡೆ ಪ್ರದೇಶಕ್ಕೆ ದೇವಸ್ಥಾನ ಬಲಿಯಾಗಬಾರದೆಂಬ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ಇದರ ಜೊತೆಗೆ ಕೂಡಲಸಂಗಮದ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡುವುದರ ಮೂಲಕ ಈ ಕೃತಿಯಲ್ಲಿ ಕೆಲವೊಂದು ಅಂಶಗಳನ್ನು ಚರ್ಚಿಸಿದ್ದಾರೆ.

ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿದ್ದ ಎಸ್.ಎಂ.ಜಾಮದಾರ್ ಅವರು 'ಕೂಡಲಸಂಗಮ ಪುನರುತ್ಥಾನದ ಪಕ್ಷಿನೋಟ' ಎಂಬ ಕೃತಿಯಲ್ಲಿ ಪ್ರಾಧಿಕಾರದ ಯೋಜನೆಗಳನ್ನು ಮತ್ತು ಕೂಡಲಸಂಗಮದ ಮಾಹಿತಿಯನ್ನು ತಿಳಿಸಿದ್ದಾರೆ. ಇಲ್ಲಿ ಬಸವಕಲ್ಯಾಣ, ಕೂಡಲಸಂಗಮ, ಬಸವನಬಾಗೇವಾಡಿ, ಇಂಗಳೇಶ್ವರ, ತಂಗಡಗಿ, ಮುಗಟಖಾನ ಹುಬ್ಬಳ್ಳಿ, ಚಿಕ್ಕಸಂಗಮ ಮತ್ತು ಅನುಭವ ಮಂಟಪದ ನವ ನಿರ್ಮಾಣಗಳ ಕುರಿತಂತೆ ಬರೆದಿದ್ದಾರೆ.

ಕೂಡಲಸಂಗಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಮುಖವಾಗಿ ಅಭಿವೃದ್ಧಿ ಮಂಡಳಿಯು ಹಾಕಿಕೊಂಡ ಯೋಜನೆಗಳು ಮತ್ತು ಅವುಗಳನ್ನು ಕಾರ್ಯರೂಪದಲ್ಲಿ ತರಲು ಪಟ್ಟ ಪರಿಶ್ರಮಗಳನ್ನು ಹಾಗೂ ಸಾರ್ವಜನಿಕರಿಂದ ಬಂದ ಸಮಸ್ಯೆಗಳನ್ನು ಬಗೆಹರಿಸಿದ ವಿವರಣೆ ಈ ಕೃತಿಯಲ್ಲಿದೆ. ಬಹಳ ಮುಖ್ಯವಾಗಿ ೧೨ನೆಯ ಶತಮಾನದಿಂದ ಪ್ರಸಿದ್ಧ ಶೈವ ಯಾತ್ರಾ ಸ್ಥಳವಾಗಿದ್ದ ಕೂಡಲಸಂಗಮದ ಸಂಗಮೇಶ್ವರ ದೇವಾಲಯ ಮತ್ತು ಐಕ್ಯ ಮಂಟಪದ ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಜಲಾಶಯದ ಹಿನ್ನೀರಿನಲ್ಲಿ ಮುಳಗಿದ್ದವು. ದೇವಾಲಯವನ್ನು ಮೂಲ ಸ್ಥಳದಿಂದ ಕಿತ್ತು ಬೇರೆಕಡೆ ಕಟ್ಟುವ ಪ್ರಯತ್ನಕ್ಕೆ ರಾಜ್ಯವ್ಯಾಪಿ ವಿರೋಧ ಕಂಡುಬಂದದ್ದರಿಂದ ಆ ಸಮಸ್ಯೆಗೆ ಪರಹಾರ ಸೂಚಿಸಲು ನೇಮಿಸಿದ್ದ ಮುದ್ನಾಳ ಸಮಿತಿಯು ಸಂಗಮೇಶ್ವರ ದೇವಾಲಯವನ್ನು ಇದ್ದ ಸ್ಥಳದಲ್ಲಿಯೇ ಉಳಿಸಬೇಕು ಮತ್ತು ಸಂಗಮವನ್ನು ಅಂತಾರಾಷ್ಟ್ರೀಯ ಪ್ರವಾಸಿ ಸ್ಥಾನವಾಗಿ ಅಭಿವೃದ್ಧಿಪಡಿಸಬೇಕೆಂದು ಸಲಹೆ ನೀಡಿತ್ತು. ಸಮಿತಿಯ ಸಲಹೆಗಳನ್ನು ಒಪ್ಪಿ ಅವುಗಳನ್ನು ಈಡೇರಿಸಲು ಜಾಮದಾರ ಅವರ ನೇತ್ರತ್ವದಲ್ಲಿ ಸರಕಾರ ಅಭಿವೃದ್ಧಿ ಕಾರ್ಯಗಳನ್ನು ನಿರ್ಮಾಣ ಮಾಡಲು ಮುಂದಾಯಿತು.

ಜಾಮದಾರ ಅವರು ಕೂಡಲಸಂಗಮ ಅಭಿವೃದ್ಧಿ ಮಂಡಳಿ ಮತ್ತು ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಎರಡರಲ್ಲೂ ಕಾರ್ಯ ನಿರ್ವಾಹಕ ಹೊಣೆಯನ್ನು ಹೊತ್ತು ಎಲ್ಲ ಕೆಲಸಗಳಿಗೆ ನುರಿತ ತಜ್ಞರನ್ನು ನೇಮಿಸುವುದರ ಮೂಲಕ ಅವರಿಗೆ ಮೇಲ್ವಿಚಾರಣೆ ಮತ್ತು ನಿರ್ದೇಶನ ನೀಡುವ ಅಧಿಕಾರಿಗಳಾಗಿಯೂ ಮತ್ತು ಸ್ಥಳದಲ್ಲೇ ನಿಂತು ಸ್ವಯಂ ಸೇವಕನಂತೆ ೧೨ನೆಯ ಶತಮಾನದ ವಾಸ್ತುಶಿಲ್ಪದ ಜೊತೆಗೆ ದೇಶ-ವಿದೇಶಗಳ ಶಿಲ್ಪ ಸಂಪ್ರದಾಯಗಳನ್ನು ಅಧ್ಯಯನ ಮಾಡುವುದರ ಮೂಲಕ ಶರಣರಿಗೆ ಸಂಬಂಧಿಸಿದ ಸಾಹಿತ್ಯ ಮತ್ತು ಮತ್ತಿತರ ಆಕರಗಳನ್ನು ಅವಲೋಕಿಸಿ ಅಭಿವೃದ್ಧಿಪಡಿಸಿದ ವಿಷಯಗಳನ್ನು ಈ ಕೃತಿಯಲ್ಲಿ ಸಹೃದಯರಿಗೆ ಸುಲಭವಾಗಿ ಅರ್ಥವಾಗುವಂತೆ ಕೃತಿ ರಚನೆ ಮಾಡಿದ್ದಾರೆ.

ಕೂಡಲಸಂಗಮ ಕ್ಷೇತ್ರವನ್ನು ಕರ್ನಾಟಕದ ಪ್ರಮುಖ ಪ್ರವಾಸಿತಾಣ ಮಾಡುವಲ್ಲಿ ಅವರು ಪಟ್ಟಿರುವ ಶ್ರಮ ಈ ಕೃತಿಯಲ್ಲಿ ಅಡಕವಾಗಿದೆ. ಕ್ಷೇತ್ರದಲ್ಲಿ ಉದ್ಯಾನವನ, ಐಕ್ಯಮಂಟಪ, ರಥನಿಲಯ ಮತ್ತು ರಥಬೀದಿ, ದೋಣಿ ವ್ಯವಸ್ಥೆ, ದಾಸೋಹ ಭವನ, ಯಾತ್ರಿನಿವಾಸ, ವಚನ ಸಾಹಿತ್ಯ ಸಂಶೋಧನಾ ಕೇಂದ್ರ, ಗ್ರಂಥಾಲಯ, ಕಲ್ಯಾಣ ಮಂಟಪ, ಸಭಾಭವನ, ಬಸವ ಅಂತಾರಾಷ್ಟ್ರೀಯ ಕೇಂದ್ರ, ಪ್ರಾರ್ಥನಾ ಮಂದಿರ, ಮ್ಯೂಜಿಯಂ ಹೀಗೆ ಹಲವಾರು ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕೂಡಲಸಂಗಮವನ್ನು ಒಂದು ಅಂತಾರಾಷ್ಟ್ರೀಯ ಕಂದ್ರವನ್ನಾಗಿಸುವ ಮಟ್ಟಿಗೆ ಪಟ್ಟ ಪರಿಶ್ರಮ ಈ ಕೃತಿಯಲ್ಲಿ ತಿಳಿಸಿದ್ದಾರೆ.

ಜ.ಚ.ನಿಯವರ 'ಕೂಡಲ ಕ್ಷೇತ್ರ' ಎಂಬ ಕೃತಿಯಲ್ಲಿ ಬಸವಣ್ಣನ ವಿಚಾರಗಳನ್ನು ಮತ್ತು ಸಂಗಮನಾಥನ ಪ್ರಖ್ಯಾತಿಯನ್ನು ತಿಳಿಸುವಂತಹ ಕೃತಿಯಾಗಿದೆ. ಪ್ರಾಚೀನ ಕಾಲದಿಂದ ಇಂದಿನವರೆಗೆ ಕೂಡಲಸಂಗಮ ಯಾವ ಪ್ರಕಾರವಾಗಿ ತನ್ನ ಸ್ಥಾನ–ಮಾನಗಳನ್ನು ಕಾಪಾಡಿಕೊಂಡು ಬಂದಿದೆ ಎಂಬ ವಿಷಯಗಳನ್ನು ಜ.ಚ.ನಿ.ಯವರು ತಿಳಿಸಿದ್ದಾರೆ. ಧಾರ್ಮಿಕ ನೆಲೆಗಟ್ಟಿನ ಮೇಲೆ ಈ ಕ್ಷೇತ್ರ ಹೇಗೆ ಪಾವಿತ್ರತೆಯನ್ನು ಮತ್ತು ಘನತೆಯನ್ನು ಎತ್ತಿಹಿಡಿಯುತ್ತ ಜನಸಾಮಾನ್ಯರಿಗೆ ಆಧ್ಯಾತ್ಮಿಕ ಅಂಶಗಳನ್ನು ಮೂಡಿಸಲು ಕ್ಷೇತ್ರ ಮಹತ್ವ ಮತ್ತು ಧಾರ್ಮಿಕ ತತ್ವಗಳು ಅವಶ್ಯಕವಾಗಿವೆ ಎಂಬ ಅಂಶಗಳನ್ನು ಈ ಕೃತಿಯಲ್ಲಿ ತಿಳಿಯಬಹುದಾಗಿದೆ.

ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದ ಧನಸಹಾಯದ ದೃಷ್ಟಿಯಿಂದ ಕಲ್ಲಯ್ಯ ಹಿರೇಮಠ ಅವರು ಕೂಡಲಸಂಗಮ ಸಾಂಸ್ಕೃತಿಕ ಅಧ್ಯಯನ' ಎಂಬ ಕೃತಿಯನ್ನು ರಚಿಸಿದ್ದು, ಅದು ಕೆಲವೊಂದಿಷ್ಟು ಮಾಹಿತಿಯನ್ನು ಈ ಕ್ಷೇತ್ರದ ಬಗ್ಗೆ ನೀಡುತ್ತದೆ. ಪ್ರಾಚೀನ ಕಾಲದಿಂದ ಇಂದಿನವರೆಗೆ ಸಂಶೋಧನಾತ್ಮಕವಾಗಿ ಇರುವಂತಹ ವಿಚಾರಗಳನ್ನು ಅಷ್ಟಾಗಿ ಚರ್ಚಿಸಿಲ್ಲ. ಈ ಕೃತಿ ಇನ್ನೂ ಪ್ರಕಟವಾಗಿಲ್ಲ. ಆಧುನಿಕ ಕವಿಗಳು ಕೂಡಲಸಂಗಮವನ್ನು ತಮ್ಮ ಕಾವ್ಯಗಳಲ್ಲಿ ಯಾವ ರೀತಿಯಾಗಿ ಕಟ್ಟಿಕೊಟ್ಟಿದ್ದಾರೆ ಎಂಬ ಅಂಶಗಳನ್ನು ಈ ಕೃತಿ ತಿಳಿಸುತ್ತದೆ. ಕೂಡಲಸಂಗಮದಲ್ಲಿಯ ಪ್ರಮುಖ ಶಾಸನ ಮತ್ತು ದೇವಾಲಯಗಳ ಕುರಿತಂತೆ ಸಂಕ್ಷಿಪ್ತವಾದ ಮಾಹಿತಿಯನ್ನು ಈ ಪ್ರಬಂಧದಲ್ಲಿ ತಿಳಿಯಪಡಿಸಿದ್ದಾರೆ.

ಎ.ಎಂ. ಗೊರಚಿಕನವರು ರಚಿಸಿರುವ ಕೂಡಲಸಂಗಮೇಶ್ವರನ 'ಬಂಗಾರದ ಕಳಸ' ಎಂಬ ಕೃತಿಯಲ್ಲಿ ಸಂಗಮೇಶ್ವರನ ಜಾತ್ರೆಯ ಸಂದರ್ಭದಲ್ಲಿ ಬಂಗಾರದ ಕಳಸವನ್ನು ಬಾಗಲಕೋಟೆಯಿಂದ ತರುವ ವಿಚಾರಗಳನ್ನು ಮತ್ತು ಜಾತ್ರೆಗೆ ಸಂಬಂಧಿಸಿದ ಅಂಶಗಳನ್ನು ಈ ಕೃತಿಯಲ್ಲಿ ತಿಳಿಸಿದ್ದಾರೆ. ಕೆಲವು ಐತಿಹ್ಯಗಳ ಮೂಲಕ ತಿಳಿಯುವ ಅಂಶಗಳೆಂದರೆ ಅಮರಾವತಿಯ ದೇಸಾಯಿಯವರ ಮನೆಯಿಂದ ಪ್ರತಿವರ್ಷ ಬಂಗಾರದ ಕಳಸ ಸಂಗಮನಾಥನ ತೇರಿಗೆ ತರುವ ಪದ್ಧತಿ ಇತ್ತು. ಆದರೆ ರಜಾಕಾರರ ಹಾವಳಿಯಿಂದ ಕಳಸವನ್ನು ರಕ್ಷಿಸಲು ಹತ್ತಿಯ ಅಂಡಗಿಯಲ್ಲಿ ಬಚ್ಚಿಟ್ಟಿದ್ದರಿಂದ ಅದು ಬಾಗಲಕೋಟೆಯ ದಲ್ಲಾಳಿ ಅಂಗಡಿಯವರ ಕೈಸೇರಿತು. ಅಂದಿನಿಂದ ಬಾಗಲಕೋಟೆಯ

ಜಿಲ್ಲಾಧಿಕಾರಿಗಳ ಕಚೇರಿಯಿಂದ ತರುವ ಪದ್ಧತಿ ನಡೆಯುತ್ತಾ ಬಂದಿದೆ. ಇಂತಹ ಹಲವಾರು ಅಂಶಗಳು ಈ ಕೃತಿಯಲ್ಲಿ ಮೂಡಿಬಂದಿವೆ. ಜಾತ್ರೆಗೆ ಸಂಬಂಧಿಸಿದಂತೆ ಬೇರೆ ಬೇರೆ ಊರುಗಳಿಂದ ದೈವದವರು ರಥದ ಶೃಂಗಾರಕ್ಕೆ ತರುವ ಅಲಂಕಾರಿಕ ಸಾಮಗ್ರಿಗಳ ಕುರಿತಂತೆ ಹಲವಾರು ಅಂಶಗಳನ್ನು ಈ ಕೃತಿಯಲ್ಲಿ ತಿಳಿಸಿದ್ದಾರೆ.

ಕೂಡಲಸಂಗಮದ ಸಂಗಮೇಶ್ವರನ ಕುರಿತು ರಚಿತವಾಗಿರುವ ಲಾವಣಿ ಪದಗಳು ಮತ್ತು ಭಜನಾ ಪದಗಳು ಈ ಕೃತಿಗಳಲ್ಲಿ ಇವೆ. ಇವು ಪ್ರಾಚೀನ ಇತಿಹಾಸಗಳನ್ನು ಹೇಳುವಂತಹ ಪದ್ಯಗಳಾಗಿವೆ. ಸಂಗಮನಾಥನ ಲೀಲೆಗಳನ್ನು ಮತ್ತು ಬಂಗಾರದ ಕಳಸದ ಪವಾಡಗಳನ್ನು ಈ ಲಾವಣಿಗಳು ತಿಳಿಸುತ್ತವೆ. ಕ್ಷೇತ್ರದ ಪಾರಂಪರಿಕ ಅಂಶಗಳನ್ನು ಕಟ್ಟಿಕೊಡುವಲ್ಲಿ ಈ ಪದ್ಯಗಳು ನೆರವಾಗಿವೆ. ಆ ಮೂಲಕ ಈ ಕೃತಿಯಲ್ಲಿ ಮಹತ್ವದ ಸಂಗತಿಗಳು ರಚಿತವಾಗಿರುವುದರಿಂದ ಕೂಡಲಸಂಗಮದ ಬಗ್ಗೆ ತಿಳಿಯಲು ನೆರವಾಗಿದೆ.

ಮಹೇಶ ತಿಪ್ಪಶೆಟ್ಟಿ ಅವರು ರಚಿಸಿರುವ 'ಕೂಡಲಸಂಗಮ' ಸಮಾಜೋ-ಧಾರ್ಮಿಕ ಅಧ್ಯಯನ ಎಂಬ ಕೃತಿಯು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ಪ್ರಕಾಶನದಿಂದ ಪ್ರಕಟವಾಗಿದೆ. ಈ ಕೃತಿಯು ಕೂಡಲಸಂಗಮ ಕ್ಷೇತ್ರದ ಇತಿಹಾಸ, ರಾಜಕೀಯ ಮತ್ತು ಸಾಂಸ್ಕೃತಿಕ ವೈವಿಧ್ಯತೆಗಳ ಕುರಿತು ವ್ಯವಸ್ಥಿತ ಕ್ರಮದಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಮಾಡಿದ್ದಾರೆ. ಈ ಕ್ಷೇತ್ರದ ಅಭಿವೃದ್ಧಿಯ ಕಾರ್ಯದಲ್ಲಿ ನಡೆದ ಆಧುನಿಕ ರಾಜಕೀಯ ವಿದ್ಯಮಾನಗಳ ಬಗೆಗೂ ಮುಕ್ತವಾದ ಚರ್ಚೆ ಮಾಡಿದ್ದಾರೆ. ಜೊತೆಗೆ ಇಲ್ಲಿಯ ಹೊಸ ಬಗೆಯ ಕಟ್ಟಡಗಳು, ಜಾತ್ರೆ, ವಿವಿಧ ಆಚರಣೆಗಳು ಮೊದಲಾದವುಗಳನ್ನು ಕುರಿತು ಸಾಂಸ್ಕೃತಿಕ ಚಿತ್ರಣವನ್ನು ಕೊಟ್ಟಿದ್ದಾರೆ. ಕೂಡಲಸಂಗಮದ ಅಭಿವೃದ್ಧಿ ಮಂಡಳಿ ಅಧಿಸೂಚನೆಯ ಯತಾವತ್ ಪಠ್ಯವನ್ನು ನೀಡಿರುವುದಲ್ಲದೆ ಕೂಡಲಸಂಗಮ ಮುಂದೇನು? ಎಂಬ ಪ್ರಶ್ನೆ ಹಾಕಿ ಕೆಲವು ಉತ್ತರ ರೂಪದ ಸೂಚನೆಯನ್ನು ಕೊಟ್ಟಿದ್ದಾರೆ. ಸಮೃದ್ಧವಾದ ಮಾಹಿತಿಗಳಿಂದ ತುಂಬಿರುವ ಈ ಗ್ರಂಥದ ಬರವಣಿಗೆಯ ಶೈಲಿ ಸರಳವಾಗಿದೆ. ಅಲ್ಲಲ್ಲಿ ಲೇಖಕರು ಮುಕ್ತವಾದ ಹಾಗೂ ತೀಕ್ಷ್ಣವಾದ ವಿಮರ್ಶೆ ಕೂಡ ಮಾಡಿದ್ದಾರೆ.

ಆಧುನಿಕ ಯುಗದ ವೈಜ್ಞಾನಿಕ ಬೆಳವಣಿಗೆ ಅಂಗವಾಗಿ ಕಟ್ಟಲಾದ ಕೃಷ್ಣಾ ಮೇಲ್ದಂಡೆಯ ನಾರಾಯಣಪುರ ಜಲಾಶಯದಿಂದ ಮುಳಗಡೆಯಾಗಬಹುದಿದ್ದ ಕೂಡಲಸಂಗಮ ಸಂಗಮನಾಥ ದೇವಾಲಯ ಗಂಡಾಂತರದಿಂದ ಪಾರಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡ ಬಗೆಯನ್ನು ಆ ಕಾರ್ಯದಲ್ಲಿ ಜರುಗಿದ ವಿವಿಧ ವಿಕಾಸ ಕಾರ್ಯಗಳ ಸ್ಥೂಲ ಪರಿಚಯ ನೀಡುವುದರ ಮೂಲಕ ಓದುಗರಿಗೆ ತಿಳಿಸಿಕೊಟ್ಟಿದ್ದಾರೆ.

ವಿಜಯಕುಮಾರ ಮಹಾನುಭಾವಿಗಳು ರಚಿಸಿರುವ 'ಬಸವಣ್ಣನವರು' ಚರಿತ್ರೆ ಮತ್ತು ಸಂಸ್ಕೃತಿಯ ಶೋಧಗಳು ಎಂಬ ಕೃತಿಯು ೧೨ನೆಯ ಶತಮಾನದಲ್ಲಿ ಬಸವಣ್ಣನವರು ಕೂಡಲಸಂಗಮಕ್ಕೆ

ಬಂದು ಅಧ್ಯಯನ ಮಾಡಿದ ವಿಷಯಗಳು ಮತ್ತು ಅಂತ್ಯಕಾಲದಲ್ಲಿ ಸಂಗಮನಾಥನಲ್ಲಿ ಐಕ್ಯವಾದ ವಿಚಾರಗಳನ್ನು ಹೇಳುವಾಗ ಕೂಡಲಸಂಗಮದ ಬಗ್ಗೆ ಪ್ರಾಸಂಗಿಕವಾಗಿ ಚರ್ಚೆ ಮಾಡಿದ್ದಾರೆ. ಲಿಂಗಾಯತ ಧರ್ಮವು ಒಂದು ಸ್ವತಂತ್ರ ಧರ್ಮ ಮತ್ತು ಕೂಡಲಸಂಗಮ ಕ್ಷೇತ್ರ ಈ ಧರ್ಮದ ಪವಿತ್ರ ಆರಾಧನಾ ಕ್ಷೇತ್ರ ಎಂಬ ಹಿನ್ನೆಲೆಯಲ್ಲಿ ಹಲವಾರು ಅಂಶಗಳನ್ನು ಚರ್ಚಿಸಿದ್ದಾರೆ. ಬಸವಣ್ಣನವರು ವಿದ್ಯಾಭ್ಯಾಸಕ್ಕೆ ಸಂಗಮನಾಥನ ಅನುಗ್ರಹದಂತೆ ಕೂಡಲಸಂಗಮಕ್ಕೆ ಬಂದು ಅಭ್ಯಾಸವನ್ನು ಮುಗಿಸಿ ಕಲ್ಯಾಣಕ್ಕೆ ಹೋಗಿ ಬಿಜ್ಜಳ ರಾಜನ ಭಂಡಾರದ ಮಂತ್ರಿಯಾಗಿ ಆಡಳಿತಾತ್ಮಕವಾಗಿ ಹಲವಾರು ಬದಲಾವಣೆಗಳನ್ನು ತರುವುದರ ಜೊತೆಗೆ ಜನಸಾಮಾನ್ಯರಿಗೆ ಧಾರ್ಮಿಕ ಅರಿವನ್ನು ಮೂಡಿಸುವುದರ ಮೂಲಕ 'ಸರ್ವರೂ ಸಮಾನರು' ಎಂಬ ಅಂಶ ಸಾರಿದ ಸಂಗತಿ ಇಂದಿಗೂ ಮಾದರಿಯಾಗಿದೆ. ೧೨ನೆಯ ಶತಮಾನದಲ್ಲಿಯೇ ಸಂವಿಧಾನವನ್ನು ರಚಿಸಿದಂತಹ ರೀತಿಯಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿ ಮಹಿಳೆಯರಿಗೆ, ಕೆಳ ಜಾತಿಯವರಿಗೆ ಹಾಗೂ ವೃತ್ತಿಯಲ್ಲಿ ಹಿಂದುಳಿದ ಜನರನ್ನು ಅನುಭವ ಮಂಟಪವೆಂಬ ಒಂದು ಗೂಡಿನಲ್ಲಿ ಸೇರಿಸುವ ಮೂಲಕ 'ಕಾಯಕವೇ ಕೈಲಾಸ'ವೆಂದು ಸಾರಿ ಜನಜಾಗೃತಿ ಮಾಡಿದಂತಹ ವಿವರಣೆ ಈ ಕೃತಿಯಲ್ಲಿದೆ.

ಬಸವಣ್ಣನವರ ಸಾಮಾಜಿಕ ಕ್ರಾಂತಿ ನಾಡಿನಲ್ಲೆಲ್ಲಾ ಹಬ್ಬಿ ಸರ್ವರೂ ಶರಣರಾದರು ಇಂತಹ ಸಂದರ್ಭದಲ್ಲಿ ಉಳ್ಳವರ ಕೆಂಗಣ್ಣಿಗೆ ಗುರಿಯಾದ ಬಸವಣ್ಣನ ತತ್ವಗಳು ಕೆಲವರಿಗೆ ಮುಳ್ಳಿನ ಆವಿಗೆಯಾದವು. ಕೆಳ ವರ್ಗದವರು ಲಿಂಗ ಧರಿಸುವ ಮೂಲಕ ಲಿಂಗಾಯತರಾದರು. ಇಂತಹ ಸಂಗತಿಯನ್ನು ಸಹಿಸದ ಮೇಲ್ವರ್ಗ ಬಸವಣ್ಣವರ ತತ್ವಗಳನ್ನು ವಿರೋಧಿಸಲು ಮುಂದಾದವು. ಕ್ರಾಂತಿಯ ಪರಿಣಾಮವಾಗಿ ಬಸವಣ್ಣನವರು ಕಲ್ಯಾಣವನ್ನು ಬಿಟ್ಟು ಕೂಡಲಸಂಗಮಕ್ಕೆ ಬಂದು ಸಂಗಮನಾಥನಲ್ಲಿ ಲೀನವಾದ ವಿಚಾರಗಳನ್ನು ಕುರಿತು ಪ್ರಾಚೀನ ಕೃತಿಗಳು ಹೇಳುವ ಆಧಾರಗಳನ್ನು ಇಟ್ಟಿಕೊಂಡು ಬಸವಣ್ಣನವರ ಐಕ್ಯದ ಕ್ಷೇತ್ರವಾಗಿ ಇಂದು ಪಾವಿತ್ರತೆ ಪಡೆದ ಅಂಶಗಳು ಈ ಕೃತಿಯಲ್ಲಿ ಚರ್ಚಿಸಲಾಗಿದೆ.

ಜಿ.ಎಲ್. ಪಾಟೀಲ ಅವರು ರಚಿಸಿರುವ 'ಕೂಡಲಸಂಗಮ ಕ್ಷೇತ್ರ' ಎಂಬ ಪರಿಚಯಾತ್ಮಕ, ಸಂಶೋಧನಾತ್ಮಕ ಮತ್ತು ವಿವೇಚನಾತ್ಮಕ ಕಿರು ಲೇಖನ ಕೃತಿ ಇದಾಗಿದ್ದು, ಇದರಲ್ಲಿ ಕೂಡಲಸಂಗಮದ ಸ್ಥಳವನ್ನು ಕೇಂದ್ರವಾಗಿಟ್ಟುಕೊಂಡು ರಚಿಸಲಾಗಿದೆ. ಪ್ರಾಚೀನ ಕಾಲದಲ್ಲಿ ಕೂಡಲಸಂಗಮದ ಮಹತ್ವ ಮತ್ತು ಬಸವೇಶ್ವರರಿಗೆ ಸಂಬಂಧಿಸಿದ ವಿಚಾರಗಳು ಕ್ಷೇತ್ರದ ಪ್ರಮುಖ ಸ್ಥಾನಗಳ ಕುರಿತು ಪರಿಚಯ ಸೂಕ್ತವಾದ ಅನುಬಂಧಗಳನ್ನು ನೀಡುವುದರ ಮೂಲಕ ಕ್ಷೇತ್ರ ಪರಿಚಯ ಮಾಡಿಕೊಟ್ಟಿದ್ದಾರೆ.

ಎಂ.ಎಂ. ಕಲಬುರ್ಗಿಯವರು 'ಮಾರ್ಗ' ೩ ಮತ್ತು ೪ರಲ್ಲಿ ಕೂಡಲಸಂಗಮಕ್ಕೆ ಸಂಬಂಧಿಸಿದ ಲೇಖನಗಳನ್ನು ಪ್ರಕಟಿಸಿದ್ದಾರೆ. ಸಂಗಮನಾಥನ ಕಳಸದ ಪವಾಡಕ್ಕೆ ಸಂಬಂಧಿಸಿದ ವಿಚಾರಗಳು ಮತ್ತು ಜಾತವೇದ ಮುನಿಗಳ ಗದ್ದಿಗೆಯು ಸುಳ್ಳಿನ ಕಂತೆ ಎಂಬ ವಿಚಾರವನ್ನು ಇಟ್ಟುಕೊಂಡು

ಲೇಖನಗಳನ್ನು ಸಂಶೋಧನಾತ್ಮಕವಾಗಿ ಕೆಲವು ಐತಿಹ್ಯಗಳ ಮೂಲಕ ತಿಳಿಸಿಕೊಟ್ಟಿದ್ದಾರೆ. ಕೂಡಲಸಂಗಮ ಕ್ಷೇತ್ರವು ನಾಥ ಸಂಪ್ರದಾಯಕ್ಕೆ ಸೇರಿದ ಕ್ಷೇತ್ರವಾಗಿತ್ತು ಎಂಬ ಅಂಶಕ್ಕೆ ಹಲವು ಅಂಶಗಳ ಉದಾಹರಣೆಗಳನ್ನು ನೀಡುವ ಮೂಲಕ ನಾಥ ಸಂಪ್ರದಾಯ ಕೇಂದ್ರವಾಗಿಯೂ ಕೂಡಲಸಂಗಮ ತನ್ನ ಅಸ್ತಿತ್ವವನ್ನು ಕಂಡುಕೊಂಡಿದ್ದರ ಬಗೆಗೆ ತಿಳಿಸಿದ್ದಾರೆ.

ಹೀಗೆ ಕೂಡಲಸಂಗಮ ಕ್ಷೇತ್ರವನ್ನು ಕುರಿತು ಹಲವಾರು ಅಧ್ಯಯನಗಳಾಗಿದ್ದರೂ, ಪರಿಪೂರ್ಣವಾಗಿ ಸಂಶೋಧನೆಯ ದೃಷ್ಟಿಯಿಂದ ಯಾವ ಕೃತಿಗಳು ರಚನೆಯಾಗದೆ ಇರುವುದರಿಂದ ಮತ್ತು ಪ್ರಾಚೀನ ಕಾಲದಲ್ಲಿಯ ಕೃತಿಗಳಲ್ಲಿ ಕೂಡಲಸಂಗಮವನ್ನು ಪ್ರಸ್ತಾಪಿಸಿರುವ ವಿಚಾರಗಳನ್ನು ಸ್ಥಳ ಪುರಾಣದ ಹಿನ್ನೆಲೆಯಿಂದ ಅಧ್ಯಯನ ಮಾಡುವುದರ ಮೂಲಕ ಸಮಗ್ರವಾಗಿ ಕೂಡಲಸಂಗಮ ಕ್ಷೇತ್ರವನ್ನು ಕುರಿತು ಇಡಿಯಾಗಿ ಈ ಮಹಾಪ್ರಬಂಧವನ್ನು ರಚಿಸಲಾಗಿದೆ.

ಅಧ್ಯಾಯ : ೩

ಕೂಡಲಸಂಗಮ : ಸ್ಥಳನಾಮ ಅಧ್ಯಯನ

೩.೧. ಲಿಖಿತ ಆಕರಗಳು
- ೩.೧.೧. ಕಾವ್ಯ ಪುರಾಣಗಳು
- ೩.೧.೨. ಶಾಸನಗಳು
- ೩.೧.೩. ವಚನಗಳು
- ೩.೧.೪. ಸ್ಥಳಪುರಾಣ

೩.೨. ಮೌಖಿಕ ಆಕರಗಳು
- ೩.೨.೧. ಐತಿಹ್ಯಗಳು

ಅಧ್ಯಾಯ : ಮೂರು

ಕೂಡಲಸಂಗಮ : ಸ್ಥಳನಾಮ ಅಧ್ಯಯನ

ಪ್ರತಿಯೊಂದು ಕುರುಹುಗಳಿಗೂ ಆರಂಭದಿಂದಲೋ ಅಥವಾ ನಂತರದಲ್ಲೋ ಒಂದು ನಾಮ ರೂಢಿಗತಗೊಂಡಿರುತ್ತದೆ. ಅಂತಹ ನಾಮಗಳು ಆ ಸ್ಥಳದ ಎಲ್ಲ ಮಾಹಿತಿಯನ್ನು ತನ್ನೊಳಗೆ ಕ್ರೋಢೀಕರಿಸಿಕೊಂಡು ಸಾಗುತ್ತಿರುತ್ತದೆ. ಜನತೆ ಒಂದು ಕಡೆ ನೆಲೆಸಿದ್ದರ ಸಂಕೇತವಾಗಿ ಅಲ್ಲದೇ ಪರಿಸರ ಮತ್ತು ಸಾಂಸ್ಕೃತಿಕ ಅಂಶಗಳ ಪ್ರಭಾವದಿಂದ ಹಾಗೂ ಐತಿಹಾಸಿಕ ಘಟನೆಗಳ ಪ್ರಭಾವದಿಂದ ತಾವು ವಾಸವಾದ ಸ್ಥಳಕ್ಕೆ ಹೆಸರಿಟ್ಟಿರುತ್ತಾರೆ. ಕ್ರಮೇಣ ಜನ ವಸತಿ ಇರಲಿ ಇಲ್ಲದಿರಲಿ ಸ್ಥಳನಾಮಗಳು ಇರುತ್ತವೆ. ಸ್ಥಳನಾಮಗಳು ಹಲವು ಜನಾಂಗದ ಸಂಸ್ಕೃತಿಯನ್ನು ಶಾಶ್ವತವಾಗಿ ಬೆಸೆಯುವ ಕೊಂಡಿಯಾಗಿವೆ.[೧] ಅಂತಹ ಸ್ಥಳಗಳನ್ನು ಮತ್ತು ಅವುಗಳ ನಾಮಗಳ ವೈಶಿಷ್ಟ್ಯವನ್ನು ತಿಳಿಯುವುದು ಅತಿ ಅವಶ್ಯವಾಗಿರುತ್ತದೆ. ಇಂದು ಸ್ಥಳನಾಮ ಅಧ್ಯಯನವು ಸ್ವತಂತ್ರ್ಯ ಅಧ್ಯಯನ ಕ್ಷೇತ್ರವಾಗಿದೆ. ಈ ಸ್ಥಳನಾಮಗಳ ನಿಜದ ನೆಲೆಯನ್ನು ಶೋಧಿಸಲಿಕ್ಕೆ ಲಿಖಿತ ಮತ್ತು ಮೌಖಿಕ ಆಕರಗಳು ಪ್ರಮುಖವಾಗಿರುತ್ತವೆ.

ಸ್ಥಳನಾಮವೆಂದರೆ ಒಂದು ಊರಿನ ಹೆಸರು ಮಾತ್ರವೇ ಅಲ್ಲ, ಅವು ಆಯಾ ಭೌಗೋಳಿಕ, ಐತಿಹಾಸಿಕ, ಸಾಂಸ್ಕೃತಿಕ, ಸಾಮಾಜಿಕ ವಿಷಯಗಳನ್ನೊಳಗೊಂಡ ಜೀವಂತ ಪಳೆಯುಳಿಕೆಗಳು. ಯಾವುದೇ ಗ್ರಾಮದ ನಾಮ ಸಹಜ ಇಲ್ಲವೇ ಉದ್ದೇಶಪೂರ್ವಕವಾಗಿಯೋ ಹುಟ್ಟಿಕೊಂಡಿರುತ್ತದೆ. ಅಂತಹ ಊರು ಅಥವಾ ಪ್ರದೇಶಗಳಿಗೆ ಅಸಂಬದ್ಧ ಹೆಸರು ಇರುವುದಿಲ್ಲ. ಆ ಸ್ಥಳ ಮಹಿಮೆಗೆ ತಕ್ಕಂತೆ ಅನೇಕ ಪೂರಕ ಅಂಶಗಳು ಕಾರಣೀಭೂತವಾಗಿರುತ್ತವೆ. ಸ್ಥಳನಾಮ ಆಯಾ ಸ್ಥಳದ ಗುರುತು, ಪಟ್ಟಿಕೆಗಳು ಒಂದು ಪ್ರದೇಶದ ನದಿ, ಬೆಟ್ಟ, ಕಲ್ಲು, ಮಣ್ಣು, ಮರ, ಗಿಡ, ಕೋಟೆ, ದೇವಾಲಯ ಮೊದಲಾದವು ಆ ಪ್ರದೇಶದ ಚರಿತ್ರೆ ಹೇಳಲು ಹೇಗೆ ಸಹಾಯಕವಾದವೋ ಹಾಗೆಯೇ ಅಲ್ಲಿನ ಸ್ಥಳನಾಮಗಳು ಚರಿತ್ರೆಗೆ ಪೂರಕವಾಗಿರುವ ಮಾಹಿತಿಯನ್ನು ಒದಗಿಸುತ್ತವೆ.

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನಲ್ಲಿರುವ ಕೂಡಲಸಂಗಮವು ಪ್ರಾಚೀನ ಕಾಲದಿಂದಲೂ ಹೆಸರುವಾಸಿಯಾಗಿದೆ. ಕೂಡಲಸಂಗಮ ಸ್ಥಳನಾಮ ಅಧ್ಯಯನದಿಂದ ಅದರ ಪ್ರಾಚೀನತೆಯನ್ನು ಕಟ್ಟಿಕೊಡಲು ಸಾಧ್ಯವಾಗುತ್ತದೆ. ಅಲ್ಲಿನ ಸ್ಥಳ ಮಹಿಮೆಯು ಇಂದಿಗೂ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡಿದೆ. ಸ್ಥಳನಾಮ ಅಧ್ಯಯನವು ಶಾಸ್ತ್ರೀಯವಾಗಿ ನಡೆಯಬೇಕಾಗಿದ್ದು, ಇಂದು ಇದರ ಮಹತ್ವ ಬಹುದೊಡ್ಡದಾಗಿದೆ. ಮಾನವನ ಹುಟ್ಟು ಮತ್ತು ಅವನು ವಾಸಿಸುತ್ತಿದ್ದ ಸ್ಥಳನಾಮಗಳ ಉದಯ, ಇತಿಹಾಸ, ಜೀವನ ಪದ್ಧತಿ, ಸಂಸ್ಕೃತಿ, ನಾಗರಿಕತೆ, ಪಳೆಯುಳಿಕೆಗಳು ಹೀಗೆ ಅನೇಕ ವಿಷಯಗಳ ತಿಳುವಳಿಕೆ ಸ್ಥಳನಾಮದಿಂದ ಸಾಧ್ಯವಾಗುತ್ತದೆ. ಗತಕಾಲದಲ್ಲಿ ನಡೆದ ಘಟನೆಗಳನ್ನು ಭೌಗೋಳಿಕ ಪರಿಣಾಮಗಳನ್ನು ರಾಜರು ಕೊಟ್ಟ ದತ್ತಿಗಳನ್ನು ಮಾಡಿದ ಯಜ್ಞಯಾಗಾದಿಗಳನ್ನು ಸ್ಥಳನಾಮಗಳಿಂದ ತಿಳಿಯಲು ಸಾಧ್ಯವಾಗುತ್ತದೆ.

ಸ್ಥಳನಾಮವು ಮೂಲತಃ ಒಂದು ಭೌಗೋಳಿಕ ಘಟಕವಾಗಿದ್ದು, ಅದು ಪ್ರಕೃತಿಯ ವರ್ಣಾತ್ಮಕ ನಾಮ ವಿಶೇಷಣವಾಗಿ ಕಾರ್ಯವೆಸಗುತ್ತಿತ್ತು. ಅಲ್ಲದೆ ಒಂದು ಕಾಲದಲ್ಲಿ ಮಾನವ ಹಾಗೂ ಪ್ರಕೃತಿ ಈ ದ್ವಂದ್ವಗಳ ವಿರುದ್ಧ ಶಕ್ತಿಗಳ ಪರಸ್ಪರ ಸಂಬಂಧ, ಹೋರಾಟ ಮುಂತಾದವುಗಳನ್ನು ಇದು ಸೊಗಸಾಗಿ ನಿರೂಪಿಸಬಲ್ಲದು. ನಮ್ಮ ನಾಡಿನಲ್ಲಿ ಸ್ಥಳನಾಮಗಳು ಬಹುಪಾಲು ಪ್ರಕೃತಿ ವಾಚಕಗಳಾಗಿರುವುದು ನಮ್ಮ ಜನರ ಪ್ರಕೃತಿ ನಿಷ್ಠೆಯನ್ನು ಪ್ರಕೃತಿಯೊಂದಿಗೆ ಅವರಿಗಿದ್ದ ಸಂಬಂಧದ ಸಾವಯವತೆಯನ್ನೂ, ಅದರ ತೀವ್ರತೆಯನ್ನೂ ಬಿಂಬಿಸಬಲ್ಲದು. ಈ ಪ್ರಕೃತಿ ನಿಷ್ಠೆಯು ಆದಿಮಾನವನ ಒಂದು ಪ್ರಮುಖ ಗುಣ. ಈ ಸ್ಥಾನಬದ್ಧತೆ ಜನರ ಇರುವಿನ ಹತ್ತು ಹಲವು ಮುಖಗಳಲ್ಲಿ ಸಂಪ್ರದಾಯಗಳು, ಭಾಷಾ ವೈಶಿಷ್ಟ್ಯಗಳು, ಆಚಾರ–ವಿಚಾರಗಳು ಇತ್ಯಾದಿ ಪ್ರಾಚೀನ ಲಕ್ಷಣಗಳನ್ನು ಕಾಯ್ದಿರಿಸಿಕೊಂಡು ಬರಲು ಪೂರ್ವ ಸಾಮಗ್ರಿಯಾಗಿವೆ.

ಗ್ರೀಕ್ ಭಾಷೆಯಲ್ಲಿ ಸ್ಥಳನಾಮಕ್ಕೆ 'ಟೋಪೊಸ್' ಎನ್ನುತ್ತಾರೆ. ಸ್ಥಳಗಳ ಹೆಸರುಗಳನ್ನು ಅಧ್ಯಯನ ಮಾಡುವ ವಿಧಾನವೇ 'ಟೋಪೊಸ್'. ಟೋಪೊಸ್ ಭೂಮಿಗಳನ್ನು ಸೂಚಿಸುವ ಅರ್ಥ ಹೊಂದಿದ್ದು, ಅಲ್ಲಿ ಪ್ರಾಕೃತಿಕ ಮತ್ತು ಸಾಂಸ್ಕೃತಿಕ ವೈಲಕ್ಷಣಗಳೆರಡು ಒಳಗೊಂಡಿವೆ. ಭಾರತದಲ್ಲಿ ಇಂತಹ ಭೌಗೋಳಿಕ ನಾಮ ಅಥವಾ ದೇಶ ನಾಮಗಳಿಗೆ ಪ್ರಾದೇಶಿಕ ಭಾಷೆಯಲ್ಲಿ ಗ್ರಾಮನಾಮ, ಊರ ಹೆಸರು ಎನ್ನುವರು.[೨] ಆದರೆ ಈಚೆಗೆ ಸ್ಥಳನಾಮ ಬೇರೆ, ಗ್ರಾಮನಾಮ ಬೇರೆ. ಹೀಗಾಗಿ ಸ್ಥಳನಾಮ ಗ್ರಾಮನಾಮ, ವ್ಯಕ್ತಿನಾಮ, ಕುಟುಂಬನಾಮ ಹೀಗೆ ಎಲ್ಲ ನಾಮಗಳ ಅಧ್ಯಯನವೇ 'ನಾಮ ವಿಜ್ಞಾನಶಾಸ್ತ್ರ' ಎಂಬುದಾಗಿ ವಿದ್ವಾಂಸರಾದ ಎಂ.ಎಂ. ಕಲಬುರ್ಗಿಯವರು ಅಭಿಪ್ರಾಯಪಡುತ್ತಾರೆ. ಆ ಸ್ಥಳಕ್ಕೆ ಆ ಹೆಸರು ಬರಲು ಕಾರಣವೇನು? ಎಂಬುದನ್ನು ತಿಳಿದರೆ ಆ ಗ್ರಾಮದ ಪ್ರಾಚೀನತೆಯನ್ನು ತಿಳಿಯಲು ಅನುಕೂಲವಾಗುತ್ತದೆ. ಅಂಥ ಪ್ರಾಚೀನ ಸ್ಥಳನಾಮ ಅಧ್ಯಯನದಲ್ಲಿ ಕೂಡಲಸಂಗಮದಂಥ ಪ್ರಾಚೀನ ಕೇಂದ್ರಗಳ ಶೋಧ ಅತ್ಯಂತ ಮುಖ್ಯವಾಗಿದೆ.

ಕೂಡಲಸಂಗಮದ ಸ್ಥಳನಾಮವನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಸಮಾನ ಅರ್ಥದಲ್ಲಿ ಸಂಗಮವೆಂದರೆ ಕೂಡು, ಸೇರು, ಸಮಾವೇಶಗೊಳ್ಳು, ಹೀಗೆ ಹಲವಾರು ಅರ್ಥಗಳು ಕೂಡುತ್ತವೆ. ಈ ಸ್ಥಳದಲ್ಲಿ ಎರಡು ನದಿಗಳು ಕೂಡುವುದರಿಂದ ಸಂಗಮವೆಂದು ಕರೆಯಲಾಗುತ್ತದೆ. ಸಂಗಮ ಎಂಬ ಪದವು ಒಂದು ನಿರ್ದಿಷ್ಟ ಕ್ಷೇತ್ರ ಸ್ಥಳದ ಅಂಕಿನಾಮವಾಗಿರದೇ ಎರಡು ನದಿಗಳು ಸೇರಿರುವ ಯಾವುದೇ ಪುಣ್ಯಕ್ಷೇತ್ರವನ್ನು ಸೂಚಿಸಲು ಸಾಮಾನ್ಯವಾಗಿ ಬಳಸುವ ರೂಢನಾಮವಾಗಿದೆ. ಕೂಡಲಸಂಗಮವು ಕೃಷ್ಣಾ ಮತ್ತು ಮಲಪ್ರಭಾ ನದಿಗಳ ಸಂಗಮದ ವಿಶಿಷ್ಟ ಹೆಸರು. ನದಿಗಳನ್ನು ಕೂಡುಲಗಿ, ಕೂಡಲಿ ಅಥವಾ ಕೂಡಲ್ ಎಂದು ಕರೆಯುವ ಪರಿಪಾಠವಿದೆ. ಉದಾಹರಣೆಗೆ ವರದಾ ಮತ್ತು ಧರ್ಮಾ ಕೂಡುವ ಸ್ಥಳವನ್ನು 'ಕೂಡಲ'ವೆಂದೂ ಕರೆಯುವರು. ಇದು ಹಾವೇರಿ ಜಿಲ್ಲೆಯ ಬಂಕಾಪುರದ ಹತ್ತಿರವಿದೆ. ಇದೇ ರೀತಿ ತುಂಗಾ ಮತ್ತು ಭದ್ರಾ ನದಿಗಳು ಸೇರುವ ಪ್ರದೇಶವನ್ನು 'ಕೂಡಲಿ' ಎಂದು ಕರೆಯುತ್ತಾರೆ. ಇದು ಶಿವಮೊಗ್ಗೆಯ ಸಮೀಪದಲ್ಲಿದೆ. ತುಂಗಭದ್ರಾ ಮತ್ತು ವರದಾ ನದಿಗಳು ಸೇರುವ ಪ್ರದೇಶವನ್ನು 'ಕೂಡಲಗಿ' ಎಂದು ಕರೆಯುವರು. ಇದು ಮೈಲಾರದ ಸಮೀಪವಿದೆ. ತುಳುನಾಡಿನಲ್ಲಿ ಎರಡು ನದಿಗಳು ಸೇರುವ ಸ್ಥಳವನ್ನು 'ಕೂಡಲ್' ಎಂದು ಕರೆಯುತ್ತಾರೆ.[೩] ಹೀಗೆ ಇನ್ನೂ ಹಲವು ಕಡೆಗಳಲ್ಲಿ ಇಂತಹ ಉದಾಹರಣೆಗಳು ಸಿಗುತ್ತವೆ.

'ಸಂಗಮ' ಸಂಸ್ಕೃತ ಪದ 'ಕೂಡಲಿ' ಅಚ್ಚಗನ್ನಡ ಪದ. ಹೀಗೆ ಒಂದೇ ಅರ್ಥವುಳ್ಳ ಎರಡು ವಿಭಿನ್ನ ಭಾಷೆಯ ಪದಗಳ ಜೋಡಣೆಯಿಂದಾಗಿ 'ಕೂಡಲಸಂಗಮ' ಎಂಬ ಪದವು ಉಂಟಾಗಿದೆ. ಇಲ್ಲಿ ಮುಖ್ಯವಾಗಿ ಗಮನಿಸುವುದೇನೆಂದರೆ 'ಸಂಗಮ' ಎಂಬ ಪದಕ್ಕೆ ವಿಶಾಲ ಅರ್ಥವನ್ನು ಕಲ್ಪಿಸುವುದಾದರೆ ಸಂಗಮವೆಂದರೆ ಎರಡು ನದಿಗಳು ಕೂಡುವ ಸ್ಥಳ ಎಂದು ಹೇಳುವರು. ಅದೇ ರೀತಿಯಲ್ಲಿ ಆರಾಧ್ಯದೈವ 'ಸಂಗಮನಾಥ' ಉದಯಿಸಿದ 'ಸಂಗಮ', ಶರಣರು ಸಮಾಗಮಗೊಂಡ 'ಸಂಗಮ'ವೆಂದು ಕರೆಯಬಹುದು. ಹಾಗಾಗಿ ಸಂಗಮ ಪ್ರದೇಶ ಒಂದು ದೃಷ್ಟಿಯಿಂದ ನೈಸರ್ಗಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಗುರುತಿಸಿಕೊಂಡು ಪ್ರಸಿದ್ಧವಾಗಿದೆ.

ಈ ಹಿನ್ನೆಲೆಯಲ್ಲಿ ಈ ಪ್ರದೇಶಕ್ಕೆ ಚಾರಿತ್ರಿಕ ಮಹತ್ವ ಬಂದಿದೆ. ಇನ್ನು ಸಂಗಮ ಎಂಬ ಪದಕ್ಕೆ ಕೂಡಲ ಎಂಬ ಪದ ಸೇರಿಕೊಂಡಿರುವಂತೆ 'ಕಪ್ಪಡಿ' ಎಂಬ ಪದ ಸೇರಿ 'ಕಪ್ಪಡಿ ಸಂಗಮ'ವೆಂದು ಗುರುತಿಸಿಕೊಂಡಿರುವುದನ್ನು ಕಾಣುತ್ತೇವೆ.[೪]

ಸ್ಥಳನಾಮಗಳ ಕುರಿತು ಅಧ್ಯಯನ ಮಾಡುವ ಸಂದರ್ಭದಲ್ಲಿ ಗ್ರಾಮಗಳ ಇತಿಹಾಸವನ್ನು ಹೊರತೆಗೆಯುವಾಗ ನಿಸರ್ಗ ವಾಚಿನಾಮಗಳು ಹೆಚ್ಚು ಪ್ರಾಚೀನತೆಯನ್ನು ಪಡೆದುಕೊಳ್ಳುತ್ತವೆ. ಈ ನಿಸರ್ಗ ವಾಚಿನಾಮವೆಂಬಂತೆ ಎರಡು ನದಿಗಳು ಕೂಡುವ ನೈಸರ್ಗಿಕ ಸ್ಥಳವನ್ನು ಮೊದಲು 'ಕೂಡಲ' ಎಂಬ ಕನ್ನಡ ಹೆಸರಿನಿಂದ ಕರೆಯುತ್ತಿರಬಹುದು. ಸಂಸ್ಕೃತದ ಸಂಪರ್ಕ ಬಂದ ಬಳಿಕ ಇದನ್ನು 'ಸಂಗಮ'ವೆಂದು ಕರೆದು ಆ ಮೇಲೆ ಕೂಡಲವೆಂಬ ದೇಶಿ ಶಬ್ದ ಅಪರಿಚಿತವಾಗಿ ಹೋದಂತೆ ಎರಡನ್ನೂ ಸೇರಿಸಿ ಕೂಡಲಸಂಗಮವೆಂದು ಕರೆದಿರಬಹುದು. "ಸಂಕಲನ" ಎಂಬ

ಪದ ಕನ್ನಡದಲ್ಲಿ ಕೂಡಿಸು ಎಂದಾಗುತ್ತದೆ. ಇಲ್ಲಿ ಎರಡು ನದಿಗಳು ಕೂಡುತ್ತವೆ ಎಂಬುದನ್ನು ಸಂಕಲನಗೊಳ್ಳುತ್ತವೆ ಎನ್ನಬಹುದು. ಈ ಸಂಕಲನವೇ ಸಂಗಮ ಎಂದು ಆಗಿರಬಹುದು. ಈ ಸಂಗತಿ ಧನಾತ್ಮಕವಾಗಿ ಊಹಿಸುವುಕ್ಕೂ ಅವಕಾಶ ಮಾಡಿಕೊಟ್ಟಿದೆ. ಭಾಷೆಗಳಲ್ಲಿ ಇದು ಸಹಜವಾದ ಪ್ರಕೃತಿಯೆ. ಹೀಗೆ ಈ ಗ್ರಾಮಕ್ಕೆ ಎರಡು ಭಾಷೆಗಳಿಂದ 'ಕೂಡಲಸಂಗಮ' ಮತ್ತು 'ಕೂಡಲ' 'ಸಂಗಮ' ಮೂರು ಹೆಸರುಗಳು ರೂಢಿಗೆ ಬಂದವು.[೫] ಸಂಗಮ ಎಂಬ ಸಂಸ್ಕೃತದ ಪದ ಕೂಡಲ ಎಂಬ ಕನ್ನಡದ ಪದದೊಂದಿಗೆ ಸೇರುವುದರ ಮೂಲಕ ಕೂಡಲಸಂಗಮವೆಂದು ಆಗಿರುವುದು ಭಾಷೆಯ ಹಿನ್ನೆಲೆಯಿಂದಲೂ, ಪ್ರಕೃತಿಯ ಪೂರಕ ಅಂಶವಾಗಿಯೂ ಪದಗಳ ಸಂಬಂಧ ಜೋಡಣೆಯಾಗಿ ಕೂಡಲಸಂಗಮವೆಂದು ಪ್ರಸ್ತುತ ಪ್ರಚಲಿತದಲ್ಲಿದೆ.

ಕೂಡಲಸಂಗಮ ಕ್ಷೇತ್ರವನ್ನು ಕಪ್ಪಡಿಸಂಗಮವೆಂದು ಕರೆಯಲಾಗುತ್ತಿತ್ತು. 'ಕಪ್ಪಡಿಸಂಗಮ' ಎಂಬ ಪದವನ್ನು ಕುರಿತು ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಈ ಕೆಳಗಿನಂತೆ ವಿವರಣೆಯನ್ನು ನೀಡಿದೆ. 'ಕಪ್ಪಡಿ', 'ಕಪ್ಪಟಿ' (ನಾ) ಚಿಂದಿ ಬಟ್ಟೆಯನ್ನು ತೊಟ್ಟವನು, ತಿರುಕ, ಬಡಕಪ್ಪಡಿ ಎಂಬ ಅರ್ಥವಿದೆ. ಶತಕೋಟಿ ತೀರ್ಥದ ಶ್ರೀ ಸ್ವಾಮಿದೇವರ ಸಂವಿಧಾನದಲ್ಲೂ ಸ್ವಾಮಿಯಾತ್ರೆಗೆ ಬಂದ ಕಪ್ಪಡಿಗಳ ಸತ್ರಕ್ಕೆ ಮಲ್ಲರಸ ಬಿಟ್ಟಕೇಯಿ[೬] ಕಪ್ಪಡಿಗಳ ಸತ್ರಕ್ಕೆ ಎಂದು ಉಲ್ಲೇಖವನ್ನು ನೋಡಿದರೆ ಬಡವರು ದೇವರ ಯಾತ್ರೆಗೆ ಬಂದಾಗ ಉಳಿದುಕೊಳ್ಳುವ ಛತ್ರ ಎಂದು ಅರ್ಥ ಬರುತ್ತದೆ. ಒಂದು ಊರಿನ ಹೆಸರು ಕೃಷ್ಣಾಮಲಹರಿಗಳ ಸಂಗಮದಲ್ಲಿರುವ ಊರು ಕೂಡಲಸಂಗಮೇಶ್ವರನಿಪ್ಪ ಕಪ್ಪಡಿ ಸಂಗಮಂಪೊಕ್ಕು.[೭] ಈ ಪ್ರಕಾರ ಕಪ್ಪಡಿ ಎನ್ನುವುದರ ಮೂಲ ಸಂಸ್ಕೃತದ ಕರ್ಪಟಿನ್ ಇದರ ಅರ್ಥ ಧಾರ್ಮಿಕ ಭಿಕ್ಷುಕ. ಆದರೆ ಸ್ಥಳೀಯ ಶಾಸನ ಮಾಹಿತಿಗಳು ಒಂದಿಷ್ಟು ಪೂಜ್ಯರಾಗಿದ್ದ ಕಪ್ಪೆಯರು ಎಂಬ ಬೇರೊಂದು ಮೂಲದ ಕಡೆಗೆ ಬೆರಳು ನೀಡುತ್ತದೆ. ಬಳ್ಳಾರಿ ಜಿಲ್ಲೆಯ ಕುಡುತಿನಿ ಶಾಸನವು ಮಲ್ಲರಸನೆಂಬುವನು ಅಲ್ಲಿಯ ಕುಮಾರಸ್ವಾಮಿ ದೇವಾಲಯಕ್ಕೆ ಬರುವ 'ಕಪ್ಪಡಿಗಳ ಸತ್ರ'ಕ್ಕೆ ಭೂದಾನ ನೀಡಿರುವುದನ್ನು ತಿಳಿಸುತ್ತದೆ.[೮] ಅದೇರೀತಿ ಓರುವಾಯಿ ಶಾಸನ (೧೧೪೪)ವು ಲಕ್ಕೆಯ ನಾಯಕನನ್ನು 'ಕಪ್ಪೆಯರ ಶಾಹಾರ ದಾನದ ವಿನೋದ' ಎಂದು ವರ್ಣಿಸುತ್ತದೆ. ಇವೆರಡು ಒಂದೇ ಜಿಲ್ಲೆಯ ಒಂದೇ ಶತಮಾನದ ಶಾಸನಗಳಾಗಿರುವುದರಿಂದ ಕಪ್ಪಡು, ಕಪ್ಪೆ ಪರ್ಯಾಯ ನಾಮಗಳಾಗಿರಬಹುದು ಎಂಬ ಊಹೆಯನ್ನು ಕೊಡಬಹುದು. ಈಗಲೂ ಕುಮಾರಸ್ವಾಮಿ ದೇವಸ್ಥಾನ ಪ್ರಸಿದ್ಧಿಯ ಸಂಡೂರಿನ 'ಕಪ್ಪೆ' ಅಡ್ಡ ಹೆಸರಿನ ಲಿಂಗಾಯತ ಕುಟುಂಬಗಳಿವೆ. ಪಕ್ಕದಲ್ಲಿ ಕಪ್ಪಗಲ್ಲು ಇತ್ಯಾದಿ ಹೆಸರಿನ ಊರುಗಳಿರುವುದನ್ನು ಕಾಣಬಹುದು. ಬಾದಾಮಿಯ ಶಾಸನದ ಕಪ್ಪೆ ಅರಭಟ್ಟನೆಂಬುವನು ಈ ಕಪ್ಪೆ ಸಂಪ್ರದಾಯದವನೇ ಆಗಿರಬಹುದು.[೯]

ಜೆ.ಎಂ. ನಾಗಯ್ಯನವರ ಪ್ರಕಾರ ಕಪ್ಪೆ ಎಂಬ ಪದವನ್ನು ಮನೆತನದ ಹೆಸರಿನಿಂದಲೇ ಗುರುತಿಸುತ್ತಾರೆ. ಬಳ್ಳಾರಿ ಜಿಲ್ಲೆಯ ಸಂಡೂರಿನ ಸಮೀಪ ಚಿಕ್ಕಸಂಡೂರು ಗ್ರಾಮವಿದ್ದು, ಅಲ್ಲಿ

ಹದಿನಾಲ್ಕು ಕಪ್ಪೆ ಮನೆತನಗಳಿರುವುದನ್ನು ಪ್ರಸ್ತಾಪಿಸುತ್ತಾ, ಕಪ್ಪೆ ಹೊನ್ನಪ್ಪ, ಕಪ್ಪೆ ಬಸಪ್ಪ ಮುಂತಾದ ಮನೆತನಗಳು ಇಂದಿಗೂ ಕಪ್ಪೆ ಎಂಬ ಅಡ್ಡ ಹೆಸರಿನಿಂದಲೇ ಗುರುತಿಸಿಕೊಂಡಿವೆ.[೧೦]

ಎಂ.ಎಂ. ಕಲಬುರ್ಗಿಯವರು ಕಪ್ಪಡಿಗೆ ಪರ್ಯಾಯವಾದ ಅನೇಕ ಉದಾಹರಣೆಗಳನ್ನು ಕೊಡುತ್ತಾರೆ. ಕಿತ್ತಳಿ, ಹೆಮ್ಮಾಡಿ, ನಿಮ್ಮಡಿ ಎಂಬಂತೆ ಕಪ್ಪಡಿಯಲ್ಲಿ ಬರುವ ಅಡಿ ಎಂಬ ಗೌರವವಾಚಿ ಪದವಿದ್ದಂತೆ ತೋರುತ್ತದೆ ಎಂದಿರುವರು. ಹಾಗೆಯೇ ಮುಂದುವರೆದು, ಕಪ್ಪೆ+ಅಡಿ= ಕಪ್ಪೆಯಡಿ–ಕಪ್ಪಡಿ ಎಂಬ ಪದವನ್ನು ಬಿಡಿಸಿ ಇದು ಧಾರ್ಮಿಕ ಪೂಜ್ಯ ವ್ಯಕ್ತಿಯನ್ನು ಸೂಚಿಸುವ ಶಬ್ದ ಎಂಬ ನಿರ್ಣಯಕ್ಕೆ ಬರುತ್ತಾರೆ.[೧೧] ಕಪ್ಪೆಯರು ಎಂಬುದು ಗೌರವ ಸೂಚಕವಾಗಿಯೂ ಮತ್ತು ಶ್ರೇಷ್ಠಮಟ್ಟದವರು ಎಂಬ ಹಿನ್ನೆಲೆಯಲ್ಲಿ ಗುರುತಿಸಬಹುದಾಗಿದೆ.

ಕಪ್ಪೆ+ಅಡಿ ಎಂದು ಬಿಡಿಸದೆ ಕಪ್ಪೆ(ಯರು)+ವಾಡಿ=ಕಪ್ಪೆವಾಡಿ–ಕಪ್ಪಡಿ ಎಂದು ಬಿಡಿಸಿ ಗ್ರಾಮನಾಮ ವಾಚಿಯ ಮೂಲಕ ಇದರ ಇನ್ನೊಂದು ಅರ್ಥವನ್ನು ಸ್ಪಷ್ಟಪಡಿಸುತ್ತಾರೆ. 'ಡಿ'ಯಿಂದ ಅಂತ್ಯಗೊಳ್ಳುವ ಗ್ರಾಮನಾಮಗಳು ಕರ್ನಾಟಕದಲ್ಲಿರುವುದನ್ನು ಗಮನಿಸಿ ಕರಡಿ–ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲೂಕಿನ ಕಪ್ಪಡಿ, ಹುನಗುಂದ ತಾಲೂಕಿನ ಕಪ್ಪಡಿಸಂಗಮವು ಕೃಷ್ಣಾ, ಮಲಪ್ರಭೆಯ ತೀರದಲ್ಲಿರುವುದು ಗಮನ ಸೆಳೆಯುವ ಹೋಲಿಕೆಯಾಗಿದ್ದು ಬಹುಶಃ ಕಪನಿ ನದಿಯ ಮೂಲ ಹೆಸರು ಕಪ್ಪಡಿ ಇರಬೇಕೆಂದು ತೋರುತ್ತದೆ. ಹಾಗೆಯೇ ಕಪ್ಪೆಯರು ಮತ್ತು ಕಪ್ಪಡಿಗಳು ವಾಸಿಸುವ ಗ್ರಾಮವೇ ಕಪ್ಪಡಿಯಾಗಿರಬೇಕು. ಬ್ರಾಹ್ಮಣ ಹುಡುಗನನ್ನು ಬಾವಿಗೆ ನೂಕಿದ ಅಪರಾಧ ಹೊತ್ತ ಬಸವಣ್ಣನ ನ್ಯಾಯ ವಿಚಾರಣೆಯು ಕೂಡಲಸಂಗಮದಲ್ಲಿ ಜರುಗಿದಾಗ ಪರದೇಶ, ದೇಶಾಂತರದ ಕಪ್ಪಡಿಯರು ಹನ್ನೆರಡು ಸಹಸ್ರ ಜನ ನೆರೆದಿದ್ದರೆಂದು ಸಿಂಗಿರಾಜ ಪುರಾಣದಲ್ಲಿ ತಿಳಿಸಿರುವುದನ್ನು ಇಲ್ಲಿ ನೆನೆಯಬಹುದಾಗಿದೆ. ಕಪ್ಪಡಿ ಎನ್ನುವುದು ದ್ರಾವಿಡ ಬರವಣಿಗೆಯಲ್ಲಿ ಕಪ್ಪಡಿ ಎಂಬುದಾಗಿದೆ.

ಇದೇ ಕರ್ಪಟಿನ್ ರೂಪದಿಂದ ಸಂಸ್ಕೃತಕ್ಕೆ ಹೋಗಿ ಅದರ ತದ್ಭವ ಕಪ್ಪಡಿ ಎಂಬ ಭ್ರಮೆ ಹುಟ್ಟಿಸಿರಬಹುದು ಎಂಬುದಾಗಿ ಆಲೋಚನೆಯನ್ನು ಮಾಡಬಹುದು. ಹಾಗೆಯೇ ಬಸವಣ್ಣನವರು "ಅರ್ಚಿಸಲರಿಯೇ ಪೂಜಿಸಲರಿಯೇ ಶಿವರಾತ್ರಿಯ ನಾ ಮಾಡಲಾರಿಯೇ ಕಪ್ಪಡಿಯ ವೇಷದಿಂದ ಬಂದಾಡುವೆ" ಎಂದು ವೇಷವನ್ನು ಎತ್ತಿ ನುಡಿದಿದ್ದಾರೆ. ಇದರಿಂದ ಕಪ್ಪಡಿಗಳು ಅರ್ಚನೆ, ಪೂಜೆ, ಶಿವರಾತ್ರಿ ಮಾಡುವವರಾಗಿದ್ದರೆಂದು ತಿಳಿಯಬಹುದು. ಕಪ್ಪಡಿಯ ವೇಷವನ್ನು ಪ್ರಸ್ತಾಪಿಸುತ್ತಾ 'ನಿಮ್ಮ ಲಾಂಛನವ ಧರಿಸಿಪ್ಪ ಉದರ ಪೋಷಕ ನಾನಯ್ಯ ನಿಮ್ಮ ವೇಷಧಾರಿಯ ಮನೆಯ ಪಂಗಳ ನಾನಯ್ಯ' ಎನ್ನುವುದರಿಂದ ಈ ಕಪ್ಪಡಿಗಳು ಹರಿದ ಬಟ್ಟೆಯವರಾದರೂ ಅದು ನಿಮ್ಮ ವೇಷ ಅಂದರೆ ಶಿವನ ವೇಷವೇ ಆಗಿದ್ದಿತ್ತೆಂದು ಅದು ಹರಿದು ಹೋಗಿರುತ್ತಿದ್ದ ಕಾರಣ ಅವರು ತಿರುಕರಂತೆ ಕಾಣಿಸುತ್ತಿದ್ದಿರಬೇಕೆನಿಸುತ್ತದೆ.

ತಿರುಕರೆನ್ನದಿರಂ ಬೋ ಎನ್ನ ತಂದೆಗಳನು
ತಿರುಕರೆನ್ನದಿರಂ ಬೋ ಎನ್ನ ಬಂಧುಗಳು

ತಿರುಕರೆನ್ನದಿರಂ ಬೋ ಎನ್ನ ದೇವರನು
ತಿರುಕರೆನ್ನದಿರಂ ಬೋ ಎನ್ನ ಒಡೆಯರನು
ದೇಹಿ ಎಂದರೆ ನಾಸ್ತಿ ಎಂಬುವರ
ಬೇಹು ನೋಡಬಂದ ಕಾಣಾ ಕೂಡಲಸಂಗದೇವಾ[೧೨]

ಎಂಬ ವಚನವು ತಿರುಕನಂತೆ ಕಾಣುತ್ತಿದ್ದ ಈ ಕಪ್ಪಡಿಗಳನ್ನೇ ಕುರಿತು ಹೇಳಿರಬೇಕು. 'ಬಡ ಕಪ್ಪಡಿಯಂ ತನ್ನಪ್ಪಾ ಗುಡಿಸಲಂ ಬಲ್ಲಿತ್ತು ಮಾಳ್ಪಂ'[೧೩] ಎಂಬ ಬ್ರಹ್ಮಶಿವನ ಮಾತು ಕಪ್ಪಡಿಗಳು ಗುಡಿಸಲಲ್ಲಿ ವಾಸಿಸುತ್ತಿದ್ದುದನ್ನು ಸೂಚಿಸುತ್ತದೆ.

ಇತ್ತೀಚೆಗೆ ಶೈವ ಸನ್ಯಾಸಿಗಳಿಗೆ ಮಾತ್ರ ಸೀಮಿತವಾಗಿರುವ ಕಪ್ಪಡಿ ಎಂಬುದು ಕಾಯುವವ (ರಕ್ಷಕ) ಅರ್ಥದಲ್ಲಿ ಮೊದಮೊದಲು ಎಲ್ಲ ಮತದ ಸನ್ಯಾಸಿಗಳಿಗೂ ಅನ್ವಯಿಸುತ್ತಿರಬಹುದು. ಅದಕ್ಕಾಗಿಯೇ ಮಾದವ ನೀತನ್ ಪೆರನಲ್ಲ ಎಂದು ಈ ಕಪ್ಪೆ ಅರೆಭಟ್ಟನನ್ನು ವೈಷ್ಣವ ರೀತಿಯಲ್ಲಿ ಬಾದಾಮಿ ಶಾಸನವನ್ನು ವರ್ಣಿಸಬಹುದು.[೧೪] ಕಪ್ಪಡಿಯ ಸಂಗಮದಲ್ಲಿದ್ದ ದೇವರು ಕೂಡಲಸಂಗಮೇಶ್ವರ ಕಪ್ಪಡಿ ಎಂಬುದು ಬಹುಶಃ ಸಂಸ್ಕೃತದ ಕರ್ಪಟ ಎಂಬುದರ ತದ್ಭವ. ಕರ್ಪಟ ಎಂದರೆ ಸಾಮಾನ್ಯ ಬಟ್ಟೆಗಳನ್ನು ಧರಿಸಿದ ಭಿಕ್ಷುಕ ಸನ್ಯಾಸಿ ಎಂದರ್ಥ. ಅದು ಶೈವ ಸನ್ಯಾಸಿಗಳು ಅಥವಾ ಗೊರವರು ವಿಶೇಷವಾಗಿ ಬಂದು ಹೋಗುತ್ತಿದ್ದ ಸ್ಥಾನವಾದ್ದರಿಂದ ಬಹುಶಃ ಈ ಊರಿಗೆ ಕಪ್ಪಡಿ ಸಂಗಮ ಎಂಬ ಹೆಸರು ಬಂದಿರಬೇಕು. ನದಿಗಳು ಕೂಡುವ ಸ್ಥಳದಲ್ಲಿಯ ಈಶ್ವರ ದೇವಾಲಯಗಳನ್ನು ಸಂಗಮೇಶ್ವರ ಎಂಬ ಹೆಸರಿನಿಂದ ಕರೆಯುವುದು ಸಹಜವಾದ ಸಂಗತಿಯಾಗಿದೆ. ಈ ಕಾರಣದಿಂದ ಇಲ್ಲಿಯ ದೇವಸ್ಥಾನವು ಸಂಗಮೇಶ್ವರ ಎಂಬ ಹೆಸರಿನಿಂದ ಕರೆಸಿಕೊಳ್ಳುತ್ತಿದೆ.

ಕೂಡಲಸಂಗಮಕ್ಕೆ ಸಮೀಪದಲ್ಲಿರುವ ಕೊಡೆಕಲ್ಲ ಬಸವಣ್ಣ ಎಷ್ಟೇ ಶರಣ ಸಂಪ್ರದಾಯದವನಾಗಿದ್ದರೂ ಈತನದು ಮೂಲತಃ ನಾಥ ಸಂಪ್ರದಾಯ. ಇವನ ಮಗ ರಾಚಪಯ್ಯ ಶಿಷ್ಯ ಮಂಟೇಸ್ವಾಮಿ ಕೂಡಲಸಂಗಮಕ್ಕೆ ಭೇಟಿ ನೀಡಿದಂತಿದೆ. ಇದರ ಕುರುಹು ಎಂಬಂತೆ ಇಲ್ಲಿ ಒಂಟಿಪಾದ ಮಂಟೇಸ್ವಾಮಿ ಎಂದು ಕರೆಯುವ ಒಂದೇ ಒಂದು ಪಾದ ಕೆತ್ತಿದ ಶಿಲ್ಪವಿದೆ. ಇದಲ್ಲದೆ ಈ ಊರಿನಲ್ಲಿ ಮಂಟೇದ, ಮಂಟೇಬಸವ, ಮಂಟೇಸ್ವಾಮಿ ಹೆಸರಿನವರಿದ್ದು ಇವರ ಮನೆತನಗಳು ಮಂಟೇಸ್ವಾಮಿ ಒಕ್ಕಲುಗಳಾಗಿವೆ. 'ಶಿಶು ಮಕ್ಕಳು' ಎಂದು ಕರೆದುಕೊಳ್ಳುವ ಈ ಕುಟುಂಬಗಳು ತಾವು ಇಲ್ಲಿಯ ಸಂಗಮೇಶ್ವರ ದೇವರ ಪೂಜಾರಿಗಳ ಐವತ್ತರಷ್ಟು ಕುಟುಂಬಗಳು ಸರದಿಯ ಪ್ರಕಾರ ಸಂಗಮೇಶ್ವರ ಪೂಜಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇದರಲ್ಲಿ ಲಿಂಗಾಯತರು ಮತ್ತು ಜಂಗಮೇತರರು ಇರುವುದನ್ನು ನೋಡಿದರೆ ಮೂಲತಃ ಜಂಗಮೇತರರೇ ಇದರ ಪೂಜಾರಿಗಳೆಂದು ಆಮೇಲೆ ಅರ್ಚಕ ಮನೋಧರ್ಮದ ಜಂಗಮರು ಕ್ರಮೇಣ ಸೇರಿಕೊಂಡರೆಂದು ಸಹಜವಾಗಿಯೇ ಹೇಳಬಹುದು.

ಏಕಾಂತ ರಾಮಯ್ಯನು ಶಿರಸ್ಸು ಪವಾಡವನ್ನು ಮಾಡಿದಾಗ ರುಂಡವನ್ನು ಯಾವ ಯಾವ ಕ್ಷೇತ್ರಗಳಿಗೆ ಒಯ್ಯಲಾಯಿತು ಎಂದು ಹೇಳುವ ಹರಿಹರನ ಏಕಾಂತ ರಾಮಯ್ಯನ ರಗಳೆಯಲ್ಲಿ ಹೇಳುವಂತೆ ಕತ್ತರಿಸಿದ ರುಂಡವನ್ನು ಅಗ್ಗವಣಿ ಹೊನ್ನಯ್ಯನು ತಳಿಗೆಯಲ್ಲಿಟ್ಟು ಮೆರೆಸುತ್ತಾ ಹುಲಿಗೇರಿ, ಅಣ್ಣಿಗೇರಿ, ಕೆಂಬಾವಿ, ಕಪ್ಪಡಿಸಂಗಮ, ಸೊನ್ನಲಿಗೆಗೆ ಬರುತ್ತಾನೆ.

ಬಂದು ಹುಲಿಗೆರೆಯ ಪೊಟ್ಟಣವ ನೊಲದಿಂದ ಪೊಕ್ಕು
ಸಂದಣಿಯ ಮೆರೆವುತ್ತೆ ಬರುತ ಮನಂ ಮಿಕ್ಕು
ಸೋಮನಾಥನ ಚರಣಕೇರಿಸುವಂತೆ ಮನವಿಟ್ಟು
ಭೂವಿಗಚ್ಚರಿಯೇನಲ್ಕಲಿದೆ ಪೊರಮಟ್ಟು
ಅಣ್ಣಿಗೇರಿಯ ಮ್ಮಥನಾಥನ ಚರಣಮಂಕಂಡು
ಬಣ್ಣಿಸುತಲಿ ನೆಲವರಿಕೆಯಂ ಕೈಗೊಂಡು
ಕೆಂಬಾವಿಯೊಳು ಭೋಗನಾಥನಲ್ಲಿಗೆ ಬಂದು
ಬೆಂಬಳಿಯಲುರುಳಿತಾತನೆ ಕರುಣೆ ಶರಣೆಂದು
ಕಪ್ಪಡಿಯ ಸಂಗಮೇಶ್ವರನಲ್ಲಿ ಗೆಯ್ತೆಂದು
ಒಪ್ಪುತಿಹ ರಾಮಿತಂದೆಗಳ ಶಿರ ಶರಣೆಂದು
ಅವ್ವಂದೊಳು ನಾಗನಾಥನಲ್ಲಿಗೆ ಬಂದು
ದೇವ ನಿಮ್ಮಯ ಶರಣವೀಯೆನುತ್ತಂನಿಂಯ[೧೫]

ಎಂಬ ಪಠ್ಯವನ್ನು ಗಮನಿಸಿದಾಗ ಕೂಡಲಸಂಗಮದ ಪರಿಸರದಲ್ಲಿ ನಾಗನಾಥ ದೇವಾಲಯವಿದ್ದಿತೆಂದು ಹೇಳಲಾಗುತ್ತದೆ. ಇಂದು ಸಿಗುವ ಐದು ಶಾಸನಗಳ ಈ ಹೆಸರುಗಳಲ್ಲಿ ಪ್ರಸ್ತುತ ಪರಿಸರದಲ್ಲಿ ಈ ಹೆಸರಿನ ದೇವಾಲಯವಾಗಲಿ ಕಂಡು ಬರದಿದ್ದರೂ ಹರಿಹರನ ಮಾತನ್ನು ನಾವು ನಂಬಬೇಕಾಗುತ್ತದೆ. ರಗಳೆ ಕಾವ್ಯದಲ್ಲಿ ದಾಖಲಾಗುವಷ್ಟು ಪ್ರಸಿದ್ಧಿ ಪಡೆದಿತ್ತೆಂದು ಹೇಳಬೇಕಾಗುತ್ತದೆ. ಈ ನಾಗನಾಥನೆಂಬ ಹೆಸರೇ ನಾಥ ಸಂಪ್ರದಾಯವನ್ನು ಸೂಚಿಸುತ್ತದೆ. ಇಷ್ಟೇ ಏಕೆ ಗುಲಬರ್ಗಾ ಜಿಲ್ಲೆಯ ಒಡಬಾಳ ಗ್ರಾಮದ ನಾಗನಾಥ ದೇವಾಲಯವು ನಾಥ ಸಂಪ್ರದಾಯದ ಆಚರಣೆಗಳನ್ನು ಹೊಂದಿದ್ದು ಗಮನಿಸಬೇಕಾದ ಅಂಶವಾಗಿದೆ.

ಕೂಡಲಸಂಗಮ ಪ್ರಾಚೀನ ಕಾಲದಿಂದಲೂ ಹೆಸರುವಾಸಿಯಾಗಿದ್ದಂಥ ಧಾರ್ಮಿಕ ಕ್ಷೇತ್ರ. ಈ ಸಂಗತಿ ಎಲ್ಲರಿಗೂ ತಿಳಿದಿರುವಂಥದ್ದು. ಆಕರಗಳ ಮುಖೇನವಾಗಿ ಅದರ ಪ್ರಾಚೀನತೆಯನ್ನು ನೋಡಲು ಹೊರಟಾಗ ಹಲವಾರು ಲಿಖಿತ ಆಧಾರಗಳು ನಮಗೆ ಸಿಗುತ್ತವೆ. ಕಾವ್ಯ, ಪುರಾಣಗಳು ನಮಗೆ ಮೊದಲನೆಯ ಲಿಖಿತ ದಾಖಲೆಗಳಾಗಿರುತ್ತವೆ. ಇವುಗಳ ಜೊತೆಗೆ ಲಿಖಿತ ಆಕರಗಳಲ್ಲಿ ಶಾಸನಗಳು ಕಾವ್ಯ, ಪುರಾಣಗಳು, ವಚನಗಳು, ಗೆಜೆಟಿಯರ್‌ಗಳು ನೆರವಾಗುತ್ತವೆ. ಮೌಖಿಕ ಆಕರಗಳಲ್ಲಿ ಐತಿಹ್ಯ, ಜನವದಂತಿ, ಜನಪದ ಕಥೆ, ಹಾಡುಗಳು ಹೀಗೆ ಅನೇಕ ಇವೆ. ಇವುಗಳನ್ನು

ಅನೇಕರು ತಮ್ಮ ಅನುಕೂಲಕ್ಕೆ ತಕ್ಕಂತೆ ಅಲ್ಪ ಬದಲಾವಣೆಯನ್ನು ಮಾಡಿರಬಹುದಾದರೂ ಅವುಗಳಲ್ಲಿನ ವಿಷಯ ವಸ್ತುಗಳು ಸದಾ ಸತ್ಯಶೀಲವಾಗಿರುತ್ತವೆ. ಇವುಗಳನ್ನು ನೆಚ್ಚಿಯೇ ಅನೇಕ ಸಂಶೋಧನೆಗಳು ನಡೆಯುತ್ತಿದ್ದು, ಇಲ್ಲಿನ ಪ್ರಸ್ತುತ ಅಧ್ಯಯನವು ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಕೂಡಲಸಂಗಮ ಸ್ಥಳನಾಮ ಮಹಾತ್ಮೆಯನ್ನು ಕಾವ್ಯ, ಪುರಾಣ, ಶಾಸನಗಳಿಂದ ನಿರೂಪಿಸುವ ಪ್ರಯತ್ನವನ್ನು ಮಾಡಬಹುದು.

೩.೧. ಲಿಖಿತ ಆಕರಗಳು

ಪ್ರಾಚೀನ ಕಾಲದಲ್ಲಿ ಕೈಬರಹಗಳ ಮೂಲಕ ಬರೆದ ಪ್ರತಿಗಳನ್ನು ಲಿಖಿತ ಆಕರಗಳಾಗಿ ಪರಿಗಣಿಸಲಾಗುತ್ತದೆ. ಇವುಗಳಲ್ಲಿ ತಾಳೆಗರಿಯ ಪ್ರತಿಗಳು, ಕೋರಿ ಕಾಗದ ಪ್ರತಿಗಳು ಲಿಖಿತ ಆಕರಗಳಲ್ಲಿ ಪ್ರಮುಖವಾಗಿವೆ. ಕೂಡಲಸಂಗಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕ್ಷೇತ್ರ ಉಲ್ಲೇಖವಿರುವ ಹಲವಾರು ಪ್ರಾಚೀನ ಕೃತಿಗಳನ್ನು ಉಲ್ಲೇಖಿಸುವಂತಹ ಕೃತಿಗಳನ್ನು ಅಧ್ಯಯನಕ್ಕೆ ಬಳಸಿಕೊಂಡು ಕೂಡಲಸಂಗಮದ ವಿಚಾರಗಳನ್ನು ತಿಳಿಯಲಾಗಿದೆ.

೩.೧.೧. ಕಾವ್ಯ-ಪುರಾಣಗಳು

ಕೂಡಲಸಂಗಮ ಕ್ಷೇತ್ರವನ್ನು ಉಲ್ಲೇಖಿಸುವಂಥ ಬಹಳ ಪ್ರಾಚೀನ ಕಾವ್ಯ ಮತ್ತು ಪುರಾಣಗಳನ್ನು ಅಧ್ಯಯನಕ್ಕೆ ತೆಗೆದುಕೊಂಡಾಗ ನಮಗೆ ದೊರೆಯುವ ಪ್ರಮುಖ ಕೃತಿಗಳೆಂದರೆ ಹರಿಹರನ ಬಸವರಾಜ ದೇವರ ರಗಳೆ ಮತ್ತು ಏಕಾಂತ ರಾಮಯ್ಯನ ರಗಳೆ. ಅದೇ ತೆರನಾಗಿ ಗರಣಿ ಬಸವನ ಚಾರಿತ್ರ್ಯ, ಅಮಲಬಸವ ಚಾರಿತ್ರ್ಯ, ಬಸವಪುರಾಣ, ಸಿಂಗಿರಾಜ ಪುರಾಣ, ಚೆನ್ನಬಸವ ಪುರಾಣ, ಪ್ರಭುಲಿಂಗಲೀಲೆ, ಶಿವತತ್ತ್ವ ಚಿಂತಾಮಣಿ, ಬಸವ ಪವಾಡ ಹೀಗೆ ಅನೇಕ ಕೃತಿಗಳಲ್ಲಿ ಕೂಡಲಸಂಗಮ ಕ್ಷೇತ್ರದ ಮಹತ್ವ ತಿಳಿದುಬರುತ್ತದೆ.

ಹರಿಹರನ ಬಸವರಾಜ ದೇವರ ರಗಳೆ

ಕೂಡಲಸಂಗಮದ ಪ್ರಾಚೀನತೆಯನ್ನು ನೋಡುವುದಾದರೆ ಕಾಯ್ಯೋಕ್ತವಾಗಿ ಹರಿಹರನ ರಗಳೆಯು ಮಹತ್ವದ್ದಾಗಿದೆ. ಬಸವರಾಜ ದೇವರ ರಗಳೆ ಮತ್ತು ಏಕಾಂತರಾಮಿ ತಂದೆಯ ರಗಳೆಯಲ್ಲಿ "ಕಪ್ಪಡಿಸಂಗಮ" ಎಂಬ ಸ್ಥಳನಾಮವನ್ನು ಉಲ್ಲೇಖಿಸುತ್ತಾನೆ. ಬಸವಣ್ಣನು ತನ್ನ ಹುಟ್ಟೂರಾದ ಬಾಗೇವಾಡಿಯಿಂದ ಕಪ್ಪಡಿಯ ಕೂಡಲಸಂಗಮಕ್ಕೆ ಬಂದಿದ್ದು ಮತ್ತು ಕೂಡಲಸಂಗಮ ಸ್ಥಳದ ಮಹತ್ವವನ್ನು ಹೇಳುತ್ತಾನೆ.

"ಮಲಪ್ರಹರಿ ಕೃಷ್ಣವೇಣಿಗಳ ಸಂಘಸುಖಮಂ ಪಿಂಗದಾ
ಕೂಡಲಸಂಗಮೇಶ್ವರನಿರ್ಪ ಕಪ್ಪಡಿಯ ಸಂಗಮಂ ಪೊಕ್ಕು"[೧೬]

ಲಿಖಿತ ಆಧಾರಗಳಲ್ಲಿ ಅತ್ಯಂತ ವಿಶೇಷವಾದ ಉಕ್ತಿಯನ್ನು ಈ ಮೇಲಿನ ಸಾಲುಗಳಲ್ಲಿ ಕಾಣುತ್ತೇವೆ. ಇಂದು ಈ ಕ್ಷೇತ್ರ ಕೂಡಲಸಂಗಮ ಎಂದು ಕರೆಸಿಕೊಳ್ಳುತ್ತಿದ್ದು, ಹಿಂದೆ

ಕಪ್ಪಡಿಸಂಗಮವಾಗಿತ್ತು. ಕಪ್ಪಡಿಸಂಗಮ ಎಂಬುದು ಮೂಲ ಗ್ರಾಮ ನಾಮವಾಗಿದೆ. ಆದರೆ "ಕೂಡಲಸಂಗಮೇಶ್ವರ ನಿರ್ಪ" ಎಂಬ ಪದವು ಸಂಗಮೇಶ್ವರ ದೇವರನ್ನು ಮತ್ತು ಕೂಡಲ ಎಂಬುದು ನದಿಗಳು ಸೇರುವ ನಿಸರ್ಗವಾಚಿ ಸ್ಥಳವನ್ನು ಗುರುತಿಸುತ್ತದೆ. ಹೀಗಾಗಿ ಅಲ್ಲಿಯ ಸಂಗಮೇಶ್ವರನಿಗೆ "ಕೂಡಲಸಂಗಮೇಶ್ವರ" ಎಂದು ಕರೆಯುವುದು ರೂಢಿಯಾಗಿದೆ. ಇದು ಹರಿಹರನ ರಗಳೆಯಲ್ಲಿ ಬರುವಷ್ಟು ಪ್ರಾಚೀನತೆಯನ್ನು ಪಡೆದಿದ್ದು ಮತ್ತು ಅದಕ್ಕೆ ಮೂಲ ಕಾರಣವನ್ನು ತಿಳಿಯುವುದಾದರೆ ಬಸವಣ್ಣನವರ ವಚನಗಳ ಅಂಕಿತನಾಮ "ಕೂಡಲಸಂಗಮದೇವ" ಎಂದಾಗಿದ್ದು, ಹರಿಹರನು ರಗಳೆಯಲ್ಲಿ ಇದರ ಪ್ರಭಾವದಿಂದಲೇ "ಕೂಡಲಸಂಗಮೇಶ್ವರ ನಿರ್ಪ" ಎಂಬ ಪದವನ್ನು ಬಳಸಿರುವಂತಿದೆ. ಈ ಕಾರಣದಿಂದ ಇಲ್ಲಿ ಬಂದಿರುವ ಕೂಡಲಸಂಗಮ ಮತ್ತು ಕಪ್ಪಡಿಸಂಗಮ ಎರಡನ್ನು ವಿಭಿನ್ನವಾಗಿ ನೋಡುವುದಾದರೆ ಕೂಡಲಸಂಗಮವು ಸ್ಥಳನಾಮವಾಗಿಯೂ ಮತ್ತು ಕಪ್ಪಡಿಸಂಗಮವನ್ನು ಗ್ರಾಮನಾಮವಾಗಿಯೂ ಅರ್ಥೈಸಬಹುದಾಗಿದೆ.

ಹರಿಹರನ ಬಸವರಾಜ ದೇವರ ರಗಳೆಯಲ್ಲಿ ಕಪ್ಪಡಿಸಂಗಮವೆಂದು ಗ್ರಾಮವನ್ನೇ ಕೇಂದ್ರವಾಗಿ ಉಲ್ಲೇಖಿಸಲಾಗಿದ್ದು ಇದು ರಗಳೆಯ ಕೊನೆಯಲ್ಲಿ ವ್ಯಕ್ತವಾಗಿದೆ.

ಶಿವದ್ರೋಹಗೈದ ಬಿಜ್ಜಳನ ಕೊಲಿಸುತಂ
ಬವಹರನ ಶರಣ ಸದೋಷ್ಟಿಯಂ ಸಲಿಸುತ್ತಂ
ಕಪ್ಪಡಿಯ ಸಂಗಮೇಶ್ವರನಲ್ಲಿಗೈತೆಂದು
ನಿಷ್ಟೆಮಿಗೆ ತುತಿಗೈದು ಪೊಡಮಟ್ಟು ಕೈಮುಗಿದು[೧೭]

ಇಲ್ಲಿ "ಕಪ್ಪಡಿಯ" ಎಂದು 'ಯ'ಕಾರವನ್ನು ಬಳಸಿರುವುದರಿಂದ 'ಅಲ್ಲಿಯ' ಎಂಬ ಅರ್ಥ ಬರುತ್ತದೆ. ಅಂದರೆ ಕಪ್ಪಡಿಯಲ್ಲಿಯ, ಕಪ್ಪಡಿ ಕ್ಷೇತ್ರದಲ್ಲಿ ಇರುವಂಥ ಎಂಬ ಅರ್ಥ ಬರುತ್ತದೆ. ಹೀಗಾಗಿ ಕಪ್ಪಡಿ ಎಂಬ ಗ್ರಾಮದಲ್ಲಿ ಇರುವಂಥ ಸಂಗಮೇಶ್ವರ ಎಂದು ಬರುವುದರಿಂದ 'ಕಪ್ಪಡಿಸಂಗಮ' ಎಂಬುದು ಗ್ರಾಮನಾಮವಾಗಿದೆ.

ಹರಿಹರನ ಏಕಾಂತ ರಾಮಯ್ಯನ ರಗಳೆ

ಏಕಾಂತ ರಾಮಯ್ಯನ ರಗಳೆಯಲ್ಲಿಯೂ ಸಹ ಇನ್ನೊಂದು ಅಂಶವನ್ನು ಸೇರಿಸುತ್ತದೆ. ಅದು ಕತ್ತರಿಸಿದ ರಾಮಯ್ಯನ ರುಂಡವನ್ನು ಅಗ್ಗಮಣಿ ಹೊನ್ನಯ್ಯನು ತಳಿಗೆಯಲ್ಲಿಟ್ಟು ಮೆರೆಸುತ್ತಾ ಹಲಗೇರಿ, ಅಣ್ಣಿಗೇರಿ, ಕೆಂಬಾವಿ, ಕಪ್ಪಡಿಸಂಗಮ, ಸೊನ್ನಲಿಗೆ, ಹಂಪಿ ಪ್ರದೇಶಗಳಿಗೆ ಬರುತ್ತಾರೆ.

ಬೆಂಬಳಿಯಲುರುಳಿದಾತನೆ ಕರುಣಿ ಶರಣೆಂದು
ಕಪ್ಪಡಿಯ ಸಂಗಮೇಶ್ವರನಲ್ಲಿ ಗೆಯ್ತೆಂದು
ಒಪ್ಪಿಸುತ ರಾಮಿತಂದೆಗಳ ಶಿರ ಶರಣೆಂದು[೧೮]

ಇಲ್ಲಿಯೂ ಸಹ ಕಪ್ಪಡಿಯ ಸಂಗಮೇಶ್ವರ ಎಂದು ಬಂದಿರುವುದರಿಂದ ಕಪ್ಪಡಿ ಎಂಬ ಪ್ರದೇಶದಲ್ಲಿ ಇರುವಂಥ ಸಂಗಮೇಶ್ವರ ಎಂದು ತಿಳಿಯುತ್ತದೆ. ಹನ್ನೆರಡನೆಯ ಶತಮಾನದಲ್ಲಿ

ಕಪ್ಪಡಿಯ ಸಂಗಮ ಕ್ಷೇತ್ರ ಬಹಳಷ್ಟು ಪ್ರಸಿದ್ಧಿಯನ್ನು ಪಡೆದಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಸಂಗಮೇಶ್ವರನ ದರ್ಶನಕ್ಕೆ ಏಕಾಂತ ರಾಮಯ್ಯನ ರುಂಡವನ್ನು ತಂದಿದ್ದನ್ನು ನೋಡಿದರೆ ಹಂಪಿಯ ವಿರೂಪಾಕ್ಷನಂತೆ ಕೂಡಲಸಂಗಮೇಶ್ವರನು ಪ್ರಸಿದ್ಧನಾಗಿದ್ದನೆಂದು ತಿಳಿಯುತ್ತದೆ.

ಭೀಮ ಕವಿಯ ಬಸವಪುರಾಣ

ಹರಿಹರನ ನಂತರ ಬಸವಣ್ಣನ ಬದುಕನ್ನು ವಸ್ತುವಾಗಿ ಸ್ವೀಕರಿಸಿದವನು ತೆಲುಗು ಕವಿಯಾದ ಪಾಲ್ಕುರಿಕೆ ಸೋಮನಾಥ. ಇವನ ಬಸವಪುರಾಣವನ್ನು ಕನ್ನಡಕ್ಕೆ ತಂದವನು ಶ್ರೀಶೈಲದ ದಕ್ಷಿಣದ್ವಾರವೆನಿಸುವ ಸಿದ್ಧವಟಪುರದ ಭೀಮಕವಿ ಆಂಧ್ರಪ್ರದೇಶದಲ್ಲಿ ಜನಿಸಿ ಅಲ್ಲಿಯೇ ಲಿಂಗೈಕ್ಯನಾದ ಈ ಕವಿ ಕರ್ನಾಟಕ ಹಾಗೂ ಆಂಧ್ರದ ಮಧುರ ಬಾಂಧವ್ಯದ ಒಂದು ಜೀವಂತ ಕೊಂಡಿ. ತೆಲುಗು ದ್ವಿಪದ 'ಬಸವಪುರಾಣಮು' ಆಂಧ್ರ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಕೃತಿ. ಪುರಾಣ ಕಥನ ಪರಂಪರೆಯನ್ನು ಅನುಸರಿಸಿರುವುದರಿಂದ 'ಬಸವಪುರಾಣಮು'ನಲ್ಲಿ ಬಸವಣ್ಣನ ಕಥೆ ಆದಿ ಹಾಗೂ ಅಂತ್ಯಗಳಲ್ಲಿ ಬಂದಿದ್ದು, ನಡುವೆ ಶಿವನ ಭಕ್ತರ ತಮಿಳುನಾಡಿನ ಆರವತ್ಮೂರು ನಾಯನ್ಮಾರರ ತೆಲುಗು ಹಾಗೂ ಕನ್ನಡ ನಾಡಿನ ಶರಣರ ಕಥೆಗಳು ಸೇರ್ಪಡೆಯಾಗಿವೆ. ಪಾಲ್ಕುರಿಕೆ ಸೋಮನಾಥನು ನಿರ್ಮಿಸಿದ ಬಸವಪುರಾಣವೆನ್ನುವ ಮಣಿಹಾರದಲ್ಲಿ ಸೂತ್ರರೂಪದಲ್ಲಿರುವುದು ಬಸವಣ್ಣನ ಕಥೆ.

ಹರಿಹರನ ರಗಳೆಯು ಪ್ರಾಚೀನ ಕಾವ್ಯವಾದಂತೆ ಬಸವಣ್ಣನ ಕಥೆಯನ್ನು ಪುರಾಣ ಕಥನ ಪರಂಪರೆಯಲ್ಲಿ ಹೇಳಿರುವುದು ಇದೇ ಮೊದಲು. ಈ ಕೃತಿಯು ಕೂಡಲಸಂಗಮವನ್ನು ಉಲ್ಲೇಖಿಸಿರುವ ಮೊದಲ ಪುರಾಣವಾಗಿಯೂ ತೋರುತ್ತದೆ. ಬಸವಣ್ಣನು ಬಾಗೇವಾಡಿಯಿಂದ ಕೂಡಲಸಂಗಮಕ್ಕೆ ಬಂದು ಸಂಗಮನಾಥನ ಸನ್ನಿಧಿಯಲ್ಲಿ ಜ್ಞಾನವನ್ನು ಸಂಪಾದಿಸಿದ ವಿಚಾರವನ್ನು ಪುರಾಣದಲ್ಲಿ ಉಲ್ಲೇಖಿಸುವಾಗ ಕಪ್ಪಡಿಸಂಗಮದ ಪ್ರಸ್ತಾಪವನ್ನು ಈ ರೀತಿಯಾಗಿ ಬಿಂಬಿಸಲಾಗಿದೆ.

> ಹಿಂಗದನುದಿನವಿಹೆನು ಕಪ್ಪಡಿ
> ಸಂಗಮೇಶನ ಪೆಸರು ನಾವೆಮಗಲ್ಲಿ ತಾನಿರುವ
> ತಂಗಿಕೇಳವನೆನ್ನ ಮಗನೊಂ
> ದಂಗದಲಿ ಕೇಳ್ ವೇದಭವವೀ
> ತಂಗೆ ನಿನ್ನೊಳು ಜನಿಸಲಾಯಿತು ಲೋಕಹಿತಕಾಗಿ[೯]

ಈ ಮೇಲಿನ ಪದ್ಯದಲ್ಲಿಯು ಸಹ 'ಕಪ್ಪಡಿಸಂಗಮ' ಮತ್ತು 'ಕೂಡಲಸಂಗಮೇಶ'ನ ಪ್ರಸ್ತಾಪ ಬರುತ್ತದೆ. ಕಪ್ಪಡಿಸಂಗಮೇಶ್ವರದಲ್ಲಿ ಇರುವ ಕೂಡಲಸಂಗಮೇಶನ ಹೆಸರು ಎಂಬ ಉಲ್ಲೇಖದಲ್ಲಿ ಕಪ್ಪಡಿಸಂಗಮ ಎಂದು ಆ ಗ್ರಾಮ ಪ್ರಸಿದ್ಧಿಯನ್ನು ಪಡೆದಿತ್ತು ಎಂದಾಗಿಯೂ ಮತ್ತು ಕೂಡಲಸಂಗಮೇಶ್ವರ ಅಲ್ಲಿಯ ಆದಿದೈವವೆಂದು ವಿದಿತವಾಗುತ್ತದೆ. ಕಪ್ಪಡಿಸಂಗಮವು ಕೂಡಲಸಂಗಮೇಶ್ವರನಿಂದಲೇ ಪ್ರಸಿದ್ಧಿಯಾಗಿದ್ದರಿಂದ ಮುಂದೆ ಆ ಗ್ರಾಮವನ್ನೇ 'ಕೂಡಲಸಂಗಮ' ಎಂಬ ನಾಮದಿಂದ ಕರೆಯುತ್ತಾ ಬಂದಿದ್ದರಿಂದ ಇಂದಿಗೂ ಇದು ಕೂಡಲಸಂಗಮ ಗ್ರಾಮವಾಗಿ ಉಳಿದುಕೊಂಡಿದೆ.

ಧರೆಯ ಕಪ್ಪಡಿ ಸಂಗಮೇಶ್ವರ
ಪುರವೆನಿಸುದಿಲ್ಲಿ ಪ್ರಸಿದ್ಧೋ
ದ್ಧರಣ ಕೂಡಲ ಸಂಗಮೇಶ ಮಂದಿರಕೆ ಪೋಗಿ
ನೆರೆದ ಭಕ್ತರು ತನ್ನನಿದಿರ್ಗೊಳು
ತಿರೆ ತದೀಯದ್ವಾರದೊಳು ಸ
ದ್ಗುರುಪದಕೆ ಸಾಷ್ಟಾಂಗವೆಱಗಿಯಲರ್ಯ ಪೊಡವಟ್ಟು[೨೦]

ಭೂಲೋಕದಲ್ಲಿ ಕಪ್ಪಡಿಯ ಸಂಗಮೇಶ್ವರಪುರ ಎನ್ನುವುದು ಪ್ರಸಿದ್ಧಿಯನ್ನು ಪಡೆದಿದ್ದು, ಅಲ್ಲಿ ಕೂಡಲಸಂಗಮೇಶ ಎಂಬ ಮಂದಿರಕ್ಕೆ ಬರಲು ಅಲ್ಲಿ ನೆರೆದಿರುವ ಭಕ್ತರು ಇದಿರುಗೊಂಡರು ಎಂಬುದಾಗಿದೆ. ಅಂದರೆ ಬಸವೇಶ್ವರರು ಕಪ್ಪಡಿಸಂಗಮಕ್ಕೆ ಬಂದಾಗ ಅಲ್ಲಿಯ ಕೂಡಲಸಂಗಮೇಶ್ವರನು ಅಪಾರವಾದ ಭಕ್ತರ ಸಮೂಹದಿಂದ ಪ್ರಸಿದ್ಧಿಯನ್ನು ಪಡೆದಿದ್ದನು ಎನ್ನುವುದು ವಿದಿತವಾಗುತ್ತದೆ.

ಬಸವಪುರಾಣದ ಕೊನೆಯಲ್ಲಿ ಬಸವಣ್ಣನ ಅನುಯಾಯಿಗಳು ಬರುವ ಸಂದರ್ಭದಲ್ಲಿ ಸಂಗಮದ ಪ್ರಸ್ತಾಪ ಹೀಗೆ ಬರುತ್ತದೆ.

ಲಿಂಗವಂತರು ತಂಡ ತಂಡದ
ಜಂಗಮಾವಳಿ ತಮ್ಮೊಡನೆ ಬರೆ
ಸಂಗಮೇಶ್ವರಪುರಕೆ ಬಸಮಂ ನೆಡೆವುತಿರಲಾಗಿ
ಇಂಗಿತಾ ಬಿಜ್ಜಳನ ಸಂಪತ್
ಸಂಗತಾಂಬುಧಿಯಕಟ ಶಿವನಗ
ಣಂಗಳೆಲ್ಲರು ಹೋಗೆ ಕಟಕದ ಭಾಗ್ಯವಳಿಯಿತ್ತು[೨೧]

ಮೊದಲಿಗೆ ಕಪ್ಪಡಿಸಂಗಮವೆಂದು ಉಲ್ಲೇಖಿಸಿದರೆ ಈ ಪದ್ಯದಲ್ಲಿ ಸಂಗಮೇಶ್ವರಪುರವೆಂದು ಮಾತ್ರ ಕರೆಯಲಾಗಿದೆ. ಕೂಡಲಸಂಗಮ ಕಪ್ಪಡಿಸಂಗಮ, ಬರಿ ಸಂಗಮ ಹೀಗೆ ಮೂರು ಹೆಸರುಗಳಿಂದ ಕರೆಯುತ್ತಿದ್ದುದು, ಇದು ಒಂದೇ ಸ್ಥಳ ಎಂಬುದು ಮಹತ್ವದ ಸಂಗತಿಯಾಗಿದೆ.

ಶಿವತತ್ವ ರತ್ನಾಕರ

ಕ್ರಿ.ಶ. ೧೭೦೯ರಲ್ಲಿ ರಚನೆಯಾಗಿರುವ ಈ ಕೃತಿಯು ಬಸವರಾಜೇಂದ್ರ ಕವಿಯಿಂದ ರಚಿತವಾಗಿದೆ. ಈ ಕೃತಿಯಲ್ಲಿ ಕೂಡಲಸಂಗಮವನ್ನು ವರ್ಣನೆ ಮಾಡಿರುವಂತೆ ಬೇರೆ ಯಾವ ಕೃತಿಯಲ್ಲಿಯೂ ಮಾಡಿಲ್ಲ. ಶಿವನು ಕೈಲಾಸವನ್ನು ಮರೆತು ಕೂಡಲಸಂಗಮದಲ್ಲಿ ವಾಸವಿದ್ದನು ಎಂಬ ಉಲ್ಲೇಖ ಬರುತ್ತದೆ.

"ಭಹ್ರೇಸ್ತಿಹಿ ಮಹಾಕ್ಷೇತ್ರಂ ನಾಯ್ನಾಕೂಡಲಿ ಸಂ ಙ್ಗಮಮ್
ಯತ್ರಾಸೇ ರಜತಾದ್ರಿಂಚ ವಿಜ್ಞೃತ್ಯ ವಿಷಮೇಕ್ಷಣ"[೨೨]

ಇಲ್ಲಿ "ಕೂಡಲಿಸಂಙ್ಗಮಮ್" ಎಂದು ಉಲ್ಲೇಖಿಸಿರುವುದು ವೈಶಿಷ್ಟ್ಯದಿಂದ ಕೂಡಿದೆ. ಸಂಸ್ಕೃತ ಭೂಯಿಷ್ಠವಾದ್ದರಿಂದ ಸ್ಥಳದ ಹೆಸರನ್ನು ಉಲ್ಲೇಖಿಸುವಾಗಲೂ ವಿಶೇಷತೆಯನ್ನು ಹೊಂದಿದೆ. ಇದು ೧೭೦೯ ಸುಮಾರಿನಲ್ಲಿ ರಚಿತವಾಗಿದ್ದರಿಂದ ಈ ಸಂದರ್ಭದಲ್ಲಿ ಕಪ್ಪಡಿಸಂಗಮ ಎಂಬ ಹೆಸರು ಮರೆಯಾದಂತೆ ಕಾಣುತ್ತದೆ. ನಂತರದಲ್ಲಿ ಕೂಡಲಸಂಗಮ ಎಂಬ ಹೆಸರು ಪ್ರಸಿದ್ಧವಾಗಿದ್ದಕ್ಕೆ ಈ ಕೃತಿಯಲ್ಲಿ ಕೂಡಲಸಂಗಮವೆಂಬ ಮಹಾಕ್ಷೇತ್ರವೊಂದಿದೆ ಅಲ್ಲಿ ತ್ರಿಲೋಚನನಾದ ಶಿವನು ಕೈಲಾಸ ಪರ್ವತವನ್ನು ಸಹ ಮರೆತು ವಾಸಮಾಡುತ್ತಾನೆ ಎಂದು ವರ್ಣನೆ ಮಾಡಿರುವುದನ್ನು ನೋಡಿದರೆ ಭೂಮಿಯ ಮೇಲಿನ ಕೈಲಾಸವೆಂಬಂತೆ ಕೂಡಲಸಂಗಮವನ್ನು ವರ್ಣಿಸಲಾಗಿದೆ.

ಬಸವ ಪವಾಡ

ಈ ಕೃತಿಯು ಸುಮಾರು ೧೬೫೦ರಲ್ಲಿ ರಚಿತವಾದಂತಿದೆ. ಕವಿಯು ತನ್ನ ಬಗ್ಗೆ ಎಲ್ಲಿಯೂ ಉಲ್ಲೇಖ ಮಾಡಿಲ್ಲ. ತನ್ನ ಗುರು ಚೆನ್ನಬಸವರಾಜ ಎಂದು ಹೇಳಿಕೊಂಡಿದ್ದಾನೆ. ಇದರಲ್ಲಿಯೂ ಸಹ ಕಪ್ಪಡಿಸಂಗಮದ ಉಲ್ಲೇಖ ಹಲವಾರು ಪದ್ಯಗಳಲ್ಲಿ ಉಲ್ಲೇಖವಾಗಿದೆ. ಬಸವೇಶನು ತನ್ನ ಗಣ ಪರಿವಾರದೊಡನೆ ಕಪ್ಪಡಿಸಂಗಮಕ್ಕೆ ಬಂದದ್ದು ಮತ್ತು ಪವಾಡಗಳನ್ನು ಮಾಡಿದ್ದು ಈ ಸ್ಥಳದ ಮಹತ್ವವನ್ನು ತಿಳಿಸುತ್ತದೆ.

ತೆರಳಿದ ಕಪ್ಪಡಿಗಾಗಲು ಬಸವೇಶ
ಕರೆಯ ಕೇಳಿದ ಅಪ್ಪಣ್ಣನಿಗೆ"[೨೩]
"ಕಪ್ಪಡಿಸಂಗಮೇಶನ ಬಸವೇಶ್ವರ
ಅಪ್ಪಕೊಂಡನು ಭುಜತುಂಬಿ"[೨೪]

ಕಪ್ಪಡಿಯ ಸಂಗಮೇಶ್ವರ ಎಂಬ ಪದ ಬಹುತೇಕ ಪ್ರಾಚೀನ ಕಾವ್ಯಗಳಲ್ಲಿ ಕಾಣಸಿಗುತ್ತದೆ. ಸಂಗಮೇಶ್ವರ ಉಲ್ಲೇಖವಂತು ಕಪ್ಪಡಿಯ ಪದದ ಜೊತೆಗೆ ಸಾಮಾನ್ಯವಾಗಿ ಕಂಡುಬರುತ್ತದೆ.

ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ

ಲಕ್ಕಣ್ಣ ದಂಡೇಶ ಕವಿಯು ವಿಜಯನಗರ ಸಾಮ್ರಾಜ್ಯವನ್ನಾಳಿದ ಸಂಗಮ ವಂಶದ ದೊರೆಗಳಲ್ಲಿ ಸುಪ್ರಸಿದ್ಧನಾದ 'ಪ್ರೌಢದೇವರಾಯನ' ಆಳ್ವಿಕೆಯಲ್ಲಿದ್ದನು. ಮಹಾದಂಡ ನಾಯಕನಾಗಿಯೂ, ಮುಖ್ಯಮಂತ್ರಿಯಾಗಿಯೂ ಶಿವತತ್ತ್ವ ಸೇವೆ ಸಲ್ಲಿಸಿದ್ದಾನೆ. ಚಿಂತಾಮಣಿಯನ್ನು ರಚಿಸಿದ ಲಕ್ಕಣ್ಣ ದಂಡೇಶನು ತಾನು ಜೀವಿಸಿದ್ದ ಕಾಲವನ್ನು ತನ್ನ ಗ್ರಂಥದಲ್ಲಿ ನೇರವಾಗಿ ಹೇಳಿಲ್ಲ. ಹೀಗಿದ್ದರೂ ಇದೇ ಗ್ರಂಥದಲ್ಲಿ ಕೆಲವು ಚಾರಿತ್ರಿಕ ಅಂಶಗಳು ಇತರ ಕೃತಿಗಳಿಂದ ತಿಳಿದುಬರುವ ಈ ಕವಿಗೆ ಸಂಬಂಧಿಸಿದ ಉಲ್ಲೇಖ ಮಧುರೆಯ ಇತಿಹಾಸ, ಪರದೇಶ ಯಾತ್ರಿಕರು, ವಿಜಯನಗರ ಸಾಮ್ರಾಜ್ಯದ ವಿಚಾರವಾಗಿ ಬರೆದಿಟ್ಟಿರುವ ವರದಿ ಕವಿಗೆ ಸಂಬಂಧಿಸಿದ ಶಾಸನಗಳು ಲಕ್ಕಣ್ಣ ದಂಡೇಶನ ಕಾಲವನ್ನು ತಿಳಿಯಲು ನೆರವಾಗುತ್ತವೆ. ಬಹುಮುಖ್ಯವಾಗಿ ಈ ಕೃತಿಯಲ್ಲಿ "ಈ

ಕಲಿಯುಗದೊಳತಿ ಪ್ರೌಢ ಮತಿ ದೇವರಾಜೇಂದ್ರನ ಮಹಾಪ್ರಧಾನಂ ಲೋಕೈಕಬಂಧು ಲಕ್ಕಣ್ಣದಂಡೇಶ್ವರಂ"[೨೫] ಎಂದು ಮುಂತಾಗಿ ಹೇಳಿಕೊಂಡಿರುವುದರಿಂದ ಇವನು ಪ್ರೌಢದೇವರಾಯನ ಬಳಿ ಮುಖ್ಯಮಂತ್ರಿಯಾಗಿದ್ದನೆಂದು ತಿಳಿದುಬರುತ್ತದೆ. ಆ ರಾಜನ ಕಾಲ ಕ್ರಿಶ. ೧೪೧೬–೧೪೪೬ ಎಂದು ತಿಳಿದುಬರುತ್ತದೆ.[೨೬]

ಭಾರತೀಯ ಸಂಸ್ಕೃತಿಯನ್ನು ಎಂದೆಂದಿಗೂ ಬೆಳಗುತ್ತಿರುವ ವೇದಾಗಮ ಪುರಾಣೋಕ್ತಿಗಳ ಪಾರವೇ ಈ ಶಿವತತ್ವ ಚಿಂತಾಮಣಿ ಎಂದೂ, ಶಂಭು ಮಲ್ಲಿಕಾರ್ಜುನ ಪ್ರಭುದೇವ, ಬಸವೇಶ್ವರ, ಚೆನ್ನಬಸವೇಶ್ವರ, ಶಿವಾರ್ಚಕರು ಇವರೆಲ್ಲರ ಸ್ತೋತ್ರ, ಕವಿ ವಿಚಾರ, ಕೃತಿ ರಚನೆಗೈಯ್ಯಲು ಬಳಸಿಕೊಂಡಿರುವ ಆಧಾರಗಳು ಕೇಳಿದವರಿಗೆ, ಓದಿದವರಿಗೆ ಆಗುವ ಫಲ ಎಲ್ಲವನ್ನು ಈ ಕೃತಿಯಲ್ಲಿ ಕಾಣಬಹುದು. ೧೨ನೆಯ ಶತಮಾನದ ಶಿವಶರಣರ ವಿಚಾರಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಕೂಡಲಸಂಗಮದ ವಿಚಾರಗಳು ಅಲ್ಲಿ ಹೇಳಲ್ಪಟ್ಟಿವೆ. ಆ ವಿಚಾರಗಳನ್ನು ಇಲ್ಲಿ ವಿವರವಾಗಿ ನೋಡಬಹುದಾಗಿದೆ.

ಈ ಕೃತಿಯು ಶೈವಧರ್ಮಕ್ಕೆ ಸಂಬಂಧಿಸಿದಂತೆ ಮತ್ತು ಶಿವನ ಲೀಲೆಗಳನ್ನು, ಅವತಾರಗಳನ್ನು ತಿಳಿಯುತ್ತದೆ. ಇಲ್ಲಿ ಬಸವಣ್ಣನವರಿಗೆ ಸಂಬಂಧಿಸಿದಂತೆ ಜನನ, ಬಾಲ್ಯ, ಮದುವೆ, ಪವಾಡಗಳು ಮುಂತಾದ ವಿಷಯಗಳನ್ನು ಹೇಳುವಾಗ ಕೂಡಲಸಂಗಮದ ಕುರಿತಂತೆ ಕೃತಿಯಲ್ಲಿ ಹೇಳಲಾಗುತ್ತದೆ. ಕೂಡಲಸಂಗಮ ಎನ್ನುವುದು ಕೇವಲ ನದಿಗಳು ಕೂಡುವುದಲ್ಲ ಅದು ಲಿಂಗಾಂಗ ಸಾಮರಸ್ಯ ಎನ್ನುವುದನ್ನು ಈ ರೀತಿಯಾಗಿ ವಿವರಿಸಿದ್ದಾರೆ.

ಗಂಗೆ ಯಮುನೆಗಳೆರಡು ಕೂಡಲದು ತಾನೆಯಾ
ಸಂಗಮಂ ನಿರ್ಮಲ ಸಘಮ್ನೆಯೊಳಗೀಳೆಯಂ
ಪಿಂಗಳೆಯು ಮೊಂದಾಗಿ ಕೂಡಲದು ಸಂಗಮಂ ಲಿಂಗಾಂಗ ಮೈಂಬುಧಯವು
ಸಂಗವಾಗುತ್ತ ಸಮರಸದಿಂದ ಕೂಡಲಾ
ಸಂಗಮವೆನಲು ಬಸವನ ಪ್ರಾಣಲಿಂಗಕ್ಕೆ
ಸಂಗಮೇಶ್ವರ ನಾಮವೆಂದು ನಾಗಲಾಂಬಿಕೆಯ ಚರಣಾಂ ಬುಜಕ್ಕೆ ಶರಣು[೨೭]

ಗಂಗೆ ಮತ್ತು ಯಮುನಾ ನದಿಗಳು ಕೂಡಿ ಸಂಗಮವಾದಂತೆ ನಿರ್ಮಲವಾಗಿರುವಂಥ ಸುಶುಮ್ನನಾಡಿಯ ಹಾಗೆ ದೇಹ ಮತ್ತು ಮನಸ್ಸುಗಳು ಒಂದರೊಳಗೊಂದಾಗಿರುವಂತೆ ಲಿಂಗ ಮತ್ತು ಅಂಗ ಎಂಬ ಎರಡರ ಸಂಗಮವಾದಂತೆ. ಕೂಡಲಸಂಗಮದಲ್ಲಿ ಬಸವನೆಂಬ ಪ್ರಾಣಲಿಂಗಕ್ಕೆ ಸಂಗಮೇಶ್ವರನೆಂಬ ನಾಮ ಒಂದಾಗಿರುವುದಕ್ಕೆ ಸಾಕ್ಷಿಯಾದ ನಾಗಲಾಂಬಿಕೆಯ ಚರಣಕ್ಕೆ ನಮಸ್ಕಾರವೆನ್ನುತ್ತಾನೆ. ನಾಗಲಾಂಬೆಯ ಮಗನಾದ ಬಸವರಾಜನು ಸಂಗಮನಾಥನ ಸನ್ನಿಧಿಯಲ್ಲಿ ಬರುವುದಕ್ಕೆ ಶಿವನ ಅನುಗ್ರಹವಾಗಿದೆ. ಅದಕ್ಕಾಗಿಯೆ ಬಸವನು ಸಂಗಮನೂ ಒಂದಾಗಿದ್ದ ಎಂದು ಲಕ್ಕಣ್ಣ ದಂಡೇಶ ಕೂಡಲಸಂಗಮದ ಸಂಗಮೇಶ್ವರನ ಪ್ರಸಂಗವನ್ನು ತಿಳಿಸುತ್ತಾ. ನಾಗಲಾಂಬಿಕೆಯು ಬಸವಣ್ಣನಿಗೆ ಉದ್ದೇಶ ಮಾಡುವ ವಿಷಯವು ಈ ರೀತಿಯಾಗಿ ಉಲ್ಲೇಖವಾಗಿದೆ.

ಕುಣಿ ಬಸವ ಸಂಗನುನ್ನತ ಮಹಾ ಪೂಜೆಗಂ
ಕುಣಿ ಬಸವ ಶಿವಧರ್ಮ ಶೀಲವಂತರ ಗತಿಗೆ
ಕುಣಿ ಬಸವ ದೇವಗಣ ನಮಿಸುತಿಪ್ಪಂಘ್ರಿಯಿಂ ದಾತ್ರಿ ಕೃತ ಕೃತ್ಯಳಗಳು
ಕುಣಿ ಬಸವ ಭಕ್ತಿರಸ ತಾಳ ಮದ್ದಳೆ ಗತಿಗೆ
ಕುಣಿ ಬಸವ ಚರಲಿಂಗದಿಪ್ಪ ಸಂಕೀರ್ತನೆಗೆ
ಕುಣಿ ಬಸವ ಸತ್ಯನಿಧಿಯಂಬ ನಾಗಲಾಂಬಿಕೆಯ ಚರಣಾಂಬುಜಕ್ಕೆ ಶರಣ[೨೮]

ಬಸವನಿಗೆ ನೀನು ಕುಣಿ ಅದು ಯಾವರೀತಿಯಾಗಿ ಮತ್ತು ಯಾವ ಸಂದರ್ಭದಲ್ಲಿ ಎಂಬ ವಿಚಾರವನ್ನು ಇಲ್ಲಿ ತಿಳಿಸುತ್ತಾರೆ. ಬಸವ ನೀನು ಕುಣಿ ಯಾವಗ ಎಂದರೆ ಸಂಗನ ಉನ್ನತದ ಮಹಾ ಪೂಜೆಯು ನಡೆಯುವ ಸಂದರ್ಭದಲ್ಲಿ ಎಂದು ಹೇಳುತ್ತಾಳೆ. ಅದೇ ರೀತಿಯಾಗಿ ಶಿವಧರ್ಮ ಮತ್ತು ಶೀಲವಂತರು ನಡೆವ ರೀತಿಗೆ ಹಾಗೆಯೆ ದೇವಗಣಕ್ಕೆ ನಮಸ್ಕರಿಸುವಾಗ ಮತ್ತು ಭಕ್ತಿ ರಸದ ತಾಳಮದ್ದಳೆಗಳ ನಾದಕ್ಕೆ ಕುಣಿ ಯಾವಾಗಲು ಸತ್ಯವೆನ್ನುವುದಕ್ಕೆ ಕುಣಿ ಎಂದು ಉಪದೇಶ ಮಾಡುವಾಗ ಕೂಡಲಸಂಗಮದ ಸಂಗಮನಾಥನನ್ನು ಮತ್ತು ಅವನ ಉನ್ನತ ಮಹಾಪೂಜೆಯನ್ನು ಪ್ರಸ್ತಾಪಿಸಲಾಗಿದೆ. ಹೀಗೆ ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿಯಲ್ಲಿ ಕೂಡಲಸಂಗಮ ಕ್ಷೇತ್ರ ಮತ್ತು ಕ್ಷೇತ್ರಾಧಿಪತಿ ಸಂಗಮನಾಥನ ಉಲ್ಲೇಖವು ಬರುತ್ತದೆ. ಲಕ್ಕಣ್ಣ ದಂಡೇಶ ಮಧ್ಯಕಾಲೀನ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ದಂಡಾಧೀಶನಾಗಿಯೂ ಮತ್ತು ಕವಿಯಾಗಿ ವಿಶಿಷ್ಟ ವ್ಯಕ್ತಿತ್ವವುಳ್ಳವನಾಗಿ ಲಿಂಗಾಯತದ ಶಿವೋಪಾಸನೆಯನ್ನು ಎತ್ತಿಹಿಡಿಯುವಲ್ಲಿ ಶ್ರಮಿಸಿದ್ದಾನೆ.

ಬಸವರಾಜ ಚಾರಿತ್ರ್ಯ (ಸಿಂಗಿರಾಜ ಪುರಾಣ)

ಬಸವರಾಜ ಚಾರಿತ್ರ್ಯ ಎಂಬ ಈ ಸಿಂಗಿರಾಜ ಪುರಾಣವನ್ನು ಬರೆದ ಕವಿ ಸಿಂಗಿರಾಜ. ಇವನು ಬೇರೆಯಾವ ಕೃತಿಯನ್ನು ರಚಿಸಿರುವನೆಂಬುವುದಕ್ಕೆ ಆಧಾರಗಳಿಲ್ಲ. ಇವನ ಸ್ಥಳ–ಕಾಲವನ್ನು ಕುರಿತು ವಿದ್ವಾಂಸರಲ್ಲಿ ಒಮ್ಮತವಾದ ಅಭಿಪ್ರಾಯವಿಲ್ಲ. ಮಹಾದೇವಿಯಕ್ಕನ ಪುರಾಣವನ್ನು ಬರೆದ ಚೆನ್ನಬಸವಾಂಕನು (ಸು. ೧೫೫೫) ಇವನ ಹೆಸರನ್ನು ಹೇಳುವುದರಿಂದ ಇವನು ಅವನಿಗಿಂತ ಹಿಂದಿನವನೆಂದು ತಿಳಿಯಬಹುದು.[೨೯] ಹೀಗಾಗಿ ಸಿಂಗಿರಾಜನ ಕಾಲವನ್ನು ಕ್ರಿ.ಶ.ಸು. ೧೫೦೦ ಎಂದು ತಿಳಿಯಬಹುದು. ಹನ್ನೆರಡನೆಯ ಶತಮಾನದಲ್ಲಿ ಮತ್ತು ಅಲ್ಲಿಂದೀಚೆಗೆ ಹುಟ್ಟಿರುವ ವಿಪುಲ ವಚನ ರಾಶಿಯಿಂದಲೂ ಅರ್ಜುನವಾಡ, ಚೌಡದಾನಪುರ ಮುಂತಾದ ಕಡೆ ದೊರೆತಿರುವ ಶಾಸನಗಳಿಂದಲೂ ಬಸವಣ್ಣನು ಕನ್ನೆ ಸಮಾಜದ ಹಲವು ಕ್ಷೇತ್ರಗಳಲ್ಲಿ ಉಜ್ವಲ ಕ್ರಾಂತಿಯನ್ನುಂಟುಮಾಡಿ ಬದಲಾವಣೆಯನ್ನು ತಂದಿರುವುದು ಮಹತ್ತರವಾದ ಸಂಗತಿಯಾಗಿದೆ.

ಈ ಕೃತಿಯು ಹರಿಹರನ ಬಸವರಾಜದೇವರ ರಗಳೆ, ಭೀಮಕವಿಯ ಬಸವಪುರಾಣ, ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ ಕೃತಿಗಳಂತೆ ಮೇಲ್ನೋಟಕ್ಕೆ ಕಂಡರೂ ಕೆಲವು ಬದಲಾವಣೆಗಳಿವೆ.

ಕೃತಿ ರಚನೆಯಲ್ಲಿ ಹೆಚ್ಚಾಗಿ ಬಸವಣ್ಣನವರ ಪವಾಡಗಳನ್ನು ಕೇಂದ್ರವಾಗಿಟ್ಟುಕೊಂಡು ರಚಿಸಿದ್ದಾನೆ. ಸುಮಾರು ೬೪ ಪವಾಡಗಳನ್ನು ಮಾಡಿದ್ದನೆಂದು ತಿಳಿಸುತ್ತಾನೆ. ಇಲ್ಲಿಯು ಬಸವಣ್ಣನಿಗೆ ಜ್ಞಾನ ನೀಡಿದ ಕ್ಷೇತ್ರವಾಗಿ, ತಪೋ ಭೂಮಿಯಾಗಿ ಕೂಡಲಸಂಗಮವು ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಬಸವರಾಜನು ಇಂಗಳೇಶ್ವರ ಬಾಗೇವಾಡಿಯಲ್ಲಿ ಹುಟ್ಟಿದ ಮೇಲೆ ಅವನಿಗೆ ದೀಕ್ಷೆಯನ್ನು ನೀಡುವುದಕ್ಕಾಗಿ ಕೃಷ್ಣವೇಣಿ ಸಂಗಮದಿಂದ ಜಾತವೇದ ಮುನಿಗಳು ಬರುವ ವಿಚಾರವನ್ನು ಸಿಂಗಿರಾಜನು ಹೇಳುತ್ತಾನೆ. ಆದರೆ ಈ ಯಾವ ಪ್ರಸಂಗವು ಬಸವರಾಜದೇವರ ರಗಳೆಯಲ್ಲಿ ಮತ್ತು ಬಸವಪುರಾಣದಲ್ಲಾಗಲಿ ಬರುವುದಿಲ್ಲ.

ಮೇಣಚೇಣದಿ ವಜ್ರಮುದ್ರೆ ಗಡಿವುದೆ ಯಂಬ
ಕೇಣದಿಳಿಯದೆ ಹಲವೇಣಿಕೆಗೊಳುತಿರಲು ಕೃಷ್ಣ
ವೇಣಿ ಸಂಗಮದಿಂದಲೂ ದಿನ ಪುರಕ್ಕೊಬ್ಬ ತಾಪಸಾಚಾರ್ಯ ಬಂದು
ಸ್ಥಾಣುಭುವದೊಳಿದವರ ಶುಭೋದಯಗೇಳ್ದು
ದೇನಾನು ಪೂರ್ವ ಪರಿಚಯ ಕೊಲುಮೆಯ ಪಂಚ
ಬಾಣಾರಿ ಪಂಚಗಣ ಸಹಿತ ವರ್ಗಳಾಬುಕೆ ಬೀಜಯಗೈದಾಕ್ಷಣದೊಳು[೩೦]

ಬಸವನು ಹುಟ್ಟಿದ ನಂತರ ಕಣ್ಣು ಬಿಡುವುದಾಗಲಿ, ಅಳುವುದಾಗಲಿ ಮಾಡಲಿಲ್ಲ. ಮದಿರಾಜನು ಮಾಡಿದ ಯಂತ್ರ-ತಂತ್ರಾದಿಗಳು ಫಲ ಕೊಡಲಿಲ್ಲ. ಆಗ ಕೃಷ್ಣವೇಣಿ ಸಂಗಮದಿಂದ ಅಲ್ಲಿಗೆ ಬಂದಿದ್ದ ಜಾತವೇದಿಗಳೆಂಬ ಮಹಾ ಗುರುಗಳು ಮಾದರಸನ ಮನೆಗೆ ಬರುತ್ತಾರೆ. ಶಿಶುವನ್ನು ಸಂದರ್ಶಿಸಿ ಪಂಚಾಕ್ಷರಿಯ ಮಂತ್ರವನ್ನು ಉಚ್ಚರಿಸುತ್ತಾ ಮಗುವಿಗೆ ವಿಭೂತಿಯನ್ನು ಧರಿಸಿದ ಕೂಡಲೇ ಆ ಶಿಶುವು ಕಣ್ದೆರೆದು, ಕೈಕಾಲು ಆಡಿಸುತ್ತಾ ಅಳುವುದಕ್ಕೆ ಮೊದಲು ಮಾಡಿತು ಎಂದು ತಿಳಿಯುತ್ತದೆ.

ಬಸವನು ಸಂಪ್ರದಾಯಬದ್ಧವಾಗಿ ಬೆಳೆಯುತ್ತಾ ದೊಡ್ಡವನಾದನು. ಅವನ ಬಾಲ್ಯ ಚೇಷ್ಟೆಗಳೆಲ್ಲವು ನೋಡುಗರನ್ನು ಬೆರಗುಗೊಳಿಸುತ್ತಿದ್ದವು. ಸಂಪ್ರದಾಯಕ್ಕೆ ತಲೆತಗ್ಗಿಸದ ಬಸವೇಶ್ವರನನ್ನು ಕಂಡು ಎಲ್ಲರು ಹೊಟ್ಟೆಕಿಚ್ಚು ಪಡುತ್ತಿದ್ದರು. ಬಾವಿಯ ಬಳಿಯಲ್ಲಿ ಹುಡುಗರೊಂದಿಗೆ ಆಟವಾಡುತ್ತಿದ್ದಾಗ ಒಬ್ಬ ಹುಡುಗನು ಬಾವಿಯಲ್ಲಿ ಬಿದ್ದು ಸಾಯುತ್ತಾನೆ. ಆಗ ಬಸವನೇ ಆ ಹುಡುಗನನ್ನು ಬಾವಿಗೆ ನೂಕಿದನೆಂದು ದೂರು ನೀಡುತ್ತಾರೆ. ಆ ಸತ್ತ ಬಾಲಕನ ಬ್ರಾಹ್ಮಣರ ಪರಿವಾರವು ಬಸವನನ್ನು ಅಟ್ಟಿಸಿಕೊಂಡು ಬರಲು ಅವನು ಮನೆಗೆ ಹೋಗಿ ತನ್ನ ಇಷ್ಟ ಲಿಂಗವನ್ನು ತೆಗೆದುಕೊಂಡು ಕಪ್ಪಡಿ ಸಂಗಮಕ್ಕೆ ಬರುತ್ತಾನೆ.

ಹಿಂದುಮುಂದೆಡಬಲದಿ ಕವಿದು ಖೋಯೆನುತೊಬ್ಬ
ರೊಂದೊಂದನನ್ವಿತದಿ ಕಾಳ್ಗೆದದು ನುಡಿದು ಬಹು

ನಿಂದೆ ದುರ್ವಾಕ್ಯ ಮಸ್ತರದಿನರವರಿ ಸದುರವಣಿಸಟ್ಟಿ ಮುಟ್ಟಲೊಡಿ
ಬಂದೊಳಗೆ ಪೊಕ್ಕು ತನ್ನಯ ಲಿಂಗಯಂ ಕೊಂಡು
ತಂದೆ ತಾಯ್ಗಳಿಗೆ ಬೆಬ್ಬಳಗೊಳುತುಸರ್ದು ಬೇ
ರೊಂದು ಬಾಗಿಲಗೆಳೆದು ಕಪ್ಪಡಿಯ ಸಂಗಮದ ದೆಸೆಗೆ ದೈವಚಿದ ಬಸವ[೩೧]

ಮುಂದೆ ಬಸವನನ್ನು ಬೆನ್ನುಹತ್ತಿ ಬಂದ ಬ್ರಾಹ್ಮಣರು ಸಂಗಮನಾಥನ ದೇವಾಲಯದಲ್ಲಿ ಸೇರುತ್ತಾರೆ. ಬಸವನು ದೇವಾಲಯದಲ್ಲಿಯೆ ಇದ್ದ ವಿಷಯ ತಿಳಿದು ಸಹಸ್ರಾರು ಜನ ಸೇರುತ್ತಾರೆ. ಆ ಸಂದರ್ಭದಲ್ಲಿ ಕಪ್ಪಡಿಯರು ಸೇರಿದ್ದರು ಎಂದು ಈ ಕೆಳಗಿನ ಪದ್ಯ ತಿಳಿಸುತ್ತದೆ.

"ನೆರೆಹಿದರು ಸ್ಮಾರ್ತರಂ ಧರ್ಮಸೂಕ್ಷ್ಮಪರರ
ಪಿರಿಯರಂ ಪ್ರಭುಗಳಂ ವಿಭುಗಳಂ ಪರಮಾರ್ಥ
ಚರಿತರ ಗ್ರಾಹಾರ ದಶಕೋಶ ವರ ಸಮಯ ಸಂಕೇತ ಸರ್ವ ಜನರ
ಪರದೇಶ ದೇಶಾಂತರದ ಕಪ್ಪಡೆಯರು ಪ
ನ್ನೆರಡು ಸಾಹಸ್ರ ಸಹಿತಂ ಸಂಗಮೇಶ್ವರನ
ಪರಿವೇಷ್ಠಿ ಸಾತನಂ ಕರೆಸಿಯೆನೆ ಕರೆಯಲ್ಕೆ ಬಂದು ನಿಂದ ಬಸವಂ"[೩೨]

ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಅಲ್ಲಿ ಬ್ರಾಹ್ಮಣರ ಜೊತೆಯಲ್ಲಿ ನೆರೆದವರ ಜೊತೆಯಲ್ಲಿ "ಕಪ್ಪಡೆಯರು" ಹನ್ನೆರಡು ಸಾವಿರ ಸಂಖ್ಯೆಯಲ್ಲಿ ನೆರೆದಿದ್ದರು ಎನ್ನುವುದು. ಕಪ್ಪಡೆಯರು ಎಂದರೆ ಯಾರು ಎನ್ನುವುದಿಲ್ಲಿ ಪ್ರಾಮುಖ್ಯ. ಕೂಡಲಸಂಗಮಕ್ಕೆ ಆ ಕಾಲದಲ್ಲಿ ಸಾವಿರ ಸಾವಿರಗಟ್ಟಲೆ ಕಪ್ಪಡೆಯರು ಬರುತ್ತಿದ್ದರು ಎಂದರೆ ಇದು ಬಹಳ ವಿಶಿಷ್ಟ ಮತ್ತು ಪ್ರಸಿದ್ಧಿಯನ್ನು ಆ ಕಾಲಕ್ಕಾಗಲೇ ಪಡೆದಿತ್ತು ಎನ್ನುವುದರಲ್ಲಿ ಎರಡು ಮಾತಿಲ್ಲ. ಕೂಡಲಸಂಗಮ ಕ್ಷೇತ್ರ ಪ್ರಮುಖ ಶೈವ ಕ್ಷೇತ್ರವಾಗಿ ಶಿವನ ಆರಾಧನೆಯನ್ನು ಮಾಡಲು ಬರುವಂಥವರು "ಕಪ್ಪಡೆಯರು" ಆಗಿರಬಹುದು.

೩.೧.೨. ಶಾಸನಗಳು

ಬಹು ಪ್ರಾಚೀನ ಕಾಲದ ಇತಿಹಾಸ ಮತ್ತು ಸಾಹಿತ್ಯವನ್ನು ತಿಳಿಯಬೇಕಾದರೆ ಶಾಸನಗಳ ಅಧ್ಯಯನ ಅತ್ಯಂತ ಪ್ರಾಚೀನವಾದದ್ದು, ಕೂಡಲಸಂಗಮ ಸ್ಥಳದ ಉಲ್ಲೇಖವಿರುವ ಅತ್ಯಂತ ಪ್ರಾಚೀನ ಶಾಸನವೆಂದರೆ ಕ್ರಿ.ಶ. ೧೧೬೦ರ ಒಂದು ಶಾಸನ ಸಂಗಮೇಶ್ವರ ದೇವಾಲಯದ ಆವರಣದೊಳಗೆ ಇರುವಂಥದ್ದು. ಯಮ, ನಿಯಮ, ಧ್ಯಾನ, ಧಾರಣ, ಮೌನ, ಅನುಷ್ಠಾನ, ಜಪ, ಸಮಾಧಿ ಸಂಪನ್ನರಾದ ಶ್ರೀ ಸಂಗಮೇಶ್ವರ ದೇವರಿಗೆ ಸರ್ವನಮಸ್ಯದ ಅಗ್ರಹಾರವಾದ 'ಕಪ್ಪಡಿಸಂಗಮ'ದ ಮಹಾಜನರ ಪರಮ ಕಾರುಣ್ಯ ಪ್ರಸಾದದಿಂದ ಚುಂಚಿನಾದಿಸೆಟ್ಟಿ ಎಂಬುವನು ಶ್ರೀ ಕಾಳೇಶ್ವರ ದೇವರಿಗೆ ಭೂಮಿಯನ್ನು ದಾನ ನೀಡಿದ್ದರ ವಿವರಣೆಯನ್ನು ಹೊಂದಿದೆ.

ಯಧ್ಯಾನಧಾರಣ ಮೌನಾನುಷ್ಠಾನ ಜಪಸ (ಮಾದಿ)
ಸಂಪನ್ನರುಂ ಶ್ರೀ ಸಂಗಮೇಶ್ವರದೇವ ಲಬ್ಧವರಪ್ರ...
ಮಚ್ಚಕ್ರವರ್ತಿಗಳಾದಿಬ್ರಹ್ಮ ಪುರಿಯಪ್ಪ ಸವ್ವನಮ
ಗ್ರಹಾರಂ ಕೂಡಲ ಕಪ್ಪಡಿಸಂಗಮದ ಶ್ರೀಯನ್ನೂ
ಹಾಜನಂಗಳ ಪರಮ ಕಾರಣ್ಯ ಪ್ರಸಾದದಿಂದಂ ಸಮಸ್ತ ಗುಣ[೩೩]

ಇಲ್ಲಿ ಸಂಗಮೇಶ್ವರ ದೇವರ ಪೂಜೆಯ ಸೇವೆಗೆಂದು ಚುಂಚಿನಾದಿಸೆಟ್ಟಿ ಎಂಬುವನು ದಾನ ಬಿಟ್ಟಿರುತ್ತಾನೆ. ಅಗ್ರಹಾರ ಕೂಡಲ ಕಪ್ಪಡಿಸಂಗಮದ ಮಹಾಜನಗಳ ಸಮ್ಮುಖದಲ್ಲಿ ದಾನ ಬಿಟ್ಟಿದ್ದು ತಿಳಿಯುತ್ತದೆ. ಕೂಡಲ ಕಪ್ಪಡಿಸಂಗಮ ಪ್ರದೇಶವಾಗಿತ್ತು ಎಂಬ ಅಂಶವು ಈ ಶಾಸನದಿಂದ ಸ್ಪಷ್ಟವಾಗುತ್ತದೆ. ಕಾವ್ಯ, ಪುರಾಣಗಳಲ್ಲಿ ಕೇವಲ ಕಪ್ಪಡಿಸಂಗಮ ಎಂದು ಉಲ್ಲೇಖವಾದರೆ, ಈ ಶಾಸನದಲ್ಲಿ ಅಗ್ರಹಾರ ಕೂಡಲ ಕಪ್ಪಡಿಸಂಗಮ ಎಂದು ತಿಳಿಯುತ್ತದೆ. ಕೂಡಲ ಮತ್ತು ಕಪ್ಪಡಿ ಎಂಬ ಎರಡು ಪದಗಳು ಒಂದೇ ಸಂದರ್ಭದಲ್ಲಿ ಬಳಕೆಯಾಗಿವೆ. ಈ ಹಿಂದೆ ಹೇಳಿದಂತೆ ಕಪ್ಪಡಿ ಎಂಬುದು ಗ್ರಾಮನಾಮವಾಗಿಯೂ ಮತ್ತು ಕೂಡಲ ಎಂಬುದು ಸ್ಥಳ ಮಹಿಮೆಯನ್ನು ಬಿಂಬಿಸುವ ಸ್ಥಳನಾಮವಾಗಿಯೂ ಗೋಚರವಾಗುತ್ತದೆ.

ಕ್ರಿ.ಶ. ೧೪೪೫ರ ಒಂದು ಶಾಸನ ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ತಂಗಡಗಿಯಲ್ಲಿರುವ ಹನುಮಂತ ದೇವರ ಗುಡಿಯ ಆವರಣದಲ್ಲಿದೆ. ಇದರ ಕಾಲ ಕ್ರೋಧನ ಸಂವತ್ಸರದ ಶ್ರಾವಣ ಬಹುಳ ಅಮಾವಾಸ್ಯೆ ಸೋಮವಾರ ಇಂಗ್ಲಿಷ್ ತೇದಿಯ ಪ್ರಕಾರ ಅಗಸ್ಟ್ ೨, ೧೪೪೫ ಬರಿಗೆಯ ಮಲ್ಲಿನಾಯಕನು ದೇವಿನಾಯಕರ ಮಠದ ಕಪಿಲಸಿದ್ಧ ದೇವರಿಗೆ ಜಂಗಮದ ದಾಸೋಹಕ್ಕೆಂದು ಭೂದಾನ ಮಾಡಿದ ಉಲ್ಲೇಖ ಇದರಲ್ಲಿದೆ. ಕಪ್ಪಡಿಸಂಗಮದ ಉಲ್ಲೇಖವು ಶಾಸನದ ಆರಂಭದಲ್ಲಿದೆ.

ಶ್ರೀಮತು ಕಪ
ಡಿಯ ಸಂಗಮ
ಗೆ ಜಂಗಮ ದೇವರ
ದಾಸೋಹ ಕಾರ
ಣವಾಗಿ ದೇವಿನಾ
ಯಕರ ಮಠದ ಕಪಿ
ಲಸಿದ್ಧ ದೇವರಿಗೆ ಬ
ರಿಗೆಯ ಮಲ್ಲಿರಾಯ
ಕರು ವೇವಿದ್ದ ಭೂ
ಮಿ ೧೩೦ (ಆದ)ಕ್ಕೆ[೩೪]

ಪ್ರಸ್ತುತ ಶಾಸನದ ಪ್ರಾರಂಭದಲ್ಲಿಯೇ 'ಕಪ್ಪಡಿಸಂಗಮ' ಉಲ್ಲೇಖ ಬರುತ್ತದೆ. 'ಕಪ್ಪಡಿಸಂಗಮ'ಗೆ ಜಂಗಮ ದೇವರ ದಾಸೋಹ ಕಾರಣವಾಗಿ ಭೂದಾನ ಮಾಡಿದ್ದಾಗಿದೆ. ಗ್ರಾಮನಾಮವನ್ನೇ ಉಲ್ಲೇಖಿಸಿ ಸಂಗಮದ ಜಂಗಮ ದೇವರ ದಾಸೋಹಕ್ಕೆ ಎಂದರೆ ಸಂಗಮೇಶ್ವರ ದೇವರ ಬದಲು ಜಂಗಮ ದೇವರ ಎಂದರೆ ಈ ಕಾಲಕ್ಕಾಗಲೆ ಕೂಡಲಸಂಗಮದಲ್ಲಿ ಜಂಗಮರಿಗೆ ದಾಸೋಹಕಾರ್ಯ ನಿರಂತರವಾಗಿ ಸಾಗಿತ್ತು ಎಂದು ತಿಳಿಯಬಹುದು.

ಚೌಡದಾನಪುರದ ಎರಡು ಶಾಸನಗಳಲ್ಲಿ ಕೂಡಲಸಂಗಮದ ಸಂಗಮನಾಥನ ಮತ್ತು ಬಸವಣ್ಣನವರ ಬಗ್ಗೆ ಉಲ್ಲೇಖ ಬರುತ್ತದೆ. ಈ ಶಾಸನವು ಶಿವದೇವನ ಆಡಳಿತ ಮತ್ತು ಮುಕ್ತೇಶ್ವರ ದೇವಾಲಯದ ದಾನಗಳ ವಿಷಯವಾಗಿ ತಿಳಿಯುತ್ತದೆ.

ಎನೆ ಕೇಳ್ದದ್ವಿಜೆ ಬಿನ್ನಪಂ ಶಿವ ಜಗಕ್ಕೀ ಮಾರ್ಗಮಂ ತೋರಬೆ।
ಳ್ಕೆನಲಂದಾ ಪ್ರಭು ನಂಧಿನಾಥನ ಮೊಗ ನೋಡಲ್ಕೆ ಶ್ರೀ ಸಂಗಮೇ।
ಶನಪುತ್ರಂ ಬಸವಯ್ಯ ಬಂಕನದಿಂ ಶಿವಮುದ್ದುದೇವಂ ಜಗ
ಕ್ಕನಿಮಿತ್ತಂ ಶಿವದೇವನಾಗಿಯು ಗಣ ಶ್ರೀಪಾಮಂ ತೊರುವೆಂ[೩೫]

ಈ ಶಾಸನದ ಪಠ್ಯವನ್ನು ನೋಡಿದಾಗ ವೇದಶಾಸ್ತ್ರಗಳಿಗೂ ಸಾಧ್ಯವಾಗದ ಭಕ್ತಿ ಪ್ರಸಾದವನ್ನು ಭೂಲೋಕದಲ್ಲಿ ಪ್ರಸಾರ ಮಾಡಲು ನಂದಿನಾಥ ಸಂಗಮೇಶನ ಪುತ್ರನಾಗಿ ಬಂದಂತೆ ಶಿವದೇವನು ಭೂಮಿಗೆ ಆಗಮಿಸಿದನೆಂದು ಸ್ಥೂಲವಾಗಿ ಅರ್ಥಮಾಡಬಹುದು. ಅಂದರೆ ಈ ಶಾಸನದ ಕಾಲಕ್ಕೆ ಬಸವಣ್ಣನವರು ನಂದಿಯ ಅವತಾರವೆಂಬ ವಿಷಯ ಶಾಸನೋಕ್ತವಾಗುವಷ್ಟು ಪ್ರಚಲಿತವಾಗಿದ್ದಿರಬೇಕು. ಅಲ್ಲದೇ ಸಂಗಮೇಶ ಪುತ್ರಂ ಎಂಬ ಮಾತು ಕೂಡಲಸಂಗಮೇಶ್ವರನಿಗೆ ಮತ್ತು ಬಸವಣ್ಣನಿಗೆ ಇದ್ದ ಸಂಬಂಧವನ್ನು ಖಚಿತಪಡಿಸುತ್ತದೆ. ಅದೇ ಸ್ಥಳದ ಇನ್ನೊಂದು ಶಾಸನ ಬಸವಣ್ಣನವರ ಭಕ್ತಿಮಾರ್ಗವನ್ನು ಸ್ವಲ್ಪಮಟ್ಟಿಗೆ ಪರಿಚಯಿಸುತ್ತದೆ.

ಲಿಂಗಕ್ಕೆ ಜಂಗಮಕ್ಕಂ
ಹಿಂಗದೆ ದಾಸತ್ವ ಮಾಳ್ಪುದೇ ಬೇಸನೆಂದಾ।
ಸಂಗನ ಬಸವಂ ಬೆಸಸೆ ಮ
ನಂಗೊಂಡರ್ಚಿಸವನುಭವಲಿಂಗವ ಮುದಕ್ಕಿ
ಮೃಡಗಣ ವರ ಪ್ರಸಾದಮ।
ಪಡೆದಂ ಜಗವರಿಯಲಂದು ಸಂಗನ ಬಸವಂ
ಪಡೆದಾ ಪ್ರಸಾದ ಸಿದ್ಧಿಯ
ಕಡುವಿವಬ್ರತದಿ ಪಡೆದನಿ ಶಿವದೇವಂ[೩೬]

ಬಸವಣ್ಣನವರ ಲಿಂಗ, ಜಂಗಮ, ಅನನ್ಯ ಭಕ್ತಿ, ಶಿವಭಕ್ತರಿಂದ ಬಸವಣ್ಣ ಪಡೆದ ಮಾನ್ಯತೆ ಈ ಶಾಸನದಿಂದ ಖಚಿತವಾಗುತ್ತದೆ. ಅಲ್ಲದೆ ಬಸವಣ್ಣನವರ ಮಾರ್ಗವನ್ನು ಮುಂದೆ ಶಿವದೇವನಂತವರು ಆದರ್ಶ ಮಾರ್ಗವಾಗಿ ಭಾವಿಸಿದ್ದರು ಎಂಬುದು ಇದರಿಂದ ತಿಳಿದುಬರುತ್ತದೆ.

ಕ್ರಮೇಣ ಬಸವಣ್ಣನವರ ಹೆಸರಿನಲ್ಲಿ ಅನೇಕ ಮಠಗಳು, ದೇವಾಲಯಗಳು ಪ್ರಾರಂಭವಾಗತೊಡಗಿದವೆಂದು ಕಾಣುತ್ತದೆ. ಆ ದೃಷ್ಟಿಯಿಂದ ಕೇರಳಾಪುರದ ಶಾಸನ ಅತ್ಯಂತ ಗಮನಾರ್ಹವಾದದ್ದು.

ದಂಣಾಯಕ ದೇವರ
ಜ್ಞಾನಸಂಗಮ ದೇವರ
ವಾಗೀಶ ದೇವರ
ನಂಬಿಯಂಣಂಗಳ ಗಣಮಠದ
ವೃತ್ತಿ ನಾಲ್ಕರ ಆ ಕೊಂಡಿದೇವ
ಸೋಮವೆ ವೊಳಗಾದ
ಮಠಪತಿಗಳಿಗೆಯೂ[೩೭]

ಬಸವಣ್ಣನವರೊಂದಿಗೆ ತಮಿಳುನಾಡಿನ ಶಿವಭಕ್ತರಿಗೂ ಗಣಮಠ ಸ್ಥಾಪನೆಯಾಗಿರುವುದನ್ನು ಈ ಶಾಸನ ನಿರೂಪಿಸುತ್ತದೆ. ಅಲ್ಲದೆ ಶಾಸನದ ಕೊನೆಯಲ್ಲಿ 'ಶ್ರೀ ಬಸರಾಜ, ಶ್ರೀ ನಂಬಿಯಣ್ಣ, ಶ್ರೀ ಜ್ಞಾನ ಸಂಮಂಧ, ಶ್ರೀ ವಾಗೀಶ' ಎಂಬ ಅಂಕಿತಗಳನ್ನು ಹಾಕಲಾಗಿದೆ. ಈ ಶಾಸನದ ಬಗ್ಗೆ ಬರೆಯುತ್ತಾ ಸೀತಾರಮ ಜಾಗಿರದಾರರು ಬಸವಣ್ಣನವರ ಹೆಸರಿನಲ್ಲಿ ಗಣಮಠವೊಂದನ್ನು ಸ್ಥಾಪಿಸಿದ ಸಂಗತಿ ಸಧ್ಯ ದೊರೆತ ದಾಖಲೆಗಳಲ್ಲಿ ಇದುವೇ ಮೊದಲನೆಯದೆಂದು ಎಂದಿದ್ದಾರೆ.[೩೮]

ಬಸವಣ್ಣನವರ ಜೀವನದ ಮುಖ್ಯ ಘಟನೆಗಳಲ್ಲಿ ಒಂದೆಂದರೆ ಅವರ ಬಾಗೇವಾಡಿಯನ್ನು ತ್ಯಜಿಸಿದ ಪ್ರಸಂಗ, ಅದಕ್ಕೆ ಕಾರಣ ಉಪನಯನದ ವಿರುದ್ಧ ಸಿಡಿದದ್ದು ಎಂದು ಭೀಮ ಕವಿಯ ಬಸವಪುರಾಣ ಹೇಳುತ್ತದೆ. ಆದರೆ ಕಪ್ಪಡಿ ಸಂಗಮಕ್ಕೆ ಬರುವ ಪೂರ್ವದಲ್ಲಿ ಉಪನಯನವಾಗಿದ್ದಿತ್ತೆಂಬ ಸೂಚನೆ ಹರಿಹರನಲ್ಲಿ ಇದೆ. ಬಹುಶಃ ಅಗ್ರಹಾರದಲ್ಲಿ ಬ್ರಾಹ್ಮಣ ಸಮಾಜದೊಂದಿಗೆ ಹೊಂದಿಕೆಯಾಗದೆ ಅಲ್ಲಿಂದ ಹೊರಟಿರುವ ಸಾಧ್ಯತೆಯೂ ಇದೆ. ಆದರೆ ಈ ವಿಷಯದ ಬಗ್ಗೆ ಪುರಾಣ, ಕಾವ್ಯಗಳಲ್ಲಿ ಏಕರೂಪತೆ ಇಲ್ಲ. ಅನಂತರ ಬಸವಣ್ಣನವರು ಕಪ್ಪಡಿ ಸಂಗಮದಲ್ಲಿ ಈಶಾನ್ಯ ಗುರುಗಳ ರಕ್ಷೆಯಲ್ಲಿ ಇದ್ದಿರಬೇಕು. ಆದರೆ ಬಸವಣ್ಣನವರಿಗೆ ಲಿಂಗದೀಕ್ಷೆಯಾದದ್ದು ಯಾರಿಂದ ಎಂಬ ಬಗ್ಗೆ ಸ್ಪಷ್ಟತೆ ಇದೆ. ಬಸವಪುರಾಣದಲ್ಲಿ ಜನ್ಮ ಕಾಲದಲ್ಲಿಯೇ ಲಿಂಗದೀಕ್ಷೆಯನ್ನು ಶಿವನೇ ಕೊಡುತ್ತಾನೆಂದು ಹೇಳಲಾಗಿದೆ.[೩೯] ಜಾತವೇದ ಮುನಿಗಳಿಂದ ಆಯಿತೆಂದು ಸಿಂಗಿರಾಜ ಪುರಾಣ ಹೇಳುತ್ತದೆ. ಬಸವಣ್ಣ ಮಂಗಳವಾಡಕ್ಕೆ ಹೋಗುವ ಮೊದಲು ನಂದಿಯಿಂದ ಲಿಂಗ ನೀಡಲ್ಪಟ್ಟಿತ್ತೆಂದು ಹರಿಹರ ನಿರೂಪಿಸುತ್ತಾನೆ. ಆದ್ದರಿಂದ ಈ ವಿಷಯದಲ್ಲಿ ಏಕಾಭಿಪ್ರಾಯವಿಲ್ಲ. ಇದರಿಂದಾಗಿ ಕಪ್ಪಡಿ ಸಂಗಮದಲ್ಲಿ ಬಸವಣ್ಣನಿಗೆ ಶಿವದೀಕ್ಷೆಯಾಯಿತ್ತೆಂದು ಭಾವಿಸಬಹುದೇ ಹೊರತು ಯಾರಿಂದ ಎಂಬುದು ತಿಳಿಯುವುದಿಲ್ಲ. ಆದರೆ ಬಸವಣ್ಣನವರು ನಂತರದ ಕಾಲದಲ್ಲಿ ತಮ್ಮನ್ನು ಅನುಸರಿಸುವಂತಹ ಮತ್ತು ವಚನಗಳನ್ನು ಆದರ್ಶವಾಗಿಟ್ಟುಕೊಂಡು ಲಿಂಗದೀಕ್ಷೆಯನ್ನು ಪಡೆಯುವಂತಹ ಅನುಯಾಯಿಗಳನ್ನು ಹೊಂದಿದ್ದರೆಂಬುದು ಚೌಡದಾನಪುರದ ಶಾಸನಗಳು ತಿಳಿಸುತ್ತವೆ.

೩.೧.೩. ವಚನಗಳು

ಕನ್ನಡದ ಉಪನಿಷತ್ತುಗಳು ಎಂದು ಕರೆಯಲ್ಪಡುವ ವಚನ ಸಾಹಿತ್ಯವು ಜಾಗತಿಕ ಸಂಸ್ಕೃತಿಗೆ ಘನತೆಯನ್ನು ತಂದುಕೊಟ್ಟಿದೆ. ಕನ್ನಡ ನೆಲದಲ್ಲಿ ಪ್ರಥಮವಾಗಿ ಸಾಮಾಜಿಕ ಮತ್ತು ಧಾರ್ಮಿಕ ಆಂದೋಲನವಾಗಿ ಬೆಳಕು ಚೆಲ್ಲುತ್ತದೆ. ಈ ಆಂದೋಲನದ ಪ್ರಮುಖ ರೂವಾರಿ ಬಸವಣ್ಣ. ಬಸವಣ್ಣನವರ ಸಾಧನಾರಂಗದ ಸ್ಥಳ ಕೂಡಲಸಂಗಮವಾದ್ದರಿಂದ ಅವರ ವಚನಗಳ ಅಂಕಿತನಾಮ ಆರಾಧ್ಯದೈವ "ಕೂಡಲಸಂಗಮದೇವ" ಎಂದಾಗಿದೆ. ಕೂಡಲಸಂಗಮ ಎಂದ ತಕ್ಷಣಕ್ಕೆ ಬಸವಣ್ಣನವರ ಅಂಕಿತನಾಮ ಎಂದು ತಿಳಿಯುತ್ತದೆಯೋ ವಿನಃ ಅದು ಒಂದು ಕ್ಷೇತ್ರವೆಂದು ಜನಸಾಮಾನ್ಯರಿಗೆ ಬೇಗ ತಿಳಿಯುವುದಿಲ್ಲ. ಅಷ್ಟರಮಟ್ಟಿಗೆ ಈ ಶಬ್ದ ಬಸವಣ್ಣನವರನ್ನು ಅಂಟಿಕೊಂಡಿದೆ. ಬಾಲ್ಯದಲ್ಲಿಯೇ ಸಂಗಮನಾಥನ ಸನ್ನಿಧಿಗೆ ಬಂದು ಅಪಾರವಾದ ಜ್ಞಾನವನ್ನು ಸಂಪಾದಿಸಿ ಮುಂದೆ ಅಲ್ಲಿಯೇ ಐಕ್ಯವಾಗುವಷ್ಟರ ಮಟ್ಟಿಗೆ ಈ ಕ್ಷೇತ್ರ ಮತ್ತು ಅಲ್ಲಿಯ ದೈವ ಅವರನ್ನು ಆಕರ್ಷಿಸಿದ್ದಿತು.

ಬಸವಣ್ಣನವರು ವಚನಗಳನ್ನು ರಚನೆ ಮಾಡುವ ಮೂಲಕ ಬಹುತೇಕ ಜನರ ಮೌಢ್ಯತೆಯನ್ನು ಹೋಗಲಾಡಿಸಿದ್ದಾರೆ. ಜೊತೆಗೆ ಜನರು ತಮ್ಮ ಆತ್ಮಶುದ್ಧಿ ಮಾಡಿಕೊಳ್ಳಲು ಸಹ ಕಾರಣರಾಗಿದ್ದಾರೆ. ಒಂದು ವಚನದಲ್ಲಿ "ಕಪ್ಪಡಿ" ಎಂಬ ಶಬ್ದವನ್ನು ಅವರು ಹೀಗೆ ಬಳಸುತ್ತಾರೆ.

ಅರ್ಚಿಸಲರಿಯೇ ಪೂಜಿಸಲರಿಯೇ ನಿಚ್ಚ ಶಿವರಾತ್ರಿಯ ನಾಮಾಡಲರಿಯೇ
ಕಪ್ಪಡಿಂ ವೇಶದಿಂದಾನು ಬಂದಾಡುವೆ ಕಪ್ಪಡಿವೇಷದಿಂದ
ಈಶ ನಾ ನಿಮ್ಮ ದಾಸರ ದಾಸಿಯ ದಾಸನಯ್ಯ
ನಿಮ್ಮ ವೇಷಧಾರರಯ ಮನೆಯ ಪಂಗಳ ನಾನಯ್ಯ
ಕೂಡಲಸಂಗಮದೇವಾ
ನಿಮ್ಮ ಲಾಂಚನವ ಧರಿಸಿಪ್ಪ ಉದರ ಪೋಷಕ ನಾನಯ್ಯ[೬೦]

ಪ್ರಮುಖವಾಗಿ ನಾವಿಲ್ಲಿ ಗಮನಿಸುವ ವಿಷಯವೆಂದರೆ "ಕಪ್ಪಡಿವೇಷ" ಎನ್ನುವುದು ಈ ಹಿಂದೆ ನಾವು ಚರ್ಚಿಸಿದಂತೆ ಕಪ್ಪಡಿ ಎಂದರೆ ಚಿಂದಿ ಬಟ್ಟೆಯನ್ನು ಧರಿಸಿದವನು. ತಿರುಕ ಎಂದು ತಿಳಿಸಲಾಗಿದೆ. ಕಪ್ಪಡಿಸಂಗಮವೆಂದು ಆ ಪ್ರದೇಶಕ್ಕೆ ಹೆಸರು ಬರಲು ಪ್ರಮುಖ ಕಾರಣವಾದ ಸಂಗತಿಯನ್ನು ಬಸವಣ್ಣನವರ ಈ ವಚನ ಸ್ಪಷ್ಟಪಡಿಸುತ್ತದೆ ಎನ್ನಬಹುದಾಗಿದೆ. "ಕಪ್ಪಡಿ ವೇಷದಿಂದ ಈಶ ನಾ ನಿಮ್ಮ ದಾಸರ ದಾಸ" ಎಂಬ ಸಾಲುಗಳನ್ನು ನೋಡಿದಾಗ ಈ ಕ್ಷೇತ್ರಕ್ಕೆ ಈಶ್ವರನ ಸನ್ನಿಧಿಗೆ ಅಂದರೆ ಸಂಗಮೇಶ್ವರನ ಸ್ಥಳಕ್ಕೆ ಬರುವಂತವರು. "ಕರ್ಪಟ ವೇಷ"ವನ್ನು ಅಂದರೆ ಸಾಮಾನ್ಯ ಚಿಂದಿ ಬಟ್ಟೆಗಳನ್ನು ಹಾಕಿಕೊಂಡು ಬರುವವರು ಎಂದೆನಿಸುತ್ತದೆ. ಹಾಗಾಗಿ ಇದಕ್ಕೆ ಕಪ್ಪಡಿಸಂಗಮವೆಂದು ಕರೆಯಲಾಗುತ್ತಿತ್ತು ಎಂದು ಈ ವಚನವನ್ನು ಆಧಾರವಾಗಿಟ್ಟುಕೊಂಡು ತಿಳಿಯಬಹುದಾಗಿದೆ.

ಕಲಿದೇವರದೇವ ಎಂಬ ವಚನಾಂಕಿತವನ್ನು ಇಟ್ಟುಕೊಂಡು ವಚನಗಳನ್ನು ರಚಿಸಿದಂತೆ ಮಡಿವಾಳ ಮಾಚಿದೇವರ ಒಂದು ಸುದೀರ್ಘವಾದ ವಚನದಲ್ಲಿ ಕೂಡಲಸಂಗಮ ಮತ್ತು ಕಪ್ಪಡಿಸಂಗಮಗಳ ಪ್ರಸ್ತಾಪ ಬರುತ್ತದೆ.

ಬಸವಣ್ಣನೆಂಬ ನಾಯಕರಣವನ್ನು ಧರಿಸಿ
ಕೂಡಲಸಂಗಮ ದೇವರ ದಿವ್ಯ ಶ್ರೀಪಾದ ಪದ್ಮಾರಾಧಕನಾಗಿ
ಮರ್ತ್ಯಕ್ಕೆ ಪ್ರತಿ ಕೈಲಾಸವೆಂಬ ಕಲ್ಯಾಣಮಂ ಮಾಡಿ
ತನ್ನ ಪರೀಕ್ಷೆಗೆ ಬಿಜ್ಜಳನೆಂಬ ಒರೆಗಲ್ಲ ಮಾಡಿ
ಆ ಸದ್ಭಕ್ತಿ ಬಿನ್ನ(ಹ)ವನು ಒರೆದೊರೆದು ನೋಡುವ
ಕೊಂಡೆಯ ಮಂಚಣ್ಣಗಳ ಪುಟ್ಟಿಸಿದ ಬಸವಣ್ಣ
ಕಪ್ಪಡಿ ಸಂಗಯ್ಯ ದೇವರ ಸ್ವಹಸ್ತದಿಂದಲುಪದೇಶಯಂ ಪಡೆದು
ಸರ್ವಾಚಾರ ಸಂಪನ್ನನಾಗಿ ಇರುತಿರೆ[೪೧]

ಬಸವಣ್ಣನವರು ಕೂಡಲಸಂಗಮ ದೇವರ ಶ್ರೀಪಾದದ ದಿವ್ಯ ಆರಾಧಕರಾಗಿ ಕಲ್ಯಾಣನಗರವನ್ನು ಭೂಮಿಯ ಮೇಲಿನ ಕೈಲಾಸವನ್ನಾಗಿ ಮಾಡಿದ್ದರು ಮತ್ತು ಬಸವಣ್ಣ ತನ್ನ ಪರೀಕ್ಷೆಗೆಂದು ಬಿಜ್ಜಳ ಮತ್ತು ಕೊಂಡೆಯ ಮಂಚಣ್ಣಗಳನ್ನು ಹುಟ್ಟಿಸಿಕೊಂಡಿದ್ದನು. ಗುರುವಿಲ್ಲದೆಯೇ ವಿದ್ಯೆಯನ್ನು ಸಂಪಾದಿಸಿದ್ದನು ಎನ್ನುವುದಕ್ಕೆ "ಕಪ್ಪಡಿಯ ಸಂಗಯ್ಯ ದೇವರ ಸ್ವಹಸ್ತದಿಂದಲುಪದೇಶಮಂ ಪಡೆದು" ಎಂಬ ಮಾತೇ ಸಾಕ್ಷಿ. ಕಪ್ಪಡಿಯ ಸಂಗಯ್ಯ ದೇವರು ಅನುಗ್ರಹಿಸಿ ವಿದ್ಯೆಯನ್ನು ನೀಡಿದ್ದು ಎಂದಾದರೆ ಯಾವ ಗುರುವಿನ ಉಪದೇಶವಿಲ್ಲದೆ ದೇವರ ಸನ್ನಿಧಿಯಲ್ಲಿ ಸ್ವಯಂಬುವಾ ಸಂಗಯ್ಯ ಎಂದಾಗ ಕಪ್ಪಡಿಯೆಂಬ ಗ್ರಾಮದಲ್ಲಿಯ ದೇವರು ಎನ್ನುವುದರಿಂದ ಕಪ್ಪಡಿಯು ಗ್ರಾಮನಾಮವಾಗಿ ಅಂದು ಪ್ರಸಿದ್ಧಿಯನ್ನು ಪಡೆದಿದ್ದು ತಿಳಿಯುತ್ತದೆ.

ಕೂಡಲಸಂಗಮೇಶ್ವರ ಎಂಬ ವಚನಕಾರ

"ಕೂಡಲಾದಿ ಚೆನ್ನಸಂಗಮದೇವ" ಎಂಬ ವಚನಾಂಕಿತದಿಂದ ಸುಮಾರು ಹತ್ತೊಂಬತ್ತು ವಚನಗಳು ದೊರೆತಿವೆ. ಅವುಗಳ ವಸ್ತು–ನಿರೂಪಣೆ–ಭಾಷೆಯನ್ನು ಗಮನಿಸಿದರೆ ನಿಷ್ಠುರವಾದ ಶರಣನೊಬ್ಬನ ಉಪದೇಶದ ಮಾತುಗಳಂತೆ ತೋರುತ್ತವೆ. ಧರ್ಮ, ಸಮಾಜ, ವ್ಯಕ್ತಿಗಳ ನಡೆ–ನುಡಿಗಳಲ್ಲಿ ಕಂಡುಬರುವ ಅಂಕುಡೊಂಕುಗಳನ್ನು ತಿದ್ದುವ ರೀತಿಯಲ್ಲಿ ಅವುಗಳ ಧಾಟಿ ಇದೆ.

ಈತ ಇತ್ತೀಚೆಗೆ ಬೆಳಕಿಗೆ ಬಂದ ನೂತನ ವಚನಕಾರ ಪ್ರೊ. ಬಿ. ರಾಜಶೇಖರಪ್ಪ ಅವರು ಈತನ ಹತ್ತೊಂಬತ್ತು ವಚನಗಳನ್ನು ಪ್ರಥಮ ಬಾರಿಗೆ ಶೋಧಿಸಿ ಪ್ರಕಟಿಸಿದ್ದಾರೆ. ಪ್ರಸ್ತಾವನೆಯಲ್ಲಿ ಈತನ ಜೀವನ–ವಚನ–ವೈಶಿಷ್ಟ್ಯ–ಹಸ್ತಪ್ರತಿ ವಿವರ ಕುರಿತು ಬರೆದಿದ್ದಾರೆ.[೪೨]

ಕೂಡಲಸಂಗಮೇಶ್ವರನ ವಚನಗಳು ಎಂದು ಹಸ್ತಪ್ರತಿಯ ಆದಿಯಲ್ಲಿ ಬರೆದಿರುವುದರಿಂದ 'ಕೂಡಲಸಂಗಮೇಶ್ವರ' ಎಂಬುದು ವಚನಕಾರನ ಹೆಸರಾಗಿರಬೇಕೆಂದು ಊಹಿಸಿದ್ದಾರೆ. ಬಸವಣ್ಣನವರ

ವಚನದ ಅಂಕಿತವಾದ ಇದು ಇಲ್ಲಿ ಒಬ್ಬ ವಚನಕಾರನ ಹೆಸರಾಗಿ ಬಳಕೆಯಾದುದು ಕುತೂಹಲಕಾರಿಯಾಗಿ ಕಾಣುತ್ತದೆ. ಈತನ ಕಾಲ, ಸ್ಥಳ, ಕಾಯಕ, ಒಟ್ಟು ರಚಿಸಿದ ವಚನಗಳು ಇತ್ಯಾದಿ ಯಾವ ವಿವರಗಳು ಸದ್ಯಕ್ಕೆ ದೊರೆತಿಲ್ಲ. ವಚನಗಳ ಭಾಷಾಶೈಲಿಯ ಹಿನ್ನೆಲೆಯಲ್ಲಿ ೧೬-೧೭ನೆಯ ಶತಮಾನವಾಗಿರಬೇಕೆಂದು ರಾಜಶೇಖರಪ್ಪನವರು ನಿರ್ಧರಿಸಿದ್ದಾರೆ.[೪೩] ಈತನ ವಚನಗಳಿಗಿರುವ ಹಸ್ತಪ್ರತಿಯ ಅಂತ್ಯದಲ್ಲಿ ದೊರೆಯುವ ಕಾಲಮಿತಿ ಶಾ.ಶ.೧೬೪೪ ಎಂದಿದ್ದು ಅದು ಕ್ರಿ.ಶ. ೧೭೨೨ ಆಗುತ್ತದೆ. ಹೀಗಾಗಿ ಇದಕ್ಕೂ ಪೂರ್ವದಲ್ಲಿ ಇದ್ದಿರುವುದು ಖಚಿತವಾಗುತ್ತದೆ.

ಈ ವಚನಗಳಿರುವ ಹಸ್ತಪ್ರತಿ ಚಳ್ಳಕೇರಿ ಪ್ರದೇಶದಲ್ಲಿ ದೊರೆತಿದ್ದೆಂದು ತಿಳಿಯುತ್ತದೆ. ಆದರೆ ಇದರೊಳಗಿನ ಹಸ್ತಪ್ರತಿಯ ಪ್ರತಿಕಾರನ ಹೇಳಿಕೆಗಳ ಹಿನ್ನೆಲೆಯಲ್ಲಿ ಇದು ಕರ್ನಾಟಕಾಂಧ್ರ ಗಡಿಯ ಅನಂತಪುರ ಜಿಲ್ಲೆಯ ರಾಯದುರ್ಗದ ಆಸುಪಾಸಿನದೆಂದು ತಿಳಿಯುತ್ತದೆ ಎಂದು ರಾಜಶೇಖರಪ್ಪನವರು ಅಭಿಪ್ರಾಯಪಡುತ್ತಾರೆ.[೪೪] ಇದರ ಲಿಪಿ ತೆಲುಗು ಮಿಶ್ರಿತ ಕನ್ನಡ. ಈ ಕಟ್ಟಿನಲ್ಲಿ ಅಂಬಿಗರ ಚೌಡಯ್ಯ ಮೊದಲಾದವರ ಕೆಲವು ವಚನಗಳು ಸಂಗ್ರಹವಾಗಿರುವುದರಿಂದ ಆಂಧ್ರ ಗಡಿನಾಡಿನ ಲಿಪಿಕಾರ ಇದನ್ನು ಸಿದ್ಧಪಡಿಸಿರಬೇಕು. ಇದರಿಂದ ಈ ವಚನಕಾರನ ಸ್ಥಳ ನಿರ್ಧರಿಸಲು ಯಾವುದೇ ಆಧಾರ ದೊರಕುವುದಿಲ್ಲ. ಸದ್ಯಕ್ಕೆ ಈತನ ಹೆಸರಿನ ಆಧಾರದಿಂದ ಕೂಡಲಸಂಗಮ ಪ್ರದೇಶದವನಾಗಿರಬೇಕೆಂದು ಊಹಿಸಬಹುದಾಗಿದೆ.

ಅಲ್ಲಮಪ್ರಭುವಿನ ವಚನ

ಬಸವಣ್ಣನವರು ಐಕ್ಯವಾಗದ ಮುನ್ನವೇ ಅಲ್ಲಮಪ್ರಭುಗಳು ಮುಂದಾಲೋಚನೆ ಎನ್ನುವಂತೆ ಐಕ್ಯದ ಮಾತುಗಳನ್ನು ಹೇಳಿದ್ದಾರೆ. ಐಕ್ಯವೆಂದರೆ ಕೇವಲ ಪ್ರಾಣವನ್ನು ಬಿಡುವ ಅರ್ಥದಲ್ಲಿ ಅಲ್ಲ, ಶಿವಜೀವರ ಐಕ್ಯ ಮತ್ತು ಅಂಗ ಮತ್ತು ಲಿಂಗಗಳ ಐಕ್ಯ ಎನ್ನುವಂತೆ ಕಪ್ಪಡಿಯ ಸಂಗಮನಾಥನಲ್ಲಿ ಐಕ್ಯವಾದಂದಿಗೆ ಎಂಬ ಪದ ಕಾಲಜ್ಞಾನದ ವಚನವೆಂಬಂತೆ ಗೋಚರವಾಗುತ್ತದೆ.

> ಅಂಗಕ್ಕೆ ಆಚಾರವಾಗಿ ಕಳೆಗಳುಳ್ಳನ್ನಕ್ಕ
> ಸಕಲ ಪದಾರ್ಥವ ಲಿಂಗಕ್ಕೆ ಕೊಟ್ಟಲ್ಲದೆ ಕೊಳಲಾಗದು
> ಲಿಂಗವ ಬಿಟ್ಟು ಕಳೆಹಿಂಗಿದ ಬಳಿಕ ಅಂಗವೇನುಬಲ್ಲುದೋ
> ಕಪ್ಪಡಿಯ ಸಂಗಮನಾಥನಲ್ಲಿ ಐಕ್ಯವಾದಂದಿಗೆ ನಿಜವ ಮರೆ
> ಗುಹೇಶ್ವರ ಲಿಂಗ ಸಾಕ್ಷಿಯಾಗಿ
> ಸಂಗನ ಬಸವಣ್ಣಾ ಅರ್ಪಿತವಲ್ಲದೆ ಕೊಳದಿರು ಅನರ್ಪಿತವ
> "ಕಪ್ಪಡಿಯ ಸಂಗಮನಾಥನಲ್ಲಿ ಐಕ್ಯವಾದಂದಿಗೆ ನಿಜವ ಮರೆ"[೪೫]

ಎಂಬ ಮಾತು ಆಧ್ಯಾತ್ಮದ ಅತ್ಯಂತ ಎತ್ತರದ ಮಾತಾಗಿದೆ. ಯಾವುದು ಸತ್ಯ, ಯಾವುದು ಮಿಥ್ಯ ಎಂದು ತಿಳಿಯ ಹೊರಟಾಗ ನಿಜದ ನೆಲೆಯನ್ನು ಕಂಡುಕೊಳ್ಳುವುದು ತುಂಬ ಕಷ್ಟವಾಗುತ್ತದೆ. ಭಗವಂತನ ಸಾಕ್ಷಾತ್ಕಾರದ ಇರುವನ್ನು ಹೇಳಲಾಗದು ಅದನ್ನು ಕೇವಲ

ಅನುಭವಿಸುವುದು ಮಾತ್ರ ಸಾಧ್ಯ. ಹಾಗೆ ಕೂಡಲಸಂಗಮೇಶ್ವರ ಸಾಕ್ಷಾತ್ಕಾರ ಬಸವಣ್ಣನವರಿಗಲ್ಲದೇ ಮತ್ತಿನ್ನಾರಿಗೂ ಸಾಧ್ಯವಿಲ್ಲ ಎನ್ನುವಂತೆ ಉಪದೇಶಾತ್ಮಕವಾಗಿ ಅಲ್ಲಮಪ್ರಭುಗಳು ಗುಹೇಶ್ವರ ಲಿಂಗ ಸಾಕ್ಷಿಯಾಗಿ ಸಂಗನ ಬಸವಣ್ಣಾ ಅರ್ಪಿತವಲ್ಲದೆ ಕೊಳದಿರು ಅನರ್ಪಿತವ ಎಂದು ನುಡಿದಿದ್ದಾರೆ.[೪೭]

ಕಪ್ಪಡಿಸಂಗಮ ಎಂಬ ಮೂಲರೂಪ ಕೂಡಲಸಂಗಮವೇ ಆಗಿದೆ. ಆ ಸ್ಥಳದ ದೈವವಾಚಿಗಳು ಸಮಸ್ತರೂಪ ಕೂಡಲಸಂಗಮ ಎಂದಾಗಿದೆ. ಇದೇ ಕೂಡಲಸಂಗಮ ಎಂದು ಸ್ಥಳನಾಮವಾಗಿ ಪ್ರಸಿದ್ಧಿ ಹೊಂದಿದೆ. ಕಪ್ಪಡಿ–ಸಂಗಮ–ಕೂಡಲಸಂಗಮ ಎಂಬ ಹೆಸರಿನಿಂದ ಪ್ರಸಿದ್ಧವಾದ ಈ ಸ್ಥಳ ಕನ್ನಡನಾಡಿನಲ್ಲಿ ಅಷ್ಟೇ ಅಲ್ಲದೆ ನೆರೆಯ ರಾಜಗಳಲ್ಲಿ ಚಿರಪರಿಚಿತವಾಗಿದ್ದು ಸಾವಿರಾರು ವರ್ಷಗಳಿಂದ ದೈವಿಕೇಂದ್ರವಾಗಿ ಕನ್ನಡನಾಡಿನ ಹೆಮ್ಮೆಯ ಸ್ಥಳವಾಗಿ ಕಂಗೊಳಿಸುತ್ತಿದೆ.

೩.೧.೪. ಸ್ಥಳ ಪುರಾಣ

ಶ್ರೀ ಕೂಡಲಸಂಗಮ ಕ್ಷೇತ್ರವು (ಸ್ಥಳ ಪುರಾಣ ವಿಶ್ಲೇಷಣೆ)

ಫ.ಗು. ಹಳಕಟ್ಟಿಯವರು ಈ ಕ್ಷೇತ್ರವನ್ನು ಕುರಿತಂತೆ ಒಂದು ಸ್ಥಳಪುರಾಣವಿದೆಯೆಂದು ಮತ್ತು ಅದರಲ್ಲಿ ಹಲವಾರು ಮಹತ್ವದ ಸಂಗತಿಗಳು ಇವೆಯೆಂದು ಹೇಳುತ್ತಾರೆ. ಆದರೆ ಅದರ ಮುದ್ರಣ ಪ್ರತಿಯಾಗಲಿ, ಹಸ್ತಪ್ರತಿಯಾಗಲಿ ಎಲ್ಲಿದೆ ಎಂದು ತಿಳಿಯುವುದಿಲ್ಲ. ಆದರೆ ಹಳಕಟ್ಟಿಯವರು ಕೂಡಲಸಂಗಮ ಕ್ಷೇತ್ರವನ್ನು ಹೀಗೆ ಚಿತ್ರಿಸಿದ್ದಾರೆ.

ಕೃಷ್ಣಾನದಿಗೆ ಮುಖ್ಯವಾಗಿ ಐದು ಸಂಗಮಗಳಿವೆ ಅವು–

೧. ಪಂಚಗಂಗಾ ಸಂಗಮ ಅಥವಾ ನರಸೋಬವಾಡಿ

೨. ಘಟಪ್ರಭೆಯ ಸಂಗಮ ಅಥವಾ ಮೂರಮಟ್ಟಿ ಸಂಗಮ

೩. ಮಲಹಾರಿ ಸಂಗಮ ಅಥವಾ ಕೂಡಲಸಂಗಮ

೪. ಭೀಮಾ ಸಂಗಮ ಅಥವಾ ಕಾಡಲೂರ ಸಂಗಮ

೫. ತುಂಗಭದ್ರಾ ಸಂಗಮ ಅಥವಾ ನಿವೃತ್ತಿ ಸಂಗಮ

ಇವೆಲ್ಲವು ಕರ್ನಾಟಕದಲ್ಲಿ ಪ್ರಮುಖ ಸ್ಥಳಗಳಾಗಿವೆ. ಕೂಡಲಸಂಗಮ ಕ್ಷೇತ್ರದ ವಿಸ್ತಾರವು ಸುತ್ತ ಐದು ಮೈಲು ಇದ್ದು, ನೈರುತ್ಯ ದಿಕ್ಕಿಗೆ ಮಲಪ್ರಭಾ ದಂಡೆಯ ಮೇಲೆ ಪಾಪನಾಥನಾಳವೆಂಬ ಗ್ರಾಮವಿದ್ದು, ಇಲ್ಲಿ ಶ್ರೀ ಪಾಪೇಶ್ವರ ದೇವಾಲಯವಿದೆ. ಇಲ್ಲಿ ಪರಶುರಾಮನು ೨೧ ಬಾರಿ ಕ್ಷತ್ರೀಯ ಅರಸನನ್ನು ಸಂಹರಿಸಿದ್ದರಿಂದ ಉಂಟಾದ ತನ್ನ ಪಾಪವನ್ನು ಇಲ್ಲಿ ಕಳೆದುಕೊಂಡನೆಂದು ತಿಳಿಯುತ್ತದೆ.[೪೮]

ಕೂಡಲಸಂಗಮ ಕ್ಷೇತ್ರಕ್ಕೆ ಪ್ರಾಚೀನ ಕಾಲದಲ್ಲಿ ಹಲವು ಹೆಸರುಗಳಿಂದ ಕರೆಯುತ್ತಿದ್ದರು. ಕೂಡಲಸಂಗಮ ಕಪ್ಪಡಿಸಂಗಮ, ಕಪಿಲ ಕ್ಷೇತ್ರ, ಭಾಸ್ಕರ ಕ್ಷೇತ್ರ, ಪರುಶರಾಮ ಕ್ಷೇತ್ರವೆಂತಲೂ ಕರೆಯುತ್ತಿದ್ದರು. ಕೃತ ಯುಗದಲ್ಲಿ ಈ ಸಂಗಮಕ್ಕೆ ಭಾಸ್ಕರ ಕ್ಷೇತ್ರವೆಂತಲೂ, ಈಶ್ವರನಿಗೆ

ಅಮೃತೇಶ್ವರನೆಂದು, ತ್ರೇತಾಯುಗದಲ್ಲಿ ಪರಶುರಾಮ ಕ್ಷೇತ್ರವೆಂದು, ದೇವರಿಗೆ ಯಜ್ಞೇಶ್ವರನೆಂದು, ದ್ವಾಪರಯುಗದಲ್ಲಿ ಕಪಿಲ ಕ್ಷೇತ್ರವೆಂದು, ದೇವರಿಗೆ ಸಿದ್ಧೇಶ್ವರನೆಂದು, ಕಲಿಯುಗದಲ್ಲಿ ಸಂಗಮ ಕ್ಷೇತ್ರವೆಂದು, ದೇವರಿಗೆ ಸಂಗಮೇಶ್ವರನೆಂದು ಹೆಸರುಗಳು ಇದ್ದವೆಂದು ಸ್ಥಳ ಪುರಾಣದಲ್ಲಿ ಉಲ್ಲೇಖವಿರುವುದಾಗಿ ಹಳಕಟ್ಟಿಯವರು ತಿಳಿಸುತ್ತಾರೆ.[೪೮]

ಸಂಗಮನಾಥನ ಮುಂದೆ ಎರಡು ನಂದಿಗಳ ಸ್ಥಾಪನೆ ಇದೆ. ಮೊದಲು ಇದ್ದದ್ದು ಅಮೃತೇಶ್ವರನದೆಂದು ಮತ್ತೊಂದು ಪರಶುರಾಮನ ಪೂಜೆ ಮಾಡಿ ಐಕ್ಯನಾದ ನಂತರ ಸ್ಥಾಪಿಸಿದ್ದೆಂದು ಹೇಳಲ್ಪಟ್ಟಿದೆ. ನದಿಯಲ್ಲಿ ಮತ್ತು ದಂಡೆಯ ಮೇಲೆ ಕೂಡಿ ೮ ಲಿಂಗಗಳು, ನೀರಿನಲ್ಲಿ ೧೩ ತೀರ್ಥಗಳು ಉಂಟೆಂದು ತಿಳಿಯುತ್ತದೆ. ಈ ೮ ಲಿಂಗಗಳು ಯಾವುವು ಎಂದರೆ– ೧. ಅಮೃತೇಶ್ವರ ೨. ಯಜ್ಞೇಶ್ವರ ೩. ಚಂಡೇಶ್ವರ ೪. ರಾಮೇಶ್ವರ ೫. ಸಂಗಮೇಶ್ವರ ೬. ಸೋಮೇಶ್ವರ ೭. ಸಿದ್ಧೇಶ್ವರ ೮. ಕಪಿಲೇಶ್ವರ ಸೋಮೇಶ್ವರನ ಹತ್ತಿರವೆ ಗಣಪತಿ ಇದೆ ಎಂದು ಹೇಳಲಾಗುತ್ತಿದೆ.[೪೯]

ಅಲ್ಲದೇ ೧೩ ತೀರ್ಥಗಳು ಇಲ್ಲಿ ಇದ್ದು ಅವುಗಳ ಹೆಸರುಗಳು ಇಂತಿವೆ.

೧. ಗೋಷ್ಪಾದ ತೀರ್ಥ

೨. ವಾಯು ತೀರ್ಥ

೩. ಸೂರ್ಯ ತೀರ್ಥ

೪. ಶುಕ್ಲ ತೀರ್ಥ

೫. ಶಂಖ ತೀರ್ಥ

೬. ಚಕ್ರ ತೀರ್ಥ

೭. ಐರಾವತ ತೀರ್ಥ

೮. ಕಪಿಲ ತೀರ್ಥ

೯. ಸಿದ್ಧ ತೀರ್ಥ

೧೦. ಜಟಾ ತೀರ್ಥ

೧೧. ಋಣಮೋಚನ ತೀರ್ಥ

೧೨. ಗೌರಿ ತೀರ್ಥ

೧೩. ಕೋಟಿ ತೀರ್ಥ

೧. **ಗೋಷ್ಪಾದ ತೀರ್ಥ :** ಉತ್ತರ ಬಾಗಿಲ ಮುಂದೆ ಕೃಷ್ಣಾ ನದಿಯಲ್ಲಿ ಒಂದು ಕಲ್ಲಿನಲ್ಲಿ ಆಕಳ ಕರು ಮೂಡಿದಂತೆ ಒಂದು ತಗ್ಗು ಇದೆ. ಇದಕ್ಕೆ ಗೋಷ್ಪಾದ ತೀರ್ಥವೆಂದು ಕರೆಯುತ್ತಾರೆ.

ಆಕಳು ಮತ್ತು ಎತ್ತು ಇವುಗಳನ್ನು ಹೊಡೆದು ಹಿಂಸಿಸಿದವನು ಇಲ್ಲಿ ಸ್ನಾನ ಮಾಡಿದರೆ ಪಾಪದಿಂದ ಬಿಡುಗಡೆ ಹೊಂದುತ್ತಾನೆ.

೨. **ವಾಯು ತೀರ್ಥ** : ಇಲ್ಲಿ ಹನುಮಂತನ ಮೂರ್ತಿಯು ಇದ್ದು ಇಲ್ಲಿ ಪೂಜೆ ಮಾಡುವವನು ಬೇನೆಗಳಿಂದ ದೂರವಾಗುತ್ತಾನೆ.

೩. **ಸೂರ್ಯ ತೀರ್ಥ** : ವಾಯು ತೀರ್ಥದ ಸಮೀಪದಲ್ಲಿಯೇ ಇದೆ. ಇಲ್ಲಿ ಕುದುರೆಯ ಚಿಹ್ನೆಯ ಕಲ್ಲು ಇದೆ. ಇದರ ಪೂರ್ವಕ್ಕೆ ಕೆಂಪು ಕಲ್ಲು ಕಾಣಿಸುತ್ತದೆ. ಇಲ್ಲಿ ಸ್ನಾನ ಮಾಡಿ ಪೂಜಿಸಿದವನು ಇಷ್ಟಸಿದ್ಧಿಯನ್ನು ಹೊಂದುತ್ತಾನೆ ಎಂಬ ಪ್ರತೀತಿ ಇದೆ.

೪. **ಶುಕ್ಲ ತೀರ್ಥ** : ಕೂಡಲ ಮುಖದ ಹತ್ತಿರ ಸ್ನಾನ ಮಾಡಿ ಪಂಚಲಿಂಗಗಳ ಅಭಿಷೇಕ ಮಾಡಿದರೆ ಎಲ್ಲ ಪಾಪಗಳಿಂದ ಮುಕ್ತನಾಗುತ್ತಾನೆ. ಇದರ ಹತ್ತಿರವೇ ಸೋಮೇಶ್ವರನು ಇರುತ್ತಾನೆ.

೬. **ಚಕ್ರ ತೀರ್ಥ** : ದೇಸಾಯಿ ಬಂಡೆಗಲ್ಲಿನ ಹತ್ತಿರ ಉತ್ತರಕ್ಕೆ ಚಕ್ರಾಕಾರದ ಕಲ್ಲು ಇರುತ್ತದೆ. ಇದು ಯಾವಾಗಲೂ ನೀರಿನಲ್ಲಿ ಮುಳುಗಿರುತ್ತದೆ. ಇಲ್ಲಿ ಆರು ತಿಂಗಳು ಸ್ನಾನ ಮಾಡಿದವನು ಸಂಸಾರ ಚಕ್ರದಿಂದ ಮುಕ್ತನಾಗುತ್ತಾನೆ.

೭. **ಐರಾವತ ತೀರ್ಥ** : ಚಕ್ರತೀರ್ಥದ ಪಶ್ಚಿಮಕ್ಕೆ ಕಲ್ಲಿನ ಮೇಲೆ ವಿಷ್ಣುಪಾದ ಚಿಹ್ನೆ ಇದೆ. ಇಲ್ಲಿ ಈಶ್ವರನ ಪೂಜೆಯನ್ನು ಮಾಡಿದ್ದಾದರೆ ಮುಕ್ತಿಯುಂಟಾಗುತ್ತದೆ. ಇಲ್ಲಿ ಇಂದ್ರನು ತಪಸ್ಸು ಮಾಡಿ ಐಶ್ವರ್ಯ ಹೊಂದಿದನಂತೆ.

೮. **ಕಪಿಲ ತೀರ್ಥ** : ಐರಾವತ ತೀರ್ಥದ ಉತ್ತರಕ್ಕೆ ವಿಷ್ಣುಪಾದ ಇರುವ ರೋಗಗಳು ನಾಶವಾಗುವುವು.

೯. **ಸಿದ್ಧ ತೀರ್ಥ** : ಕೂಡಲ ಮುಖದ ಪೂರ್ವಕ್ಕೆ ಗವಿ ಕುಂಡದ ಹತ್ತಿರ ಸ್ನಾನಮಾಡಿ ಸಿದ್ಧೇಶ್ವರನ ಪೂಜೆಯಿಂದ ಅನೇಕರು ಸಿದ್ಧಿಯನ್ನು ಹೊಂದಿದರಂತೆ. ಈ ಕಲ್ಲಿನ ಕೆಳಗೆ ಒಂದು ಗವಿ ಇರುತ್ತದೆಯಂತೆ. ಇದರ ಬಾಗಿಲಿಗೆ ಕಲ್ಲುಗುಂಡು ಆನಿಸಿರುತ್ತಾರೆ. ಇಲ್ಲಿ ಸಿದ್ಧ ಶರಣರು ವಾಸಿಸುತ್ತಾರೆಂದು ಜನರು ತಿಳಿಯುತ್ತಾರೆ.

೧೦. **ಜಟಾ ತೀರ್ಥ** : ಉಭಯ ನದಿಗಳ ಸಂಗಮದ ಪೂರ್ವಕ್ಕೆ ಆಚೆದಂಡೆಗೆ ವೀರಭದ್ರ ದೇವರ ಗುಡಿಯುಂಟು. ಇದರ ಉತ್ತರಕ್ಕೆ ಕೃಷ್ಣಾನದಿಯಲ್ಲಿ ಸ್ನಾನಮಾಡಿ ವೀರಭದ್ರನ ಪೂಜೆ ಮಾಡಿದರೆ ಶಿವಸಾನಿಧ್ಯವು ಪ್ರಾಪ್ತವಾಗುತ್ತದೆ. ಇದು ಭೈರವ ತೀರ್ಥ ಅಥವಾ ಜಟಾ ತೀರ್ಥ.

೧೧. **ಋಣಮೋಚನ ತೀರ್ಥ** : ತಂಗಡಗಿಯ ಹಂದಿಯ ಹೊಳೆಯಲ್ಲಿ ಸ್ನಾನಮಾಡಿ ಸಂಗಮೇಶ್ವರನನ್ನು ಪೂಜೆ ಮಾಡುವುದರಿಂದ ಹಿಂದಿನ ಜನ್ಮದಲ್ಲಿ ಸಾಲಕೊಡದಿದ್ದರ ಪಾಪವು ನಾಶವಾಗಿ ಮುಕ್ತಿಯು ದೊರೆಯುತ್ತದೆ. ಡಾಲ್ಭ್ಯನೆಂಬ ಬ್ರಾಹ್ಮಣನು ತನ್ನ ಋಣದಿಂದ ವಿಮೋಚನವಾಗಿ ಇಲ್ಲಿ ಮುಕ್ತಿಯನ್ನು ಹೊಂದಿದನೆಂಬ ಪ್ರತೀತಿ ಇದೆ.

೧೨. ಗೌರಿ ತೀರ್ಥ : ಆಡಿಹಾಳ ಗ್ರಾಮದ ಎದುರಿಗೆ ಗಂಗೆ-ಗೌರಿ ಕಲ್ಲು ಇದೆ. ಇದರ ಹತ್ತಿರ ಕಲ್ಲುಬಂಡೆಯ ಮೇಲೆ ಕಡೆಗೋಲಿನ ಚಿಹ್ನೆ ಇದೆ. ಇದೇ ಗೌರಿ ತೀರ್ಥವು ಇಲ್ಲಿ ಹೆಣ್ಣುಮಕ್ಕಳು ಸ್ನಾನಮಾಡಿ ಕಡೆಗೋಲು ಪೂಜೆ ಮಾಡಿದರೆ ಅಖಂಡ ಸೌಭಾಗ್ಯವು ದೊರೆಯುತ್ತದೆ ಎಂದು ಹೇಳಲಾಗುತ್ತದೆ.

೧೩. ಕೋಟಿ ತೀರ್ಥ : ಗವಿಕುಂಡದ ದಕ್ಷಿಣಕ್ಕೆ ಮಲಪ್ರಭೆಯ ಊರ ಕಡೆಯ ದಂಡೆಯ ಮೇಲೆ ಕಲ್ಲುಬಂಡೆಯಲ್ಲಿ ಎರಡು ರುದ್ರಪಾದಗಳು ಮೂಡಿರುತ್ತವೆ. ಇದಕ್ಕೆ ರುದ್ರಪಾದ ತೀರ್ಥವೆಂತಲೂ, ಕೋಟಿ ತೀರ್ಥವೆಂತಲೂ ಕರೆಯುತ್ತಾರೆ.

ಶ್ರೀ ಸಂಗಮೇಶ್ವರನ ಗುಡಿಯಲ್ಲಿರುವ ಲಿಂಗದ ಸುತ್ತಲೂ ಎರಡು ಇಂಚು ಅಗಲವಾದ ಪೊಳ್ಳು ಇರುತ್ತದೆ. ಇದೇ ಪಾನಬಟ್ಟಲು, ಅಭಿಷೇಕದ ನೀರು ಇದರಲ್ಲಿ ಇಳಿದು ಬಿಡುವುದರಿಂದ ಇದಕ್ಕೆ ಈ ಹೆಸರು ಬಂದಿದೆ. ಬರಗಾಲದಲ್ಲಿ ನೀರು ಹೋಗಿಬಿಡುತ್ತದೆ. ಇದು ಅಶುಭ ಚಿಹ್ನೆ ಎಂದು ಜನರು ತಿಳಿಯುತ್ತಾರೆ. ಅಭಿಷೇಕದ ನೀರು ಈ ನೀರಿನ ಮೇಲಿಂದ ಹರಿದು ಜಲಹರಿಯಲ್ಲಿ ಬೀಳುತ್ತದೆ. ಸಂಗಮೇಶ್ವರ ಲಿಂಗವು ಹುಟ್ಟು ಲಿಂಗವಾಗಿದೆ. ಅಂದರೆ ಜನರಿಂದ ಕಟೆದು ನಿರ್ಮಿಸಿದ ಲಿಂಗವಲ್ಲ, ಕಾರಣ ಸಿದ್ಧೇಶ್ವರನೆಂತಲೂ ಇದಕ್ಕೆ ಹೆಸರು ಬಂದಿದೆ. ಅಯ್ಯತೇಶ್ವರನೆಂತಲೂ ಕರೆಯುತ್ತಾರೆ. ಬಸವೇಶ್ವರನು ಈ ಲಿಂಗದಲ್ಲಿಯೇ ಐಕ್ಯನಾದನೆಂದು ಹೇಳುತ್ತಾರೆ. ಅವರು ಐಕ್ಯವಾದದ್ದು ಶ್ರೀ ಸಂಗಮೇಶ್ವರ ದೇವರ ಪಿಂಡಿಕೆಯಲ್ಲಿ ಉತ್ತರ ಬದಿಯೆಂದು ಹೇಳುತ್ತಾರೆ.[೫೦]

ಕೃಷ್ಣಾನದಿಯು ಪರಶುರಾಮನಿಗೆ ಹೆಚ್ಚಿಗೆ ಸಂಬಂಧಪಟ್ಟ ಹಾಗೆ ಕಾಣುತ್ತದೆ. ಇದೇ ನದಿಯ ದಡದಲ್ಲಿರುವ ಶೂರ್ಪಾಲಿ ಎಂಬ ಗ್ರಾಮದಲ್ಲಿ ಪರಶುರಾಮನು ಮುಂಜಾವಿನಲ್ಲಿ ಕಪ್ಪಡಿ ಸಂಗಮದಲ್ಲಿ ಮಧ್ಯಾಹ್ನ ಕಾಲದಲ್ಲಿ ಮತ್ತು ಶ್ರೀಶೈಲದಲ್ಲಿ ಸಾಯಂಕಾಲದಲ್ಲಿ ಇರುವನೆಂದು ಪ್ರತೀತಿ ಇದೆ. ಊರ ಮುಂದೆ ಅನೇಕ ಬಂಡೆಗಲ್ಲುಗಳು ಇದ್ದು, ಅವುಗಳಿಗೂ ಸಹ ಪವಿತ್ರತೆಯು ಕಲ್ಪಿಸಲ್ಪಟ್ಟಿದೆ. ಆ ಕಲ್ಲುಗಳು ಯಾವವೆಂದರೆ,

೧. ಆಕಳು ಕುರದ ಕಲ್ಲು

೨. ದೇಸಾಯಿ ಬಂಡೆ

೩. ಕರೇ ಕಲ್ಲು

೪. ಬಿಳೇ ಕಲ್ಲು

೫. ಕೆಂಪು ಕಲ್ಲು

೬. ಗಂಗೆ-ಗೌರಿ ಕಲ್ಲು

೭. ರುದ್ರಪಾದ ಕಲ್ಲು

೮. ಆನೆ ಕಲ್ಲು

೯. ಕುದುರೆ ಕಲ್ಲು

೧೦. ಆಚರಬಂಡೆ ಕಲ್ಲು

೧೧. ಗವಿಗುಂಡ ಕಲ್ಲು

೧೨. ವಿಠ್ಠಲರಾಯನ ಕಂಬ

ಹೀಗೆ ಅನೇಕ ಕಲ್ಲು ಮತ್ತು ಬಂಡೆಗಳು ಪೂಜೆಗೊಳ್ಳುತ್ತಿದ್ದವು. ಕೆಲವು ಈಗ ಇಲ್ಲ. ಮತ್ತೆ ಕೆಲವು ಇಂದಿಗೂ ಪೂಜಿಸಲ್ಪಡುತ್ತವೆ. ಸ್ಥಳ ಪುರಾಣದಲ್ಲಿ ಇರುವಂತೆ ಇಲ್ಲಿ ಇನ್ನೂ ಅನೇಕ ಪವಿತ್ರ ಸ್ಥಾನಗಳನ್ನು ಉಲ್ಲೇಖಿಸಲಾಗಿದೆ.

೧. ಸೀತಾಕುಂಡ

೨. ಅಕ್ಕಮ್ಮನ ಮಡು

೩. ಶಂಭುಲಿಂಗೇಶ್ವರನ ಗುಡಿ

೪. ಗಡ್ಡಿ ಸಂಗಪ್ಪ

೫. ನೀಲಗಂಗಮ್ಮನ ಗುಡಿ

೬. ಬೇಳೆಬಸಪನ್ನನ ಗುಡಿ

೭. ಪಾದಗಟ್ಟಿ

೮. ನೂರೊಂದಪ್ಪನ ಗುಡಿ

೯. ಅರಳಿಕಟ್ಟೆಪ್ಪ

ಮುಂತಾದವುಗಳನ್ನು ಹೆಸರಿಸಲಾಗಿದೆ. ಇದರಲ್ಲಿ ಕೆಲವು ಗುಡಿಗಳು ಇಂದು ನಾಶವಾಗಿವೆ. ಮತ್ತೆ ಕೆಲವು ಇಂದಿಗೂ ಪೂಜಿಸಲ್ಪಡುತ್ತಿವೆ. ಸಂಗಮನಾಥನ ಗುಡಿಯು ಪುರಾತನ ಕಾಲದ್ದಾಗಿದ್ದು, ರಂಗಮಂಟಪದ ನಾಲ್ಕು ಕಂಬಗಳಲ್ಲಿ ಕೊರೆದ ಮೂರ್ತಿಗಳು ಇವೆ. ಗರ್ಭಗುಡಿಯಲ್ಲಿ ದೇವರ ಪಶ್ಚಿಮಕ್ಕೆ ಒಂದು ಶಕ್ತಿಯ ಪ್ರತಿಮೆ ಇರುತ್ತದೆ. ಇದಕ್ಕೆ ಎಂಟು ಆಯುಧಗಳನ್ನು ಧರಿಸಿದ ಎಂಟು ಕೈಗಳು ಇರುವ ಕಾರಣ ಅಷ್ಟಭುಜಶಕ್ತಿ ಪಾರ್ವತಿದೇವಿ ಎಂದು ಜನರು ಪೂಜಿಸುತ್ತಾರೆ. ಗರ್ಭಗುಡಿಯಲ್ಲಿ ಶ್ರೀ ಚೆನ್ನಬಸವೇಶ್ವರ ಮೂರ್ತಿಯು ಉತ್ತರಾಭಿಮುಖವಾಗಿ ಸ್ಥಾಪಿತವಾಗಿರುತ್ತದೆ. ಇದನ್ನು ಪೂಜಿಸಿ ಅನೇಕರು ಜ್ಞಾನ ಸಂಪಾದನೆ ಮಾಡಿಕೊಂಡಿರುವರೆಂದು ಪ್ರತೀತಿ ಇದೆ. ಅಲ್ಲದೆ ಇಲ್ಲಿ ಶೃಂಗಿ, ಭೃಂಗಿ ಮೊದಲಾದ ಪ್ರಮಥ ಗಣಗಳ ಮೂರ್ತಿಗಳೂ ಇವೆ ಎಂದು ತಿಳಿಯುತ್ತದೆ.

ಈ ಕ್ಷೇತ್ರಕ್ಕೆ ಲಿಂಗಾಯತ ಧರ್ಮದವರಷ್ಟೆ ಅಲ್ಲದೇ ಶಾಕ್ತರು, ಶೈವರು, ಗಣಪತ್ಯರು, ಸ್ಮಾರ್ತರು, ವೈಷ್ಣವರು, ಪಾಂಚಾಳರು ಮುಂತಾದ ಎಲ್ಲ ಜನರು ನಡೆದುಕೊಳ್ಳುತ್ತಾರೆ. ಶಾಕ್ತರು ಶಕ್ತಿಯ ಪ್ರತಿಮೆಯನ್ನು, ಶೈವರು ಸಂಗಮೇಶ್ವರ ಲಿಂಗವನ್ನು, ಗಣಪತ್ಯರು ಗಣೇಶ ಪ್ರತಿಮೆಯನ್ನು, ಸ್ಮಾರ್ತರು ಅಮೃತೇಶ್ವರನನ್ನು, ವೈಷ್ಣವರು ಕೇಶವ ದೇವರನ್ನು ಪೂಜಿಸುತ್ತಾರೆ. ಈ ಎಲ್ಲ ಪ್ರತಿಮೆಗಳು ಗುಡಿಯಲ್ಲಿವೆ. ಗುಡಿಯ ಆಧಾರದ ಪಶ್ಚಿಮ ಹೆಬ್ಬಾಗಿಲಿನ ಬದಿಗೆ ಒಂದು ಶಿಲಾಲಿಪಿ ಇದೆ. ಇದು ಚಾಲುಕ್ಯರ ಕಾಲದ್ದು ಎಂದು ಹೇಳಲಾಗುತ್ತದೆ ಎಂಬ ಉಲ್ಲೇಖವಿದೆ.

ಕೂಡಲಸಂಗಮದಲ್ಲಿ ಇದ್ದಂಥ ಮಠಗಳನ್ನು ಇದು ಸೂಚಿಸುತ್ತದೆ. ಪ್ರಮುಖವಾಗಿ–

೧. ಸಾರಂಗಮಠ

೨. ವಿರಕ್ತಮಠ

೩. ಕಳ್ಳಿಮಠ

೪. ಶಿವಯೋಗಮಠ

೫. ಪಡದಯ್ಯನಮಠ

೬. ಶಂಕರಭಾರತಿಮಠ

೭. ಉತ್ತರಾಧಿಮಠ

೮. ರಾಘವೇಂದ್ರಸ್ವಾಮಿಮಠ

ಸಾರಂಗಮಠವು ಕೆಲವು ಶತಮಾನಗಳ ಹಿಂದೆ ಇಡೀ ಕರ್ನಾಟಕ ಮತ್ತು ದಕ್ಷಿಣ ದೇಶಗಳಲ್ಲಿ ಸಂಚರಿಸಿ ಅನೇಕ ಮಹತ್ವದ ಕಾರ್ಯಗಳನ್ನು ಮಾಡಿ ಹೋದ ಆದಿ ಸಾರಂಗದೇವರ ಗದ್ದುಗೆಯು ಇದೆ. ಕುಂಬಕೋಣದಲ್ಲಿಯ ಮಹತ್ವದ ಸಾರಂಗಮಠದ ಸಂಸ್ಥಾಪಕರೇ ಇವರು.

ಸಂಗಮ ಕ್ಷೇತ್ರದಿಂದ ಈಶಾನ್ಯಕ್ಕೆ ೧ ಮೈಲು ದೂರದಲ್ಲಿ ತಂಗಡಗಿ ಎಂಬ ಗ್ರಾಮವಿದ್ದು, ಅದಕ್ಕೆ ಸಮೀಪವಾಗಿ ನದಿಯ ದಡದಲ್ಲಿ ನೀಲಗಂಗಮ್ಮನ ಗುಡಿ ಇದೆ. ನೀಲಗಂಗಮ್ಮನು ಬಸವೇಶ್ವರನ ಪತ್ನಿಯು, ಶ್ರೀ ಬಸವೇಶ್ವರರು ಸಂಗಮಕ್ಕೆ ಹೋದ ಬಳಿಕ ನೀಲಗಂಗಮ್ಮನು ಅವನನ್ನು ಹಿಂಬಾಲಿಸಿ ಈ ಸ್ಥಳಕ್ಕೆ ಬಂದಳು. ಅಷ್ಟರಲ್ಲಿ ಬಸವೇಶ್ವರನು ಲಿಂಗೈಕ್ಯನಾದ ಸುದ್ದಿಯನ್ನು ಕೇಳಿದ ಕೂಡಲೇ ನೀಲಗಂಗಮ್ಮನು ಇದೇ ಸ್ಥಳದಲ್ಲಿ ತನ್ನ ಲಿಂಗದಲ್ಲಿ ಐಕ್ಯಳಾದಳು. ಐಕ್ಯಳಾದ ಸ್ಥಳದಲ್ಲಿ ಗುಡಿ ಕಟ್ಟಲಾಗಿದೆ. ತಂಗಡಗಿ ಗ್ರಾಮದ ಹೆಸರು "ತಂಗಿ ಅಡಗಿದಳು" ಎಂಬುದರಿಂದ ಉಂಟಾಗಿದೆ ಎಂದು ಜನರು ಹೇಳುತ್ತಾರೆ.

ಈ ದೇವಾಲಯದ ಜಾತ್ರೆಯು ಚೈತ್ರ ಬಹುಳ ಪಂಚಮಿ ದಿವಸ ಪ್ರತಿವರ್ಷ ಆಗುತ್ತದೆ. ಮೂಲಾ ನಕ್ಷತ್ರದಲ್ಲಿ ತೇರು ಎಳೆಯುತ್ತಾರೆ. ತೇರು ಬಹಳ ದೊಡ್ಡದು ಇದ್ದು, ಅದರ ಎತ್ತರ ೧೦೧ ಅಡಿ ಇದೆ. ಜಾತ್ರೆಯಲ್ಲಿ ಒಕ್ಕಲುತನದ ಸಾಮಾನುಗಳ ವ್ಯಾಪಾರ ಬಹಳವಾಗಿರುತ್ತದೆ.

ಜಾತ್ರೆಗಿಂತ ೯ ದಿವಸ ಮೊದಲು "ಬಸವನ ಪಟ" ಎಂದು ಕಟ್ಟುತ್ತಾರೆ. ಆಗ ಪ್ರತಿ ದಿವಸ ರಾತ್ರಿಯಲ್ಲಿ ಸಣ್ಣ ತೇರು ಎಳೆಯುತ್ತಾರೆ. ಮಾರ್ಗಶಿರ ತಿಂಗಳಲ್ಲಿ ಕಾರ್ತಿಕವಾಗುತ್ತದೆ. ಶ್ರಾವಣದಲ್ಲಿ ಮಹಾಭಿಷೇಕವಾಗುತ್ತದೆ. ಗುಡಿಯ ಪೂಜಾರರು ಮೊದಲಾದವರಿಗೆ ಇನಾಮು ಭೂಮಿಗಳು ಇರುತ್ತವೆ.

ಈ ಸ್ಥಳವು ಪುರಾಣ ಪ್ರಸಿದ್ಧಿಯನ್ನು ಪಡೆಯುವುದಷ್ಟೇ ಅಲ್ಲ ಇತಿಹಾಸ ಪ್ರಸಿದ್ಧವೂ ಆಗಿದೆ. ಇದರ ಹತ್ತಿರದಲ್ಲಿಯೇ ತಾಳಿಕೋಟೆಯ ರಣಾಂಗಣವು ಇದೆ. ಈ ಮಹಾಯುದ್ಧವು ಕೃಷ್ಣೆಯ ಉತ್ತರ ದಂಡೆಯಲ್ಲಿರುವ ತಂಗಡಗಿ ಗ್ರಾಮದಿಂದ ಪೂರ್ವಕ್ಕೆ ೮ ಮೈಲುಗಳ ಮೇಲಿರುವ ಅಕ್ಕಸಗಿಯವರೆಗೆ ಇರುವ ಮೈದಾನದಲ್ಲಿ ಆಯಿತೆಂದು ಇದು ಸಂಗಮನಾಥನ ದೇವಾಲಯದ ಎತ್ತರವಾದ ಸ್ಥಳದಿಂದ ಈ ಸಮರಾಂಗಣವನ್ನು ಕಾಣಬಹುದಾಗಿದೆ.

ಇಲ್ಲಿಯ ಹವೆ ಮತ್ತು ನೀರು ಬಹು ಗುಣಕಾರಿಯಾಗಿದೆ. ಸುತ್ತಲೂ ವಿಶಾಲವಾದ ಬೈಲುಸೀಮೆ ಇದ್ದು, ಇಲ್ಲಿ ರೋಗೋಪದ್ರವಗಳಿಗೆ ಆಸ್ಪದವಿಲ್ಲ. ತಂದ ಅನ್ನವು ಒಳ್ಳೆಯ ಪಚನವಾಗುತ್ತದೆ. ಇಲ್ಲಿಯ ಹೈನಿನಲ್ಲಿ ರುಚಿಯು ಹೆಚ್ಚು, ಕೆಮ್ಮು, ದಮ್ಮು, ಕ್ಷಯ ಮೊದಲಾದ ರೋಗಗಳು ದೂರವಾಗುತ್ತವೆ. ಈ ಪ್ರಾಂತದಲ್ಲಿ ಇದೊಂದು ಆರೋಗ್ಯ ಸ್ಥಾನವೆಂದು ತಿಳಿಯಲ್ಪಟ್ಟಿದೆ.

ಈ ಪ್ರಕಾರ ಈ ಸ್ಥಾನದ ಮಹತ್ವ ಇದ್ದು, ಇದರಲ್ಲಿ ಪುರಾತನ ಕಾಲದಿಂದ ಕರ್ನಾಟಕದಲ್ಲಿ ನಡೆದುಬಂದ ಸಂಸ್ಕೃತಿಯ ಕುರುಹುಗಳನ್ನು ಕಂಡುಹಿಡಿಯಬಹುದಾಗಿದೆ. ಇಲ್ಲಿ ಪರಶುರಾಮನಿಂದ ಹಿಡಿದು ಅನೇಕ ಮಹಾತ್ಮರ ವಾಸಸ್ಥಾನವಾಗಿದೆ ಎಂದು ಸ್ಥಳ ಪುರಾಣದಲ್ಲಿ ಉಲ್ಲೇಖವಾಗಿರುವುದನ್ನು ಹಳಕಟ್ಟಿಯವರು ಚಿತ್ರಿಸಿದ್ದಾರೆ.[೫೧]

ಮೌಖಿಕ ಆಕರಗಳು

ನಮ್ಮ ಭಾರತೀಯ ಸಂಸ್ಕೃತಿಯು ಬಹುಪಾಲು ಮೌಖಿಕವಾದ ಆಧಾರಗಳ ಹಿನ್ನೆಲೆಯಿಂದ ರಚನೆಯಾಗಿರುವುದು ಪ್ರಮುಖವಾದ ಸಂಗತಿಯಾಗಿದೆ. ಪುರಾಣಗಳ ಹಿನ್ನೆಲೆಯನ್ನು ಅವಲೋಕಿಸುವಾಗ ಅವು ಯಾವುದೇ ಲಿಖಿತವಾದ ಆಧಾರಗಳನ್ನು ಒಳಗೊಂಡಿರದೆ ಕೇವಲ ಮೌಖಿಕವಾದ ನಂಬಿಕೆಗಳಿಂದ ರಚನೆಯಾಗಿವೆ. ಈ ಹಿನ್ನೆಲೆಯಿಂದ ಪ್ರತಿಯೊಂದು ಗ್ರಾಮಗಳಲ್ಲಿಯೂ ಇಂತಹ ನಂಬಿಕೆಗಳು ಇರುತ್ತವೆ. ಗ್ರಾಮಗಳ ದೈವಗಳ ಬಗ್ಗೆ ಆಗಿರಬಹುದು ಅಥವಾ ಆ ಗ್ರಾಮನಾಮಗಳ ಹಿನ್ನೆಲೆಯಲ್ಲಿ ಆಗಿರಬಹುದು ಇಲ್ಲವೆ ಅಲ್ಲಿಯ ಆಚಾರಗಳ ಕುರಿತಾಗಿರಬಹುದು ಒಂದಲ್ಲ ಒಂದು ಮೌಖಿಕ ಆಕರವು ನಮಗೆ ದೊರೆಯುತ್ತದೆ. ಈ ಮೌಖಿಕ ಆಕರಗಳಲ್ಲಿ ನಮಗೆ ಪ್ರಮುಖವಾಗಿ ಕಾಣಸಿಗುವುದು ಐತಿಹ್ಯಗಳು ಮತ್ತು ಜಾನಪದ ಸಾಹಿತ್ಯ ಮತ್ತು ತಲೆತಲಾಂತರದಿಂದ ನಂಬಿಕೊಂಡು ಬಂದ ಆಚರಣೆಗಳು. ಮೌಖಿಕ ಆಕರಗಳು ನಮ್ಮ ಪ್ರಾಚೀನ ಜನಪದರಿಂದ ಬಾಯಿಂದ ಬಾಯಿಗೆ ಹರಿದು ಬಂದವುಗಳಾಗಿವೆ. ಹೀಗೆ ಬರುವಾಗ ಅವು ರೂಪಾಂತರಗಳನ್ನೊ ಅಥವಾ ವೈಭವೀಕರಣವನ್ನು ಹೊಂದುತ್ತಾ ಈಚಿನವರಿಗೆ ಇವನ್ನು ಹೇಗೆ

ನಂಬಬೇಕು ಅನಿಸುತ್ತದೆ. ಆದರೆ ಅಂಥ ಆಚರಣೆಗಳು ಇಂದಿಗೂ ಪ್ರಚಲಿತದಲ್ಲಿರುವುದು ನಮ್ಮ ವೈಜ್ಞಾನಿಕ ಲೋಕವನ್ನು ಚಕಿತಗೊಳಿಸುವಂತೆ ಮಾಡುತ್ತಿವೆ.

ಐತಿಹ್ಯಗಳು

ಒಂದು ಪ್ರದೇಶದ ಸ್ಥಳನಾಮವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಐತಿಹ್ಯಗಳು ಪ್ರಮುಖವಾದ ಅಂಶಗಳನ್ನು ಒದಗಿಸುತ್ತದೆ. ಈ ಐತಿಹ್ಯಗಳು ಪಾರಂಪರಿಕವಾಗಿ ನಂಬಿಕೆಗಳನ್ನು ಉಳಿಸಿಕೊಂಡು ಬಂದವುಗಳಾಗಿರುತ್ತವೆ.ಈ ಕಾರಣದಿಂದಲೆ ಇವುಗಳಿಗೆ ಮೌಲ್ಯಬಂದಂತಾಗಿದೆ. ಐತಿಹ್ಯ ಎಂಬ ಶಬ್ದಶಃ ಅರ್ಥವನ್ನು ನೋಡಿದಾಗ ಇದು ಇಂಗ್ಲೀಷ್‌ನ "ಲೆಜೆಂಡ್" ಎಂಬ ಪದದ ಸಂವಾದಿಯಾಗಿ ಕನ್ನಡದಲ್ಲಿ ಐತಿಹ್ಯವಾಗಿದೆ. ಮೂಲ "ಲೆಗ್ರೀ" ಎಂಬ ಪದದಿಂದ ಬಂದಿದೆ. "ನೆಡೆಯಿತೆಂದು ಹೇಳಲಾದ ಘಟನೆಗಳ ಸುತ್ತ ಹುಟ್ಟಿಕೊಂಡ ಕಟ್ಟುಕತೆಗಳೇ ಐತಿಹ್ಯಗಳು"[೫೨] ಎಂದು ತಿಳಿಯಬಹುದು. ಈ ಹೇಳಿಕೆಯನ್ನು ಗಮನಿಸಿದಾಗ ಯಾವುದೇ ಒಂದು ಕಾಲದಲ್ಲಿ ಘಟಿಸಿದ ಘಟನೆ, ಕಾಲ್ಪನಿಕತೆ ಪಡೆದು ಕಟ್ಟುಕತೆಯಾಗಿ ಮಾರ್ಪಟ್ಟು ಐತಿಹ್ಯವಾಗಿರುತ್ತದೆ ಎನ್ನಬಹುದು ಆದರೆ ಯಾವುದೇ ಐತಿಹ್ಯವಿರಲಿ ಅದಕ್ಕೆ ವಾಸ್ತವದ ಸ್ಪರ್ಶ ಕಿಂಚಿತ್ತಾದರೂ ಇದ್ದೇ ಇರುತ್ತದೆ ಎಂದು ನಂಬಬೇಕಾಗುತ್ತದೆ. ಒಟ್ಟಿನಲ್ಲಿ ಐತಿಹಾಸಿಕ ಅಂಶಗಳ ಹುಡುಕಾಟಕ್ಕೆ ಐತಿಹ್ಯಗಳು ಕೈದೀಪಗಳು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಮಾನವನ ಗತ ಇತಿಹಾಸವು ಬಹುಪಾಲು ಇಂತಹ ಹೇಳಿಕೆಯ ನಂಬಿಕೆಯಿಂದಲೇ ರಚಿತವಾಗಿದೆ. ಎಲ್ಲ ಮೂಲಗಳಿಗೂ ಲಿಖಿತವಾದ ಆಧಾರಗಳು ದೊರೆಯದೇ ಹೋದಾಗ ಇಂತಹ ಐತಿಹ್ಯಗಳು ಬೆಳಕು ಚೆಲ್ಲುತ್ತವೆ.

ಐತಿಹ್ಯಗಳು ಇತಿಹಾಸದ ಅಂಶವನ್ನು ಒಳಗೊಂಡಿದ್ದು ಸ್ಥಳೀಯವಾಗಿರುತ್ತವೆ. ಚರಿತ್ರೆಗೆ ಸ್ಥಳೀಯರು ತಮ್ಮ ಪರಿಸರದ ಸಂಬಂಧವನ್ನು ಕಲ್ಪಿಸುವ ಕತೆಯೇ ಐತಿಹ್ಯ"[೫೩] ಇವು ಪ್ರಾರಂಭದಲ್ಲಿ ಸಂಕ್ಷಿಪ್ತವೂ ಸರಳವೂ ಆಗಿದ್ದವು. ಕ್ರಮೇಣ ಉತ್ಪ್ರೇಕ್ಷಿತ ವಿವರಣೆಗಳಿಂದ ಕೂಡಿ ದೀರ್ಘವೂ, ಕಾಲ್ಪನಿಕವೂ ಆದವು. ಒಟ್ಟಿನಲ್ಲಿ ಇದು ಸ್ಥಳೀಯವಾದದ್ದು, ಮಣ್ಣಿಗೆ ಹತ್ತಿರವಾದದ್ದು ಮತ್ತು ಚಾರಿತ್ರಿಕ ಸಮಂಜಸತೆಯನ್ನು ಉಳ್ಳದ್ದು ಎಂಬುದಾಗಿ ಅಭಿಪ್ರಾಯಪಡಬಹುದು. ಐತಿಹ್ಯಕ್ಕೆ ನಾಜೂಕಾದ ಶೈಲಿ ಇರುವುದಿಲ್ಲ. ಐತಿಹ್ಯ ಅಸಾಧಾರಣ ವಿಷಯ ಒಂದನ್ನು ವಿವರಿಸುವ ಇಲ್ಲವೆ ಸ್ಮರಣೀಯ ಘಟನೆಯೊಂದನ್ನು ನಿರೂಪಿಸಬಹುದು.

ನಮ್ಮ ನಾಡಿನಲ್ಲಿಯೂ ಬಹಳಷ್ಟು ಪ್ರಮಾಣದಲ್ಲಿ ಐತಿಹ್ಯಗಳು ಸಿಕ್ಕಿರುವುದನ್ನು ಕಾಣುತ್ತೇವೆ. ಸ್ಥಳೀಯ ಎಲ್ಲ ಪ್ರಕಾರಗಳಲ್ಲಿಯೂ ಒಂದೊಂದು ಬಗೆಯಲ್ಲಿ ನಿರೂಪಿತಗೊಂಡಿದೆ. ಇವುಗಳನ್ನು ಜನಪದ ಕತೆಗಳಂತೆ ಸಂಗ್ರಹಿಸಲು ಸಾಧ್ಯವಿಲ್ಲ. ಜನಪದ ಕತೆಯಲ್ಲಿ ವೃತ್ತಿ, ಕಥೆಗಾರಿಕೆ ಇರುವುದು ಸಹಜ ಆದರೆ ಐತಿಹ್ಯಗಳನ್ನು ಸಂಭಾಷಣೆ ಮೂಲಕವೇ ಸಂಗ್ರಹಿಸಬೇಕಾಗುತ್ತದೆ. ಆಸಕ್ತಿ ವಿಷಯಗಳ ಪ್ರಸ್ತಾಪದ ನಡುವೆ, ವಿರಾಮದ ವೇಳೆ ಅಥವಾ ಕೆಲಸದ ಸಮಯಗಳಲ್ಲಿ, ಸ್ಥಳೀಯ ವೀರರ, ದೇವರುಗಳ, ಪ್ರಾಕೃತಿಕ ವಿಶೇಷಗಳ ವಿಚಾರ ಕಂಡುಬರುತ್ತದೆ.

ಕೂಡಲಸಂಗಮಕ್ಕೆ ಸಂಬಂಧಿಸಿದಂತೆ ಐತಿಹ್ಯಗಳನ್ನು ಹುಡುಕ ಹೊರಟಾಗ ಈ ಕ್ಷೇತ್ರದ ಸುತ್ತಮುತ್ತಲ ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತವೆ. ಸಂಗಮನಾಥ ದೇವರ ವಿಚಾರವಾಗಿ ಹೆಚ್ಚಿನ ಪ್ರಮಾಣದಲ್ಲಿ ಐತಿಹ್ಯಗಳಿವೆ. ಸಂಗಮನಾಥ ತೇರನ್ನು ಎಳೆಯು ಸಂದರ್ಭವನ್ನು ಕುರಿತಂತೆ ಮತ್ತು ಸಂಗಮನಾಥ ದೇವರ ಬಗ್ಗೆ ಇರುವಂಥ ಐತಿಹ್ಯಗಳೇ ಅಧಿಕವಾಗಿವೆ. ತೇರನ್ನು ಎಳೆಯುವ ಸಂದರ್ಭದಲ್ಲಿ ಒಂದೊಂದು ಊರಿನಿಂದಲೂ ಒಂದೊಂದು ವಸ್ತುಗಳನ್ನು ತರುವುದರ ಹಿಂದಿನ ಸ್ವಾರಸ್ಯಕರವಾದ ಐತಿಹ್ಯಗಳು ಮೂಡಿ ಬಂದಿರುವುದನ್ನು ಈ ರೀತಿಯಿಂದ ತಿಳಿಯಬಹುದಾಗಿದೆ.

ಗಂಜಿನಾಳದಿಂದ ತರುವಂಥ ನಂದಿಕೋಲಿನ ವಿಚಾರವಾಗಿ ಗಂಜಿನಾಳದ ಗ್ರಾಮಸ್ಥರನ್ನು ಸಂದರ್ಶನ ಮಾಡಿದಾಗ ಸಂಗಮನಾಥನ ಜಾತ್ರೆಗೆ ತರುವ ನಂದಿಕೋಲಿನ ಐತಿಹ್ಯ ಒಂದು ವಿಶಿಷ್ಟವಾದ ಮತ್ತು ನಂಬಲು ಅರ್ಹವಾದಂಥ ವಿಚಾರವನ್ನು ತಿಳಿಸುತ್ತದೆ. ರಥವನ್ನು ಎಳೆಯುವುದಕ್ಕಿಂತ ಮುಂಚಿತವಾಗಿ ಗಂಜಿನಾಳದಿಂದ ನಂದಿಕೋಲನ್ನು ಮತ್ತು ತರಗ ಬಾಳೆಕಂಬವನ್ನು ತರುತ್ತಾರೆ. ಇದಕ್ಕೆ ಕಾರಣವೇನು, ನಿಮ್ಮ ಗ್ರಾಮದಿಂದಲೇ ಏಕೆ ಅಗುಳವನ್ನು ಒಯ್ಯುತ್ತಾರೆ ಎಂಬ ಪ್ರಶ್ನೆಗಳನ್ನು ಬಹಳಷ್ಟು ಜನ ಗ್ರಾಮದ ಹಿರಿಯರನ್ನು ಮತ್ತು ಮುಖಂಡರನ್ನು ಕೇಳಿದಾಗ ಬಹಳ ಜನರ ನಮಗೆ ಬಾಬನ್ನು (ಬಾಪ್ತು) ಕೊಟ್ಟಿದ್ದಾರೆ ಎಂಬ ಉತ್ತರವೇ ಬರುತ್ತದೆ. ಇದು ಪರಂಪರಾಗತವಾಗಿ ನಮ್ಮ ಗ್ರಾಮದಿಂದಲೇ ಬಂದಿರುವುದೆಂದು ಹೇಳುತ್ತಾರೆ. ಅದೇ ತೆರನಾಗಿ ಜಹಗೀರದಾರರ ಮನೆತನದವರನ್ನು ವಿಚಾರಿಸಿದಾಗ

"ನಮ್ಮ ಪೂರ್ವಜರು ಸಂಗಮನಾಥನ ದೇವಾಲಯಕ್ಕೆ
ಭೂಮಿಯನ್ನು ದಾನ ಮಾಡಿದ್ದರಂತೆ
ಸಂಗಮದ ಪೂಜಾರಿಗಳಿಗೆ ಅದನ್ನು
ನೀಡಿದ್ದರಂತೆ ಆ ಭೂಮಿಯು ಇಂದಿಗೂ
ನಮ್ಮೂರಿನಲ್ಲಿ ಸಂಗಮದ ಮನೆತನದವರು
ನಿರ್ವಹಿಸುತ್ತಿದ್ದಾರೆ"[೫೪]

ಎಂದು ಜಹಗೀರದಾರ ಕುಟುಂಬದವರು ಉತ್ತರಿಸುತ್ತಾರೆ. ಅಂದರೆ ಗಂಜಿನಾಳಕ್ಕೆ ಬಾಬನ್ನು ಈ ಕಾರಣಕ್ಕೆ ಕೊಟ್ಟಿರಬಹುದು ಎಂಬ ಅಭಿಪ್ರಾಯವನ್ನು ಹೇಳುತ್ತಾರೆ. ಗಂಜಿನಾಳದಿಂದಲೂ ಅಪಾರ ಪ್ರಮಾಣದ ಭಕ್ತರು ಸಂಗಮನಾಥನ ತೇರಿಗೆ ಬರುತ್ತಿರುವುದರಿಂದ ಆ ಊರಿನವರಿಗೆ ಈ ಜವಾಬ್ದಾರಿಯನ್ನು ನೀಡಿದ್ದಾರೆ ಎಂದು ಊಹಿಸಬಹುದಾಗಿದೆ.

ಮತ್ತೊಂದು ಈ ಗ್ರಾಮದಲ್ಲಿಯ ಪ್ರಮುಖ ನಂಬಿಕೆ ಮತ್ತು ಐತಿಹ್ಯವೆಂದರೆ ಸಂಗಮನಾಥನ ತೇರನ್ನು ಎಳೆಯುವ ಸಂದರ್ಭದಲ್ಲಿ ನಂದಿಕೋಲನ್ನು ತೇರಿನ ಮುಂದೆ ಏಕೆ ತೆಗೆದುಕೊಂಡು ಹೋಗುತ್ತಾರೆ ಎಂಬ ವಿಚಾರವನ್ನು ಈ ರೀತಿಯಾಗಿ ವಿವರಿಸುತ್ತಾರೆ.

ಸಂಗಮನಾಥ ಸ್ವಾಮಿಯು ರಥದಲ್ಲಿ ಕುಳಿತಾಗ ಅದನ್ನು ಎಳೆಯುವಂಥವನು ನಮ್ಮ ನಂದಿ ಅಂದರೆ ನಂದಿಯ ಪ್ರತೀಕವಾಗಿರುವಂಥ ನಂದಿಕೋಲು. ದೇವಾಲಯಗಳಲ್ಲಿ ಲಿಂಗದ ಮುಂದೆ ನಂದಿಯನ್ನು ಪ್ರತಿಷ್ಠಾಪಿಸುವುದರ ಸಂಕೇತವಾಗಿ ಈ ಪರಂಪರೆಯನ್ನು ನಾವು ಆಚರಿಸುತ್ತೇವೆ ಎನ್ನುವಂಥ ನಂಬಿಕೆಗಳಿವೆ.

ಅಂದರೆ ದೇವಾಲಯದಲ್ಲಿಯ ಸಂಗಮನಾಥನನ್ನು ರಥದ ಮೇಲೆ ಕುಳ್ಳಿರಿಸಿ ಎಳೆಯಬೇಕಾದರೆ ಅಲ್ಲಿ ನಂದಿಯ ಪ್ರತಿರೂಪವಾದ ನಂದಿಕೋಲು ಇರಲೇಬೇಕು ಎಂಬ ಪ್ರತೀತಿಯನ್ನು ನಂಬಿಕೊಂಡು ಬಂದಿದ್ದಾರೆ. ನಂದಿ ಎನ್ನುವಂಥದ್ದು ಶಿವನ ವಾಹನ ಎಂಬ ನಂಬಿಕೆಯಿಂದ ಪ್ರತಿವರ್ಷ ಜಾತ್ರೆಯ ಸಂದರ್ಭದಲ್ಲಿ ಕೂಡಲಸಂಗಮಕ್ಕೆ ನಂದಿಕೋಲನ್ನು ತರುವ ಪದ್ಧತಿಯನ್ನು ಕಾಣಬಹುದಾಗಿದೆ.

ಅದೇ ರೀತಿಯಾಗಿ ಮತ್ತೊಂದು ಐತಿಹ್ಯವನ್ನು ಕುರಿತಂತೆ ಇಲ್ಲಿಯ ಗ್ರಾಮಸ್ಥರು ತಿಳಿಸುವ ವಿಚಾರವೆಂದರೆ, ತರಗವನ್ನು ತರುವುದರ ಬಗ್ಗೆ ಅಂದರೆ ನಂದಿಕೋಲಿನ ಜೊತೆಯಲ್ಲಿ ತರಗನ್ನು ಯಾಕೆ ತರುತ್ತಾರೆ? ಎಂಬ ವಿಷಯವನ್ನು ಕುರಿತು ಹೇಳುತ್ತಾರೆ. ರಥವನ್ನು ನಂದಿ ಎಳೆದು ಆಯಾಸವಾದಾಗ ಹಾಗೆ ಈ ತರಗವನ್ನು ತಿನ್ನುತ್ತಾನೆ ಎಂಬ ಅಂಶವನ್ನು ತಿಳಿಸುತ್ತಾರೆ. ಸಂಗಮನಾಥನ ತೇರನ್ನು ನಂದಿಯು ಎಳೆಯುತ್ತಾನೆ. ಈ ತೇರನ್ನು ಎಳೆಯುವಾಗ ಅವನಿಗೆ ಆಯಾಸವಾಗುತ್ತದೆ. ಅದನ್ನು ನೀಗಿಸಿಕೊಂಡು ಸುಧಾರಿಸಿಕೊಳ್ಳುತ್ತಾನೆ. ನಂದಿಯು ಸಮಾಧಾನದಿಂದ ಇದ್ದಾಗ ಮಾತ್ರ ನಾವೆಲ್ಲರು ಸಂತೋಷದಿಂದ ಇರಲು ಸಾಧ್ಯ ಮತ್ತು ನಮ್ಮ ಹೊಲವನ್ನು ಊಳುವಂಥ ಎತ್ತುಗಳು ಸಹ ನಂದಿಯ ಸ್ವರೂಪಗಳು ಅವಕ್ಕೆ ಯಾವ ರೋಗ-ರುಜಿನಗಳು ಬರಬಾರದು ಎಂಬ ನಂಬಿಕೆಯಿಂದ ಕಡಲೆ ಹಾಗೂ ಇತರ ಕಾಳುಗಳಿಂದ ತಯಾರಿಸಿದಂಥ 'ತರಗ' ನ್ನು ನಾವು ಬುಟ್ಟಿಯಲ್ಲಿ ಪ್ರಸಾದದ ರೂಪದಲ್ಲಿ ತೆಗೆದುಕೊಂಡು ಹೋಗುತ್ತೇವೆ ಎಂದು ಗ್ರಾಮದ ಹಿರಿಯರಾದ ಕೂಡ್ಲಯ್ಯ ಈರಯ್ಯ ಅರವಟಿಗಿ ಮತ್ತು ಗುರನಗೌಡ ಪಾಟೀಲ ಅವರು ಅಭಿಪ್ರಾಯಪಡುತ್ತಾರೆ. ಕೂಡಲಸಂಗಮದ ಸಂಗಮೇಶ್ವರನನ್ನು ಮನೆಯ ದೇವರು ಮಾಡಿಕೊಂಡಿರುವ ಈ ಗ್ರಾಮದಲ್ಲಿ ಬಹುಸಂಖ್ಯಾತ ಜನರಿದ್ದಾರೆ. ಒಕ್ಕಲುತನ ಪ್ರಧಾನವಾಗಿರುವುದರಿಂದ ಇಲ್ಲಿಯ ಜನರ ನಂಬಿಕೆ ಸಹಜವಾಗಿರುವಂಥದ್ದು ಎಂದು ಹೇಳಬಹುದು.

ಕೂಡಲಸಂಗಮದಿಂದ ಸುಮಾರು ಹನ್ನೆರಡು ಕಿಲೋಮೀಟರ್ ದೂರವಿರುವಂಥ ಬೆಳಗಲ್ಲಿನಲ್ಲಿಯು ಒಂದು ಪ್ರಮುಖವಾದ ಐತಿಹ್ಯವನ್ನು ಹೇಳುತ್ತಾರೆ. ಬೆಳಗಲ್ಲಿನಲ್ಲಿ ಸಂಗಮನಾಥನ ದೇವಾಲಯ ನಿರ್ಮಾಣವನ್ನು ಮಾಡುವ ಕಾಲಕ್ಕೆ ಇಲ್ಲಿಯಿಂದಲೇ ಕಲ್ಲುಗಳನ್ನು ತೆಗೆದುಕೊಂಡು ಹೋಗಲಾಗಿದೆ ಎಂದು ಪ್ರತೀತಿ ಇದೆ. ಅದನ್ನು ಒಪ್ಪಬಹುದು ಎಂಬಂತೆ ರಾಷ್ಟ್ರೀಯ ಹೆದ್ದಾರಿ ೧೩ರ ಹತ್ತಿರ ಬೆಳಗಲ್ ಕ್ರಾಸ್‌ನ ಬಳಿ ಒಂದು ಬೃಹತ್ತಾದ ಬಂಡೆಯ ಮೇಲೆ ತಲನಕ್ಷೆಯನ್ನು ಹಾಕಲಾಗಿದೆ. ಸುಮಾರು ೧೯೫೬ರ ಸುಮಾರಿಗೆ ಆ ನಕ್ಷಾ ಚಿತ್ರವನ್ನು ಹಾಳಾಗದಂತೆ ತಡೆಯುವ ನಿಟ್ಟಿನಲ್ಲಿ

ಸುತ್ತಲೂ ಚೌಕಾಕಾರದ ಗೋಡೆಯನ್ನು ನಾಲ್ಕು ಅಡಿ ಎತ್ತರದವರೆಗೆ ನಿರ್ಮಿಸಿ ರಕ್ಷಣೆಯನ್ನು ಮಾಡಿದ್ದಾರೆ ಊರಿನ ಜನರು.

ಈ ನಕ್ಷೆಯ ಹಿನ್ನೆಲೆಯಿಂದ ಊರಿನಲ್ಲಿ ಒಂದು ನಂಬಿಕೆ ಇದೆ ಸಂಗಮನಾಥನ ದೇವಾಲಯವನ್ನು ಕಟ್ಟುವ ಸಂದರ್ಭದಲ್ಲಿ ಇಲ್ಲಿಂದಲೇ ಕಲ್ಲುಗಳನ್ನು ಒಯ್ಯುತ್ತಿದ್ದರು. ದೇವಾಲಯದ ಸುತ್ತಲೂ ಗೋಡೆಯ ನಿರ್ಮಾಣವನ್ನು ಇಲ್ಲಿಯ ಕಲ್ಲುಗಳಿಂದಲೇ ನಿರ್ಮಿಸಲಾಗಿದೆ ಎಂದು ಹೇಳುತ್ತಾರೆ. ಕಲ್ಲುಗಳನ್ನು ಒಡೆಯುವ ಆಯುಧಗಳನ್ನು ಪ್ರತಿನಿತ್ಯ ಕೆತ್ತಲಾದ ಸಂದರ್ಭ ಒಂದು ಗುಹೆಯಲ್ಲಿ ಇಡಲಾಗುತ್ತಿತ್ತು. ಮತ್ತೆ ಬೆಳಕು ಹರಿದ ಮೇಲೆ ಅವುಗಳನ್ನು ತೆಗೆದುಕೊಳ್ಳಲಾಗುತ್ತಿತ್ತು ಎನ್ನುತ್ತಾರೆ. ಮುಂದೆ ಸ್ವಾರಸ್ಯಕರವಾದ ಅಂಶ ಒಂದನ್ನು ಹೇಳುತ್ತಾರೆ. ಆದರೆ ಆ ವಿಚಾರಗಳು ಎಷ್ಟರಮಟ್ಟಿಗೆ ಸರಿಯಾದವು ಎಂದು ತಿಳಿಯುವುದು ಕಷ್ಟಸಾಧ್ಯವಾದ ವಿಷಯವಾಗಿದೆ.

"ಗುಹೆಯಲ್ಲಿ ಇಡುತ್ತಿದ್ದ ಆಯುಧಗಳು ದೇವಸ್ಥಾನ ನಿರ್ಮಾಣವಾದ ನಂತರದಲ್ಲಿ ಆ ಎಲ್ಲ ಆಯುಧಗಳನ್ನು ಗುಹೆಯೊಳಗೆ ಹಾಕಿ ಮುಚ್ಚಲಾಯಿತು. ಆ ಆಯುಧಗಳನ್ನು ಲಕ್ಷ್ಮೀ ಎಂಬ ಸರ್ಪವು ಕಾವಲಾಗಿವೆ" ಎಂದು ಜನ ಈಗಲೂ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ. ಸಂಗಮನಾಥನು ಈ ಊರನ್ನು ಹಾವಿನ ರೂಪದಲ್ಲಿ ಕಾಯುತ್ತಾನೆ ಎಂಬ ವಿಚಾರಗಳನ್ನು ಬಹಳ ಪ್ರಾಚೀನ ಕಾಲದಿಂದಲೂ ನಂಬಿಕೊಂಡು ಬಂದಿದ್ದಾರೆ. ಬೆಳಗಲ್ಲಿನಲ್ಲಿರುವ ಸಂಗಮನಾಥನ ದೇವಾಲಯದ ನಕ್ಷೆಯೆಂದು ಕರೆಯಲ್ಪಡುವ ಆ ರೇಖಾಚಿತ್ರದ ಹಿನ್ನೆಲೆಯಿಂದ ಮತ್ತು ಬೆಳಗಲ್ಲಿನಲ್ಲಿರುವ ಕಲ್ಲುಗಳಿಗೂ ಮತ್ತು ದೇವಾಲಯದ ಕಲ್ಲಿಗೂ ಸಾಮ್ಯವಿರುವುದರಿಂದ ಜನರ ಐತಿಹ್ಯವನ್ನು ಒಪ್ಪಿಕೊಳ್ಳಬಹುದು ಎನಿಸುತ್ತದೆ. ಆದರೆ ಸರ್ಪವು ಕಾವಲಿದೆ ಎನ್ನುವುದು ಮತ್ತು ಗುಹೆಯ ಒಳಗೆ ದೇವಾಲಯ ನಿರ್ಮಾಣಕ್ಕೆ ಬಳಸಿದ ಆಯುಧಗಳನ್ನು ಮುಚ್ಚಲಾಗಿದೆ ಎನ್ನುವುದು ಸ್ವಲ್ಪ ಅನುಮಾನಕ್ಕೆ ಕಾರಣವಾಗಿದೆ. ಸಂಗಮನಾಥನ ದೇವಾಲಯದ ತಲನಕ್ಷೆ ಸಿಕ್ಕಿರುವ ಈ ಪ್ರದೇಶದಲ್ಲಿ ಮತ್ತೊಂದು ಪ್ರತೀತಿ ಇರುವುದನ್ನು ಜನರು ನಂಬಿಕೊಂಡು ಬಂದಿದ್ದಾರೆ. ತಲನಕ್ಷೆಯ ಸಮೀಪದಲ್ಲಿಯೇ ಮಳೆಯಪ್ಪಯ್ಯನ ಗುಡಿ ಎನ್ನುವ ಒಂದು ಸಣ್ಣ ಗುಡಿಯಿದೆ. ಇಲ್ಲಿ ಯಾವುದೇ ಮೂರ್ತಿ ಇಲ್ಲ. ಆದರೆ ಸೂರ್ಯ ಮತ್ತು ಚಂದ್ರನ ಚಿತ್ರವಿರುತ್ತದೆ. ಈ ಚಿತ್ರವನ್ನು ಒಂದು ಬೃಹತ್ತಾದ ಬಂಡೆಯ ಮೇಲೆ ಕೆತ್ತಲಾಗಿದೆ. ಚಿತ್ರವಿರುವ ಕಡೆಯಲ್ಲಿ ಸಣ್ಣ ಗವಿ ರೂಪದ ಗುಡಿಯನ್ನು ಕಟ್ಟಿದ್ದಾರೆ. ಇದರ ಕುರುಹಿನ ಹಿನ್ನೆಲೆಯಿಂದ ಜನರು ಒಂದು ಪ್ರತೀತಿಯನ್ನು ನಂಬಿಕೊಂಡು ಬಂದಿದ್ದಾರೆ.

ಮಳೆಗಾಲ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಗ್ರಾಮದ ಜನರು ಈ ಮಳೆಯಪ್ಪನ ಗುಡಿಗೆ ಬಂದು ಪ್ರಸಾದವನ್ನು ಮಾಡುತ್ತಾರೆ. ಆ ಪ್ರಸಾದವು ಜೋಳದ ನುಚ್ಚಿನಿಂದ ಮಾಡಿದ್ದಾಗಿರುತ್ತದೆ. ಜನರು ಪ್ರಸಾದವನ್ನು ತೆಗೆದುಕೊಂಡು ಆದ ಮೇಲೆ ನೀರು... ನೀರು... ಎಂದು ಓಡಿ ಬರುತ್ತಾರೆ. ಹೀಗೆ ಬರುವುದನ್ನು ನೋಡಿ ಕೂಡಲಸಂಗಮದ ಸಂಗಮೇಶ್ವರ ದೇವರು ನೋಡಿ ಇವರಿಗೆ ನೀರಿನ ಕಷ್ಟವಿದೆ ಎಂದು ತಿಳಿದು ಮಳೆಯನ್ನು ಸುರಿಸುತ್ತಾನೆ. ಈ ಕಾರಣದಿಂದಲೇ ಇದಕ್ಕೆ ಮಳೆಯಪ್ಪಯ್ಯನ ಗುಡಿ ಎಂದು ಕರೆಯುತ್ತಿದ್ದಾರೆ.

ಕೂಡಲಸಂಗಮದ ಸಂಗಮನಾಥನಿಗೆ ಸಂಬಂಧಿಸಿದ ಐತಿಹ್ಯಗಳು ಹತ್ತು ಹಲವಾರು. ಸುತ್ತಮುತ್ತಲ ಗ್ರಾಮದಲ್ಲಿಯೂ ಇಂಥಹ ಐತಿಹ್ಯಗಳು ಹುಟ್ಟಿಕೊಂಡಿವೆ. ಮನುಷ್ಯ ಒಂದು ಕಡೆ ನಿಂತು ಜೀವನವನ್ನು ನಡೆಸಲು ಹೇಗೆ ಸಾಧ್ಯವಿಲ್ಲವೋ ಅದೇ ರೀತಿಯ ಕಲ್ಪನೆಗಳನ್ನು ದೇವರ ಬಗ್ಗೆಯೂ ಇಟ್ಟುಕೊಂಡ ಜನಗಳಿದ್ದರು ಎನ್ನುವುದು ಬಹಳ ಪ್ರಮುಖವಾದ ಅಂಶವಾಗಿದೆ. ಇಂತಹ ಒಂದು ವಿಚಾರವನ್ನು ಇದ್ದಲಗಿಯ ಜನರು ಹೊಂದಿದ್ದಾರೆ. ಸಂಗಮನಾಥನ ಜಾತ್ರೆಯ ಸಂದರ್ಭದಲ್ಲಿ ಇದ್ದಲಗಿಯಿಂದ ಹಿಲಾಲನ್ನು ತರುವ ಸಂಪ್ರದಾಯವಿದೆ. ಈ ಸಂಪ್ರದಾಯದ ಹಿನ್ನೆಲೆಯನ್ನು ಕೇಳಿದಾಗ ಗ್ರಾಮದ ಹಿರಿಯರು ಅಲ್ಲಿ ಜನಜನಿತವಾಗಿದ್ದ ಐತಿಹ್ಯವನ್ನು ಈ ರೀತಿಯಾಗಿ ವಿವರಿಸಿದ್ದಾರೆ. ಕೂಡಲಸಂಗಮೇಶ್ವರನು ರಾತ್ರಿಯ ಸಂದರ್ಭದಲ್ಲಿ ಲೋಕ ಪರ್ಯಾಟನೆಯನ್ನು ಮಾಡುತ್ತಾನೆ. ಹೀಗೆ ಪ್ರಯಾಣವನ್ನು ಮಾಡುವ ಸಂದರ್ಭದಲ್ಲಿ ಇದ್ದಲಿಗಿಗೆ ಬಂದು ಒಮ್ಮೆ ನೆಲೆಸುತ್ತಾನೆ. ಆದರೆ ಅಂದಿನ ದಿನ ಅವನು ಕೂಡಲಸಂಗಮಕ್ಕೆ ಹೋಗೇ ತೀರಬೇಕೆಂಬ ಅನಿಸಿಕೆಯಾಗುತ್ತದೆ. ಆಗ ತನ್ನ ಭಕ್ತರಿಗೆ ಈ ಮಲಪ್ರಭೆಯನ್ನು ದಾಟಿ ನಾನು ಹೋಗಬೇಕು ತುಂಬ ಕತ್ತಲಾಗಿದೆ. ಎಂದು ಅಂದುಕೊಂಡಾಗ ಆ ಊರಿನ ಪ್ರಮುಖರೆಲ್ಲರೂ ಸೇರಿ ದೇವಾ ನಾವೇನು ಮಾಡಬೇಕು ಹೇಳಿ ಅಂದಾಗ ಹಿಲಾಲಿನಿಂದ ಬೆಳಕನ್ನು ತೋರಿಸಿ ಎಂದು ಹೇಳುತ್ತಾನೆ. ಸಂಗಮನಾಥನ ಮಾತಿನಂತೆ ಹಿಲಾಲನ್ನು ತೆಗೆದುಕೊಂಡು ಹೋಗಿ ಕೂಡಲಸಂಗಮವನ್ನು ತಲುಪಿಸಿ ಬಂದರು ಎನ್ನುವ ಅಂಶವನ್ನು ಐತಿಹ್ಯದ ಮೂಲಕ ಇಂದಿಗೂ ಈ ಗ್ರಾಮದಲ್ಲಿ ಪ್ರತೀತಿ ಇರುವುದನ್ನು ನಂಬಿಕೊಂಡು ಬಂದಿದ್ದಾರೆ. ಮತ್ತು ಪ್ರತಿವರ್ಷ ಜಾತ್ರೆಯ ಸಂದರ್ಭದಲ್ಲಿ ಊರಿನ ದೈವದರೆಲ್ಲ ತಮ್ಮ ಬಾಬ್ತಿನ ಮೂಲಕ ಹಿಲಾಲನ್ನು ಒಯ್ಯುತ್ತಾರೆ.

ಆದರೆ ಇದೆ ಹಿಲಾಲದ ಒಂದು ವಿಚಾರವನ್ನು ಮತ್ತೆ ಕೆಲವರು ಬೇರೆ ರೀತಿಯಲ್ಲಿ ಅರ್ಥೈಸಿದ್ದಾರೆ. ಬಹುಶಃ ಇದು ಸತ್ಯ ಸಮೀಪವಿರಬಹುದು ಎಂದೆನಿಸುತ್ತದೆ. ಸಂಗಮನಾಥನ ಬಾಬ್ತುಗಳನ್ನು ನಮ್ಮೂರು ಕೊಟ್ಟಿರುವಂಥದ್ದು ಮತ್ತು ಅದರ ಉದ್ದೇಶವೆಂದರೆ ತೇರನ್ನು ಎಳೆಯುವಾಗ ಕತ್ತಲಾಗುತ್ತಿತ್ತು. ಕತ್ತಲಿನಲ್ಲಿ ತೇರನ್ನು ಎಳೆಯುವುದು ಸರಿಯಲ್ಲವೆಂದು ತಿಳಿದು ಮತ್ತು ರಥದ ಮುಂದೆ ಬೆಳಕು ಇರಬೇಕೆಂಬ ಉದ್ದೇಶದಿಂದ ಹಿಲಾಲನ್ನು ಹಿಡಿಯುತ್ತಾರೆಂದು ಹೇಳುತ್ತಾರೆ. ಆದರೆ ಪ್ರಾಚೀನ ಕಾಲದಿಂದಲೂ ತೇರನ್ನು ಸಾಯಂಕಾಲ ಎಳೆದು ಮುಗಿಸುವುದು ರೂಢಿಯಲ್ಲಿದೆ. ಹೀಗಾಗಿ ಹಿಲಾಲನ್ನು ದೇವರ ಮುಂದೆ ಹಿಡಿಯುವುದು ಬೆಳಕಿನ ಸಂಕೇತವಾಗಿದೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ.

ಕೂಡಲಸಂಗಮದಲ್ಲಿ ಇರುವಂಥ ಒಂದು ಐತಿಹ್ಯವೆಂದರೆ ಸಂಗಮನಾಥನ ದೇವಾಲಯದ ಮುಂದೆ ಇರುವಂಥ ಪಾದಗಟ್ಟೆಯನ್ನು ಕುರಿತದ್ದಾಗಿದೆ. ಈ ಪಾದಗಟ್ಟೆಯಲ್ಲಿ ಇರುವಂಥ ಪಾದಗಳನ್ನು ಸಂಗಮನಾಥನು ಧರಿಸಿ ರಾತ್ರಿಯಲ್ಲ ಪ್ರಯಾಣವನ್ನು ಮಾಡುತ್ತಾನೆ. ಲೋಕ ಸಂಚಾರ ಮಾಡುತ್ತಾನೆ. ಅವು ವರ್ಷದಿಂದ ವರ್ಷಕ್ಕೆ ಸವೆಯುತ್ತವೆ ಎಂಬುದು ನಂಬಿಕೆಯಾಗಿದೆ.

ಬಂಗಾರದ ಕಳಸಕ್ಕೆ ಸಂಬಂಧಿಸಿದಂತೆ ಇರುವ ಐತಿಹ್ಯವು ಅತ್ಯಂತ ಪ್ರಾಚೀನವೂ ಮತ್ತು ಕೂಡಲಸಂಗಮನಾಥನ ದೈವ ಕೇಂದ್ರಿತ ನಂಬಿಕೆಯಿಂದ ಇಂದಿಗೂ ಆಚರಣೆಯಲ್ಲಿ ನಡೆದುಕೊಂಡು ಬಂದಿರುವುದನ್ನು ಕಾಣುತ್ತೇವೆ. ಈ ಐತಿಹ್ಯವು ಇತಿಹಾಸವನ್ನು ಸಹ ಕಟ್ಟಿಕೊಡಬಲ್ಲ ಪ್ರಾಮುಖ್ಯತೆಯನ್ನು ಪಡೆದುಕೊಂಡು ಬಂದಿದೆ. ಇದರ ಮಹತ್ವವನ್ನು ಸಾರುವಂಥ ಲಾವಣಿ ಪದಗಳು ರಚನೆಯಾಗಿವೆ. ಇವೆಲ್ಲವುಗಳ ಹಿನ್ನೆಲೆಯಿಂದ ಕೂಡಲಸಂಗಮನಾಥನ ದೈವತ್ವದ ಪ್ರಭಾವ ಇಂದಿಗೂ ಹೆಚ್ಚಾಗುತ್ತಿದೆ ಹೊರತು ಕಡಿಮೆಯಾಗಿಲ್ಲ. ಈ ಕಾರಣದಿಂದ ಈ ಕ್ಷೇತ್ರ ಪವಿತ್ರ ಧಾರ್ಮಿಕ ಕೇಂದ್ರಗಳಲ್ಲಿ ಒಂದಾಗಿ ತನ್ನದೇ ಆದ ಮಹತ್ವವನ್ನು ಹೊಂದಿ ಜನಾಕರ್ಷಣೆಯ ಕೇಂದ್ರಬಿಂದುವಾಗಿದೆ.

ಸಂಗಮನಾಥನ ತೇರಿನ ವಿಚಾರಗಳು ಬಂದಾಗ ಅದರ ಪ್ರಾಚೀನತೆಯನ್ನು ಸುಮಾರು ೧೫೦ ವರ್ಷಗಳ ಇತಿಹಾಸವಿದೆ ಎಂದು ಈ ಐತಿಹ್ಯದಿಂದ ತಿಳಿಯಬಹುದು. ಈ ತೇರನ್ನು ಎಳೆಯುವ ಪ್ರಾರಂಭಿಕ ದಿನಗಳಲ್ಲಿ ಕಳಸವನ್ನು ಮಾಡಿದರು ಯಾರು? ಮತ್ತು ಅದನ್ನು ಎಲ್ಲಿಂದ ತರಲಾಗುತ್ತಿತ್ತು? ಎಂಬ ಅಂಶಗಳನ್ನು ಕುರಿತಂತೆ ಯಾವುದೇ ಲಿಖಿತವಾದ ಆಧಾರಗಳು ದೊರೆಯುವುದಿಲ್ಲ. ಆದರೆ ಮೌಖಿಕವಾದ ಈ ಐತಿಹ್ಯದಿಂದ ಅದರ ಪೂರ್ಣ ವಿಚಾರವನ್ನು ತಿಳಿಯಬಹುದು. ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಸಮೀಪದಲ್ಲಿರುವ ರಕ್ಕಸಗಿ (ಅಮರಾವತಿ) ಎಂಬ ಹಳ್ಳಿಯಲ್ಲಿ ದೇಸಾಯಿಯವರ ದೊಡ್ಡದಾದ ವಾಡೆಯೊಂದಿದೆ. ಇದು ಅಮರಾವತಿ ದೇಸಾಯಿಯವರ ವಾಡೆಯಂತೆಲೇ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಇದು ಈಗಿನ ರಾಮರೆಡ್ಡಿ ದೇಸಾಯಿಯವರ ವಾಡೆಯಾಗಿದೆ. ಇವರ ಪೂರ್ವಜರ ಕಾಲದಲ್ಲಿ ನಡೆದಿದೆ ಎನ್ನಬಹುದಾದ ಒಂದು ಐತಿಹ್ಯವನ್ನು ಈಗಲೂ ಸಹ ಜನರು ನಂಬುತ್ತಾರೆ. ಮತ್ತು ಲಾವಣಿ ಪದದಲ್ಲಿಯೂ ಬರುವಂಥ ಕಥೆಯಾಗಿದೆ. ಈ ದೇಸಾಯಿಯವರು ಸಂಗಮನಾಥನ ತೇರಿಗಾಗಿ ಒಂದು ಬಂಗಾರದ ಕಳಸವನ್ನು ಮಾಡಿಸಿರುತ್ತಾರೆ. ಈ ಕಳಸವನ್ನು ಪ್ರತಿವರ್ಷವೂ ಜಾತ್ರೆಯ ಸಂದರ್ಭದಲ್ಲಿ ತೇರನ್ನು ಎಳೆಯುವ ದಿವಸ ಮುಂಜಾನೆ ಅಮರಾವತಿಯಿಂದ ತರುತ್ತಿದ್ದರು ಎಂಬ ನಂಬಿಕೆ ಇದೆ.

ಹೀಗೆ ಪ್ರತಿವರ್ಷವೂ ಜಾತ್ರೆ ಮುಗಿದ ನಂತರ ಮತ್ತೆ ಅಮರಾವತಿಯ ದೇಸಾಯಿಯವರ ವಾಡೆಯಕ್ಕೆ ಅದನ್ನು ಒಯ್ಯುತ್ತಿದ್ದರೆಂದು ಪ್ರತೀತಿ ಇದೆ. ಈ ಕಳಸವನ್ನು ಜೋಪಾನವಾಗಿ ಇಟ್ಟುಕೊಳ್ಳುವುದು ಬಹಳ ಸಮಸ್ಯೆಯಾಗಿ ಕಾಡುತ್ತದೆ ದೇಸಾಯಿಗಳಿಗೆ. ಕಾರಣ ಅಂದಿನ ಸಂದರ್ಭದಲ್ಲಿ ರಜಾಕಾರರ ಹಾವಳಿ ಮತ್ತು ದರೋಡೆಕೋರರ ಹಾವಳಿಯಿಂದ ಬೆಲೆಬಾಳುವ ವಸ್ತುಗಳನ್ನು ರಕ್ಷಣೆಯನ್ನು ಮಾಡುವಂಥದ್ದು ಸವಾಲಿನ ಕೆಲಸವಾಗಿತ್ತು. ಇಂತಹ ಹಾವಳಿಯಿಂದ ತಪ್ಪಿಸಬೇಕೆಂದು ಉಪಾಯವನ್ನು ಮಾಡಿ ಆ ಬಂಗಾರದ ಕಳಸವನ್ನು ಹತ್ತಿಯ ಅಂಡಗಿಯೊಳಗೆ ಇಟ್ಟು ತುಳಿಯುತ್ತಾರೆ. ಅಂಡಗೆಗಳು ಬಹಳ ಇರುವುದರಿಂದ ಮತ್ತು ಕಳ್ಳರು ಅವುಗಳನ್ನು ಕಳವು ಮಾಡಲು ಸಾಧ್ಯವಿಲ್ಲದ್ದರಿಂದ ಈ ರೀತಿಯ ಉಪಾಯವನ್ನು ಮಾಡುತ್ತಾರೆ. ಮತ್ತು ರಕ್ಷಿಸಿ

ಇಡುತ್ತಾರೆ. ಒಂದು ದಿವಸ ಆ ಹತ್ತಿ ಅಂಡಿಗೆಗಳನ್ನು ಮಾರಿಕೊಂಡು ಬರಬೇಕೆಂದು ಬಾಗಲಕೋಟೆಗೆ ಒಯ್ಯಲಾಗುತ್ತದೆ. ಹೀಗೆ ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಒಂದು ಪ್ರಮಾದವಾಗಿಬಿಟ್ಟಿರುತ್ತದೆ. ಮನೆಯ ಆಳು ಮಕ್ಕಳು ಬಂಗಾರ ಕಳಸವಿರುವ ಹತ್ತಿ ಅಂಡಿಯನ್ನು ಹಾಕಿ ಕಳುಹಿಸಿರುತ್ತಾರೆ. ಅದು ಅಂಡಿಗೆಯ ಜೊತೆಯಲ್ಲಿ ಬಾಗಲಕೋಟೆಗೆ ಬಂದುಬಿಡುತ್ತದೆ. ನಂತರ ಮಹತ್ತರವಾದ ಪವಾಡ ಒಂದು ನಡೆದು ಬಿಡುತ್ತದೆ. ಕೂಡಲಸಂಗಮ ಪವಾಡವೆಂದು ಎಲ್ಲರೂ ತಿಳಿಯುತ್ತಾರೆ. ಸಂಗಮೇಶ್ವರನ ಆರಾಧನೆಯನ್ನು ಗಟ್ಟಿಗೊಳಿಸುತ್ತಾರೆ.

ಅಡತಿ ಅಂಗಡಿಗೆ (ದಲ್ಲಾಳಿ ಅಂಗಡಿ) ಅಂಡಿಗೆಗಳನ್ನು ತೂಕಕ್ಕೆ ಒಂದೊಂದಾಗಿ ಹಚ್ಚಲಾಗುತ್ತದೆ. ಬಂಗಾರದ ಕಳಸವಿರುವ ಹತ್ತಿ ಅಂಡಿಗೆಯನ್ನು ಸಹ ತೂಕಕ್ಕೆ ಹಚ್ಚಲಾಗುತ್ತದೆ. ಸಾಮಾನ್ಯ ಅಂಡಿಗೆಗಳನ್ನು ತೂಗುವ ರೀತಿಯಲ್ಲಿ ಇದನ್ನು ತೂಕಕ್ಕೆ ಹಚ್ಚಿದರು. ಉಳಿದವುಗಳಿಗಿಂತ ಭಿನ್ನವಾದ ತೂಕವನ್ನು ಹೊಂದಿರುತ್ತದೆ. ತಮ್ಮ ಅಂಗಡಿಯಲ್ಲಿ ಇರುವಂತಹ ಎಲ್ಲ ಕಲ್ಲುಗಳನ್ನು ತೂಕಕ್ಕೆ ಹಚ್ಚಿದರೂ ಈ ಅಂಡಿಗೆಯು ಮೇಲಕ್ಕೆ ಏಳುವುದೇ ಇಲ್ಲ. ಕೊನೆಗೆ ಬಜಾರದಲ್ಲಿ ಹಲವಾರು ಅಂಗಡಿಗಳ ಕಲ್ಲುಗಳನ್ನು ತಂದು ತೂಕಕ್ಕೆ ಹಚ್ಚಿದರೂ ಮೇಲಕ್ಕೆ ಏರುವುದೇ ಇಲ್ಲ ಕೊನೆಗೆ ಅದರಲ್ಲಿ ಏನಿರಬಹುದು ಎಂದು ಅಂಡಗೆಯನ್ನು ಬಿಚ್ಚಿ ನೋಡಿದಾಗ ಅದರಲ್ಲಿ ಬಂಗಾರದ ಕಳಸವಿರುವುದು ಗೊತ್ತಾಗುತ್ತದೆ. ಬಂಗಾರದ ಕಳಸವು ಕೂಡಲಸಂಗಮದಲ್ಲಿಯ ಸಂಗಮೇಶ್ವರನದು ಇರಬಹುದು ಎಂದು ಎಲ್ಲರು ಊಹಿಸುತ್ತಾರೆ. ಕೊನೆಗೆ ಅವು ಯಾರ ಅಂಡಿಗೆಗಳು ಎಂದು ತಿಳಿದಾಗ ಅಮರಾವತಿ ದೇಸಾಯಿಯವರ ಮನೆತನದ್ದವು ಎಂದು ತಿಳಿದು ವಿಚಾರಿಸಿದಾಗ ಅಡತಿ ಅಂಗಡಿಯವರಿಗೂ ಮತ್ತು ದೇಸಾಯಿಯವರಿಗೂ ವಾದವಿವಾದಗಳು ಸಂಭವಿಸುತ್ತವೆ. ನಾರಾ ಮತ್ತು ಬಣಗಾರ ಎಂಬ ಮನೆತನದವರು ಸಂಗಮೇಶ್ವರನ ವರ ಪ್ರಸಾದ ಎಂಬಂತೆ ಇದು ನಮ್ಮ ಅಂಗಡಿಗೆ ಬಂದಿರುವುದರಿಂದ ಇದು ಇಲ್ಲಿಯೇ ಇರಬೇಕೆಂದು ವಾದವನ್ನು ಮಾಡುತ್ತಾರೆ. ಕೊನೆಗೆ ಬಾಗಲಕೋಟೆಯ ಜನತೆಯು ಒಟ್ಟಾಗಿ ದೇಸಾಯಿಯವರಿಗೆ ಇದು ನಮಗೆ ಬಂದ ಭಾಗ್ಯ ಈ ದೈವವನ್ನು ನಾವು ಕೊಡುವುದಿಲ್ಲವೆಂದು ವಾದಿಸುತ್ತಾರೆ. ಕೊನೆಗೆ ನ್ಯಾಯಾಲದ ಮೆಟ್ಟಿಲೇರಿ ತೀರ್ಪು ಬಾಗಲಕೋಟೆಯ ಜನರ ಪರವಾಗಿ ಇರುತ್ತದೆ. ಬಂಗಾರದ ಕಳಸವು ಅಲ್ಲಿಯೇ ಉಳಿಯುವಂತಾಗುತ್ತದೆ. ಪ್ರತಿವರ್ಷ ಜಾತ್ರೆಗೆ ಸರ್ಕಾರದ ಅಧಿಕಾರಿಯ ಅಪ್ಪಣೆ ಮೇರೆಗೆ ಕೂಡಲಸಂಗಮಕ್ಕೆ ಕಳಸವನ್ನು ತರಲಾಗುತ್ತದೆ. ಈ ಪ್ರಕಾರವಾಗಿ ಈ ಐತಿಹ್ಯವು ರಜಾಕಾರರ ಹಾವಳಿಯಂಥ ಐತಿಹಾಸಿಕ ವಿಚಾರಗಳನ್ನು ಮತ್ತು ವ್ಯಾಪಾರಕ್ಕೆ ಸಂಬಂಧಿಸಿದಂಥ ವಿಚಾರಗಳನ್ನು ತೆರೆದಿಡುತ್ತದೆ. ಹೀಗೆ ಕೂಡಲಸಂಗಮವನ್ನು ಕುರಿತಂತಹ ಐತಿಹ್ಯಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ.

ಅಡಿ ಟಿಪ್ಪಣಿಗಳು

೧. ಲಕ್ಷ್ಮಣ ತೆಲಗಾವಿ (ಸಂ), ಹರತಿಸಿರಿ, ೧೯೮೨ ಪುಟ-೪೦೭

೨. ಕಾಂತೇಶರೆಡ್ಡಿ ಗೋಡಿಹಾಳ, ಧರ್ಮ ಕಲ್ಯಾಣ : ಸಾಂಸ್ಕೃತಿಕ ಅಧ್ಯಯನ, ಪುಟ-೬

೩. ರಘುಪತಿ ಕೆಮ್ತೂರು, ತುಳುನಾಡಿನ ಸ್ಥಳನಾಮ ಅಧ್ಯಯನ, ಪುಟ-೧೦೦

೪. ಜ.ಚ.ನಿ., ಕೂಡಲಕ್ಷೇತ್ರ, ಶ್ರೀ ಶಿವಾನಂದ ಮುದ್ರಣಾಲಯ, ಶಹಪುರ, ಪುಟ-೫

೫. ಎಂ.ಎಂ. ಕಲಬುರ್ಗಿ, ಮಾರ್ಗ-೨,

೬. ಅದೇ, ಪುಟ-೪

೭. ಅದೇ, ಪುಟ-೪

೮. ಅದೇ, ಪುಟ-೪

೯. ಅದೇ, ಪುಟ-೭

೧೦. ಬಿ.ಎಂ. ನಾಗಯ್ಯ, ಸಾಂಪಥ, ಪುಟ-೩೬

೧೧. ಎಂ.ಎಂ. ಕಲಬುರ್ಗಿ, ಮಾರ್ಗ-೨, ಪುಟ-೪

೧೨. ಎಂ.ಎಂ. ಕಲಬುರ್ಗಿ (ಪ್ರಸಂ), ಬಸವಯುಗದ ವಚನ ಮಹಾ ಸಂಪುಟ,

೧೩. ಬ್ರಹ್ಮಶಿವ, ಸಮಯ ಪರೀಕ್ಷೆ, ಪುಟ-೯

೧೪. ಎಂ.ಎಂ. ಕಲಬುರ್ಗಿ, ಮಾರ್ಗ-೨, ಪುಟ-೪

೧೫. ಎಂ.ಎಂ. ಕಲಬುರ್ಗಿ, ಹರಿಹರನ ರಗಳೆಗಳು, ಪುಟ-೩೩೦

೧೬. ಅದೇ, ಪುಟ-೩೩೦

೧೭. ಅದೇ, ಪುಟ-೩೩೦

೧೮. ಅದೇ, ಪುಟ-೩೬೩

೧೯. ಎಸ್. ವಿದ್ಯಾಶಂಕರ (ಸಂ), ಬಸವಪುರಾಣ, ಪುಟ-೩೨

೨೦. ಅದೇ, ಪುಟ-೫೬

೨೧. ಬಸವರಾಜೇಂದ್ರ ಕವಿ, ಶಿವತತ್ವ ರತ್ನಾಕರ, ಪುಟ-೬೦೧

೨೨. ಬಿ.ಎಸ್. ಚಂದ್ರಯ್ಯ (ಸಂ), ಬಸವ ಪವಾಡ, ಪುಟ-೫೯

೨೩. ಅದೇ, ಪುಟ-೯೬

೨೪. ದೇವರಕೊಂಡಾರೆಡ್ಡಿ (ಸಂ), ಕೃಷ್ಣಾ ಮೇಲ್ದಂಡೆ ಯೋಜನೆ ಮುಳಗಡೆ ಗ್ರಾಮಗಳಲ್ಲಿನ ಶಾಸನಗಳ ಅಧ್ಯಯನ, ಪ್ರಸಾರಾಂಗ, ಕವಿವಿ.ಹಂಪಿ, ಪುಟ-೪೮

೨೫. ಎಸ್. ಬಸಪ್ಪ (ಸಂ), ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ, ಪುಟ–೫

೨೬. ಅದೇಪುಟ–೫

೨೭. ಅದೇ, ಪುಟ–೨೪೧

೨೮. ಅದೇ, ಪುಟ–೨೪೪

೨೯. ಎಚ್. ದೇವೀರಪ್ಪ (ಸಂ), ಸಿಂಗಿರಾಜ ಕೃತ ಬಸವರಾಜ ಚಾರಿತ್ರ, ಪುಟ–೨

೩೦. ಅದೇ, ಪುಟ–೬೭

೩೧. ಅದೇ, ಪುಟ–೬೭

೩೨. ಅದೇ, ಪುಟ–೭೮

೩೩. ದೇವರಕೊಂಡಾರೆಡ್ಡಿ (ಸಂ), ಬಾಗಲಕೋಟೆ ಜಿಲ್ಲೆಯ ಶಾಸನ ಸಂಪುಟ–೯, ಪ್ರಸಾರಾಂಗ, ಕವಿವಿ.ಹಂಪಿ

೩೪. ಎಂ.ಎಂ. ಕಲಬುರ್ಗಿ (ಪ್ರ.ಸಂ), ಬಸವಯುಗದ ವಚನ ಮಹಾ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಪುಟ–೬

೩೫. ಎಸ್.ಐ.ಟಿ. ರಾಣೇಬೆನ್ನೂರು, ಪುಟ–೨೪೫

೩೬. ಅದೇ, ಪುಟ–೨೪೬

೩೭. ಸಿ.ಯು. ಮಂಜುನಾಥ, ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ, ಪುಟ–೪೪

೩೮. ಅದೇ, ಪುಟ–೪೪

೩೯. ಅದೇ, ಪುಟ–೪೫

೪೦. ಎಂ.ಎಂ. ಕಲಬುರ್ಗಿ (ಪ್ರ.ಸಂ), ಬಸವಯುಗದ ವಚನ ಮಹಾ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಪುಟ–೪೨೩

೪೧. ಎಂ.ಎಂ. ಕಲಬುರ್ಗಿ (ಪ್ರ.ಸಂ), ಬಸವೋತ್ತರಯುಗದ ವಚನ ಮಹಾ ಸಂಪುಟ–೧, ಕನ್ನಡ ಪುಸ್ತಕ ಪ್ರಾಧಿಕಾರ, ಪುಟ–೮

೪೨. ಅದೇ, ಪುಟ–೮

೪೩. ಅದೇ, ಪುಟ–೮

೪೪. ಎಂ.ಎಂ. ಕಲಬುರ್ಗಿ (ಪ್ರ.ಸಂ), ಬಸವಯುಗದ ವಚನ ಮಹಾ ಸಂಪುಟ–೧, ಕನ್ನಡ ಪುಸ್ತಕ ಪ್ರಾಧಿಕಾರ, ಪುಟ–೧೯೨

೪೫. ಅದೇ, ಪುಟ–೧೯೨

೪೬. ಎಂ.ಎಂ. ಕಲಬುರ್ಗಿ (ಸಂ), ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ, ಸಂಪುಟ-೧೩, ಪುಟ-೧೯೫

೪೭. ಅದೇ, ಪುಟ-೧೯೫

೪೮. ಅದೇ, ಪುಟ-೧೯೬

೪೯. ಅದೇ, ಪುಟ-೧೯೭

೫೦. ಅದೇ, ಪುಟ-೧೯೭

೫೧. ಅದೇ, ಪುಟ-೧೯೭

೫೨. ದೇಜಗೌ, ಜಾನಪದ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ಪುಟ-೧೮೧

೫೩. ಸಿದ್ಧಲಿಂಗಯ್ಯ, ಗ್ರಾಮದೇವತೆಗಳು, ಪುಟ-೪೨

೫೪. ದಿಲೀಪಕುಮಾರ ಜಾಗಿರದಾರ ಗಂಜಿಹಾಳ

ಅಧ್ಯಾಯ : ೪

ಕೂಡಲಸಂಗಮ : ಧಾರ್ಮಿಕ ಸಂಪ್ರದಾಯಗಳು

೪.೧. ಶೈವ ಸಂಪ್ರದಾಯ
೪.೨. ನಾಥ ಸಂಪ್ರದಾಯ
೪.೩. ಕಾಳಾಮುಖ ಸಂಪ್ರದಾಯ

ಅಧ್ಯಾಯ : ನಾಲ್ಕು

ಕೂಡಲಸಂಗಮ : ಧಾರ್ಮಿಕ ಸಂಪ್ರದಾಯಗಳು

ಕೂಡಲಸಂಗಮ ಕ್ಷೇತ್ರವು ಪ್ರಾಚೀನ ಕಾಲದಿಂದಲೂ ಧಾರ್ಮಿಕವಾಗಿ ಮಹತ್ವವನ್ನು ಪಡೆದುಕೊಂಡು ಬಂದಿರುವಂಥ ಕೇಂದ್ರವಾಗಿದೆ. ಕಾಲಕಾಲಕ್ಕೆ ಈ ಕೇಂದ್ರ ಧಾರ್ಮಿಕ ಆಚರಣೆಗಳಲ್ಲಿ ಭಿನ್ನತೆಯನ್ನು ಹೊಂದುತ್ತಾ ಬೇರೆ ಬೇರೆ ಪರಂಪರೆಗಳಿಂದ ಗುರುತಿಸಿಕೊಂಡಿದೆ. ಶಾಸನಗಳಲ್ಲಿ ತಿಳಿಯುವಂತೆ ಹತ್ತನೆಯ ಶತಮಾನದಲ್ಲಿ ಶಿವನ ಆರಾಧನೆಯ ಪ್ರಮುಖ ಶೈವ ಕೇಂದ್ರವಾಗಿ ಪ್ರಾಮುಖ್ಯತೆಯನ್ನು ಪಡೆದು ನಂತರದಲ್ಲಿ ಇಲ್ಲಿಯ ಆಚರಣೆಗಳು ನಾಥ ಸಂಪ್ರದಾಯಕ್ಕೆ ಒಳಪಟ್ಟಿತ್ತು ಎನ್ನುವುದನ್ನು ತಿಳಿಸುತ್ತದೆ. ಶೈವಧರ್ಮದ ಒಂದು ಭಾಗವಾದಂಥ ಕಾಪಾಲಿಕ ಮತ್ತು ಕಾಳಾಮುಖ ಕೇಂದ್ರವಾಗಿಯೂ ಇದು ಮಹತ್ವವನ್ನು ಪಡೆದಿತ್ತು ಎನ್ನಬಹುದು. ಕೂಡಲಸಂಗಮದ ಪ್ರಾಚೀನ ದೇವಾಲಯಗಳನ್ನು ಮತ್ತು ಇಲ್ಲಿಯ ಶಾಸನಗಳಿಂದ ತಿಳಿಯುವ ಮುಖ್ಯವಾದ ಅಂಶಗಳೆಂದರೆ ಈ ಕೇಂದ್ರ ಶೈವ ಮತ್ತು ನಾಥ ಸಂಪ್ರದಾಯ ಕೇಂದ್ರವಾಗಿ ಅಪಾರ ಪ್ರಮಾಣದ ಜನಾಕರ್ಷಣೀಯ ತಾಣವಾಗಿತ್ತು ಎನ್ನುವುದರಲ್ಲಿ ಸಂಶಯವಿಲ್ಲ.

೪.೧. ಶೈವ ಪಂಥ

ಪ್ರಾಚೀನ ಧರ್ಮಗಳಲ್ಲಿ ಈ ಶೈವಧರ್ಮವೂ ಒಂದು. ಶಿವನನ್ನು ಆರಾಧನೆ ಮಾಡುವ ಪರಿಪಾಠ ಈ ಧರ್ಮದ ಮೂಲ ಬಿಂದುವಾಗಿದೆ. ಇದರ ಇತಿಹಾಸವನ್ನು ನೋಡಿದಾಗ ವೇದಗಳಿಗೂ ಮುಂಚಿನ ನಾಗರಿಕತೆಗಳು ಹುಟ್ಟಿಕೊಂಡ ಕಾಲದಿಂದ ಕಂಡುಬರುತ್ತದೆ. ಕೊಂಬುಗಳಿರುವ ದೇವತೆಗಳ ಚಿತ್ರವಿರುವಲ್ಲಿಯೂ ಲಿಂಗಗಳು ದೊರಕಿವೆ.[೧] ಕೊಂಬುಗಳಿರುವ ದೇವತೆಗಳಿಗೆ ಮೂರು ಮುಖಗಳಿವೆ. ಅವನು ಯೋಗ ಸಮಾಧಿಯಲ್ಲಿ ಕುಳಿತಿರುವ ಭಂಗಿಗಳು ಮತ್ತು ಪೀಠದ ಕೆಳಗೆ ಆನೆ ಹುಲಿ ಖಡ್ಗಮೃಗ ಎಮ್ಮೆ ಜಿಂಕೆಗಳು ಸಿಗುತ್ತವೆ. ಇದು ಶಿವನ ಪ್ರಾಚೀನ ರೂಪವನ್ನು

ಸೂಚಿಸುತ್ತದೆ ಎಂದು ಸರ್.ಜಾನ್.ಮಾರ್ಷಲ್‌ರು ಅಭಿಪ್ರಾಯ ಪಡುತ್ತಾರೆ.[೨] ಮೆಹೊಂಜೋದಾರೋ ಮತ್ತು ಹರಪ್ಪಗಳ ಅವಶೇಷಗಳಿಂದ ಶೈವ ಧರ್ಮವು ಪ್ರಪಂಚದಲ್ಲಿಯೇ ಅತ್ಯಂತ ಪ್ರಾಚೀನವಾದ ಜೀವಂತ ಧರ್ಮವೆಂದು ಭಾವಿಸಬೇಕಾಗುತ್ತದೆ ಎಂದು ಅವರು ತಿಳಿಸುತ್ತಾರೆ.[೩]

ವೇದಕಾಲದಲ್ಲಿಯೂ ಶಿವನನ್ನು ಸ್ಮರಿಸಲಾಗಿದೆ. ಶಿವನಿಗೆ ಮತ್ತೊಂದು ಅರ್ಥದಲ್ಲಿ ಉಗ್ರರೂಪದಿಂದ ಇರುವಂತೆ ಬಿಂಬಿಸಿ ಅವನನ್ನು ರುದ್ರನೆಂದು ಕರೆಯುತ್ತಿದ್ದರು. ಇವನು ಋಗ್ವೇದದಲ್ಲಿ ರುದ್ರನು ದುಷ್ಟಶಕ್ತಿಗಳಿಗೆ ಅಧಿಪತಿಯೆಂಬಂತೆ ಚಿತ್ರಿತನಾಗಿದ್ದಾನೆ. ರುದ್ರ ಎಂದರೆ ಘರ್ಜಿಸುವವನು ಎಂದಾಗುತ್ತದೆ. ಶಿವನಿಗೆ ಹೇಳುವಂಥ ಲಕ್ಷಣಗಳೆಲ್ಲವನ್ನು ಮುಂದೆ ರುದ್ರನಿಗೆ ಹೇಳಲಾಗಿದೆ.[೪] ಶೈವಧರ್ಮಕ್ಕೆ ಲಾಕುಳ, ಸಮಯ ಎಂಬ ಮತ್ತೊಂದು ಹೆಸರು ಇದೆ. ಈ ಹೆಸರು ಬಹುಶಃ ಪ್ರಾಚೀನವಾದುದೆಂದು ಇದು ಲಕುಲೀಷ ಎಂಬ ಒಬ್ಬ ಮಾನವನನ್ನು ಸೂಚಿಸುವುದರಿಂದ ಇದರ ಸ್ಥಾನದಲ್ಲಿ ಪಶುಪತಿ ಎಂಬ ಭಗವಂತನ ಹೆಸರನ್ನಿಟ್ಟು ಪಾಶುಪತ ಸಮಯ ಎಂದು ಮುಂದಿನವರು ಮಾಡಿಕೊಂಡಿರಬೇಕೆಂದು ಹೇಳುತ್ತಾರೆ ಭಂಡಾರಕರ್‌ರವರು.[೫]

ಶೈವ ಧರ್ಮಕ್ಕೆ ಆಧಾರಗಳಾದ ಶೈವಾಗಮಗಳು ಬಹು ಮುಖ್ಯವಾಗಿ ಅವುಗಳ ನಿಷ್ಪತ್ತಿಗಳನ್ನು ನೋಡಿದಾಗ ಆಗಮ ಎಂಬುದು 'ಗಮ್' ಎಂಬ ಧಾತುವಿನಿಂದ ಬಂದಿದೆ. ಆಗಮ ಎಂದರೆ ಬಂದದ್ದು, ಕಾಣಿಸಿಕೊಂಡದ್ದು ಎಂದು ಅರ್ಥವಾಗುತ್ತದೆ.[೬] ಶಿವನು ಪಾರ್ವತಿಗೆ ಭೋದಿಸಿದ ವಿಷಯಗಳೇ ಆಗಮಗಳಲ್ಲಿರುವವು ಎಂದು ನಂಬುತ್ತಾರೆ. ಆದ್ದರಿಂದ ಸಂಪ್ರದಾಯದ ಪ್ರಕಾರ ಆಗಮಗಳ ಕರ್ತೃ ಪರಮಾತ್ಮನಾದ ಶಿವನೇ ಆಗಮಗಳನ್ನು ತಂತ್ರಗಳೆಂದು ಕರೆದರು ಸಾಮಾನ್ಯವಾಗಿ ಶೈವಾಗಮಗಳನ್ನು ಆಗಮಗಳೆಂದು ಶಾಕ್ತಾಗಮಗಳನ್ನು ತಂತ್ರಗಳೆಂದು ಕರೆಯುವುದು ರೂಢಿ. ಶಿವನನ್ನು ಆರಾಧ್ಯದೈವವಾಗಿ ಭಾವಿಸುವ ಆಗಮಗಳು ಶೈವಾಗಮಗಳು. ಶಕ್ತಿಯನ್ನು ಆರಾಧ್ಯ ದೈವವಾಗಿ ಭಾವಿಸುವ ಆಗಮಗಳು ಶೈವಾಗಮಗಳು. ಅಥವಾ ತಂತ್ರಗಳು ವಿಷ್ಣುವನ್ನು ಆರಾಧ್ಯ ದೈವವಾಗಿ ಭಾವಿಸುವ ಆಗಮಗಳು ಪಾಂಚರಾತ್ರಾಗಮಗಳು.

ಆಗಮಗಳ ಹಿನ್ನೆಲೆಯಿಂದಲೇ ದೇವಾಲಯಗಳ ನಿರ್ಮಾಣ ವಿಗ್ರಹಾರಾಧನೆ, ಪೂಜಾ ವಿಧಾನ ಇತ್ಯಾದಿಗಳೆಲ್ಲವು ಹಿಂದೂ ಧರ್ಮವನ್ನು ಸೇರಿರುವುದು ಇದರಿಂದಲೇ ಆಗಮಗಳು ಪಶುಬಲಿಯನ್ನು ನಿರಾಕರಿಸಿ ಅಹಿಂಸೆಯನ್ನು ಒತ್ತಿ ಹೇಳುತ್ತವೆ. ವೈದಿಕ ಧರ್ಮವು ಆಗಮೋಕ್ತವಾದ ಧರ್ಮಗಳು ಮೊದಮೊದಲು ಒಂದರಿಂದ ಒಂದು ಭಿನ್ನವಾಗಿದ್ದು ಕ್ರಮೇಣ ಒಂದು ಇನ್ನೊಂದರಲ್ಲಿ ಸೇರಿಹೋದವು. ಆಧುನಿಕ ಹಿಂದೂ ಧರ್ಮವು ಸ್ವಲ್ಪ ಮಟ್ಟಿಗೆ ವೈದಿಕವೂ ಹೌದು, ಸ್ವಲ್ಪಮಟ್ಟಿಗೆ ಆಗಮವೂ ಹೌದು.[೭]

ಕೂಡಲ ಸಂಗಮವೂ ಪ್ರಮುಖ ಶೈವ ಧರ್ಮ ಕೇಂದ್ರವಾಗಿತ್ತು ಎಂಬುದಕ್ಕೆ ಬಹು ಪ್ರಾಚೀನ ಕಾಲದಲ್ಲಿಯೇ ಶಾಸನಗಳಲ್ಲಿ ಉಲ್ಲೇಖವಾಗಿರುವಂತಹ ದೇವಾಲಯಗಳ ಹೆಸರುಗಳೂ ಮತ್ತು ಅವಕ್ಕೆ ಬಿಟ್ಟಿರುವ ಭೂಮಿಯನ್ನು, ತೋಟಗಳನ್ನು, ಗಾಣವನ್ನು ದತ್ತಿಯಾಗಿ ನೀಡಿರುವುದನ್ನು

ನೋಡುತ್ತೇವೆ. ಕ್ರಿ.ಶ ೧೧೬೦ರಲ್ಲಿ ಸಂಗಮೇಶ್ವರ ದೇವಾಲಯದ ಒಳಗೆ ಇರುವಂತಹ ಶಾಸನದಲ್ಲಿ ಸಂಗಮೇಶ್ವರ, ಕಾಳೇಶ್ವರ ಮತ್ತು ಆಚೇಶ್ವರ ಎಂಬ ದೇವರ ಹೆಸರುಗಳು ಇರುವುದನ್ನು ಕಾಣುತ್ತೇವೆ.[೮] ದೇವಾಲಯಗಳ ನಿರ್ಮಾಣ ಶೈವಧರ್ಮದಲ್ಲಿ ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿತ್ತು. ಅದರಲ್ಲಿಯೂ ಶಿವನ ಅಂದರೆ ಲಿಂಗವನ್ನು ಪ್ರತಿಷ್ಠಾಪಿಸುವುದು ಬಹುಮುಖ್ಯವಾದ ಸಂಗತಿಯಾಗಿತ್ತು. ಶೈವ ಧರ್ಮಕ್ಕೆ ಲಾಕುಳ ಸಮಯ ಎಂಬ ಮತ್ತೊಂದು ಹೆಸರು ಇದೆ. ಈ ಹೆಸರೇ ಬಹುಶಃ ಪ್ರಾಚೀನವಾದುದೆಂದು ಇದು ಲಕುಲೀಶ ಎಂಬ ಒಬ್ಬ ಮಾನವ ವ್ಯಕ್ತಿಯನ್ನು ಸೂಚಿಸುವುದರಿಂದ ಇದರ ಸ್ಥಾನದಲ್ಲಿ ಪಶುಪತಿಯೆಂಬ ಭಗವಂತನ ಹೆಸರನ್ನಿಟ್ಟು ಪಾಶುಪತ ಸಮಯ ಎಂದು ಮುಂದಿನವರು ಮಾಡಿಕೊಂಡಿರಬೇಕೆಂದು ಹೇಳುತ್ತಾರೆ ಭಂಡಾರಕರ್‌ರವರು.[೯] ಮಹೇಶ್ವರನು ಸ್ಮಶಾನದಲ್ಲಿ ಬಿದ್ದಿದ್ದ ದೇಹವೊಂದನ್ನು ಹೊಕ್ಕು 'ಲಕುಲಿಯನ್' ಎಂಬ ಬ್ರಹ್ಮಚಾರಿಯಾಗಿ ಅವತರಿಸಿರುವುದಾಗಿಯೂ ಹಾಗೆ ಅವತರಿಸಿದ ಸ್ಥಳಕ್ಕೆ ಕಾಯಾವತಾರ ಅಥವಾ ಕಾವ್ಯೋವಹರಣ ಎಂದು ಹೆಸರಾಗಿರುವುದಾಗಿಯೂ ಅವನಿಗೆ ಕುಸಿಕ, ಗರ್ಗ, ಮಿತ್ರ, ಕೌರುಷ್ಯರೆಂಬ ನಾಲ್ವರು ಶಿಷ್ಯರು ಇರುವರೆಂದು ಇವರ ಅನುಯಾಯಿಗಳಾದ ಪಾಶುಪತರು ಭಸ್ಮ ಧಾರಣೆ ಮಾಡಿಕೊಂಡು ಮಹೇಶ್ವರ ಯೋಗವನ್ನು ಅನುಸರಿಸಿ ಕೊನೆಯಲ್ಲಿ ರುದ್ರಲೋಕಕ್ಕೆ ಹೋಗುವರೆಂದು ವಾಯು ಪುರಾಣ ಮತ್ತು ಲಿಂಗ ಪುರಾಣಗಳಲ್ಲಿ ಹೇಳಿದೆ.[೧೦]

ಶೈವ ಧರ್ಮದ ಆಚರಣೆಗಳು ವಚನಗಳಲ್ಲಿಯೂ ಕಂಡು ಬರುತ್ತವೆ. ಚೆನ್ನಬಸವಣ್ಣನ ವಚನವೊಂದರಲ್ಲಿ ಶೈವ ಕರ್ಮಿಗಳ ಬಗ್ಗೆ ಉಲ್ಲೇಖವನ್ನು ಮಾಡುತ್ತಾರೆ.

> ಗುರು ಲಿಂಗ ಜಂಗಮವೇಕವಾದುದೇ ಗುರುವಲ್ಲದೆ
> ಪಿತಾ–ಮಾತೆ ಸತಿ–ಸುತ ಅತ್ತೆ–ಮಾವ ಇದಲ್ಲದೆ
> ಯೋಗಿ–ಜ್ಯೋಗಿ ಶ್ರವಣ–ಸನ್ಯಾಸಿ ಕಾಳಾಮುಖಿ– ಪಾಶುಪತಿ ಎಂಬ
> ಶಡುದರ್ಶನದ ಶೈವ ಕರ್ಮಿಗಳ ಗುರುವು–ಗುರುವು ಎಂಬುದಕ್ಕೆ
> ನಾಚದವರನೇನೆಂಬೆನಯ್ಯ?
> ಆ ಮಹಾ ಗುರುವಿಂಗೆ ಇಂತಿವರನೆಲ್ಲರ ಸರಿಗಂಡಡೆ
> ಒಂದೇ ಎಂದು ನುಡಿದಡೆ ಅಘೋರ ನರಕ ತಪ್ಪದಯ್ಯ
> ಕೂಡಲ ಚೆನ್ನ ಸಂಗಮದೇವ[೧೧]

ಇಲ್ಲಿ ಶೈವ ಧರ್ಮದ ಕರ್ಮಗಳೆಂದು ಆರು ದರ್ಶನಗಳಾಗಿ ಆಚರಣೆಯಲ್ಲಿದ್ದಂತೆ ಯೋಗಿಯಾಗಿ–ಜೋಗಿಯಾಗಿ, ಶ್ರವಣನಾಗಿ, ಸನ್ಯಾಸಿಯಾಗಿ, ಕಾಳಾಮುಖಿಯಾಗಿ ಮತ್ತು ಪಾಶುಪತಿಯಾಗಿ ಶೈವಧರ್ಮಗಳ ಆಚರಣೆಗಳೇ ಕೆಲವು ಭಿನ್ನವಾಗಿದ್ದವೆಂದು ಗೋಚರವಾಗುತ್ತದೆ. ೧೨ನೇ ಶತಮಾನದಲ್ಲಿ ಶೈವಧರ್ಮದ ಆಚರಣೆಯು ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತೆಂದು ತಿಳಿಯಬಹುದು.

ಲಾಕುಳ ಶೈವನು ಕರ್ನಾಟಕದಲ್ಲಿ ಕಟ್ಟಿಸಿದ ಅತ್ಯಂತ ಪ್ರಾಚೀನ ದೇವಸ್ಥಾನಗಳಲ್ಲೊಂದು ಬಾದಾಮಿಯ ಬಳಿ ಇರುವ ಮಹಾಕೂಟೇಶ್ವರ ಕ್ರಿಶ ೬೦೨ರಲ್ಲಿ ಮಂಗಳೇಶನ ಶಾಸನದಲ್ಲಿ ಅವನಿಗೆ ಮಾತೃಸ್ವರೂಪಳಾಗಿದ್ದ ದುರ್ಲಭದೇವಿ ಎಂಬಾಕೆಯು ಮುಕುಟೇಶ್ವರ ನಾಥನಿಗೆ ದತ್ತಿಯನ್ನು ಬಿಟ್ಟುಕೊಟ್ಟ ವಿಷಯವಿದೆ.[೧೨] ಈ ದೇವಸ್ಥಾನದ ಮುಂದಿರುವ ದ್ವಾರಪಾಲಕ ವಿಗ್ರಹಗಳು ಬಹು ಜನ ಭಾವಿಸಿದಂತಿರುವ ವಾತಾಪಿ ಇಲ್ವಲರ ವಿಗ್ರಹಗಳಲ್ಲಿ ಮಹಾಕೂಟೇಶ್ವರನ ದ್ವಾರಪಾಲಕರಾಗಿ ಕೆಲಸಮಾಡುತ್ತಿದ್ದ ಕಾಳಾಮುಖ ಭಕ್ತರ ವಿಗ್ರಹಗಳಿರಬೇಕೆಂದು ಶ್ರೀ ಆರ್.ಎಸ್.ಪಂಚಮುಖಿಯವರು ಅಭಿಪ್ರಾಯ ಪಡುತ್ತಾರೆ.[೧೩] ಆ ದೇವಸ್ಥಾನದ ಹೊರಭಾಗದ ಚಿತ್ರಗಳಲ್ಲಿ ಲಕುಲೀಶ್ವರ ಚಿತ್ರಗಳು ಪ್ರಮುಖವಾಗಿವೆ. ಇದು ನಿಜವಾದರೆ ಕರ್ನಾಟಕದ ಲಾಕುಳ ಶೈವರ ಇತಿಹಾಸವು ಕ್ರಿಶ ೬ನೇ ಶತಮಾನಕ್ಕಿಂತ ಹಿಂದೆ ಹೋಗಬೇಕಾಗುತ್ತದೆ.[೧೪] ಬಾದಾಮಿಯು ಕೂಡಲ ಸಂಗಮಕ್ಕೆ ಹತ್ತಿರವಿರುವ ಕಾರಣದಿಂದಾಗಿ ಶೈವ ಧರ್ಮದ ಆಚರಣೆಗಳು ಕೂಡಲಸಂಗಮದಲ್ಲಿಯೂ ಇದ್ದು ಇದು ಬಹು ಪ್ರಮುಖ ಶೈವ ಕೇಂದ್ರವಾಗಿ ಈಶ್ವರ ದೇವಾಲಯವು ನಿರ್ಮಾಣವಾಗಿತ್ತು ಎಂದು ತಿಳಿಯಬಹುದಾಗಿದೆ.

ಶೈವ ಧರ್ಮದಲ್ಲಿ ಹೋಮ ಹವನವನ್ನು ಪವಿತ್ರ ಕಾರ್ಯ ರೂಪದಲ್ಲಿ ಮಾಡುತ್ತಿದ್ದರೆಂಬ ವಿಚಾರ ಚೆನ್ನಬಸವಣ್ಣನ ವಚನಗಳಲ್ಲಿ ಉಲ್ಲೇಖವಾಗಿರುವುದನ್ನು ಕಾಣುತ್ತೇವೆ.

> ಶೈವ ಸಿದ್ಧಾಂತಿಗಳಪ್ಪ ಕರ್ಮಕಾಂಡಿಗಳು ಸ್ಥಾವರ ಲಿಂಗದೆಡೆಯಲ್ಲಿ
> ಹವನ ಹೋಮಾದಿ ಪವಿತ್ರ ಕಾರ್ಯವ ಕೈಕೊಂಡೆಡೆಯಲ್ಲಿ
> ಉಚ್ಚೇಷ್ಠಾಧಿ ಪಂಚಸೂತಕಗಳೆಂದೆಡೆ
> ಅವರು ಆ ಸೂತಕವ ಮಾನಿಸದೆ ಪರಿಶುದ್ಧಭಾವದಿಂದಿರ್ಪರು
> ದೇವದೇವನಪ್ಪ ಮಹಾದೇವನು ಲಿಂಗರೂಪದಿಂದ
> ಅಂಗದಲ್ಲಿ ಧರಿಸಿ ಪರಿಶುದ್ಧರಾದರೆಂದು ತಿಳಿಯದೇ
> ಸೂತಕವಚನಾಚರಿಸುವ ವ್ರತಗೇಡಿಗಳ ಎನಗೆ ತೋರಿಸದಿರಯ್ಯ
> ಕೂಡಲ ಚೆನ್ನ ಸಂಗಮ ದೇವ[೧೫]

ಶೈವ ಸಿದ್ಧಾಂತಿಗಳು ಗುಡಿಗಳನ್ನು ನಿರ್ಮಾಣವನ್ನು ಮಾಡಿ ಲಿಂಗವನ್ನು ಪ್ರತಿಷ್ಠಾಪಿಸಿ ಹೋಮ ಹವನಗಳೆಂಬ ಪವಿತ್ರಕಾರ್ಯಗಳನ್ನು ಮಾಡುತ್ತಿದ್ದರು. ಮತ್ತು ಈ ರೀತಿ ಮಾಡಿದ ಮಾತ್ರಕ್ಕೆ ಪಂಚಸೂತಕಗಳು ಹೋಗುತ್ತವೆ ಎಂಬುದು ಇಲ್ಲ. ಆದರೆ ವಚನಕಾರರ ದೃಷ್ಟಿಯೇ ಬೇರೆಯಾಗಿದ್ದಿತು. ಅವರು ಸ್ಥಾವರವನ್ನು ನಿರಾಕರಣೆ ಮಾಡಿದಂಥವರು. ಕೂಡಲಸಂಗಮದಲ್ಲಿರುವ ಪ್ರಾಚೀನ ದೇವಾಲಯವು ಶೈವ ಧರ್ಮಿಯರಿಂದ ನಿರ್ಮಾಣವಾಗಿರುವುದೆಂದು ಅಲ್ಲಿಯ ಲಿಂಗಮೂರ್ತಿಯು ಇರುವುದರಿಂದಲೂ ಮತ್ತು ಶಾಸನಗಳಲ್ಲಿ ಉಲ್ಲೇಖವಾದಂತಹ ಆಚೇಶ್ವರ, ಕಾಳೇಶ್ವರ ದೇವಾಲಯಗಳ ಹೆಸರುಗಳೂ ಇರುವುದರಿಂದಲೂ ಮತ್ತು ಶರಣರ ವಚನಗಳಲ್ಲಿ ಬಂದಿರುವ ಶೈವ ಧರ್ಮದ ಆಚರಣೆಗಳ ವಿಚಾರಗಳನ್ನು ಅರಿಯುವುದರಿಂದಲೂ ಇದು ಶೈವ ಧರ್ಮದ ಕೇಂದ್ರವಾಗಿತ್ತೆಂದು ತಿಳಿಯಬಹುದಾಗಿದೆ.

ಈ ಹಿಂದೆ ಸೂಚಿಸಿದಂತೆ ಕನ್ನಡ ಸಂಸ್ಕೃತಿಗೆ ಲಾಕುಳ ಶೈವರ ವಿಶಿಷ್ಟವಾದ ಕೊಡುಗೆ ಎಂದರೆ ಅಸಂಖ್ಯಾತ ದೇವಾಲಯಗಳು ಮತ್ತು ಪ್ರಾಚೀನ ವಿದ್ಯಾಕೇಂದ್ರಗಳು ಕೂಡಲಸಂಗಮದ ಶಾಸನಗಳಲ್ಲಿ ತಿಳಿಯುವಂತೆ ಇದು ಒಂದು ಅಗ್ರಹಾರವಾಗಿ ಪ್ರಮುಖ ವಿದ್ಯಾಕೇಂದ್ರವಾಗಿತ್ತೆಂದು ಬ್ರಹ್ಮಪುರಿಯಾಗಿತ್ತೆಂದು ತಿಳಿದುಬರುತ್ತದೆ. ಹೀಗಾಗಿ ಕೂಡಲಸಂಗಮ ಕ್ಷೇತ್ರವು ಶೈವ ಧರ್ಮದ ಆಚರಣೆಗಳನ್ನು ಒಳಗೊಂಡ ಕೇಂದ್ರವಾಗಿತ್ತು ಎಂಬುದು ಮುಖ್ಯವಾದ ಸಂಗತಿಯಾಗಿದೆ.

ಆದಯ್ಯ ಎಂಬ ವಚನಕಾರನು ಶುದ್ಧ ಶೈವ ಎಂಬ ಮತವೊಂದನ್ನು ಹೆಸರಿಸಿ ಶುದ್ಧ ಶೈವರು ಸ್ಥಾವರ ಲಿಂಗವನ್ನು ಪೂಜಿಸುವರೆಂದು ತನ್ನ ವಚನದಲ್ಲಿ ಪ್ರಸ್ತಾಪಿಸುತ್ತಾನೆ.

> ಶುದ್ಧಶೈವದ ನಿರ್ಧರವನರಿದ ಬುದ್ಧಿಯನನುಕರಿ(ಸೆ)
> ಆಶುದ್ಧ ಶೈವದ ಪರಿಎಂತೆಂದೆಡೆಃ
> ಏಕಮೇವ ನದ್ವಿತೀಯಂ ಬ್ರಹ್ಮ ಎಂದು ಶೃತಿಪ್ರಮಾಣಿಂದರಿದು
> ಅಂತಪ್ಪ ಶಿವನಲ್ಲಿ ಏಕನಿಷ್ಠೆಯ ಪಡೆದು
> ಆ ಶಿವಂಗೆ ಅರ್ಜನೆಯ ಪೂಜೆಯ ಮಾಡುವಲ್ಲಿ[೧೭]

ಇಲ್ಲಿ ಶುದ್ಧ ಶೈವದ ನಿರ್ಧಾರವನ್ನು ಮಾಡುವಂತಹ ಬುದ್ಧಿವಂತರ ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ. ಮೊದಲು ಬ್ರಹ್ಮವೆಂದರೆ ಏನು? ಎನ್ನುವುದನ್ನು ಸ್ಮೃತಿಮಹಾಕಾವ್ಯಗಳಿಂದ ತಿಳಿದು ಶಿವನನ್ನು ಏಕ ನಿಷ್ಠೆಯಿಂದ ಪೂಜಿಸುವುದು ಎಂದು ತಿಳಿಸುತ್ತಾರೆ. ಅಂದರೆ ಶಿವನನ್ನು ಪೂಜಿಸುವ ಏಕ ಪೀಠ ಜಾಗದಲ್ಲಿ ಇತರ ಪರಿವಾರ ದೇವತೆಗಳನ್ನು ಪೂಜಿಸುವ ಅಗತ್ಯವಿಲ್ಲವೆಂದು ಹೇಳುತ್ತಾರೆ ನಂತರದಲ್ಲಿ ಲಿಂಗ ಮತ್ತು ಜಂಗಮವನ್ನು ನಿಷ್ಠೆಯಿಂದ ನಂಬಬೇಕು. ಎನ್ನುವುದನ್ನು ಬೇರುಂಡ ಪಕ್ಷಿಯ ಉದಾಹರಣೆಯನ್ನು ನೀಡುತ್ತಾರೆ.

> 'ಯಥಾ ಬೇರುಂಡಪಕ್ಷೀ ತು ದ್ವಿಮುಖಾತ್ ಪರಿಭುಂಜತೇ
> ತಥಾ ಭುಂಜಾಮಿ ದ್ವಿಮುಖಾಲ್ಲಿಂಗಜಂಗಮಯೋರಹಂ ಅಸ್ವಾರ್ಥ"[೧೮]

ಒಂದು ಬೇರುಂಡ ಪಕ್ಷಿಯು ಎರಡು ಮುಖದಲ್ಲಿ ಆಹಾರವನ್ನು ತಿನ್ನುತ್ತಿದ್ದರೂ ಒಂದೇ ದೇಹಕ್ಕೆ ತೃಪ್ತಿಯನ್ನು ನೀಡುವ ಹಾಗೆ ಲಿಂಗ ಮತ್ತು ಜಂಗಮಕ್ಕೆ ಯಾರು ನೈವೇದ್ಯವನ್ನಿಡುತ್ತಾರೋ ಅದು ನನ್ನ ತೃಪ್ತಿಯೆಂದು ಶಿವನು ದೇವಿಯರಿಗೆ ಹೇಳುತ್ತಾನೆ. ಎಂದು ಆದಯ್ಯ ಪ್ರಸ್ತಾಪಿಸುತ್ತಾನೆ. ೧೨ನೇ ಶತಮಾನಕ್ಕಿಂತ ಮುಂಚಿನಿಂದಲೂ ವಚನಕಾರರ ಮೇಲೆ ಶೈವ ಧರ್ಮ ಬಹಳಷ್ಟು ಪ್ರಭಾವವನ್ನು ಬೀರಿತ್ತು ಎನ್ನುವುದು ಪ್ರಮುಖವಾದ ವಿಚಾರವಾಗಿದೆ.

ವಚನಕಾರನಾದ ಸಿದ್ಧರಾಮನು ಲಿಂಗಾಯತನಾಗುವ ಪೂರ್ವದಲ್ಲಿ ಬಹುಶಃ ನಕುಲೀಷ ಮತ್ತು ಪಾಶುಪತದವನಾಗಿರಬಹುದೆಂದು ಎಂ.ಎಂ. ಕಲಬುರ್ಗಿಯವರು ಅಭಿಪ್ರಾಯಪಡುತ್ತಾರೆ.[೧೯] ಆ ಅವಧಿಯಲ್ಲಿಯೇ ಅವನು ಕೆಲವು ವಚನಗಳನ್ನು ಬರೆದಿರುವ ಸಾಧ್ಯತೆಗಳಿವೆ. ಅವನ ಬಹುಪಾಲು ವಚನಗಳು ಜೇಡರ ದಾಸಿಮಯ್ಯನ ವಚನಗಳಂತೆ ಪದ್ಯ ಗಂಧಿಯಾಗಿರುವುದನ್ನು

ನೋಡಿದರೆ ಇದು ಲಕುಲೀಷ ಪಾಶುಪತದ 'ವಚನ ಶಿಲ್ಪ' ಎಂದು ಮುಂದೆ ಇದು ಬಸವ ಯುಗದಲ್ಲಿ ಗದ್ಯ ಗಂಧಿಗೆ ತಿರುಗಿತೆಂದು ಹೇಳಬಹುದು. ಬಸವಣ್ಣನವರು ಜನಿವಾರ ಹರಿದು ಹಾಕುವ ಪೂರ್ವದಲ್ಲಿ ಲಕುಲೀಷ ಪಾಶುಪತದವ (ಲಿಂಗಿ ಬ್ರಾಹ್ಮಣ)ನಾಗಿರಬೇಕೆಂದು ಶ್ರೀ ಟಿ.ಎನ್.ಮಲ್ಲಪ್ಪ ಹೇಳಿದರೆ[೧೯] 'ಬೆಡಗಿನ ಕೀಲ ಕಳೆದು ಕಡೆದ ಬಳಿಕ ಒಡಲನೂರಿ ಕೊಂಬುದು' ಎಂಬ ವಚನದಲ್ಲಿ ಬರುವ ಲಿಂಗಾಯತವಲ್ಲದ ಮರಣೋತ್ತರ ಅಗ್ನಿ ಸಂಸ್ಕಾರಗಳನ್ನು ಗಮನಿಸಿ ಲಿಂಗಾಯತನಾಗುವ ಪೂರ್ವದಲ್ಲಿಯೇ ಬಸವಣ್ಣನವರು ವಚನ ರಚಿಸಿರಬೇಕೆಂದು ಹಳಕಟ್ಟಿಯವರು ಊಹಿಸಿರುತ್ತಾರೆ.[೨೦] ಈ ಕಾರಣದಿಂದಲೇ ಬಸವಣ್ಣನವರ ಮತ್ತು ಇತರ ಶರಣರ ವಚನಗಳಲ್ಲಿ ಕೆಲವೊಮ್ಮೆ ಪರಸ್ಪರ ವಿರೋಧ ಕಂಡುಬಂದಿರಬೇಕು. ಅಂದರೆ ಈ ಪರಸ್ಪರ ವಿರೋಧಕ್ಕೆ ಕೆಲವು ಶೈವ ಮಾರ್ಗದ ಇನ್ನೂ ಕೆಲವು ಲಿಂಗಾಯತ ಮಾರ್ಗದ ವಚನಗಳಾಗಿರುವುದು ಒಬ್ಬನೇ ತಾನು ದೈವನಾಗಿರುವಾಗ ಕೆಲವು ವೀರಶೈವನಾಗಿರುವಾಗ ಕೆಲವು ವಚನಗಳನ್ನು ಸೃಷ್ಟಿಸಿರುವುದು ಕಾರಣವೆಂದು ಹೇಳಬಹುದು. ವಚನಗಳ ಅಂಕಿತ ವೀರಶೈವನಾಗಿರುವಾಗ ಕೆಲವು ವಚನಗಳನ್ನು ಸೃಷ್ಟಿಸಿರುವುದು ಕಾರಣವೆಂದು ಹೇಳಬಹುದು.

ವಚನಗಳ ಅಂಕಿತ ಆಯಾ ಶರಣರ ಇಷ್ಟಲಿಂಗದ ಹೆಸರುಗಳೆಂದು ಹೇಳುವುವೆವಾದರೂ ಮೂಲತಃ ಈ ಅಂಕಿತ ಪದ್ಧತಿ ಸ್ಥಾವರ ಲಿಂಗದಿಂದಲೇ ಪ್ರಚೋದಿತವಾಗಿರಬೇಕು. ಏಕೆಂದರೆ ಶರಣರ ಗ್ರಾಮಗಳಲ್ಲಿ ಈ ಅಂಕಿತ ಸೂಚಿ ಸ್ಥಾವರ ಲಿಂಗಗಳು ಕಂಡುಬರುತ್ತವೆ. ಕೂಡಲ ಸಂಗಮನಾಥ ಎಂಬ ಅಂಕಿತ ನಾಮವೂ ಸಹ ಕೂಡಲ ಸಂಗಮೇಶ್ವದ ಸಂಗಮನಾಥ ಅಂಕಿತಸೂಚಿ ಸ್ಥಾವರ ಲಿಂಗವಾಗಿದೆ. ಇದು ಶೈವ ಧರ್ಮಕ್ಕೆ ಸಂಬಂಧಿಸಿದ ಲಕುಲೀಷ ಮತ್ತು ಪಾಶುಪತಕ್ಕೆ ಸಂಬಂಧಿಯಾಗಿದ್ದು ಎನ್ನಬಹುದಾಗಿದೆ.

ಕೂಡಲಸಂಗಮ ಕ್ಷೇತ್ರದಲ್ಲಿಯ ಸ್ಥಾವರಗಳನ್ನು ಮತ್ತು ಶಾಸನ ಉಲ್ಲೇಖಿತ ದೇವಾಲಯಗಳನ್ನು ನೋಡಿದಾಗ ಶೈವ ಪರಂಪರೆಯ ಲಕುಲೀಷ ಪಾಶುಪತವು ಲಿಂಗಾಯತ ಧರ್ಮವಾಗಿ ಬೆಳೆದಂತೆ ತಾನೂ ಅವರ ಮತ್ತು ಇವರ ಕೈಯಲ್ಲಿ ಹುಟ್ಟುತ್ತಾ ಬೆಳೆಯುತ್ತಾ ನಡೆಯಿತೆಂದು ತಿಳಿಯುತ್ತದೆ. ಮುಂದೆ ಲಕುಲೀಷ ಪಾಶುಪತವು ಲಿಂಗಾಯತವಾಗುತ್ತ ಹೋದಂತೆ ಸಮಗ್ರ ವಚನಗಳ ಸೃಷ್ಟಿ ಮತ್ತು ಸಂಪತ್ತು ಲಿಂಗಾಯತರ ಹೆಸರಿನಲ್ಲಿಯೇ ಪ್ರಚಾರ ಪಡೆಯಿತು. ಬಸವಣ್ಣನವರು ಸಂಗಮನಾಥನನ್ನು ಆರಾಧ್ಯ ದೈವವನ್ನಾಗಿಸಿಕೊಂಡು ಕೂಡಲಸಂಗಮನಾಥ ಮುಂದೆ ಲಿಂಗಾಯತರ ಪ್ರಮುಖ ಕೇಂದ್ರವಾಗಿದ್ದರ ಕುರುಹಿಗಾಗಿಯೇ ಎಂಬಂತೆ ಭಾಸವಾಗುತ್ತದೆ.

೧೨ನೆಯ ಶತಮಾನದಲ್ಲಿ ಕೂಡಲಸಂಗಮ ಅಥವಾ ಕಪ್ಪಡಿ ಸಂಗಮ ಶುದ್ಧ ಶೈವ ಕೇಂದ್ರವಾಗಿತ್ತು ಎನ್ನುವುದಕ್ಕೆ 'ಅಬಲೂರು ಚರಿತ್ರೆ'ಎಂಬ ಆರು ಸಂಧಿ ಐದನೂರಾ ಹದಿನೇಳು ಪದ್ಯಗಳ ಒಂದು ಲಘು ಕೃತಿ ಉಲ್ಲೇಖಿಸುತ್ತದೆ. ಈ ಕೃತಿಯ ವಸ್ತು ಏಕಾಂತ ರಾಮಯ್ಯನ ಶಿರಸ್ಸು ಪವಾಡವಾಗಿದ್ದರೂ ಈ ಪವಾಡ ಪ್ರಸಂಗದಲ್ಲಿ ಸೂರ್ಯನನ್ನು ನಿಲ್ಲಿಸುವುದರ ಮೂಲಕ

ಮಹತ್ವದ ಪಾತ್ರವಹಿಸಿದ ತನ್ನ ಮತದ ಮಹಾ ಪುರುಷ ಚಿಕ್ಕೇಶನ ಘನತೆಯನ್ನು ನಿರೂಪಿಸುವುದು ಕವಿಗೆ ಮುಖ್ಯವಾಗಿದೆ. ಏಕಾಂತ ರಾಮಯ್ಯನು ಶಿರವನ್ನು ಕಡಿದುಕೊಂಡಾಗ ಅದನ್ನು ಏಳು ದಿಕ್ಕುಗಳಲ್ಲಿ ಏಳು ಶೈವ ಕೇಂದ್ರಗಳ ಲಿಂಗಗಳನ್ನು ದರ್ಶನ ಮಾಡಿಸಿ ಏಳನೆಯ ದಿನ ಸೂರ್ಯ ಮುಳುಗುವುದಕ್ಕೆ ಮೊದಲೆ ಶಿರವನ್ನು ಮುಂಡಕ್ಕೆ ಹಚ್ಚಿದರೆ ಏಕಾಂತ ರಾಮಯ್ಯನಿಗೆ ಜೀವ ಬರುತ್ತದೆ ಎಂಬುದು ಪವಾಡ ಕ್ರಿಯೆಯಾಗಿದ್ದಿತು. ಇಲ್ಲಿ ರಾಮಯ್ಯನ ರುಂಡವನ್ನು ತರುವ ಒಂದು ಪ್ರಮುಖ ಕೇಂದ್ರ ಎಂದು ಈ ಕೃತಿಯಲ್ಲಿ ಉಲ್ಲೇಖವಾಗಿರುವುದು ಮಹತ್ವದ ಸಂಗತಿಯಾಗಿದೆ.

ಕಪ್ಪಡಿಯ ಸಂಗಮನಾಥನಲ್ಲಿಗೆ ಬಂದು
ತಪ್ಪದೆ ರಾಮನ ಶಿರವ
ಒಪ್ಪುಗೊಂಬುಯಯೆಂದು ಪೊನ್ನಿ ತಂದೆಗಳಗ
ಗಪ್ಪನಾರತಿಯ ನೆತ್ತಿದರು.
ಅಂಗಜಭಂಗ ಭುಜಂಗಕಂಕಣದೇವೋ
ತುಂಗ ಪಾರ್ವತಿ ಪ್ರಾಣಲಿಂಗ
ಗಂಗಾಧರನೆ ಮುನಿಜನ ಸಂಘರಾಮನ
ಸಂಗಮೇಶ್ವರ ರಕ್ಷಿಸೆಂದ[೨೧]

ಅಬ್ಬಲೂರು ಚರಿತ್ರೆಯಲ್ಲಿ ಉಲ್ಲೇಖಿತವಿರುವ ಆ ಏಳು ಶೈವ ಕ್ಷೇತ್ರಗಳೆಂದರೆ ಪುಲಿಗೆರೆ, ಅಣ್ಣಿಗೆರೆ, ಕಪ್ಪಡಿಸಂಗಮ, ಕೆಂಬಾವಿ, ಸೊನ್ನಲಿಗೆ, ಆವುಂದ ಮತ್ತು ಹಂಪೆ ಕಪ್ಪಡಿ ಸಂಗಮಕ್ಕೆ ತಂದಾಗ ಸಂಗಮನಾಥನ ಮುಂದೆ ರುಂಡವನ್ನು ಇಟ್ಟು ರಾಮನನ್ನು ರಕ್ಷಿಸೆಂದು ಎಲ್ಲರೂ ಬೇಡಿಕೊಳ್ಳುತ್ತಾರೆ. ಮುಂದೆ ಕೆಂಬಾವಿಗೆ ಹೋಗುತ್ತಾರೆ. ಎಂದು ಹೇಳುವ ಮೂಲಕ ಕೂಡಲಸಂಗಮವು ಪ್ರಾಚೀನ ಕಾಲದಲ್ಲಿ ಒಂದು ಶುದ್ಧ ಮತ್ತು ಪ್ರಸಿದ್ಧ ಶೈವ ಕೇಂದ್ರವಾಗಿ ಬೆಳಕನ್ನು ಚೆಲ್ಲಿತು ಎಂದು ತಿಳಿಯಬಹುದಾಗಿದೆ.

೪.೨. ನಾಥ ಸಂಪ್ರದಾಯ

ಭಾರತದ ಸಾಮಾಜಿಕ, ಧಾರ್ಮಿಕ, ರಾಜಕೀಯ ಬದುಕಿನಲ್ಲಿ ನಾಥ, ಕಾಳಾಮುಖ, ಶಾಕ್ತ, ಸೂಫಿ, ವಜ್ರಯಾನ, ಕಾಪಾಲಿಕ ಮುಂತಾದ ಪಂಥಗಳು ಆಳವಾದ ಪ್ರಭಾವ ಬೀರಿವೆ. ನಾಥ ಪಂಥ ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಹಲವಾರು ಧಾರ್ಮಿಕ ಪ್ರಸಿದ್ಧ ಕ್ಷೇತ್ರಗಳಲ್ಲಿ ಸಿಗುವ ಕುರುಹುಗಳನ್ನ ನೋಡಿದಾಗ ಬಹುತೇಕ ಕಡೆಗಳಲ್ಲಿ ನಾಥ ಸಂಪ್ರದಾಯದ ಹಲವಾರು ಆಚರಣೆಗಳು ಮತ್ತು ಧಾರ್ಮಿಕ ವಿಧಿ-ವಿಧಾನಗಳು ನಾಥ ಪಂಥ ಸಂಪ್ರದಾಯದ ಕುರುಹುಗಳಾಗಿ ನೆಲೆ ಕಂಡುಕೊಂಡಿವೆ.

ಭಾರತದ ಪ್ರಾಚೀನ ಪಂಥಗಳಲ್ಲಿ ಈ ನಾಥ ಪಂಥವೂ ಒಂದು. ಜಗತ್ತಿನ ಹಲವು ರಾಷ್ಟ್ರಗಳಲ್ಲಿ ವಿಸ್ತರಿಸಿಕೊಂಡಿರುವ ಈ ಪಂಥ ಪ್ರಮುಖವಾಗಿ ನೇಪಾಳ, ಟಿಬೇಟ, ಅಪಘಾನಿಸ್ತಾನ,

ಪಾಕಿಸ್ತಾನ ಹೀಗೆ ಹಲವು ದೇಶಗಳಲ್ಲಿ ಹರಡಿದೆ. ದಕ್ಷಿಣ ಏಷ್ಯಾದ ತುಂಬ ಹಲವಾರು ರಾಷ್ಟ್ರಗಳಲ್ಲಿ ನಾಥ ಸಂಪ್ರದಾಯ ಕೇಂದ್ರಗಳು ಇಂದಿಗೂ ಕಾಣಸಿಗುತ್ತವೆ. ಸುಮಾರು ಹತ್ತು ಶತಮಾನಗಳಿಂದ ಕರ್ನಾಟಕದಲ್ಲಿ ನಾಥ ಸಂಪ್ರದಾಯ ಕಾಪಾಲಿಕ ಹಾಗೂ ಜೋಗಿ ಸಮುದಾಯಗಳು ನಾಡಿನಾದ್ಯಂತ ಹಲವಾರು ಊರುಗಳಲ್ಲಿ ಇರುವುದನ್ನು ಇಂದಿಗೂ ಕಾಣಸಿಗುತ್ತವೆ. ಬೆಟ್ಟ-ಗುಡ್ಡಗಳಲ್ಲಿ, ಕಣಿವೆ-ಕೊಳಗಳಲ್ಲಿ, ಗುಡಿ, ಸಮಾಧಿ, ಶಿಲ್ಪ ಹಾಗೂ ಶಾಸನ ಈ ನಾಥ ಸಂಪ್ರದಾಯದ ಅಸ್ತಿತ್ವಗಳಾಗಿವೆ.

'ನಾಥ' ಶಬ್ದ ರಕ್ಷಕ ಅಥವಾ ಆಶ್ರಯದಾತ ಎಂಬ ಅರ್ಥದಲ್ಲಿ ಅಥರ್ವವೇದ ಹಾಗೂ ತೈತ್ತರೀಯ ಬ್ರಾಹ್ಮಣದಲ್ಲಿ ದೊರೆಯುತ್ತದೆ.[೨೨] ಮಹಾಭಾರತದಲ್ಲಿ 'ಒಡೆಯ', 'ಪತಿ' ಎಂಬ ಅರ್ಥದಲ್ಲಿ ಬಳಕೆಗೊಂಡಿದೆ. ಜೈನರು ಮತ್ತು ವೈಷ್ಣವರು ಕೂಡಾ ಈ ಶಬ್ದ ಅತ್ಯಂತ ದೊಡ್ಡದೇವರು ಎಂಬ ಅರ್ಥದಲ್ಲಿ ಬಳಕೆಗೊಂಡಿದೆ. ಪರಾವರ್ತಿಕಾಲದಲ್ಲಿ ಯೋಗಪರವಾದ ಪಾಶುಪತ ಶೈವ ಮತವೇ ನಾಥ ಸಂಪ್ರದಾಯವಾಗಿ ರೂಢಿಗೊಂಡಿತು. ಆಗ 'ನಾಥ' ಶಬ್ದ 'ಶಿವ' ಎಂಬ ಅರ್ಥದಲ್ಲಿ ಪ್ರಚಲಿತವಾಯಿತು. ರಾಜಗುಹೆ ಎಂಬ ಗ್ರಂಥದಲ್ಲಿ ನಾಥ ಶಬ್ದಕ್ಕೆ ಈ ರೀತಿಯ ವ್ಯಾಖ್ಯೆ ನೀಡಲಾಗಿದೆ.

ನಕಾರೋನಾದಿರೂಪ : ಥಕಾರ : ಸ್ಥಾಪ್ಯತೇ ಸದಾ।
ಭುವನತ್ರಯಮೇವೈಕ : ಶ್ರೀ ಗೋರಕ್ಷ ನಮೋಸ್ತುತೇ![೨೩]

'ನಾ' ಎಂದರೆ ಅನಾದಿ ರೂಪ 'ಥ' ಎಂದರೆ ಮೂರು ಲೋಕಗಳ ಸ್ಥಿತಿಗೆ ಕಾರಣ ಅನಾದಿ ಪರಶಿವ ವಸ್ತುವಿಗೆ ನಾಥ ಎಂಬುದು ಪರ್ಯಾಯ ನಾಮ. ಹೀಗೆ ನಾಥ ಶಬ್ದ ಬಹಳ ವಿಶಾಲವಾದ ಅರ್ಥವನ್ನು ಒಳಗೊಂಡಿದ್ದು, ಬ್ರಹ್ಮಾಂಡದ ಕಲ್ಪನೆಯ ರೂಪಕವಾಗಿ ಜಗತ್ ರಕ್ಷಕ ಎಂಬ ಉದ್ದೇಶವಿಟ್ಟುಕೊಂಡು ನಾಥ ಎಂಬ ಪದವನ್ನು ಬಳಕೆ ಮಾಡಿದಂತೆ ಕಂಡುಬರುತ್ತದೆ. ಸಾಧಕನು ಸ್ವಾನುಭವದಿಂದಲೇ ಪರತತ್ವ ಪಡೆಯಬೇಕು. ಇದಕ್ಕೆ ಗುರುವಿನ ಮಾರ್ಗದರ್ಶನ ಬೇಕು. ಗುರುಮುಖೇನ ವಿದ್ಯೆ ಪಡೆಯುವ ಎಲ್ಲ ಪಂಥಗಳು ಹುಟ್ಟಿನಿಂದ ಬರುವ ಶ್ರೇಷ್ಠ ಕನಿಷ್ಠಗಳನ್ನು ಒಪ್ಪುವುದಿಲ್ಲ. ಗ್ರಂಥಸ್ಥ ಜ್ಞಾನವನ್ನು ದೊಡ್ಡದು ಎಂದು ತಿಳಿಯುವುದಿಲ್ಲ ಈ ಕರ್ತವ್ಯವೇ ನಾಥವು ವೇದಶಾಸ್ತ್ರಗಳನ್ನು ಪ್ರಮಾಣವೆಂದು ಒಪ್ಪದಿರಲು ಕಾರಣವಾಯಿತು. ವೇದ, ಸ್ಮೃತಿ, ಶಾಸ್ತ್ರ ಹಾಗೂ ಯಾಗಗಳನ್ನು ನಿರಾಕರಿಸುವ ವಿಷಯದಲ್ಲಿ ನಾಥವು ಭಾರತದ ಅನೇಕ ಅನುಭಾವಿ ಪಂಥಗಳು ಸಮಾನ ಮನಸ್ಕವಾಗಿವೆ. ಶರಣರು ಕೂಡ ವೇದಕ್ಕೆ ಒರೆಯ ಕಟ್ಟುವ ಶಾಸ್ತ್ರಕ್ಕೆ ನಿಗಳವನ್ನಿಕ್ಕುವ ಮಾತನಾಡುತ್ತಾರೆ. ತರ್ಕವನ್ನು ತಗರ ಹೊರಟೆ ಎಂದು ಜರಿಯುತ್ತಾರೆ. ನಾಥರಿಗೆ ಈ ನಿಲುವುಗಳು ಮೂಲತಃ ಬೌದ್ಧರಿಂದ ಹರಿದು ಬಂದವು ನಾಥರಿಂದ ಮುಂದೆ ದತ್ತ ನಾನಕ, ಕಬೀರ ಪಂಥಗಳಿಗೆ ಇವು ಹರಿದವು. ಕನ್ನಡದ ಶರಣರಿಗೂ ಹರಿದಿರಬಹುದು.

ಒಬ್ಬರು ಮತ್ತೊಬ್ಬರಿಗೆ ಕೊಟ್ಟರು ಎಂಬ ಪರಿಭಾಷೆಯೆ ಬಹುಶಃ ಇಲ್ಲಿ ಉಚಿತವಲ್ಲ. ಭಾರತದ ಎಲ್ಲ ಅನುಭಾವಿ ಪಂಥಗಳು ನಾಡಿನುದ್ದಕ್ಕೂ ಹರಿದ ಒಂದು ನದಿಯ ನೀರನ್ನು ತಮ್ಮತಮ್ಮ ಊರ ದಡದಲ್ಲಿ ಕುಡಿದವು. ಆದರೆ ಈ ದಾರ್ಶನಿಕ ನಿಲುವುಗಳು ಸಾಮಾಜಿಕ ರಾಜಕೀಯ ವ್ಯವಸ್ಥೆಯ ಮೇಲೆ ಪರಿಣಾಮ ಬೀರುವ ಕಾರಣ ಸಹಜವಾಗಿ ನಾಥರು ಒಳಗೊಂಡಂತೆ ಬಹುತೇಕ ಯೋಗಿಕ ಪಂಥಗಳು ಸನಾತನ ವಾದಿಗಳ ದ್ವೇಷವನ್ನು ಕಟ್ಟಿಕೊಳ್ಳಬೇಕಾಯಿತು.

ನಾಥವು ಒಂದು ಬಗೆಯಲ್ಲಿ ವಿರಕ್ತಪಂಥ. ಹಳೆಯ ಚಿಂದಿಯಿಂದ ಮಾಡಿದ ಕಂತೆಯಿಂದ ದೇಹ ಮುಚ್ಚಿಕೊಂಡು ಹಾಳುದೇಗುಲಗಳಲ್ಲಿ ಗಿರಿಕಂದರಗಳಲ್ಲಿ ವಾಸಮಾಡಿಕೊಂಡು ಇರುವ ಅವದೂತನು ಗುರುಪಾದವನ್ನು ಪೂಜಿಸಿಕೊಂಡು ಸುಖವಾಗಿರುತ್ತಾರೆ ಎಂದು ಚರ್ಪಟನಾಥ ಹೇಳುತ್ತಾನೆ. ಅಕ್ಕಮಹಾದೇವಿಯು ಹಸಿವಾದೊಡೆ ಭಿಕ್ಷಾನ್ನಗಳುಂಟು, ಶಯನಕ್ಕೆ ಹಾಳು ದೇಗುಲವುಂಟು, ಎಂದು ಹೇಳುವುದಕ್ಕೆ ಇದು ಸಮೀಪವಾಗಿದೆ. ಮನೆ, ಸಂಸಾರಗಳ ಹಂಗಿಲ್ಲದೆ ಚಾರಣ ಮಾಡುವುದು ಲೌಕಿಕ ಸುಖಿಗಳಾಗಿ ಹಂಬಲಿಸದಿರುವುದು ಯೋಗಿಗಳ ಲಕ್ಷಣ ಈ ವಿರಕ್ತಿಗೆ ಇನ್ನೊಂದು ಆಯಾಮವಿದೆ. ಅದು ಹೆಣ್ಣು ಸಂಸಾರ ಕುಟುಂಬದ ವಿಮುಖತೆ. ವಚನಕಾರರಲ್ಲಿ ಗುರುಮುಖೇನ ವಿದ್ಯೆಯನ್ನು ಪಡೆಯುವ ಪರಿಪಾಠ, ಸಂಸಾರಕ್ಕೆ ಅಂಟಿಕೊಂಡಿರದೆ ಬಹುತೇಕ ಯೋಗಿಕ ಸಾಧನೆಯು ಪ್ರಮುಖವಾಗಿ ತಮ್ಮ ಕಾಯಕ ನಿಷ್ಠೆಯಲ್ಲಿ ಈ ಯೋಗ ಸಾಧನೆಯನ್ನು ಕಂಡುಕೊಂಡಿದ್ದಾರೆ. ಹೀಗೆ ಸಾಧನೆಯನ್ನು ಮಾಡುವ ಕ್ಷೇತ್ರಗಳು ಶರಣರ ತಾತ್ವಿಕ ನಿದರ್ಶನಗಳನ್ನು ಸಾರುವ ಕೇಂದ್ರಗಳಾಗಿ ಪ್ರಾಮುಖ್ಯತೆಯನ್ನು ಕಂಡುಕೊಂಡವುಗಳಾಗಿವೆ. ಅಂತಹ ಕ್ಷೇತ್ರಗಳಲ್ಲಿ ಕೂಡಲ ಸಂಗಮವು ಒಂದಾಗಿರುವುದನ್ನು ಇಲ್ಲಿ ಗಮನಿಸಬೇಕಾಗುತ್ತದೆ.

ಕೂಡಲ ಸಂಗಮ ಕ್ಷೇತ್ರವು ಪೂರ್ವದಲ್ಲಿ ನಾಥ ಸಂಪ್ರದಾಯ ಕೇಂದ್ರವಾಗಿತ್ತು ಎಂದು ಹೇಳಲು ಹಲವಾರು ಅಂಶಗಳು ನಮಗೆ ಗೋಚರಿಸುತ್ತವೆ. ನಾಥ ಸಂಪ್ರದಾಯದ ಹಲವಾರು ಆಚರಣೆಗಳು ಕುರುಹುಗಳು ನಮಗೆ ಈ ಅಂಶವನ್ನು ಗಟ್ಟಿಗೊಳಿಸುತ್ತವೆ. ಶಾಸನ ಕಾವ್ಯಗಳಲ್ಲಿ ಸಮಾನಾರ್ಥವಾಗಿ ನಾಥ ಸಂಪ್ರದಾಯದ ಕಪ್ಪೆ, ಕಪ್ಪಡಿ ಶಬ್ದಗಳು ಕಂಡುಬರುತ್ತವೆ. ಇಲ್ಲಿಯ ಕಪ್ಪೆ ಎಂಬುದೇ ಮೂಲ ಶಬ್ದವಾಗಿದ್ದು ಇದಕ್ಕೆ ಅಡಿ ಸೇರಿಕೊಂಡು ಕಪ್ಪೆಯಡಿ–ಕಪ್ಪಡಿ ರೂಪ ಸಿದ್ಧವಾಗಿದೆ. ಎಂದು ಸ್ಥೂಲವಾಗಿ ಇದರ ಅರ್ಥ ಶೈವಸನ್ಯಾಸಿ ಎಂದು ಎಂ.ಎಂ. ಕಲಬುರ್ಗಿಯವರು ಅಭಿಪ್ರಾಯಪಡುತ್ತಾರೆ.[೨೪] ಆದರೆ ಇದರ ನಿಷ್ಪತ್ತಿಯು ಸಮಸ್ಯೆಯಾಗಿಯೇ ಉಳಿದುಕೊಂಡಿದೆ. ಕೂಡಲ ಸಂಗಮದಲ್ಲಿ ನಾಥ ಸಂಪ್ರದಾಯವನ್ನು ಸೂಚಿಸುವ ಪ್ರಾಚೀನ ಅನೇಕ ಆಕರಗಳಿವೆ. ಬಾಗೇವಾಡಿಯಂತೆ ಕೂಡಲಸಂಗಮದಲ್ಲಿಯೂ ನಾಥ ಪಂಥದ ಚೌರಂಗಿ ನಾಥನನ್ನು ಸೂಚಿಸುವ ಸಾರಂಗ ಮಠವಿದೆ. ಕಪ್ಪಡಿ ಶಬ್ದವು ನಾಥ ಸಂಪ್ರದಾಯದ ಪ್ರಸಿದ್ಧ ಸನ್ಯಾಸಿ ಚರ್ಪಟಿ ನಾಥನನ್ನು ಸೂಚಿಸಬಹುದಾಗಿದೆ. ಹೀಗೆ ಬಾಗೇವಾಡಿ ಕಪ್ಪಡಿ ಸಂಗಮಗಳಲ್ಲದೆ, ಬಸವಣ್ಣನ ಮುಂದುವರೆದ ಬದುಕಿನ ನೆಲೆಗಳಾದ ಮಂಗಳವಾಡಿ ಮತ್ತು ಕಲ್ಯಾಣಗಳು ನಾಥ ಸಂಪ್ರದಾಯದ ನೆಲೆಯಾಗಿರುವುದಕ್ಕೆ

ಅನೇಕ ಆಧಾರಗಳು, ಅವಶೇಷಗಳು ಅಲ್ಲಿ ಸಿಗುತ್ತವೆ. ಇದಕ್ಕೆ ಗಟ್ಟಿಯಾಧಾರವೆಂದರೆ ಕಲ್ಲೇದೇವಪುರ ಶಾಸನ. ಇಲ್ಲಿ ಚದುರಂಗಿನಾಥ ಗೋಕಖನಾಥರೊಡನೆ ಚೆನ್ನ, ಹೊನ್ನ, ಬಂಕ, ಬಸವರಾಜ ಇತ್ಯಾದಿ ಶರಣರನ್ನು ಹೆಸರಿಸಲಾದುದನ್ನು ಕಪಟರಾಳ ಕೃಷ್ಣರಾಯರು ಸೂಚಿಸುತ್ತಾರೆ.[೨೫] ಕೂಡಲ ಸಂಗಮ ಕ್ಷೇತ್ರದ ಆದಿ ದೈವವಾದ 'ಸಂಗಮನಾಥ' ಈ ಹೆಸರಿನಲ್ಲಿಯೇ ನಾಥ ಎಂಬ ಪದ ಬಳಕೆಯಾಗಿರುವುದು ಬಹುಶಃ ಆ ಸಂಪ್ರದಾಯದ ಕುರುಹನ್ನು ಇಮ್ಮಡಿಗೊಳಿಸುತ್ತದೆ. ನಾಥ ಸಂಪ್ರದಾಯದ ಆಚರಣೆಗಳನ್ನು ನೋಡಿದಾಗ ಕೂಡಲ ಸಂಗಮವು ನಾಥ ಸಂಪ್ರದಾಯ ಕೇಂದ್ರವಾಗಿತ್ತು ಎಂದು ಹೇಳಬಹುದು. ನಾಥರ ಮುಖ್ಯ ಆಚರಣೆಗಳು ಕೆಲವು ನಾಥ ಪಂಥಗಳಿಂದ ಬಂದವುಗಳಾಗಿದ್ದು ಮತ್ತೆ ಕೆಲವು ಸ್ಥಳೀಯ ಪರಿಸರದಿಂದ ಬಂದಂಥವುಗಳು. ನಾಥರ ಮುಖ್ಯ ಆಚರಣೆಗಳನ್ನು ದೀಕ್ಷೆ, ಶೈಲಿಧಾರಣೆ, ಶವಸಂಸ್ಕಾರ, ಧುನಿ, ಝುಂಡಿಯಾತ್ರೆ, ಸಿದ್ಧಭುಕ್ತಿ, ಮುಂತಾದ ಆಚರಣೆಗಳನ್ನು ನೋಡಿದಾಗ ಸಂಗಮ ಕ್ಷೇತ್ರದಲ್ಲಿ ಇಂತಹ ಆಚರಣೆಗಳು ಇಂದಿಗೂ ಪ್ರಚಲಿತವಾಗಿದ್ದು ಈ ಕುರಿತಾದ ಮಾಹಿತಿಗೆ ಪುಷ್ಟಿಕೊಡುತ್ತವೆ.

ಕಪ್ಪೆ ಕಪ್ಪಡಿ ಶಬ್ದಗಳನ್ನು ನೆನಪಿಸುವ ಬೇರೆ ಹಲವು ಹೆಸರುಗಳನ್ನು ಕಪ್ಪಣ್ಣ ಹೆಸರಿನ ವ್ಯಕ್ತಿನಾಮಗಳು ಈಗಲೂ ಬಳಕೆಯಲ್ಲಿವೆ. ಪ್ರಾಚೀನ ಲಿಂಗಾಯತ ಸ್ವಾಮಿಯೊಬ್ಬರ ಹೆಸರು ಕೆಂಪಿನಂಜಯ್ಯ ಎಂದಿದ್ದು ಇದು ಕಪ್ಪಿ ನಂಜಯ್ಯ ಎಂದು ಸಿಗುತ್ತದೆ. ಇದರ ಮೂಲ ರೂಪ ಕಪ್ಪೆ ನಂಜಯ್ಯ ಎಂದಿರಬಹುದು. ಬೇಲೂರಿನ ಚೆನ್ನಕೇಶವ ದೇವಾಲಯದ ಆವರಣದಲ್ಲಿರುವ ಕಪ್ಪೆ ಚನ್ನಿಗರಾಯ ಹೆಸರಿನ ದೇವರನ್ನು ಕಪ್ಪೆ ಹೊಲೆಯರು ಎಂಬ ಸಮುದಾಯದ ಹೆಸರನ್ನು ಇಲ್ಲಿ ನೆನೆಯಬಹುದು. ಗದಗ ಹತ್ತಿರದ ಕಪ್ಪತಗುಡ್ಡ ಹೆಸರಿನ ಮೂಲ ಕರ್ಪಟ ಗುಡ್ಡವಾಗಿರುವ ಸಾಧ್ಯತೆ ಇದೆ. ಹೀಗೆ ನಾಥ ಪಂಥ ಕಪ್ಪಡಿಕ್ಷೇತ್ರ ಶರಣ ಧರ್ಮಗಳ ಸಂಬಂಧವನ್ನು ಹೇಳುತ್ತದೆ ಎಂದು ಕಲಬುರ್ಗಿಯವರು ಹೇಳುತ್ತಾರೆ.[೨೬]

ನಾಥರಿಗೆ ಅವಧೂತರೆಂದು ಕರೆಯುತ್ತಿದ್ದರು. ಬಾಲಸಂಗಯ್ಯನ ಅಪ್ರಮಾಣ ಕೂಡಲಸಂಗಮದೇವ ಮುದ್ರಿಕೆಯ ವಚನಗಳ ಸಂಗ್ರಹದಲ್ಲಿ ಕೂಡಲಸಂಗಮವಧೂತನ ವಚನಗಳು ಶೀರ್ಷಿಕೆಯಿಂದ ಇಲ್ಲಿಯ ಕೂಡಲ ಸಂಗಮ ಅವಧೂತ ಹೆಸರುಗಳನ್ನು ಗಮನಿಸಿ ವಚನ, ವಚನಧರ್ಮ, ವಚನ ಸಾಹಿತ್ಯಗಳ ಮೂಲವನ್ನು ಬಹುಶಃ ನಾಥ ಸಂಪ್ರದಾಯದಲ್ಲಿ ಹುಡುಕಬಹುದೆನಿಸುತ್ತದೆ. ಅಲ್ಲಮ, ಅಕ್ಕಮಹಾದೇವಿಯರು ನಾಥ ಮೂಲದಿಂದ ಬಂದಿರಬಹುದೆಂದು ಈಗಾಗಲೇ ಅನೇಕರು ಊಹಿಸಿದ್ದಾರೆ. ವಚನಕಾರರಿಗೆ ನಾಥ ಪಂಥದ ಸಂಪರ್ಕವಿದ್ದ ಬಗ್ಗೆ ಅವರ ವಚನಗಳಲ್ಲಿ ಅನೇಕ ಆಧಾರಗಳಿವೆ. ಗೋರಕ್ಷ ಹೆಸರಿನ ವಚನಕಾರನಿದ್ದು ಅವನ ಹನ್ನೊಂದು ವಚನಗಳು ಸಿಕ್ಕು ಪ್ರಕಟವಾಗಿವೆ. ನಾಥ ಸಂಪ್ರದಾಯದ ಸಾಹಿತ್ಯ ಪ್ರಕಾರದ ಪ್ರಭಾವದಲ್ಲಿ ಶರಣರ ಬೆಡಗಿನ ವಚನ ಪ್ರಕಾರ ಬೆಳೆದಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ.[೨೭] ಗಮನಿಸಬೇಕಾದ ಅಂಶವೆಂದರೆ ಗೋರಕ್ಷನ ಈ ಹನ್ನೊಂದು ವಚನಗಳಲ್ಲಿ ಬೆಡಗಿನ ವಚನಗಳೇ ಅಧಿಕವಾಗಿವೆ. ಇವನ ಮುದ್ರಿಕೆ

'ಗೋರಕ್ಷ ಪಾಲಕ ಮಹಾಪ್ರಭು ಸಿದ್ದ ಸೋಮನಾಥ ಲಿಂಗ' ಎಂದಿದ್ದು ಇಲ್ಲಿಯ ನಾಥ ಶಬ್ದ ಗಮನಾರ್ಹವೆನಿಸುತ್ತದೆ. ಇದಲ್ಲದೆ ಹುಲಿಗೆರೆ ವರದ ಸೋಮನಾಥ (ಅಗ್ವಣಿಹೊನ್ನಯ್ಯ), ಸಿದ್ದ ಸೋಮನಾಥ (ಅಮುಗೆ ದೇವಯ್ಯ), ನಾಸ್ತಿನಾಥ (ಗೊಗ್ಗವ್ವೆ), ರಾಮನಾಥ (ಜೇಡರ ದಾಸಿಮಯ್ಯ), ಕಾಮಹರಪ್ರಿಯ ರಾಮನಾಥ (ತಳವಾರ ಕಾಮದೇವಯ್ಯ) ಹೀಗೆ ಹಲವಾರು ವಚನಕಾರರ ಮುದ್ರಿಕೆಗಳು ನಾಥ ಸಂಪ್ರದಾಯವನ್ನು ನೆನಪಿಸುತ್ತವೆ. ಇವುಗಳನ್ನು ಬಿಟ್ಟರೆ ವಚನಗಳಲ್ಲಿ ಆಗಾಗ ನೇರವಾಗಿ ನಾಥಪಂಥ ನಾಥ ಪುರುಷರ ಉಲ್ಲೇಖ ಕಂಡುಬರುತ್ತದೆ.

ವ್ಯಾಳಿ, ಚರ್ಪಟಿ, ಗೋರಾಂಟ, ರತ್ನಘೋಷ
ಭೂತನಾಥ ನಾಗಾರ್ಜುನ, ಮಚ್ಚೇಂದ್ರ, ಗೋರಕ್ಷ, ಮಂಜಿನಾಥ
ನವನಾಥ ಸಿದ್ಧರೊಳಗಾದ ಸಮಸ್ತ ಸಿದ್ಧಿ ಬುದ್ಧಿಗಳಿಂ
ಲಿಂಗವನ್ನರಸಿ ಅಟ್ಟಿ ಮುಟ್ಟಿ ಹಿಡಿದೆವೆಂಬುದು ಸಿದ್ಧಯೋಗ[೨೮]

ಇಲ್ಲಿಯ ಸಿದ್ಧಯೋಗಿಗಳಾದ ನವನಾಥರ ಪ್ರಸ್ತಾಪವನ್ನು ಗಮನಿಸಬಹುದು. ಎತ್ತಿಹೇಳಬೇಕಾದ ಇನ್ನೊಂದು ವಿಷಯವೆಂದರೆ ಗೋರಕ್ಷನ ವಚನ ಮತ್ತು ಬಸವಣ್ಣನ ವಚನಗಳು ಹೋಲಿಕೆಯಾಗುವುದನ್ನು ಹಲವು ವಚನಗಳಲ್ಲಿ ಕಾಣುತ್ತೇವೆ. ಉದಾಹರಣೆಗೆ ಗೋರಕ್ಷನ ಮಹಾಗಣನಾಥನ ಐವತ್ತೆರಡು ಸರ ಹರಿದವು ಎಂಬುದು ಗೋರಕ್ಷನ ಮಹಿತಳನ ಜಡೆ ಸೀದು ಮರೀಚಿಕನ ಶಿರ ಬೆಂದು ರುದ್ರನ ತ್ರಿವಿದ ಕಣ್ಣುಮುಚ್ಚಿತ್ತು' ಎಂಬ ವಚನ ಬಸವಣ್ಣನಲ್ಲಿ 'ಮಹಿತಳನ ಜಡೆ ಸೀದಿತ್ತು, ಮರೀಚಕನ ಶಿರ ಬೆಂದಿತ್ತು, ರುದ್ರನ ಹಾವಿಗೆ ಉರಿಯಿತ್ತು' ಎಂದು ಕಂಡುಬರುತ್ತವೆ. ಈ ಅಭಿವ್ಯಕ್ತಿಗಳು ಎರಡೂ ಪಂಥಗಳ ಸಂಬಂಧವನ್ನು ಸೂಚಿಸಿದರೆ, ಶರಣರ ಬೇರೆ ಕೆಲವು ವಚನಗಳು ನೇರವಾಗಿ ನಾಥಪಂಥವನ್ನೂ, ನಾಥಪಂಥೀಯ ಮಹಾಪುರುಷರನ್ನೂ ಹೆಸರಿಸಿ, ವಾಮಮಾರ್ಗಕ್ಕೆ ಹೊರಳುತ್ತಿದ್ದ ಈ ಪಂಥದ ಬಗೆಗಿನ ತಮ್ಮ ಬೇಸರವನ್ನು ಹೀಗೆ ವ್ಯಕ್ತಪಡಿಸುತ್ತವೆ.

ಮಹಾಂತಿನ ಕೂಡಲ ದೇವರೆಂಬ ಪಾಷಂಡಿ ವೇಷದಾರಿ
ಉದರ ಪೋಷಕರ ಮೂಳ ಹೊಲೆಯರ ನೇನೆಂಬೆನಯ್ಯ[೨೯]

ನಾಥಪಂಥದ ಬಗೆಗಿರುವ ಶರಣರ ನಿರಾಕರಣೆಯನ್ನು ಸೂಚಿಸುತ್ತವೆ. ಗೋರಕ್ಷನನ್ನು ಅಲ್ಲಮ ವಾದದ ಮೂಲಕ ತೆಗಳಿದ್ದನ್ನು ಇಲ್ಲಿ ನೆನೆಪಿಸಿಕೊಳ್ಳಬಹುದು. ಹನ್ನೆರಡನೆಯ ಶತಮಾನದ ಹೊತ್ತಿಗೆ ಈ ಪಂಥವು ಮದ್ಯ, ಮಾಂಸ, ಮಹಿಳೆ ಇತ್ಯಾದಿ ವ್ಯಸನಗಳಿಗೆ ಹೊರಳಿದ್ದಿತು. ವಜ್ರಕಾಯ ಮಾಡಿಕೊಳ್ಳುವ ಹವ್ಯಾಸ ಬೆಳೆಸಿಕೊಂಡಿದ್ದಿತು. ಇವೆ ಮೊದಲಾದ ಅವರ ದೋಷಗಳನ್ನು ನಿರಾಕರಿಸಿ ವ್ಯಕ್ತಿಗತವಾದ ಯೋಗ ಮತ್ತು ಸಮಾಜಗತವಾದ ವರ್ಣಬೇಧರಹಿತ ಲಿಂಗಬೇಧರಹಿತ ಸಾಮಾಜಿಕ ನೀತಿಗಳನ್ನು ಸ್ವೀಕರಿಸಿ ಇಷ್ಟಲಿಂಗ, ಜಂಗಮ, ಕಾಯಕ, ದಾಸೋಹ ಮೊದಲಾದ ಹೊಸ ಅಂಶಗಳನ್ನು ಜೋಡಿಸಿ ಬಸವಣ್ಣ ಲಿಂಗಾಯತ ಹೆಸರಿನ ಹೊಸಧರ್ಮವನ್ನು ಅಸ್ತಿತ್ವಕ್ಕೆ

ತಂದನು. ಹೀಗಾಗಿ ಬಸವ ಧರ್ಮವು ಯಾವುದೇ ವೇದಾಗಮಗಳೆಂಬ ಮಾರ್ಗೀಯ ನೆಲೆಯಿಂದ ತಲೆಯೆತ್ತದೆ ಮುಕ್ತ ಸಮಾಜ ನೀತಿಯ ನಾಥ ಮೊದಲಾದ ದೇಶಿಯ ನೆಲೆಯಿಂದಲೆ ಎದ್ದು ಬಂದ ಧರ್ಮವಾಗಿದೆ ಎನಿಸುತ್ತದೆ. ವೀರಶೈವ ದೀಕ್ಷೆ ಪಡೆಯದೆ ಗುರು ಸಂಪ್ರದಾಯದ ನಾಥ ಪಂಥದಿಂದಲೇ ಹೊಸದಾರಿ ಕಂಡುಕೊಂಡನೆನಿಸುತ್ತದೆ. ಇಲ್ಲಿ ಪ್ರಮುಖವಾದ ಅಂಶವೆಂದರೆ ನಾಥರು ಜಾತ್ಯತೀತ ನೀತಿಯನ್ನು ಧಾರ್ಮಿಕ ಕ್ಷೇತ್ರದಲ್ಲಿ ಆಚರಿಸುತ್ತಿದ್ದರು. ಆದರೆ ಸಾಮಾಜಿಕ ಕ್ಷೇತ್ರದಲ್ಲಿ ಅದನ್ನು ಸಹಭೋಜನ ಹಂತದವರೆಗೆ ಮಾನ್ಯ ಮಾಡಿದ್ದರಾದರೂ ರಕ್ತ ಸಂಬಂಧದವರೆಗೆ ವಿಸ್ತರಿಸಲಿಲ್ಲ. ಜಾತ್ಯತೀತತೆಯನ್ನು ಪ್ರತಿಪಾದಿಸುವ ಮರಾಠಿ ಸಂತರು ತಮ್ಮ ಮಕ್ಕಳ ಮದುವೆಯನ್ನು ತಮ್ಮ ಜಾತಿಗಳಲ್ಲಿಯೇ ನೇರವೇರಿಸಿದುದು ಇದಕ್ಕೆ ನಿದರ್ಶನವೆನಿಸುತ್ತದೆ. ಇಂತಹ ದ್ವಂದ್ವನಿಲುವನ್ನು ಶರಣರು ಉಂಬುದು, ಉಡುವುದು ಶಿವಾಚಾರ, ಕೊಂಬುದು ಕೊಡುವುದು ಕುಲಾಚಾರವೆಂಬ ಅನಾಚಾರಿಯ ಮುಖವ ನೋಡಲಾಗದು ಎಂದು ಸಾರಿ ಹೇಳಿದರು. ಈ ಜಾತ್ಯತೀತಯನ್ನು ರಕ್ತಸಂಬಂಧದವರೆಗೂ ವಿಸ್ತರಿಸಿದರು. 'ಕುಲವನರೆಸುವರೆ ಶರಣರಲ್ಲಿ ಜಾತಿ ಸಂಕರವಾದ ಬಳಿಕ ವಕ್ಕುದ ಕೊಂಬೆನವರಲ್ಲಿ ಕೂಸ ಕೊಡುವೆ' ಎಂದು ತಾನು ಆಡಿದ ಮಾತನ್ನು ಬಸವಣ್ಣ ಹರಳಯ್ಯ ಮದುವಯ್ಯಗಳ ಮಕ್ಕಳ ಮದುವೆಯ ಮೂಲಕ ಮಾಡಿ ತೋರಿಸಿದನು. ಅದರ ಪರಿಣಾಮವಾಗಿ ಕಲ್ಯಾಣದಲ್ಲಿ ಘೋರ ಹತ್ಯಾಕಾಂಡ ಸಂಭವಿಸಿತು. ಇಂತಹ ವಿಷಯಗಳಲ್ಲಿ ಶರಣರು ನಾಥರಿಂದ ಭಿನ್ನರಾಗುತ್ತಾರೆ. ಶರಣರ ಇಂತಹ ಜಾತ್ಯತೀತ ನಿಲುವುಗಳು ಕೂಡಲ ಸಂಗಮದಲ್ಲಿ ನಿದರ್ಶನಗಳಾಗಿ ಇಂದು ಹಲವಾರು ಜಾತಿ ಪಂಥದವರು ಒಂದಾಗಿ ಸಹಬಾಳ್ವೆಯನ್ನು ಇಂದಿಗೂ ಈ ಕ್ಷೇತ್ರದಲ್ಲಿ ನಡೆಸಿಕೊಂಡು ಬಂದಿರುವುದನ್ನು ಗಮನಿಸಬಹುದಾಗಿದೆ.

ಆಂಧ್ರಪ್ರದೇಶದ ಶ್ರೀಶೈಲದ ಸಾರಂಗಮಠ ಮತ್ತು ತಮಿಳುನಾಡಿನ ಕುಂಭಕೋಣಂ ಕ್ಷೇತ್ರದ ಸಾರಂಗಂ ಪೆರಿಯ ಮಠ ಇವು ನಾಥ ಸಂಪ್ರದಾಯಕ್ಕೆ ಸಂಬಂಧಿಸಿದ ಮಠಗಳಂತೆ ಕಂಡುಬರುತ್ತವೆ. ಇವು ಸಿಂಹಾಸನ ಮಠವೆಂದು ಪ್ರಸಿದ್ಧವಾಗಿವೆ. ಕೊಳದಲ್ಲಿ ಮುಳುಗಿದ ಕುಂಭವೊಂದು ತೇಲಿದ ಪವಾಡ ನಡೆದ ಕಾರಣ ಇದರ ಮೂಲ ನಾಮ ಕುಂಭಕೊಳ ಎಂದಾಗಿದೆ. ಜನರ ಬಾಯಲ್ಲಿ ಕುಂಭಕೋಣ ಎಂದು ಕರೆಯುವ ರೂಢಿಯಾಗಿದೆ. ಶ್ರೀಶೈಲ ಮತ್ತು ಕುಂಭಕೋಣಗಳಂತೆ ಚೌರಂಗಿನಾಥ ಶಾಖೆಯ ಪ್ರಸಿದ್ಧ ಸಾರಂಗ ಮಠವೆಂದರೆ ಕಪ್ಪಡಿ (ಕೂಡಲ) ಸಂಗಮದ್ದು. ಕಪ್ಪಡಿ ಎಂಬುದು ಬಹುಶಃ ನಾಥ ಸಂಪ್ರದಾಯದ ಕೇಂದ್ರವನ್ನು ಸೂಚಿಸುವ ಒಂದು ಪಾರಿಭಾಷಿಕ ಶಬ್ದವೆಂದು ತೋರುತ್ತದೆ. ಮೈಸೂರು ಜಿಲ್ಲೆಯ ಕೃಷ್ಣರಾಜನಗರ ಬಳಿಯ ಕಪ್ಪಡಿ ಕ್ಷೇತ್ರದಲ್ಲಿಯೂ ನಾಥ ಪಂಥದ ಮಠವಿರುವುದನ್ನು ಇಲ್ಲಿ ಸ್ಮರಿಸಬಹುದು. ಈ ಕಪ್ಪಡಿ ಸಂಗಮ ಕ್ಷೇತ್ರದಲ್ಲಿರುವ ದೇವನಾದ ಸಂಗಮನಾಥನ ಹೆಸರಿನಲ್ಲಿರುವ 'ನಾಥ' ಶಬ್ದವು ಇದು ದ್ವಾಪರ ಯುಗದಲ್ಲಿ ಕಪಿಲ ಕ್ಷೇತ್ರ, ಆಗಿನ ದೇವರು ಸಿದ್ಧೇಶ್ವರನೆಂದು ಇಲ್ಲಿಯ ಸ್ಥಳಪುರಾಣ ಕರೆದುದು ಸಿ.ಪಿ.ಬ್ರೌನ್‌ರವರು ಬಸವಣ್ಣನು ಕಪಿಲೆಗೆ (ಸಂಗಮಕ್ಕೆ) ಹೋಗಿ ಲಿಂಗೈಕ್ಯನಾದನೆಂದು ಹೇಳಿದುದು ಇಂದು ಇಲ್ಲಿರುವ

ಸಾರಂಗ ಮಠವು ಇದು ನಾಥ ಸಂಪ್ರದಾಯದ ಕೇಂದ್ರವೆಂಬುದನ್ನು ಖಚಿತಪಡಿಸುತ್ತದೆ.[೩೦] ಒಟ್ಟಾರೆ ಮತ್ಸೇಂದ್ರನಾಥನ ಶಿಷ್ಯನಾದ ಚೌರಂಗಿನಾಥನು ದಕ್ಷಿಣ ಭಾರತದ ಆಂಧ್ರ, ತಮಿಳುನಾಡು, ಕರ್ನಾಟಕಗಳಲ್ಲಿ ತನ್ನ ಕೇಂದ್ರಗಳನ್ನು ಸ್ಥಾಪಿಸಿದ್ದು ಇವುಗಳಲ್ಲಿ ಕರ್ನಾಟಕದ ಮುಖ್ಯಕೇಂದ್ರ ಕೂಡಲಸಂಗಮವೆಂದು ಅಲ್ಲಿರುವ ಸಂಗಮನಾಥ ದೇವಾಲಯಗಳೆಲ್ಲ ಈ ಚೌರಂಗಿನಾಥ ಸಂಪ್ರದಾಯದ ನೆಲೆಗಳೆಂದು ಹೇಳಬಹುದು.

ಕೂಡಲ ಸಂಗಮದಲ್ಲಿ ಇಂದಿಗೂ ಮೇಲಿನ ಮಠ, ಕೆಳಗಿನ ಮಠ ಹೆಸರಿನ ಎರಡು ಸಾರಂಗ ಮಠಗಳಿವೆ. ಈ ಮಠಗಳಲ್ಲಿರುವ ಹಸ್ತಪ್ರತಿ ಬಳಸಿ ಫ.ಗು. ಹಳಕಟ್ಟಿಯವರು ಸಾರಂಗಮಠಾಧೀಶ್ವರರು ಹೆಸರಿನ ಪುಸ್ತಕ ಪ್ರಕಟಿಸಿದ್ದಾರೆ. ಇದರಲ್ಲಿ ಮುಸಲ್ಮಾನ ಆಳ್ವಿಕೆ ಕಾಲದ ಸಾರಂಗದೇವ, ಶಿವಸಂಗಪ್ಪಯ್ಯ, ಕಾಶೀದೇವ, ಸೂರಪ್ಪಯ್ಯ, ಸಣ್ಣಸಾರಂಗೇಶ್ವರ ಇವರ ಚರಿತ್ರೆ ಅಲ್ಲಲ್ಲಿ ಸ್ಥಾಪಿತವಾದ ಸಾರಂಗಮಠಗಳ ವಿವರವಿದೆಯೇ ಹೊರತು ಈ ಮಠ ಸಂಪ್ರದಾಯದ ಹುಟ್ಟು ಬೆಳವಣಿಗೆ ಅದು ನಾಥ ಪಂಥದಿಂದ ವೀರಶೈವಕ್ಕೆ ಹೊರಳಿದ ಸಂದರ್ಭ ಇತ್ಯಾದಿ ವಿಷಯಗಳಲ್ಲಿ ಕೂಡಲಸಂಗಮದ ಸಾರಂಗಮಠವು ಆಮೇಲೆ ಇಂದಿನ ಪಂಚಾಚಾರ್ಯ ಪರಂಪರೆಯ ಮರುಳಸಿದ್ಧ ಶಾಖೆಗೆ ಸೇರಿಹೋಯಿತೆಂಬ ವಾದಗಳಿವೆ.[೩೧]

ಕೂಡಲ ಸಂಗಮದ ಸಂಗಮನಾಥ ದೇವಾಲಯದ ಹೊರಭಾಗಗಳಲ್ಲಿ ಕೆಲವೊಂದಿಷ್ಟು ಲೈಂಗಿಕ ಪ್ರತಿಮೆಯ ಶಿಲ್ಪಗಳು ಇರುವುದನ್ನು ಕಾಣುತ್ತೇವೆ. ಇಂತಹ ಶಿಲ್ಪಗಳನ್ನು ನಾಥ ಸಂಪ್ರದಾಯದ ಕೇಂದ್ರಗಳ ದೇವಾಲಯಗಳಲ್ಲಿ ಬಹುಪಾಲು ಇರುವುದನ್ನು ನೋಡಿದಾಗ ಇದು ನಾಥ ಸಂಪ್ರದಾಯವೆಂಬುದು ತಿಳಿದುಬರುತ್ತದೆ. ಜನಪದ ನಾಥ ಸಾಹಿತ್ಯದಲ್ಲಿ ಭೈರವ ಅಥವಾ ಜೋಗಿಯ ಕಾಮ ಪ್ರೇಮಗಳ ಒಂದು ಪ್ರತಿಮೆ ಅವನ ಚಟುವಟಿಕೆಗಳು ಕೃಷ್ಣನ ರಾಸಲೀಲೆಯನ್ನು ಹೋಲುತ್ತವೆ. ಅದರಲ್ಲೂ ಪಶುಪಾಲಕ ಸಮುದಾಯಗಳಿರುವ ಪ್ರದೇಶಗಳಲ್ಲಿ ಕೃಷ್ಣನ ಶೃಂಗಾರ ಕಥೆಗಳು ಜೋಗಿಗೆ ಆರೋಪಿತವಾಗುವುದು ಸುಲಭ. ನುಂಕಮಲೆ ಭಾಗದಲ್ಲಿ ಸೌಂದರ್ಯ ಹಾಗೂ ಪುರುಷತ್ವಗಳ ಮೇಲೂ ಜೋಗಿಯನ್ನು ಹುಡುಕುತ್ತ ಅವನು ವಿರಹದಿಂದ ಪರಿತಪಿಸುವ, ಅವನನ್ನು ಕೂಡಲು ಹಾತೊರೆಯುವ ಸ್ತ್ರೀಯರ ಬಗ್ಗೆಯೂ ರೂಪಿತವಾದಂಥ ಶೃಂಗಾರ ಶಿಲ್ಪಗಳು ದೇವಾಲಯಗಳ ಗೋಡೆಗಳ ಮೇಲೆ ಕೆತ್ತಲಾಗುತ್ತದೆ. ಜೋಗಿಯ ಸಂಕೇತವಾಗಿ ಇರುವಂತಹ ಶಿಲ್ಪಗಳು ನಾಥ ಸಂಪ್ರದಾಯದ ಕೇಂದ್ರವೆಂಬುದಕ್ಕೆ ಸಾಕ್ಷಿಯಾಗುತ್ತವೆ. ಇಂತಹ ಶಿಲ್ಪಗಳು ಸಂಗಮನಾಥ ದೇವಾಲಯದ ಬಲಭಾಗದ ಮುಂಭಾಗದಲ್ಲಿ ಇರುವುದನ್ನು ಕಾಣುತ್ತೇವೆ.

ಕೂಡಲಸಂಗಮ ದೇವನ ವಚನಗಳ ಅಂಕಿತ ಇಟ್ಟುಕೊಂಡು ವಚನಗಳನ್ನು ರಚಿಸಿರುವ ಬಸವಣ್ಣನವರು ಕೂಡಲಸಂಗಮದಲ್ಲಿ ಹಲವು ವರ್ಷಗಳ ಕಾಲ ಇದ್ದು ಅಲ್ಲಿಯ ಪರಿಸರದ ಹಿನ್ನೆಲೆಯಿಂದ ಒಂದು ವಚನದಲ್ಲಿ ಹೀಗೆ ಹೇಳುತ್ತಾನೆ.

ವಲಯಡಿಯನುರುಹಿದಡೆ
ಹೊಗೆಗೊಳಕನಾಥನ ಕೊರಳ ಸುತ್ತಿತ್ತು
ಮಹಿತಳನ ಜಡೆಸೀಯಿತ್ತು ಮರಿಚಿಕನ ಸಿರ ಬೆಂದಿತ್ತು
ರುದ್ರನ ಹಾವುಗೆ ಉರಿಯಿತ್ತು ದೇವಗಣಂಗಳು ನಿವಾಳವಾದರು
ಮಡದಿಯೆಯ್ವರು ಮುಡಿಯ ಹಿಡಿದುಕೊಂಡು ಹೋದರು
ಕೂಡಲಸಂಗಮದೇವ ಭಸ್ಮದಾರಿಯಾದ ಸಿದ್ದ ಸಾಹಿತ್ಯ[೩೨]

ಬಸವಣ್ಣ ಈ ವಚನದಲ್ಲಿ ಗೋರಕ್ಷನಾಥನ ಉಲ್ಲೇಖವನ್ನು ಮಾಡುತ್ತಾನೆ. ನಾಥ ಸಂಪ್ರದಾಯದ ಬಗ್ಗೆ ಸಂಪೂರ್ಣ ಜ್ಞಾನ ಇದ್ದುದ್ದರಿಂದಲೇ ಬಸವಣ್ಣ ಇಂತಹ ವಚನಗಳನ್ನು ರಚಿಸಲಿಕ್ಕೆ ಸಾಧ್ಯವಾಗಿರುತ್ತದೆ. ಅದೇ ತೆರನಾಗಿ ಅಲ್ಲಮಪ್ರಭುವು ನಾಥ ಸಂಪ್ರದಾಯ ಹಿನ್ನೆಲೆಯನ್ನು ತಿಳಿದು ಅದನ್ನು ರೂಢಿಸಿಕೊಂಡವನು ಆಗಿದ್ದನೆಂದು ಅವನ ಚರಿತ್ರೆ ತೋರಿಸಿಕೊಡುತ್ತದೆ. ಉದಾಹರಣೆಯೆಂಬಂತೆ ನವನಾಥರನ್ನು ಉಲ್ಲೇಖಿಸುವಂತಹ ವಿಷಯ ಗೋಚರವಾಗುತ್ತದೆ.

'ಕೊಂಕಣ ದ್ವೀಪದಲ್ಲಿ ಒಂದು ಕಪಿ ಹುಟ್ಟಿತ್ತು
ತಪವ ಮಾಡುವ ಸಪ್ತಋಷಿಯರ ನುಂಗಿತ್ತು
ನವನಾಥ ಸಿದ್ಧರ ತೊತ್ತಳದುಳಿಯಿತ್ತು
ಅರುಹಿರಿಯರ ತಲೆಯ ಮೆಟ್ಟಿ ಅರಿಯಿತ್ತು
ಕವಿಜನ ವೈರಿಸರ್ಪನ ಹೇಳಿಗೆಯಲ್ಲಿ ನಿದ್ರೆಗೈದಿತ್ತು
ಯೋಗಿಗಳ ಭೋಗಿಗಳ ಕೊಲ್ಲದ ಕೊಲೆಯ ಕೊಂದಿತ್ತು[೩೩]

ಅಲ್ಲಮ ನವನಾಥ ಸಿದ್ಧರ ಕುರಿತಾಗಿ ಹೇಳುವುದನ್ನು ನೋಡಿದಾಗ ನಾಥ ಸಂಪ್ರದಾಯದ ಪರಿಪೂರ್ಣ ಜ್ಞಾನ ಅಲ್ಲಮನಿಗಿತ್ತೆಂದು ತೋರುತ್ತದೆ. ಹನ್ನೆರಡನೇ ಶತಮಾನದಲ್ಲಿ ಹೀಗೆ ಹಲವಾರು ವಚನಕಾರರು ತಮ್ಮ ವಚನಗಳಲ್ಲಿ ನಾಥ ಸಂಪ್ರದಾಯದ ವಿಧಿ-ವಿಧಾನಗಳು ಮತ್ತು ಆ ಸಂಪ್ರದಾಯದ ಅನೇಕ ಇನ್ನಿತರ ವಿಚಾರಗಳನ್ನು ತಿಳಿಯಪಡಿಸಿದ್ದಾರೆ. ಆದರೆ ಪ್ರಭುದೇವ ಗೋರಕ್ಷನಾಥನ ಹೆಸರನ್ನು ಸ್ಪಷ್ಟವಾಗಿ ಹೇಳಿರುವುದು ಇಲ್ಲಿ ಗಮನಾರ್ಹ. ವೀರಶೈವ ಸಂತರ ವಚನಗಳಲ್ಲಿ ಅಲ್ಲಲ್ಲಿ ಯೋಗಮಾರ್ಗದ ಪರಿಭಾಷಿಕ ಶಬ್ದಗಳು ದೊರೆಯುತ್ತವೆ. ಅಲ್ಲಮಪ್ರಭುವಿಗೆ ಲಿಂಗದೀಕ್ಷೆ ನೀಡಿದವನು ಅನಿಮಿಷಯ ಈ ಅನಿಮಿಷಯನೇ ಮತ್ಸೇಂದ್ರನಾಥನಾಗಿರಬಾರದೇಕೆ ಎಂದು ವಿದ್ವಾಂಸರು ಕೇಳಿದ್ದುಂಟು.[೩೪] ರೇವಣಸಿದ್ದೇಶ್ವರ ರಗಳೆ, ಸಿದ್ಧರಾಮ ಚರಿತ್ರೆ ಮೊದಲಾದವುಗಳಲ್ಲಿ ಕೆಲವು ಸಿದ್ಧರ ಉಲ್ಲೇಖ ಬರುತ್ತವೆ. ನಾಥಪಂಥದ 'ಹಠಯೋಗ ಪ್ರದೀಪಿಕೆ' ಮೊದಲಾದವುಗಳಲ್ಲಿ ಪ್ರಭುದೇವ, ರೇವಣನಾಥ ಮೊದಲಾದವರು ನಾಥಪಂಥದವರೆಂದು ಉಲ್ಲೇಖವಿದೆ. ರೇವಣಸಿದ್ಧ, ಮುರುಳಸಿದ್ಧ, ಕಪಿಲಸಿದ್ಧ, ಮೊದಲಾದ ಹೆಸರುಗಳು ಈ ಸಂತರ ಪೂರ್ವ ಭಿತ್ತಿಯ ಮೇಲೆ ಬೆಳಕು ಬೀರುತ್ತವೆಂದು ಇವುಗಳ ಜೊತೆಗೆ ಕರ್ನಾಟಕದಲ್ಲಿ ಅನೇಕ ಕಡೆ ನಾಥ ಪಂಥದ

ಅವಶೇಷಗಳು ಇನ್ನು ಕಂಡುಬರುತ್ತವೆ. ಈ ಎಲ್ಲ ಕಾರಣಗಳಿಂದ ಒಂದಾನೊಂದು ಕಾಲದಲ್ಲಿ ಕನ್ನಡ ನಾಡಿನಲ್ಲಿ ನಾಥ ಪಂಥ ಜೀವಂತವಾಗಿತ್ತೆಂದು ಅದಕ್ಕೂ ವೀರಶೈವಕ್ಕೂ ದ್ವಂದ್ವ ನಡೆದಿತ್ತೆಂದು ಊಹಿಸಬಹುದಾಗಿದೆ.

ಕರ್ನಾಟಕದಲ್ಲಿ ನಾಥಪಂಥ ಸ್ವಲ್ಪಮಟ್ಟಿಗೆ ಪ್ರಚಾರದಲ್ಲಿ ಇದ್ದದ್ದು ಮತ್ತು ಕೆಲವು ಶಾಸನಗಳಲ್ಲಿ ಬರುವ ಮಾಹಿತಿಗಳೂ ನಾಥಪಂಥಕ್ಕೆ ಒಳಗಾಗಿದ್ದ ಶರಣರ ಹೆಸರುಗಳನ್ನು ಊಹನಾತ್ಮಕವಾಗಿ ಕೆಲವು ಸಂಶೋಧಕರು ಅಭಿಪ್ರಾಯಪಟ್ಟ ಹಿನ್ನೆಲೆಯಲ್ಲಿ ಈ ಕೇಂದ್ರಗಳು ಅಲ್ಲಲ್ಲಿ ಪ್ರಭಾವಕ್ಕೆ ಒಳಗಾಗಿದ್ದವೆಂದು ಊಹಿಸಬಹುದಾಗಿದೆ. ದೇವಗಿರಿ ಯಾದವರ ರಾಮಚಂದ್ರನಿಗೆ ಪುತ್ರೋತ್ಸವವಾದ ಸಮಯದಲ್ಲಿ ಅವನ ಪರಮ ವಿಶ್ವಾಸಿ ಖೊಂಡೆರಾಯ ರಾಮಚಂದ್ರನ ಅಪ್ಪಣೆಯಂತೆ ಕೊಟ್ಟೂರು ನಾಡಿನಲ್ಲಿ ಕಲಿದೇವರ ಆಸ್ಥಾನಿಕರಿಗೆ ದತ್ತಿಯನ್ನು ಬಿಟ್ಟ ವಿಷಯವನ್ನು ಹೇಳುವಾಗ ದತ್ತಿ ಸ್ವೀಕರಿಸಿದ ಶಿವಯೋಗಿ ಚಕ್ರವರ್ತಿ ಪ್ರಸಾದ ದೇವರನ್ನು ವಿಶೇಷವಾಗಿ ಕೀರ್ತಿಸಲಾಗಿದೆ. ಅವನನ್ನು ಕೀರ್ತಿಸುವಾಗ ನಾಥಪಂಥದ ಯೋಗಿಗಳ ಹೆಸರುಗಳು ಬಂದಿವೆ. "ಆದಿಗದ ಎದುದುನಾಥ। ಚರ್ತುರಗಿನಾಥ। ಗೋಣುನಾಥ। ವಿಸ್ತರಲಾದೇವಿನಾಥ। ಸುರ್ಪಾನಾಥ। ಲೋಕನಾಥ। ನರನಾಥ। ಪಂಥಮಾನ ಘೋಷನುಂ। ಶಾಸನ ಪಾಠ ಅಲ್ಲಲ್ಲಿ ಶುದ್ಧವಾಗಿಲ್ಲದಿದ್ದರೂ ನಾಥಪಂಥದ ಯತಿಗಳನ್ನು ಸ್ಪಷ್ಟವಾಗಿ ಗುರುತಿಸಬಹುದು.[೩೫] ಇದೇ ಶಾಸನದಲ್ಲಿ ಚೇರ 'ಚೇರ ಚೋಳ ನಂಬಿ ನಂಬಿ ಚಿಕ್ಕ ಕಕ್ಕ ಚೆಂವ ಹೂಂನ ಬಂಕ ಬಸವರಾಜ ಭೋಜಾದಿ ಮರ್ತ್ಯಲೋಕದ ಮಹಾಗಣಾಚಾರ' ಎಂದು ಬರುವುದನ್ನು ಗಮನಿಸಿ ಮತ್ತು ಕೆಲವು ಅನ್ಯ ಆಧಾರಗಳನ್ನು ನೀಡಿ ಬಸವಣ್ಣ, ಅಲ್ಲಮಪ್ರಭು ಮತ್ತು ಸಿದ್ಧರಾಮರು ನಾಥ ಸಂಪ್ರದಾಯಕ್ಕೆ ಸೇರಿದವರೆಂದು ಕಪಟರಾಳ ಕೃಷ್ಣರಾವ್ ಅಭಿಪ್ರಾಯಪಡುತ್ತಾರೆ.[೩೬] ಅನೇಕ ಅಂಶಗಳನ್ನು ಪಡೆದಿರುವುದರಿಂದ ಶರಣರ ವಚನಗಳಲ್ಲಿ ಅವುಗಳ ಉಲ್ಲೇಖಗಳನ್ನು ಕಾಣಬಹುದು. ಆ ಕಾರಣಕ್ಕಾಗಿ ಎಲ್ಲರನ್ನೂ ಆ ಸಂಪ್ರದಾಯವರೆಂದು ಹೇಳಲಾಗುವುದಿಲ್ಲ. ಅಲ್ಲದೆ ಅನ್ಯಶ್ರವ ಪಂಥದವರೂ ವೀರಶೈವ ಧರ್ಮದ ಪ್ರಮುಖ ವ್ಯಕ್ತಿಗಳಾದ ಬಸವಣ್ಣ, ಅಲ್ಲಮಪ್ರಭು ಮುಂತಾದವರನ್ನು ಸ್ಮರಿಸಿರುವುದು ಬಸವಣ್ಣನವರ ಕೂಡಲಸಂಗಮ ಕ್ಷೇತ್ರವು ನಾಥ ಕೇಂದ್ರವಾಗಿತ್ತು ಎಂಬ ವಿಷಯಕ್ಕೂ ಸಾಕ್ಷಿಯಾಗುತ್ತದೆ. ಇಲ್ಲಿ ಪ್ರಮುಖವಾದ ಮತ್ತೊಂದು ಅಂಶವೆಂದರೆ ಶಾಸನಗಳಲ್ಲಿ ಬರುವ ಕಕ್ಷ, ಕಂಠ, ಕರ ವಕ್ಷೋತ್ತಮಾಂಗ ಲಿಂಗೈಕ ಸಂಗನುಂ ಎನ್ನುವುದನ್ನು ಮತ್ತು ಶಾಸನೋಕ್ತ ಶಿವಯೋಗಿಯ ಸಂಪ್ರದಾಯಗಳನ್ನು ಗಮನಿಸಿ ಬಸವಣ್ಣ ನಾಥ ಸಂಪ್ರದಾಯದವನೆಂದು ಅಭಿಪ್ರಾಯಪಡುತ್ತಾರೆ.[೩೭] ಹಠಯೋಗ ಪ್ರದೀಪಿಕೆಯಲ್ಲಿ ಅಲ್ಲಮಪ್ರಭುವಿನ ಹೇಳಿಕೆ ಉಕ್ತವಾಗಿರುವುದರಿಂದ ಮತ್ತು ಪ್ರಭುಲಿಂಗಲೀಲೆಯಲ್ಲಿ ಗೋರಕ್ಷಕನು ಕಾಪಾಲಿಕನೆಂದು ಉಕ್ತವಾಗಿದ್ದರೂ ಅವನಿಗಿಂತಲೂ ಅಧಿಕಸಿದ್ಧ ತಡೆದವನಾಗಿದ್ದರಿಂದ ಅವನೂ ನಾಥಪಂಥದವನೆಂದು ಭಾವಿಸುತ್ತಾರೆ.

ಶರಣರ ಸ್ಥಳಗಳ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಾಗಿರುವುದನ್ನು ನೋಡಿದಾಗ ಕೂಡಲಸಂಗಮವು ನಾಥ ಸಂಪ್ರದಾಯ ಕೇಂದ್ರವಾಗಿತ್ತು ಎಂಬುವುದನ್ನು ಗಟ್ಟಿಗೊಳಿಸುತ್ತದೆ. ಬಸವಣ್ಣನವರು ಮತ್ತು ಅಲ್ಲಮಪ್ರಭು ಹಾಗೂ ಸಿದ್ಧರಾಮ ಶಿವಯೋಗಿಗಳ ಸ್ಥಳಗಳು ಸಹಿತ ನಾಥಪಂಥ ಕೇಂದ್ರಗಳ ಕುರುಹುಗಳನ್ನು ಹೊಂದಿದಂತೆ ಕೂಡಲಸಂಗಮವೂ ನಾಥಪಂಥಕ್ಕೆ ಸಂಬಂಧಿಸಿದ್ದು ಎಂದು ಹೇಳಬಹುದಾಗಿದೆ.

೪.೩. ಕಾಳಮುಖ ಸಂಪ್ರದಾಯ

ಕರ್ನಾಟಕದಲ್ಲಿ ಪ್ರಾಚೀನ ಕಾಲದಲ್ಲಿ ಪ್ರಚಲಿತವಿದ್ದ ಶೈವ ಪಂಥಗಳಲ್ಲಿ ಪಾಶುಪಥ ಮತ್ತು ಕಾಳಮುಖ ಸಂಪ್ರದಾಯಗಳು ಸೇರಿದ್ದವು. ಆಚರಣೆಗಳ ದೃಷ್ಟಿಯಲ್ಲಿ ಒಂದೇ ಅನಿಸಿದರೂ ಹಲವು ರೀತಿಯಲ್ಲಿ ಬದಲಾವಣೆಯನ್ನು ಹೊಂದಿವೆ. ಕರ್ನಾಟಕದಲ್ಲಿ ಆಗಮ ಸಂಪ್ರದಾಯದ ಕೆಲವು ಶೈವ ಶಾಖೆಗಳು ಅಸ್ತಿತ್ವದಲ್ಲಿದ್ದವು. ಇವುಗಳ ಸ್ವರೂಪ ಸಂಖ್ಯೆಗಳ ಬಗ್ಗೆ ಹಲವಾರು ಅಂಶಗಳು ಬೆಳಕಿಗೆ ಬಂದಿವೆ. ಗುಲಬರ್ಗಾ ಜಿಲ್ಲೆಯ ಸಾಗರ ಶಾಸನದಲ್ಲಿ ಅನಂತ ಶಕ್ತಿಯತಿಯನ್ನು 'ಕಾಳಾಮುಖ ಮಹಾವ್ರತ ಪಾಶುಪಥ ಶಿವಸಮಯ ಸಮಾನ ಪಕ್ಷಪಾತರ್' ಎಂದು ಕರೆಯಲಾಗಿದೆ.[೩೮] ಇದರಿಂದ ಕಾಳಾಮುಖ, ಮಹಾವ್ರತ, ಪಾಶುಪಥ, ಶಿವಸಮಯ ಈ ನಾಲ್ಕು ಶೈವ ಶಾಖೆಗಳು ಅಸ್ತಿತ್ವದಲ್ಲಿದ್ದವೆಂದು 'ಸಮಾನ ಪಕ್ಷಪಾತರ್' ಎಂಬ ಮಾತಿನಿಂದ ಇವು ಒಂದೇ ಮೂಲದ ಶಾಖೆಗಳೆಂದು ಸ್ಪಷ್ಟವಾಗುತ್ತದೆ. ಇವುಗಳಲ್ಲಿ ಕಾಳಾಮುಖ ಶಬ್ದ ಅರ್ತವನ್ನು ಕುರಿತು ಈ ರೀತಿಯಾಗಿ ಎಂ.ಎಂ. ಕಲಬುರ್ಗಿಯವರು ಚರ್ಚಿಸಿದ್ದಾರೆ.

ಶಾಸನಗಳಲ್ಲಿ ಪ್ರಯೋಗವಾದ ಪದ ಬಳಕೆಗಳನ್ನು ನೋಡಿದಾಗ 'ಲಾಕುಳ ಸಮಯ ಸಮುದ್ಧರಣರುಂ...'ಕಾಳಾಮುಖ ಪ್ರತಿಬದ್ಧರುಂ...' ಎಂಬಂತಹ ಪ್ರಯೋಗಗಳು ಲಾಕುಳ ಶೈವ ಕಾಳಾಮುಖ ಇವು ಒಂದೇ ಸಂಪ್ರದಾಯಕ್ಕೆ ಸಂಬಂಧಿಸಿದ ಪದಗಳೆಂದು ಸ್ಪಷ್ಟಪಡಿಸುತ್ತವೆ. ಮುಂದುವರೆದು ಶಾಸನೋಕ್ತ 'ಕಾಳಾಮುಖ ದೀಕ್ಷೆ' ನಂತರ 'ಕಾಳಾಮುಖ ವ್ರತ' ಇಂತಹ ಪ್ರಯೋಗಗಳು ಈ ಲಾಕುಳ ಸಮಯದಲ್ಲಿ ವಿಶೇಷ ದೀಕ್ಷೆ, ವ್ರತ ಧರಿಸಿದ್ದವರನ್ನು ಕಾಳಾಮುಖರೆನ್ನುತ್ತಿದ್ದರು ಎಂಬುದು ತಿಳಿಯುತ್ತದೆ. ಕನ್ನಡ ಕಾವ್ಯ ಶಾಸನಗಳಲ್ಲಿ ಕಾಳಾಮುಖ ಎಂಬುದು ವಿಶೇಷವಾಗಿ ಕಾಲಾಮುಖ ಎಂಬುದು ಬದಲಾದ ರೀತಿಯಲ್ಲಿ ಇರುವುದು ತಿಳಿಯುತ್ತದೆ. ಕಾಲಾಮುಖವೆಂಬುದು ಸಾಮಾನ್ಯವಾಗಿ ಸ್ಕಂದ ಪುರಾಣ ರಾಜಶೇಖರನ ಷಡ್ದರ್ಶನಸಮುಚ್ಚಯಗಳಲ್ಲಿ ಕಾಲಮುಖವೆಂಬ ಪ್ರಯೋಗ ಸಿಗುತ್ತದೆ. ಮಲ್ಕಾಪುರ ಶಾಸನದಲ್ಲಿ ಕಾಲಾನನ ಬಳಕೆಯಾಗಿದೆ. ಇಷ್ಟು ಹಿನ್ನೆಲೆಯಲ್ಲಿ ಈ ಪದಕ್ಕೆ ಹೇಳುತ್ತ ಬಂದ ಅರ್ಥಗಳನ್ನು ಈ ರೀತಿಯಾಗಿ ತಿಳಿಯಬಹುದಾಗಿದೆ.

ಕಾಲಮುಖ, ಕಾಲಾಮುಖ, ಕಾಳಾಮುಖಗಳಲ್ಲಿಯ ಉತ್ತರಾರ್ಧ ಪದವನ್ನು ಬಿಟ್ಟರೆ ಕಾಲ (ಕಾಳ), ಕಾಲಾ, ಕಾಳಾ ಎಂಬ ಪ್ರಕೃತಿಗಳು ಉಳಿಯುತ್ತಿದ್ದು, ಇವುಗಳಿಗೆ ಕಪ್ಪು ಅರ್ಥವನ್ನು ಪರಿಭಾವಿಸಿಕೊಂಡು ಯಶಸ್ತಿಲಕ ಚಂಪೂ ಮತ್ತು ಕೋಡುಂಬಾರು ಶಾಸನ 'ಅಸಿತವಕ್ತ್ರ'ವೆಂಬ

ಪರ್ಯಾಯ ಪದ ಬಳಸಿದೆ. ಕಾಳಾಮುಖರಲ್ಲಿ ಮಹಾಕಾಲ, ಕಾಲ, ಕಾಲವಕ್ತ್ರ ಕೇವಲ ಹೀಗೆ ನಾಲ್ಕು ಬಗೆಯ ಸಾಧಕರಿರುವರು. ಇವರಲ್ಲಿ ಭಸ್ಮವನ್ನು ಅಂಗಾಗಳಿಗೆ ಲೇಪಿಸಿಕೊಂಡು ಕಪ್ಪು ಭಸ್ಮವನ್ನು ಮುಖಕ್ಕೆ ಬಳಿದುಕೊಂಡು ದಿನಕ್ಕೆ ಐದು ಸಲ ಶಿವಪೂಜೆ ಮಾಡುತ್ತಿರುವವರೆ ಕಾಲವಕ್ತ್ರರು. ಕಪ್ಪು ಮುಖ ಅರ್ಥ ನೀಡುವ ಈ ವಿವರಣೆ ಕಾಳಾಮುಖ, ಕಾಲಾನನ, ಅಸಿತತ್ರ ಪದಗಳಿಗೆ ಸಮಾನವಾಗಿದೆಯೆಂದು ಅಭಿಪ್ರಾಯಪಡುತ್ತಾರೆ.[೩೯]

ಕರ್ನಾಟಕದಲ್ಲಿದ್ದಂತೆ ೧೧-೧೨ನೆಯ ಶತಮಾನಗಳಲ್ಲಿ ತಮಿಳುನಾಡಿನಲ್ಲೂ ಕಾಳಾಮುಖ ಯತಿಗಳು ನೆಲೆಸಿದ್ದು, ಕೆಲವು ಶೈವ ಕ್ಷೇತ್ರಗಳು ಪ್ರಸಿದ್ಧ ತೀರ್ಥ ಕ್ಷೇತ್ರಗಳೆನಿಸಿದ್ದವು. ಕರ್ನಾಟಕ ಮತ್ತು ತಮಿಳನಾಡಿನ ನಡುವೆ ನಾನಾ ಕಾರಣಗಳಿಗಾಗಿ ಸಂಪರ್ಕವು ಬೆಳೆದಿತ್ತು. ಇದರಂತೆ ತಮಿಳುನಾಡಿನ ೬೦ ಪುರಾತನರ ಪ್ರಭಾವವು ಕರ್ನಾಟಕದ ಶೈವರ ಮೇಲೂ ಆಗಿತ್ತು. ೧೨ನೆಯ ಶತಮಾನದಲ್ಲಿ ಹರಿಹರ ಕವಿಯು ಬೇಡರ ಕಣ್ಣಪ್ಪ, ತಿರುನೀಲಕಂಠ, ನಂಬಿಯಣ್ಣ ಮೊದಲಾದವರ ಬಗೆಗೆ ರಗಳೆಗಳನ್ನು ರಚಿಸಿದ್ದಾರೆ. ಮೈಸೂರು ಜಿಲ್ಲೆಯ ನಂಜನಗೂಡು, ಚಾಮರಾಜನಗರ, ಕೃಷ್ಣಗಿರಿ ಜಿಲ್ಲೆಯ ಹೊಸೂರು ಬೆಟ್ಟದ ಚಂದ್ರಮೌಳೇಶ್ವರ ದೇವಾಲಯ ಮುಂತಾದೆಡೆಗಳಲ್ಲಿ ೬೩ ಪುರಾತನರ ಶಿಲ್ಪಗಳಿದ್ದು, ಪೂಜೆಗೊಳ್ಳುತ್ತಿವೆ. ಸುಮಾರು ಕ್ರಿ.ಶ. ೯-೧೦ನೆಯ ಶತಮಾನದಲ್ಲಿ ಚೋಳರು ಕರ್ನಾಟಕದ ಭಾಗವನ್ನು ಆಳುತ್ತಿದ್ದಾಗ ಅವರೊಂದಿಗೆ ಬಂದು ನೆಲೆಸಿದ 'ಶಿವದ್ವಜರೇ' ಇಂದಿಗೂ ಕರ್ನಾಟಕದ ಅನೇಕ ಶಿವಾಲಯಗಳಲ್ಲಿ ಅರ್ಚಕರಾಗಿರುವುದನ್ನು ಗಮನಿಸಬಹುದು.

ಸುಮಾರು ೮-೯ನೆಯ ಶತಮಾನದ ಹೊತ್ತಿಗೆ ಲಾಕುಳಿಶ ಮತವು ವಿಸ್ತೃತವಾಗಿ ಪಸರಿಸಿದ್ದು, ತತ್ಪರಿಣಾಮವಾಗಿ ಅನೇಕ ಕವಲುಗಳಾಗಿ ವಿಕಸಿತವಾದಂತಿದೆ. ಹೀಗೆ ಲಾಕುಳ ಪಂಥದ ಎರಡು ಪ್ರಮುಖ ಶಾಖೆಗಳೆಂದು ಕಾಳಾಮುಖ ಮತ್ತು ಕಾಪಾಲಿಕ ಪಂಥವನ್ನು ಗುರುತಿಸುತ್ತಾರೆ. ಈ ಎರಡು ಪಂಥದವರು ಲಾಕುಳಾಗಮವನ್ನು ಅಭ್ಯಾಸ ಮಾಡುತ್ತಾರೆ. ಕರ್ನಾಟಕದಲ್ಲಿ ಕ್ರಿ.ಶ. ೮೧೦ರಲ್ಲಿ ಗಂಗರ ಕಾಲದ ತಾಮ್ರಪಟವೊಂದರ ಉಲ್ಲೇಖದಲ್ಲಿ ಕಾಳಾಮುಖರ ಪ್ರಾಚೀನ ಉಲ್ಲೇಖವಿದೆ. ಕಾಳಾಮುಖರ ಗುರು ಕಾಳಶಕ್ತಿಯ ಅಗ್ರ ಶಿಷ್ಯನಾದ ಈಶ್ವರದಾಸ ಮುನಿಯನ್ನು ಹೆಸರಿಸಿದೆ.[೪೦] ಇವನು ಬೆಟ್ಟದ ಮೇಲಿನ ಗವಿಯಲ್ಲಿ ನೆಲೆಸಿದ್ದನು. ಕ್ರಿ.ಶ. ೮೦೪ರಲ್ಲಿ ರಾಷ್ಟ್ರಕೂಟರ ದೊರೆ ಮೂರನೆ ಗೋವಿಂದನ ತಾಮ್ರಪಟದಲ್ಲಿ ಅಲ್ಲಂಪುರದ ಬಳಿಯ ರಾಮೇಶ್ವರದ ಶಿವಧಾರಿಗೋರವನ ಉಲ್ಲೇಖವಿದೆ. ರಾಷ್ಟ್ರಕೂಟರ ಕಾಲದ ಶಾಸನಗಳು ಮತ್ತು ಅವರ ಹಿಂದಿನ ಕಾಲದ ಶಾಸನಗಳಲ್ಲಿ ಕಾಳಾಮುಖ ಯತಿಗಳನ್ನು 'ಗುರುವ', 'ಗೋರವ' ಎಂದು ಕರೆದಿರುವುದು ಗಮನಾರ್ಹವಾಗಿದೆ.[೪೧]

ಕಾಳಾಮುಖ ಸಂಪ್ರದಾಯದಲ್ಲಿ ಪ್ರಮುಖವಾಗಿ 'ರಾಶಿ', 'ಜೀಯ', 'ಒಡೆಯ' ಎಂಬ ಪದಗಳು ಶಾಸನಗಳಲ್ಲಿ ಉಲ್ಲೇಖ ಬರುತ್ತವೆ. ಇಂತಹ ಪದಗಳಿರುವ ಶಾಸನಗಳು ಕೂಡಲಸಂಗಮದಲ್ಲಿ ಕಂಡುಬರುವುದರಿಂದ ಕಾಳಾಮುಖ ಸಂಪ್ರದಾಯದ ಜನರು ಆ ಕಾಲದಲ್ಲಿ ಇದ್ದರೆನ್ನಬಹುದು.

ದೋಟಕ್ಕೆ (ಧೂ)ಪಕಂ ದೇವರಾಸಿಜೀ

.... ಮಲಹಾರಿ ತೀರದೊಳ್ ತಾ ನೆಲಸಿದ್ದಾ

ಚೇಶ್ವರಂ ಮಹೋತ್ಸವದಿಂದಂ ತೊಲ

ಗದೆ ಭಕ್ತರ್ಗ್ಗೆಲ್ಲಂ ಸಲೆ ಕುಡು(ತೆ)

ಸದಿರ್ಕ್ಕೆ ದೀರ್ಘಮಾಯುಂ ಶ್ರೀ

(ಯುಮಂ) ಪರಮ ಗುರುವೆನಿವ[೪೨]

ಕ್ರಿ.ಶ. ೧೨೧೩ರ ಕೂಡಲಸಂಗಮದ ಈ ಶಾಸನದಲ್ಲಿ ದೇವರಾಶಿಜೀಯ ಎಂಬ ಪದ ಉಲ್ಲೇಖವಾಗಿರುವುದನ್ನು ನೋಡಿದರೆ ದೇವರಿಗೆ ಪ್ರಿಯವಾದವನು ಎಂದು ಅರ್ಥಕೊಡುವುದರಿಂದ ಕಾಳಾಮುಖ ಪರಂಪರೆಯಿಂದ ಬಂದ ವ್ಯಕ್ತಿಗೆ ದಾನವನ್ನು ನೀಡಿದ ಹಾಗೆ ಎಂದು ತಿಳಿಯಬಹುದಾಗಿದೆ. ಹೀಗಾಗಿ ಕೂಡಲಸಂಗಮದಲ್ಲಿ ಶೈವ ಸಂಪ್ರದಾಯದ ಭಾಗವಾದ ಕಾಳಾಮುಖ ಸಂಪ್ರದಾಯವೂ ಆಚರಣೆಯಲ್ಲಿತ್ತು ಎಂದು ಹೇಳಬಹುದಾಗಿದೆ.

ಅಡಿ ಟಿಪ್ಪಣಿಗಳು

೧. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-೩೮

೨. ಅದೇ, ಪುಟ-೩೮

೩. ಅದೇ, ಪುಟ-೩೮

೪. ಅದೇ, ಪುಟ-೩೮

೫. ಎಸ್.ಎಸ್. ಹಿರೇಮಠ, ಲಾಕುಳ ದರ್ಶನ, ಪುಟ-೪೨

೬. ಎಂ . ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು-೧೩೯

೭. ಅದೇ ಪು-೧೪೦

೮. ದೇವರಕೊಂಡಾರೆಡ್ಡಿ, ಕೃಷ್ಣಾ ಮೇಲ್ದಂಡೆ ಮುಳುಗಡೆ ಗ್ರಾಮಗಳಲ್ಲಿ ಶಾಸನಗಳ ಅಧ್ಯಯನ, ಪು-೪೮

೯. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-೧೪೧

೧೦. ಅದೇ, ಪುಟ-೧೪೧

೧೧. ಎಂ.ಎಂ. ಕಲಬುರ್ಗಿ(ಸಂ), ಬಸವಯುಗದ ವಚನ ಮಹಾ ಸಂಪುಟ-೧ ಪುಟ-೪೨೬

೧೨. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-೧೫೪

೧೩. ಅದೇ, ಪುಟ-೧೫೪

೧೪. ಅದೇ, ಪುಟ-೧೫೪

೧೫. ಎಂ.ಎಂ. ಕಲಬುರ್ಗಿ (ಸಂ), ಬಸವಯುಗದ ವಚನ ಮಹಾ ಸಂಪುಟ-೧, ಪುಟ-೫೦೮

೧೬ ಅದೇ ಪು-೧೦೬೦

೧೭ ಅದೇ ಪು-೧೦೬೧

೧೮. ಎಂ.ಎಂ.ಕಲಬುರ್ಗಿ, ಮಾರ್ಗ-೧, ಪುಟ-೧೬೯

೧೯. ಅದೇ, ಪುಟ-೧೬೯

೨೦. ಅದೇ, ಪುಟ-೧೬೯

೨೧. ಎನ್. ಬಸವರಾಧ್ಯ (ಸಂ), ಅಬ್ಬಲೂರು ಚರಿತ್ರೆ, ಶಾತ ನಿರಂಜನ ಕವಿ, ಪುಟ- ೭೨/೭೩

೨೨. ಮ.ಸು. ಕೃಷ್ಣಮೂರ್ತಿ, ಸಿದ್ಧ ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪುಟ-೧೫೪

೨೩. ಮ.ಸು.ಕೃಷ್ಣಮೂರ್ತಿ, ಸಿದ್ಧ ಸಾಹಿತ್ಯ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪುಟ-೧೫೪

೨೪. ಎಂ.ಎಂ.ಕಲಬುರ್ಗಿ, ಮಾರ್ಗ ಸಂಪುಟ ೭, ಪುಟ ೬೫

೨೫. ಕಪಟರಾಳ ಕೃಷ್ಣರಾಯ, ಬಸವೇಶ್ವರನು ನಾಥ ಸಂಪ್ರದಾಯದ ಅನುಯಾಯಿ, ಕರ್ನಾಟಕ ಸಂಸ್ಕೃತಿ ಸಂಶೋಧನೆ ಪುಟ ೧೩೭

೨೬. ಎಂ.ಎಂ.ಕಲಬುರ್ಗಿ, ಮಾರ್ಗ ಸಂಪುಟ ೭, ಪುಟ ೬೬

೨೭. ಎಂ.ಎಂ.ಕಲಬುರ್ಗಿ, ಮಾರ್ಗ ಸಂಪುಟ ೭, ಪುಟ ೬೭

೨೮. ಎಂ.ಎಂ.ಕಲಬುರ್ಗಿ, ಮಾರ್ಗ ಸಂಪುಟ ೭, ಪುಟ ೬೭

೨೯. ಎಂ.ಎಂ.ಕಲಬುರ್ಗಿ ಮಾರ್ಗ, ಸಂಪುಟ ೭, ಪುಟ ೬೮

೩೦. ಎಂ.ಎಂ.ಕಲಬುರ್ಗಿ ಮಾರ್ಗ, ಸಂಪುಟ ೭, ಪುಟ ೧೦೬

೩೧. ಎಂ.ಎಂ.ಕಲಬುರ್ಗಿ, ಮಾರ್ಗ ಸಂಪುಟ ೭, ಪುಟ ೧೦೭

೩೨. ಮ.ಸು.ಕೃಷ್ಣಮೂರ್ತಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪುಟ-೧೫೫

೩೩. ಎಲ್.ಬಸವರಾಜು(ಸಂ), ಅಲ್ಲಮನ ವಚನ ಚಂದ್ರಿಕೆ, ಪುಟ-೩೭೧

೩೪. ಮ.ಸು.ಕೃಷ್ಣಮೂರ್ತಿ, ಸಿದ್ಧ ಸಾಹಿತ್ಯ, ಪುಟ ೩೫೬

೩೫. ಸಿ.ಯು. ಮಂಜುನಾಥ, ಶಾಸನಗಳು, ಕರ್ನಾಟಕ ಸಂಸ್ಕೃತಿ, ಪುಟ-೨೨

೩೬. ಅದೇ, ಪುಟ-೨೨

೩೭. ಅದೇ, ಪುಟ-೨೨

೩೮. ಎಂ.ಎಂ. ಕಲಬುರ್ಗಿ, ಮಾರ್ಗ-೩, ಪುಟ-೧೬೩

೩೯. ಅದೇ, ಪುಟ-೧೬೪

೪೦. ಕೆ.ಎ. ವಸಂತಲಕ್ಷ್ಮೀ, ಕರ್ನಾಟಕದ ಶೈವ ಶಿಲ್ಪಗಳು, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ, ಪುಟ-೨೦

೪೧. ಅದೇ, ಪುಟ-೨೦

೪೨. ವೀರಣ್ಣ ರಾಜೂರ (ಸಂ), ಕಲ್ಯಾಣ ಸಂಗಮ, ಪುಟ-೧೨೧

ಅಧ್ಯಾಯ : ೫

ಕೂಡಲಸಂಗಮ : ಸ್ಮಾರಕಗಳು ಮತ್ತು ಆಚರಣೆಗಳು

ಅಧ್ಯಾಯ : ಐದು

ಕೂಡಲಸಂಗಮ : ಸ್ಮಾರಕಗಳು ಮತ್ತು ಆಚರಣೆಗಳು

ಭಾರತೀಯ ಸಾಂಸ್ಕೃತಿಕ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಆಗಿಹೋದ ಶರಣರ ಸ್ಥಿತ್ಯಂತರಗಳು ಮತ್ತು ಶರಣರು ಬಾಳಿಹೋದ ಕ್ಷೇತ್ರಗಳು ಇಂದಿಗೂ ಸಹ ಮಹತ್ವವನ್ನು ಪಡೆದುಕೊಂಡಿವೆ. ಉದಾಹರಣೆಗೆ ಇಂದಿನ ಬಸವಕಲ್ಯಾಣ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ರಾಜಧಾನಿಯಾಗಿ ಮೆರೆದಿರುವಂಥದ್ದು. ಸಂಸ್ಕೃತ ವಿದ್ವಾಂಸ ವಿಜ್ಞಾನೇಶ್ವರನು ತನ್ನ ಕೃತಿ ಮಿತಾಕ್ಷರದಲ್ಲಿ ಕಲ್ಯಾಣದಂಥ ಪಟ್ಟಣ ಪ್ರಪಂಚದಲ್ಲಿಯೇ ಇರಲ್ಲಿಲ್ಲ ಎಂದು ಈ ರೀತಿ ಹೇಳಿದ್ದಾನೆ. "ನಾಸಿಹಸ್ತಿ ಭವಿಷ್ಯತಿಕ್ಷತಿಜವೇ ಕಲ್ಯಾಣಪುರಂ" ಎಂದು ಬಣ್ಣಿಸಿದ್ದನ್ನು ನೋಡಿದರೆ ವಿಕ್ರಮಾದಿತ್ಯನ ಆಳ್ವಿಕೆಯು ಅವನ ರಾಜಧಾನಿಯಾದ ಕಲ್ಯಾಣ ಪಟ್ಟಣಕ್ಕೆ ಸರಿಸಾಟಿಯಾಗುವ ಯಾವ ಪಟ್ಟಣವು ಆಗ ಭಾರತದಲ್ಲಿ ಇರಲ್ಲಿಲ್ಲವೆಂದು ಹೇಳಬೇಕಾಗುತ್ತದೆ. ಕರ್ನಾಟಕವನ್ನು ಏಕಚಕ್ರಾಧಿಪತ್ಯದಿಂದ ಆಳಿದ ಕಲ್ಯಾಣಿ ಚಾಲುಕ್ಯರ ಅರಸು ಮನೆತನದ ಪ್ರಸಿದ್ಧ ದೊರೆ ಆರನೇ ವಿಕ್ರಮಾದಿತ್ಯನು(೧೦೭೬–೧೧೨೬) ಕಲ್ಯಾಣ ಪಟ್ಟಣವನ್ನು ಪ್ರಸಿದ್ಧಗೊಳಿಸಿದ್ದ ಅಂದರೆ ರಾಜಧಾನಿಯನ್ನು ಅಚ್ಚುಕಟ್ಟಾದ ಭೌತಿಕ ಸೌಂದರ್ಯ ಪ್ರಜ್ಞೆಯ ಅರಿವು ಇದ್ದುದ್ದನ್ನು ತಿಳಿಯಬಹುದು.

ಬಿಜ್ಜಳನ ಆಳ್ವಿಕೆಯ ಕಾಲದಲ್ಲಿ ಬಸವಣ್ಣ ಮಂತ್ರಿಯಾಗಿ ಯಶಸ್ವಿಯಾಗುವುದರ ಜೊತೆಗೆ ಭಕ್ತಿಯ ಭಂಡಾರಿ ಎನಿಸಿಕೊಂಡಿದ್ದ. ಕಲ್ಯಾಣ ನಗರದಲ್ಲಿ ಶೈವಧರ್ಮದ ಆಚರಣೆಗಳು ಇತರ ಜನಾಂಗದವರಿಗೆ ಮಾದರಿಯಾಗಿದ್ದವು. ಸಮಾನತೆಯು ವಿಸ್ತರಿಸಿತ್ತು. ಬಹುತೇಕ ಜನರು ಲಿಂಗಪೂಜೆಯನ್ನು ಮಾಡಲು ಪ್ರಾರಂಭಿಸಿದರು. ಇವೆಲ್ಲವುಗಳ ಕಾರಣದಿಂದ ಶರಣರ ಸಂಖ್ಯೆ ಹೆಚ್ಚಿಗೆಯಾಯಿತು. ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂಬ ತತ್ವದ ಆಧಾರದ ಮೇಲೆ ನಡೆದರೂ, ಶರಣರು ಐಕ್ಯರಾದ ಮೇಲೆ ಅವರ ಗದ್ದುಗೆ ನಿರ್ಮಿಸಿ ಅವರನ್ನೇ ಆರಾಧನೆ

ಮಾಡುವ ಜನ ಹೆಚ್ಚಾದರು. ಈ ಕಾಲದ ಶರಣರು ಗವಿಗಳ ಮಾದರಿಯ ಪ್ರದೇಶದಲ್ಲಿ ವಾಸಮಾಡಿರುವುದನ್ನು ಕಾಣುತ್ತೇವೆ. ಭೌತಿಕ ಪ್ರಾಕೃತಿಕ ನಿರ್ಮಾಣ ಮಾಡಿದಂಥ ಗುಡಿ ಮಾದರಿಯ ಗವಿ ಸಂಸ್ಕೃತಿ ಬೆಳೆದು ಬಂದಿರುವುದನ್ನು ಕಲ್ಯಾಣದಲ್ಲಿ ಕಾಣುತ್ತೇವೆ. ಇದೇರೀತಿ ಕೂಡಲಸಂಗಮದಲ್ಲಿ ನದಿಗಳು ಸಂಗಮವಾದ ಸ್ಥಳದಲ್ಲಿ ಪ್ರಕೃತಿ ಸೌಂದರ್ಯ ತನ್ನದೇ ಆದ ಆಕರ್ಷಣೆಯನ್ನು ಒಳಗೊಂಡು ಸಂಗಮನಾಥ ಎಂಬ ಅಂಕಿತದೊಂದಿಗೆ ದೇವಾಲಯವನ್ನು ನಿರ್ಮಾಣ ಮಾಡಿರುವುದರ ಜೊತೆಗೆ ಆ ಪ್ರದೇಶದಲ್ಲಿ ದೇವಾಲಯಗಳ ಸಮುಚ್ಚಯವನ್ನೇ ನಿರ್ಮಾಣ ಮಾಡಿದ್ದಾರೆ. ಈ ಕಾರಣಗಳಿಂದ ಈ ಕ್ಷೇತ್ರ ಇಂದು ಮಹತ್ವವನ್ನು ಪಡೆದಿದೆ.

೫.೧. ದೇವಾಲಯಗಳು

ಮನುಷ್ಯ ತನಗೆ ಬುದ್ಧಿ ಬಂದಾಗಿನಿಂದಲೂ ತಾನು ಮಾಡುವ ಕಾರ್ಯ ಮುಂದಿನವರಿಗೆ ತಿಳಿಯಬೇಕೆಂದು ಬಯಸತೊಡಗಿದನು. ಇದರ ಫಲವೇ ಬರಹ. ಈ ಬರಹ ಬಣ್ಣದಲ್ಲಿ ಗುಹೆಗಳ ಗೋಡೆಗಳ ಮೇಲೆ ಬರೆದಿರಬಹುದು ಅಥವಾ ಶಿಲೆಗಳ ಮೇಲೆ ಬರೆದು ಕೆತ್ತಿರಬಹುದು. ಇದು ತಾನು ಕೊಟ್ಟ ದಾನ ಅಥವಾ ತಾನು ಮಾಡಿದ್ದನ್ನು ಹಿಡಿದಿಡುವ ಕಾರ್ಯವನ್ನು ಸೂಚಿಸುತ್ತದೆ. ಆ ಮಾನವ ನೆಲೆಸಿದೆಡೆಯ ಗವಿಗಳಲ್ಲಿ ಚಿತ್ರಗಳಲ್ಲಿ ಇವನ್ನು ಕಾಣಬಹುದು. ಮುಂದೆ ನಾಗರಿಕನಾದಂತೆ ರಾಜತ್ವ ಬೆಳೆದಂತೆ ಅಗತ್ಯವಿರುವವರಿಗೆ ವ್ಯವಸಾಯ ಭೂಮಿಯನ್ನು ಹಂಚತೊಡಗಿದ ಕೆಲವೊಮ್ಮೆ ತಾನು ನಿರ್ಮಿಸಿದ ದೇವಾಲಯಗಳ ದೈನಂದಿನ ಕಾರ್ಯಗಳಿಗಾಗಿ ದಾನ ನೀಡಿದ. ಹೀಗೆ ದಾನ ನೀಡಿದ ನಂತರ ಯಾರೂ ಅಪಹರಿಸಬಾರದೆಂದು ಕೊಟ್ಟ ದಾನವನ್ನು ಕಾಪಾಡುವವನಿಗೆ ಬರುವ ಪುಣ್ಯ ಹಾಳುಮಾಡಿದರೆ ಬರುವ ಕೆಟ್ಟ ಫಲದ ಬಗ್ಗೆ ಹೆದರಿಸಲು ಪ್ರಯತ್ನಿಸಿದ ಜನರು ಪರಸ್ಪರ ದೂಷಿಸಕೂಡದು, ಹೊಡೆದಾಡಕೂಡದು ಎಂಬ ಉದ್ದೇಶದಿಂದ ರಾಜಕಾರ್ಯಗಳನ್ನು ಮಾಡುವವರು, ಲಂಚವನ್ನು ಸ್ವೀಕರಿಸಕೂಡದು ಯಾರೂ ಅವರೊಂದಿಗೆ ಲಂಚವನ್ನು ಕೊಡಕೂಡದು[೧] ಎಂಬ ಅಂಶಗಳನ್ನು ಶಾಸನಗಳು ಜನರನ್ನು ಸರಿ ದಾರಿಗೆ ತರುವಂತೆ ಪ್ರಯತ್ನವನ್ನು ಮಾಡುತ್ತಿದ್ದವು.

ಪ್ರಾಚೀನ ಕಾಲದ ಇತಿಹಾಸ ಮತ್ತು ಸಾಹಿತ್ಯವನ್ನು ತಿಳಿಯಬೇಕಾದರೆ ನಮಗೆ ಮುಖ್ಯವಾಗಿ ಶಾಸನಗಳು ಅವಶ್ಯವಾಗಿ ಬೇಕಾಗುತ್ತವೆ. ಶಾಸನಗಳು ಕಾಲಾಜ್ಞೆಯನ್ನು ಪ್ರತಿನಿಧಿಸುವುದರಿಂದ ಪ್ರಮುಖ ಆಕರಗಳಾಗಿ ಬಿಂಬಿತವಾಗಿವೆ. ಶಾಸನವೆಂದರೆ ಭಾರತೀಯ ಸಂಸ್ಕೃತಿಯ ಬಿಂಬವಾಗಿವೆ. ಶಾಸನಗಳು ಇಲ್ಲದೇ ಹೋಗಿದ್ದರೆ, ನಮ್ಮ ಇತಿಹಾಸ ಮತ್ತು ಸಾಹಿತ್ಯಕ್ಕೆ ಆಧಾರ ಪುರಾವೆಗಳು ಪೂರ್ಣಪ್ರಮಾಣದಲ್ಲಿ ಸಿಗುತ್ತಿರಲ್ಲಿಲ್ಲವೇನೋ ಎಂಬ ಸಂಶಯ ಕಾಡುತ್ತದೆ. ಆದ್ದರಿಂದ ಚಿದಾನಂದ ಮೂರ್ತಿಯವರು ಹೇಳುವಂತೆ "ಶಾಸನಗಳು ಸಾಹಿತ್ಯದ ತಲಕಾವೇರಿ ಕನ್ನಡನಾಡಿನ ಜೀವನವು ಎಲ್ಲಿಯೂ ಯಾವ ಕೃತಿಯಲ್ಲಿಯೂ ಮಡುಗಟ್ಟಿ ನಿಂತಿಲ್ಲ, ಕೆಲವು ಕಾವ್ಯಗಳಲ್ಲಿ ಅಲ್ಲಲ್ಲಿ ಜಲದಂತೆ ಕಂಡುಬಂದರೂ ಹೆಚ್ಚು ಪ್ರಮಾಣದಲ್ಲಿ ವಿಸ್ತಾರವಾಗಿ ಕಾಣಿಸಿಕೊಳ್ಳುವುದು ಶಾಸನಗಳಲ್ಲಿ ಎಂದಿದ್ದಾರೆ."[೨]

ಶಾಸನ ಎಂಬ ಪದವನ್ನು Inscription ಎಂಬ ಆಂಗ್ಲ ಪದಕ್ಕೆ ಸಂವಾದಿಯಾಗಿ ವಿದ್ವಾಂಸರು ಬಳಸುತ್ತಾರೆ. ಎಂದರೆ ಬಹುಕಾಲ ನಿಲ್ಲಬಲ್ಲ ಶಾಶ್ವತವಾಗಿ ಉಳಿಯಬಲ್ಲ ವಸ್ತುಗಳ ಮೇಲೆ ಕೊರೆಯಲ್ಪಟ್ಟ ಬರಹವೆಂದು ಅರ್ಥಬರುತ್ತದೆ. ಶಾಸನ ಎಂಬ ಶಬ್ದದ ಮೂಲ ಅರ್ಥ 'ಆಜ್ಞೆ' ಎಂದು. ಕೌಟಿಲ್ಯ ಹೇಳುವಂತೆ 'ಶಾಸ್' ಎಂಬ ಧಾತುವಿನಿಂದ ಆಜ್ಞೆಮಾಡು, ಶಿಕ್ಷಿಸು, ನಿಯಂತ್ರಿಸು ಮುಂತಾದ ಅರ್ಥಗಳಿವೆ.[೩]

ಕಾನೂನುಗಳನ್ನು ಜನರಿಗೆ ಪ್ರಕಟಿಸುವ ಬರಹಗಳೇ ಶಾಸನಗಳು "ಶಾಸನ ಬುದಾವುದೆಲ್ಲಿಯ ಶಾಸನಮಾರಿಯೆತ್ತರೇಕೆ ಸಲಿಸುವೆ ನಾನೀ ಶಾಸನವೆಂಬ ಪಾತಕನಾಸಕಳಂ ಕೌರವಕ್ಕೆ ಗಳಗಳನಿಳಿಗಂ"[೪] ಎಂದಿದೆ. ಇಂತಹ ಬಗೆಯ ಹೇಳಿಕೆಗಳು, ಉಲ್ಲೇಖಗಳು ಪ್ರಶಂಸನೀಯ ಮಾತುಗಳು ಕಾವ್ಯಗಳಲ್ಲಿ ಕಂಡುಬರುತ್ತವೆ. ಇವುಗಳೆಲ್ಲವು ಶಾಸನಗಳ ಮಹತ್ವವನ್ನು ಸಾರುತ್ತವೆ.

ಕರ್ನಾಟಕದ ಶಾಸನಗಳನ್ನು ಅವಲೋಕಿಸಿದಾಗ ಸಿರಿವಾಳದ ಶಾಸನ ಕಾಲ ಕ್ರಿ.ಶ. ೧೧೪೦ರಲ್ಲಿ ರೇವಣಸಿದ್ಧೇಶ್ವರ, ಬಸವಣ್ಣನರ ಉಲ್ಲೇಖ ಬರುತ್ತದೆ. ಈ ರೇವಣಸಿದ್ಧೇಶ್ವರರು, ಬಸವಣ್ಣನವರ ಹಿರಿಯ ಸಮಕಾಲೀನರಾಗಿದ್ದಾರೆ. ಚಾಲುಕ್ಯ ಮನೆತನದ ಮೇಲೆ ತುಂಬ ಪ್ರಭಾವ ಬೀರಿದ್ದರು. ಮಾಸೂರಿನ ಹೊಳೆಯಲ್ಲಿ ಖಡ್ಗವನ್ನು ನೆಟ್ಟು ಬಿಜ್ಜಳನ ಸೆರೆಯಲ್ಲಿದ್ದ ಮಹಿಳೆಯರನ್ನು ಬಿಡಿಸಿದ ಚರಿತ್ರೆ ಉಲ್ಲೇಖಿತವಾಗಿದೆ ಎಂದು ಆರ್.ಸಿ. ಹಿರೇಮಠರು ವೀರಶೈವ ದರ್ಶನದಲ್ಲಿ ಸ್ಪಷ್ಟಪಡಿಸಿದ್ದಾರೆ. ಹಾಗೆಯೇ ಮಂಗಳವಾಡದ ಸುತ್ತಮುತ್ತ ರೇವಣಸಿದ್ಧೇಶ್ವರರ ಅವಶೇಷಗಳು ವಿಪುಲವಾಗಿ ಕಂಡುಬರುತ್ತವೆ. ಬಸವಣ್ಣನವರು ಮಂಗಳವಾಡಕ್ಕೆ ಬರುವ ಮೊದಲು ರೇವಣಸಿದ್ಧರು ಆ ಭಾಗದಲ್ಲೇ ಭಕ್ತಿಪಂಥ ಭೂಮಿಕೆಯನ್ನು ಸಿದ್ಧಪಡಿಸಿದ್ದರೆಂದು ಊಹಿಸಲು ಬರುವಂತಿದೆ. ಅಷ್ಟೇ ಏಕೆ ಬಸವಣ್ಣನವರ ಸೋದರ ಮಾವನಾದ ಬಲದೇವ ಮಂತ್ರಿಯ ಜನ್ಮಸ್ಥಳವಾದ ಇಂಗಳೇಶ್ವರದಲ್ಲಿ ರೇವಣಸಿದ್ಧೇಶ್ವರನ ಸುಂದರವಾದ ಆಸೀನ ಭಂಗಿಯ ಪ್ರಾಚೀನ ವಿಗ್ರಹವಿದ್ದು, ಅಲ್ಲಿ ರೇವಣಸಿದ್ಧರು ಶೈವ ಪ್ರತಿಷ್ಠಾನ ಮಾಡಿದ ದ್ಯೋತಕವೆನಿಸುತ್ತದೆ. ಇಂಗಳೇಶ್ವರವು ಜೈನರ ಪ್ರಸಿದ್ಧ ಕೇಂದ್ರವಾಗಿದ್ದು, ಚಂದ್ರಪ್ರಭ ಪುರಾಣದ ಅಗ್ಗಳನು ಇಂಗಳೇಶ್ವರದವನು. ಆ ಸ್ಥಳಕ್ಕೆ ಇಂಗಳೇಶ್ವರ (ಚಂದ್ರ) ಎಂಬ ಹೆಸರಿದ್ದುದಾಗಿ ಸಾಹಿತ್ಯ ಗ್ರಂಥಗಳಲ್ಲಿ ತಿಳಿಯಬರುತ್ತದೆ. ಇಂಗಳೇಶ್ವರದ ಒಂದು ಭಾಗವನ್ನು ಇಂದಿಗೂ ಇಂಗಳೇಶ್ವರವೆಂದೇ ಕರೆಯುವರು. ಒಟ್ಟಾರೆ ಬಸವಣ್ಣನವರ ಜನ್ಮಕ್ಷೇತ್ರ ಇಂಗಳೇಶ್ವರ ಬಾಗೇವಾಡಿ ಆರಾಧ್ಯ ಸ್ಥಳ ಕೂಡಲಸಂಗಮ ಕಾರ್ಯಕ್ಷೇತ್ರ ಕಲ್ಯಾಣವೆಂಬುದು ಸ್ಪಷ್ಟತೆಯನ್ನು ಸೂಚಿಸುತ್ತದೆ.[೫]

ಕೂಡಲಸಂಗಮ ಕ್ಷೇತ್ರವನ್ನು ಉಲ್ಲೇಖಿಸುವ ಮತ್ತು ಪ್ರಮುಖ ಆಕರವನ್ನು ಒದಗಿಸುವ ಶಾಸನ ತಮಿಳುನಾಡಿನ ಕವೂರ್ ಶಾಸನ. ಕವೂರ್ ಶಾಸನವು ಈಗಿನ ತಿರುಚುನಾಪಳ್ಳಿಯ ಒಂದು ಪ್ರಮುಖ ನಗರ ಪ್ರದೇಶವಾಗಿದ್ದು, ಇದು ಈ ಪ್ರದೇಶದಿಂದ ತಿರುಚಾನಪಳ್ಳಿಗೆ ಹೋಗುವ ಮಾರ್ಗದ ಮಧ್ಯದಲ್ಲಿದೆ. ಇಲ್ಲಿ ಪಶುಪತೀಶ ಎಂಬ ಹೆಸರಿನ ಒಂದು ದೇವಾಲಯವಿದೆ.

ತಮಿಳಿನಲ್ಲಿ 'ತಿರುವಾಣಿಲೈ' ಎಂಬ ಪ್ರಾಚೀನ ಹೆಸರಿನಿಂದ ಪ್ರಸಿದ್ಧವಾದ ಈ ದೇವಾಲಯದಲ್ಲಿ ಅನೇಕ ತಮಿಳು ಶಾಸನಗಳಿವೆ. ೧೮೯೦ರಲ್ಲಿ ಈ ಸ್ಥಳಕ್ಕೆ ಭೇಟಿನೀಡಿದ ಪಾಶ್ಚಾತ್ಯ ವಿದ್ವಾಂಸರಾದ ಹುಲ್ಷ್‌ರವರು ಈ ಶಾಸನಗಳನ್ನು ಪರಾಮರ್ಶಿಸಿ ಕೂಲಂಕಷವಾಗಿ ಅಧ್ಯಯನಿಸಿ ಬೆಳಕಿಗೆ ತಂದಿದ್ದಾರೆ. ಈ ಎಲ್ಲ ಶಾಸನಗಳು ಚೋಳ ಅರಸರ ಕಾಲಕ್ಕೆ ಸೇರಿದವುಗಳಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ.[೧]

ಇವುಗಳಲ್ಲಿ ಒಂದು ಶಾಸನವು ರಾಜಕೇಸರೀವರ್ಮನೆನಿಸಿದ ಚೋಳ ರಾಜ ಒಂದನೆಯ ವೀರರಾಜೇಂದ್ರನ ವೀರ ಪರಾಕ್ರಮವನ್ನು ವರ್ಣನೆ ಮಾಡುತ್ತದೆ. ಕ್ರಿ.ಶ. ೧೦೫೦ರಿಂದ ೧೦೭೦ರಲ್ಲಿ ಚೋಳ ರಾಜನ ಚಾಲುಕ್ಯ ರಾಜನಾದ ಆಹಮಲ್ಲನೆನಿಸಿದ. ಒಂದನೆಯ ಸೋಮೇಶ್ವರನನ್ನು ಯುದ್ಧದಲ್ಲಿ ಸೋಲಿಸಿದ ಅನೇಕ ವಿವರಗಳು ಈ ಶಾಸನದಲ್ಲಿ ದೊರೆಯುತ್ತವೆ. ಇವರಿಬ್ಬರ ನಡುವೆ ನಡೆದ ಘೋರ ಹೋರಾಟದ ರಣ ಭೂಮಿಯ ಪ್ರದೇಶ ಕೂಡಲಸಂಗಮವಾಗಿತ್ತೆಂದು ಶಾಸನದ ಐದನೆಯ ಸಾಲಿನಲ್ಲಿ ಕೂಡಲಸಂಗಮದ ಹೆಸರು ಸ್ಪಷ್ಟವಾಗಿ ಉಲ್ಲೇಖಗೊಂಡಿದೆ. ಈ ಕೂಡಲಸಂಗಮ ಕ್ಷೇತ್ರ ಯುದ್ಧ ಭೂಮಿಯಾಗಿತ್ತು ಎಂದು ಹೇಳಲಿಕ್ಕೆ ರಕ್ಕಸತಂಗಡಿಗಿ ಯುದ್ಧದ ಉದಾಹರಣೆ ಸ್ಪಷ್ಟತೆಯನ್ನು ಒದಗಿಸುತ್ತದೆ.

ಕೂಡಲಸಂಗಮವನ್ನು ಕುರಿತು ಇದುವರೆಗೆ ಮಾಹಿತಿಯನ್ನು ನೀಡುವ ಶಾಸನಗಳು ಒಟ್ಟು ಆರು. ಸಂಗಮೇಶ್ವರ ದೇವಾಲಯದ ಆವರಣದೊಳಗೆ ಐದು ಮತ್ತು ಮುದ್ದೇಬಿಹಾಳ ತಾಲೂಕಿನ ತಂಗಡಗಿಯಲ್ಲಿನ ಒಂದು ಶಾಸನ ಕ್ರಿ.ಶ. ೧೧೫೮ರ ಒಂದು ಶಾಸನವು ಸಂಗಮೇಶ್ವರ ದೇವಾಲಯದ ಆವರಣದೊಳಗಿರುವ ಈ ಶಾಸನದ ಕಾಲ ಚಾಲುಕ್ಯ ವಿಕ್ರಮ ಶಕೆ ೮೫ನೆಯ ಬಹುದ್ಯಾನ ಸಂವತ್ಸರದ ಶ್ರಾವಣ ಶುದ್ಧ ೧೧ ಗುರುವಾರ ಇದರಲ್ಲಿ ಶಾಸನದ ಕಾಲ ಉಲ್ಲೇಖವಾಗಿರುವುದನ್ನು ಬಿಟ್ಟರೆ ಬೇರೆ ಯಾವ ವಿಷಯವು ತಿಳಿದುಬರುವುದಿಲ್ಲ. ಕಾಲವನ್ನು ತಿಳಿಸುವ ಮೂರು ಸಾಲುಗಳನ್ನು ಬಿಟ್ಟರೆ ಉಳಿದ ಭಾಗವೆಲ್ಲವು ತೃಟಿತಗೊಂಡಿದೆ. ಶಾಸನದ ಮೇಲ್ಭಾಗದಲ್ಲಿ ವಿಷ್ಣುವಿನ ಆಕೃತಿಯು ಇರುವುದರಿಂದ ವೈಷ್ಣವ ದೇವತೆಯೊಂದಕ್ಕೆ ದತ್ತಿ ನೀಡಿದ ಉಲ್ಲೇಖ ಇದರಲ್ಲಿ ಇತ್ತೆಂಬುದನ್ನು ಪಿ.ಬಿ. ದೇಸಾಯಿಯವರು ಅಭಿಪ್ರಾಯಪಡುತ್ತಾರೆ. ಆದರೆ ವಿದ್ವಾಂಸರು ಈ ಹೇಳಿಕೆಯನ್ನು ಒಪ್ಪಿಕೊಂಡಿಲ್ಲ. ಶಾಸನದ ಪಾಠ ಇಂತಿದೆ.

ಸ್ವಸ್ತಿ ಶ್ರೀ ಮಚ್ಚಾಲುಕ್ಯ ವಿಕ್ರಮ...
(೮೨)ನೆಯ ಬಹುಧ್ಯಾನ್ಯ ಸಂವಸ್ಸ...
ವಣಶುದ್ಧ ೧೧ ಬ್ರಹಸ್ಪಲೇನಾ...[೨]

ಕ್ರಿ.ಶ. ೧೧೬೦ರ ಒಂದು ಶಾಸನ ಸಂಗಮೇಶ್ವರ ದೇವಾಲಯದ ಆವರಣದೊಳಗಿರುವ ಈ ಶಾಸನದ ಕಾಲ. ಚಾಲುಕ್ಯ ವಿಕ್ರಮ ಶಕೆ ೮೪ನೆಯ ಪ್ರಮಾದಿ ಸಂವತ್ಸರದ ಕಾರ್ತೀಕ ಶುದ್ಧ

೫ ಭಾನುವಾರ ಇಂಗ್ಲೀಷ್ ತೇದಿಯ ಪ್ರಕಾರ ೧೮ ಅಕ್ಟೋಬರ್ ೧೧೬೦ ಈ ಹಿಂದೆ ವಿವರಿಸಿದ ತಮಿಳುನಾಡಿನ ೧೧ನೆಯ ಶತಮಾನದ ಕವೂರು ಶಾಸನವನ್ನು ಬಿಟ್ಟರೆ ಕನ್ನಡನಾಡಿನ ಶಾಸನಗಳಲ್ಲಿ ಮೊಟ್ಟ ಮೊದಲಿಗೆ ಕೂಡಲಸಂಗಮದ ಪ್ರಸ್ತಾಪ ಬರುವುದು. ಈ ಶಾಸನದಲ್ಲಿ ಮಾತ್ರ ಅಲ್ಲದೆ ಶಾಸನವು ತಿಳಿಸುವಂತೆ ಕೂಡಲಸಂಗಮವು ಒಂದು ಶೈವ ಅಗ್ರಹಾರವಾಗಿದ್ದು, ಇಲ್ಲಿಯ ಮಹಾಜನರು ಸಂಗಮೇಶ್ವರನ ಪರಮ ಭಕ್ತರಾಗಿದ್ದರೆಂದು ಇದರಿಂದ ತಿಳಿಯುತ್ತದೆ. ಯಮ, ನಿಯಮ, ಮಾರಿಯೋಗ, ಅನುಷ್ಠಾನ, ಜಪತಪಾದಿಗಳಲ್ಲಿ ನಿರತವಾದ ಸಾಧು-ಸತ್ಪುರುಷರ ವರ್ಣನೆಯು ಇದರಲ್ಲಿ ಬರುತ್ತದೆ. ಶ್ರೀ ಸಂಗಮೇಶ್ವರ ದೇವಾಲಯ ಇನ್ನೂ ಎರಡು ದೇವಾಲಯಗಳು ಇಲ್ಲಿ ಇದ್ದಂತೆ ತೋರುತ್ತದೆ. ಆಚೇಶ್ವರ ದೇವಾಲಯವು ಮಲಪ್ರಭಾ ನದಿಯ ತೀರದಲ್ಲಿತ್ತೆಂದು ತೋರುತ್ತದೆ.[೮] ಕಾಳೇಶ್ವರ ಮತ್ತು ಆಚೇಶ್ವರ ದೇವರಿಗೆ ಚುಂಚನ ಆದಿಶೆಟ್ಟಿ ಮತ್ತು ಇತರ ವರ್ತಕರು ಹೂವಿನ ತೋಟ, ಅಂಗಡಿ ಮತ್ತು ಎಣ್ಣೆಯನ್ನು ತೆಗೆಯುವ ಗಾಣವನ್ನು ದಾನವಾಗಿ ನೀಡಿದ ಉಲ್ಲೇಖವು ಈ ಶಾಸನದಲ್ಲಿ ಬರುತ್ತದೆ. ಶಾಸನದ ಪಾಠ ಹೀಗಿದೆ:

ಗ್ರಹಾರಂ ಕೂಡಲ ಕಪ್ಪಡಿಸಂಗಮದ ಶ್ರಿ ಮನ್ಮೂ
ಹಾಜನಂಗಳ ಪರಮ ಕಾರುಣ್ಯ ಪ್ರಸಾದಿಂದಂ ಸಮಸ್ತಗುಣ...
ಚುಂಚಿನಾದಿಶೆಟ್ಟಿ ಶ್ರೀ ಕಾಳೇಶ್ವರ ದೇವರಿವರಿಗರುವಣಕ್ಕೆ
ಕೆರಿಲೊಕ್ಕಿಗೆ ರೆಯಂ ಬಡಗಣ ಮತ್ತರು ಹನ್ನೆ
ಶ್ರೀ ಮದಾಚೇಶ್ವರ ದೇವರಿಗೆ ಹೂವಿನೂರುದಾರಿಯ
ನಶಿಯ ಬಟ್ಟೆಯುಂಬಡಗಣ ಗರ್ವಿಗೆಯ ಸ್ಥಳ...
ಯರುವಣಿಕೆ ಬರೆಸಿ ಬಿಟ್ಟ ಮತ್ತರು ಹ...
ಡು ೧೨ ಅ (ರುವ) ತ್ರೋಕಲು ಮುಖ್ಯವಾಗಿ ಸಮಸ್ಥ...[೯]

ಈ ಶಾಸನದಲ್ಲಿ ಉಲ್ಲೇಖವಾಗಿರುವಂತೆ ಸಂಗಮೇಶ್ವರ ದೇವಾಲಯದಂತೆ ಇರುವ ಕಾಳೇಶ್ವರ ಮತ್ತು ಆಚೇಶ್ವರ ಎಂಬ ದೇವಾಲಯವು ಮಲಪ್ರಭಾ ನದಿಯ ದಂಡೆಯ ಮೇಲೆ ಇದ್ದದ್ದು ಗೋಚರವಾಗುತ್ತದೆ. ಈ ಉಲ್ಲೇಖ ಕಾವ್ಯಗಳಲ್ಲಿಯೂ ಬಂದಿರುವುದರಿಂದ ಆಚೇಶ್ವರ ದೇವಾಲಯ ಈಗಿನ ಕೃಷ್ಣಾ-ಮಲಪ್ರಭೆಗಳು ಸೇರುವ ತ್ರಿಕೋನ ಸ್ಥಳದಲ್ಲಿ ಮೂರು ಗುಡಿಗಳಿದ್ದು, ಇಂದು ಸಂಗಮೇಶ್ವರ, ಸಿದ್ಧೇಶ್ವರ, ಜಾತವೇದಿ ಎಂದು ಕರೆಯುತ್ತಾರೆ. ಇವು ಕ್ರಮವಾಗಿ ಮೇಲಿನ ಶಾಸನಗಳಲ್ಲಿ ಹೇಳಲಾದ ಸಂಗಮೇಶ್ವರ, ಕಾಳೇಶ್ವರ, ಆಚೇಶ್ವರ ದೇವಾಲಯಗಳೇ ಆಗಿವೆ. ಆದರೆ ಶಾಸನೋಕ್ತ ಕಾಳೇಶ್ವರನಲ್ಲಿ ಇಂದು ಸಿದ್ಧೇಶ್ವನೆಂದು, ಆಚೇಶ್ವರನನ್ನೇ ಜಾತವೇದಿ ಗದ್ದುಗೆಯೆಂದು ಕರೆಯುತ್ತಲಿದ್ದಾರೆ. ದೇವಾಲಯ ಕಟ್ಟಿಸಿ ತನ್ನ ಹೆಸರಿನ ಲಿಂಗ ಸ್ಥಾಪಿಸಿದರೆ ಮೋಕ್ಷ ಸಿಗುವುದೆಂಬ ಕಲ್ಪನೆ ಪ್ರಾಚೀನ ಕಾಲದಲ್ಲಿ ಜಾರಿಯಲ್ಲಿದ್ದಿತು. ಈಗ ಜಾತವೇದಿ ಗುಡಿ ಎಂದು ಕರೆದುಕೊಳ್ಳುವುದು ಮಲಪ್ರಭೆ ತೀರದಲ್ಲಿಯೇ ಇದೆ. ಆದ್ದರಿಂದ ಇದು ಮೂಲತಃ ಆಚೇಶ್ವರ ಗುಡಿಯೇ ಆಗಿದೆ

ಎಂದು ಸಂಶೋಧಕರಾದ ಎಂ.ಎಂ. ಕಲಬುರ್ಗಿಯವರು ಕಾವ್ಯ ಮತ್ತು ಶಾಸನಗಳನ್ನು ಪರಿಶೀಲಿಸಿ ವ್ಯಕ್ತಪಡಿಸಿದ್ದಾರೆ.[೧೦]

ದೇವಾಲಯದ ಒಳಗಡೆ ಇರುವಂಥ ೧೧೬೦ರ ಶಾಸನದಲ್ಲಿ ಕೂಡಲಸಂಗಮದ ಸುತ್ತಮುತ್ತಲ ಗ್ರಾಮಗಳ ಉಲ್ಲೇಖ ಬರುತ್ತದೆ. ಕೃಷ್ಣಾ ಮತ್ತು ಮಲಪ್ರಭಾ ನದಿಗಳು ಸೇರುವ ಸ್ಥಳದಿಂದ ಬಡಗಣ (ದಕ್ಷಿಣ) ದಿಕ್ಕಿಗೆ ಇರುವಂಥ ಹೂವಿನೂರ ದಾರಿಯಲ್ಲಿ ಇರುವ ಭೂಮಿಯನ್ನು ದಾನವಾಗಿ ನೀಡಲಾಯಿತು ಎಂದು ಈ ರೀತಿಯಲ್ಲಿ ಉಲ್ಲೇಖವಿದೆ.

> ಗ್ರಹಾರ ಕೂಡಲ ಕಪ್ಪಡಿಸಂಗಮದ ಶ್ರೀಯನ್ನು....
> ಹಾಜನಂಗಳ ಪರಮಕಾರುಣ್ಯ ಪ್ರಸಾರದಿಂದಂ ಸಮಸ್ತಗುಣ...
> ಚುಂಚಿನಾದಿಶೆಟ್ಟಿ ಶ್ರೀ ಕಾಳೇಶ್ವರದೇವರಿಗರುವಣಕ್ಕೆ...
> ಕೆಯೆ ಲೊಕ್ಕಿಗೆಜೆಯಿಂ ಬಡಗಂ ಹೂವಿನೂರ ದಾರಿಯ...
> ಶ್ರೀ ಮದಾಚೇಶ್ವರ ದೇವರಿಗೆ ಹೂವಿನೂರ ದಾರಿಯ...
> ನಸಿಯ ಬಟ್ಟೆಯಿಂ ಬಡಗಣ ಗಪ್ಪಿಗೆಯ್ಯ ಸ್ಥಳ...[೧೧]

ಆಚೇಶ್ವರ ಮತ್ತು ಕಾಳೇಶ್ವರ ದೇವರಿಗೆ ಭೂಮಿಯನ್ನು ನೀಡಿದ್ದು ತಿಳಿಯುತ್ತದೆ. ಶಾಸನದಲ್ಲಿ ಉಲ್ಲೇಖವಾದ ಹೂವಿನೂರು ಇಂದು ಹೂವನೂರು ಎಂಬ ನಾಮದಿಂದ ಕರೆಯಲಾಗುತ್ತಿದೆ. ಇದು ಸಂಗಮ ಕ್ರಾಸಿನಿಂದ ಕೂಡಲಸಂಗಮಕ್ಕೆ ಹೋಗುವ ದಾರಿಯಲ್ಲಿಯೇ ಇದೆ. ಕೂಡಲಸಂಗಮದಿಂದ ಸುಮಾರು ೬ಕಿ.ಮೀ. ದೂರದಲ್ಲಿದೆ. ಈ ಊರಿನ ದಾರಿಯಲ್ಲಿಯೇ ಹಿಂದೆ ದಾನಬಿಡಲಾಗಿತ್ತು ಎಂದು ತಿಳಿಯಬಹುದು.

ಪ್ರಾಚೀನ ಬಹುಪಾಲು ಶಾಸನಗಳಲ್ಲಿ ದಾನಶಾಸನಗಳೇ ಅಧಿಕವಾಗಿವೆ. ಅದೇ ತೆರನಾಗಿ ಕೂಡಲಸಂಗಮದ ಶಾಸನಗಳೂ ಸಹ ದಾನ-ಪ್ರಧಾನವಾದ ಶಾಸನಗಳಾಗಿವೆ. ಭೂಮಿಯನ್ನು, ಗೋವುಗಳನ್ನು, ಕೆರೆಗಳನ್ನು ದಾನಮಾಡುವುದನ್ನು ಸಾಮಾನ್ಯವಾಗಿ ನೋಡಬಹುದು. ಆದರೆ ಕೂಡಲಸಂಗಮದಲ್ಲಿ ಆಚೇಶ್ವರ ಮತ್ತು ಕಾಳೇಶ್ವರ ದೇವರಿಗೆ ಭೂಮಿಯ ಜೊತೆಗೆ ಹೂವಿನತೋಟ, ಅಂಗಡಿ, ಗಾಣವನ್ನು ನೀಡಿದ್ದರ ಉಲ್ಲೇಖವಿದೆ.

> ಯರುವಣಕ್ಕೆ ಬರಸಿ ಬಿಟ್ಟ ಮತ್ತರಂ...
> ಡು ೧೨ (ಇವ) ತೊಕ್ಕಲು ಮುಖ್ಯವಾಗಿ ಸಯಸ್ತತೆ (ಲ್ಲಿ)
> ...ರದು...ಆಚೇಶ್ವರಗೆ... ಗಾಣದಲ...
> ಮತ್ತಿರ್ಬರು ದೇವರಿಗಂ ಸಮುದಿತವಾಗಿ ಮಾಡಿಸಿಕೊಟ್ಟು ಬಿಟ್ಟ ಮ(ತ್ತ)...
> ಹೂವಿನ ತೋಟ೧ ಅಂಗಡಿ೧ ಗಾಣ೧ ಯಿಂತಿನಿತುಂ ಶ್ರೀಮನ್ಮಹಾ (ರು)
> ನಂಗಳ ಧರ್ಮಂ ಚಂದ್ರಾರ್ಕ್ಕ ತಾರಾಂಬರಂ ಪ್ರತಿಪಾದಿಸುವರು ಅನುಪಮ[೧೨]

ಮತ್ತರಂ ೨ ಒಕ್ಕಲುಭೂಮಿಯನ್ನು ಅಂದರೆ ೧೨ ಮತ್ತರು ವ್ಯವಸಾಯ ಮಾಡುವ ಭೂಮಿಯನ್ನು ಕಾಳೇಶ್ವರ ಮತ್ತು ಆಚೇಶ್ವರ ದೇವರಿಗೆ ದಾನವಾಗಿ ಬಿಟ್ಟಿದ್ದು ಎಂದಾಗುತ್ತದೆ. ಜೊತೆಗೆ ಹೂವಿನ ತೋಟ ೧ ಎಂದು ಇರುವುದರಿಂದ ಬಹುಶಃ ದೇವರಿಗೆ ಪೂಜೆಯನ್ನು ಮಾಡಲು ಬೇಕಾಗುವ ಹೂಗಳ ಒಂದು ತೋಟವನ್ನೇ ದಾನವಾಗಿ ಬಿಟ್ಟಿರಬಹುದು. ಯಾವ ಪ್ರಕಾರದ್ದು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇಲ್ಲಿ ದೇವರ ಪೂಜೆಗೆ ಸಂಬಂಧಿಸಿದ ವಸ್ತುಗಳ ಅಂಗಡಿ ಎಂದು ಮತ್ತು ಇಲ್ಲಿಗೆ ಬರುವಂಥ ಭಕ್ತರಿಗೆ ಬೇಕಾಗುವಂಥ ವಸ್ತುಗಳು ಸಿಗುವ ಅಂಗಡಿ ಎಂದು ತಿಳಿಯಬಹುದು. ಗಾಣವನ್ನು ಬಿಟ್ಟಿರುವಂಥದ್ದು ದೇವರ ಮುಂದಿನ ದೀಪಕ್ಕೆ ಮತ್ತು ದೇವಾಲಯಗಳಲ್ಲಿ ರಾತ್ರಿಇಡಿ ಬೆಳಕು ಇರಬೇಕೆಂಬ ಉದ್ದೇಶದಿಂದ ಇಡಿ ಒಂದು ಗಾಣವನ್ನೆ ದಾನವಾಗಿ ಬಿಡಲಾಗಿದ್ದಿತು ಎಂದೆನಿಸುತ್ತದೆ. ಒಟ್ಟಿನಲ್ಲಿ ದೇವಾಲಯಕ್ಕೆಂದೇ ಹೂವಿನ ತೋಟ, ಅಂಗಡಿ ಮತ್ತು ಗಾಣವನ್ನು ಬಿಟ್ಟಿದ್ದಕ್ಕಾಗಿಯೇ ಇದೊಂದು ವಿಶೇಷವಾದ ಶಾಸನವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಸಂಗಮೇಶ್ವರ ದೇವರ ದೇವಾಲಯದ ಕಂಬದಲ್ಲಿ ಕೆತ್ತಿರುವ ಒಂದು ಶಾಸನದಲ್ಲಿ ಆಚೇಶ್ವರ ದೇವರಿಗೆ ಹೂದೋಟಕ್ಕೆ, ಧೂಪಕ್ಕೆ ಎಂದು ದೇವರಾಸಿ ಜೀಯನಿಗೆ ಸಾವಿರ ಜನರು ಎಲೆ ಹೇರಿಗೆ ೫೦ ಎಲೆ ಮತ್ತು ಹೇಜೆಂಗೆ ೨೫ ಎಲೆಯನ್ನು ಧರ್ಮವಾಗಿ ಬಿಡುತ್ತಾರೆ.

ಖ ಸಂವತ್ಸರಸ ಶ್ರಾವಣ ಬ೨ ಅದಿವಾ
(ರದಮ್ದು) ಶ್ರೀಮದಾಚೇಸ್ವರದೇವರ ಹೂ
ದೋಟಕ್ಕೆ (ಧೂಪಕಂ) ದೇವರಾಸಿ ಜೀ
...ಮಲಹಾರಿ ತೀರದೊಳ್ ತಾ ನೆಲಸಿದ್ದಾ
ಚೇಶ್ವರಂ ಮಹೋತ್ಸವದಿಂದಂ ತೊಲ
ಗದೆ ಭಕ್ತರ್ಗ್ಗೆಲ್ಲಂ ಸಲೆ ಕುಡು (ತೆ)
ಸದಿರ್ಕ್ಕೆ ದೀರ್ಘಮಾಯುಂ ಶ್ರೀ
(ಯಮಂ) ಪರಮ ಗುರುವೆನಿಪ
...ಪುತ್ರಂ (ಚುಂಚಿ) ನಾದಿಸೆಟ್ಟಿ
...(ದ) ಯೆಯಿ ಪರಮೇಶ್ವರ (ರ್ಯ)
ಮನಿತ್ತು (೦) ಪರ ರಕ್ಷಿಸುತಿರ್ಪ್ಪನಕ್ಕೆ
ಸಂಗಮಹೇಶಂ
ದೇವರಿಗೆ ಸಾಸಿರ್ಬ್ಬರು ಬಿಟ್ಟೆಲೆಯೂ
ಯಂ ಹೇಜೆಂಗೆ ೫೦ ಪೋಜೆಗೆ ೨(೫)
ದೇವರಿಗೆ ಱುವತೊಕ್ಕಲಾರಂಭಯಾ

ಕ್ಕಲಲು ಪರಿಷಂಪ್ರತಿ ಪಾಗದ
ಲೆಕ್ಕದಿಂ ಕೊಟ್ಟು ಬಿಟ್ಟರು[೧೩]

ಈ ಶಾಸನದ ಮೂಲಕ ತಿಳಿಯಬಹುದಾದ ಪ್ರಮುಖ ಸಾಂಸ್ಕೃತಿಕ ಅಂಶಗಳೆಂದರೆ ದಾನವಾಗಿ ಎಲೆ ಹೇರುಗಳನ್ನು ಬಿಟ್ಟಿರುವಂಥದ್ದು ಮತ್ತು ಈ ದಾನವನ್ನು ಸ್ಥಳೀಯ ಸಾವಿರ ಜನರು ಸೇರಿ ದೇವರಾಸಿ ಜೀಯನಾದ ಚುಂಚಿನಾದಿಶೆಟ್ಟಿಗೆ ನೀಡಿದ್ದಾಗಿದೆ. ಆಚೇಶ್ವರ ದೇವರಿಗೆ ಹೂದೋಟವಿದ್ದು ಈ ಹೂದೋಟವನ್ನು ನೋಡಿಕೊಳ್ಳುವುದಕ್ಕೆ ಮತ್ತು ದೇವರಿಗೆ ಧೂಪಕ್ಕೆ ದೇವರಾಸಿ ಜೀಯರಿಗೆ ನೀಡಿದ ದಾನವಾಗಿದೆ. ಈ ಆಚೇಶ್ವರ ದೇವರು ಮತ್ತು ಅಲ್ಲಿಯ ದೇವರಾಸಿ ಜೀಯರು ಮಲಪ್ರಭಾ ನದಿತೀರದಲ್ಲಿಯೇ ನೆಲಸಿದ್ದರೆಂಬುದು ಪ್ರಮುಖ ಅಂಶವಾಗಿದೆ. ಇಲ್ಲಿ ಬರುವ ಪದಗಳ ಅರ್ಥವಿವರಣೆ ನೋಡಿದಾಗ, ದೇವರಾಸಿಜೀಯರು ಯಾರು ಅವರ ಕರ್ತವ್ಯಗಳೇನು ಎಂದು ಅವಲೋಕಿಸಿದಾಗ ದೇವಸ್ಥಾನ ಮತ್ತು ದೇವರಿಗೆ ಸಂಬಂಧಿಸಿದ ಎಲ್ಲ ಮೇಲ್ವಿಚಾರಣೆಯನ್ನು ಮಾಡುವವರು ಎಂದು ಊಹಿಸಬಹುದಾಗಿದೆ. ಜೀಯರ ತೆರಿಗೆ ಎಂಬ ಹೆಸರಿನಲ್ಲಿ ತೆರಿಗೆಯನ್ನು ಪಡೆಯುತ್ತಿದ್ದರೆಂದು ಬೇರೆಯ ಅನೇಕ ಶಾಸನಗಳಲ್ಲಿ ಉಲ್ಲೇಖವಿರುವುದನ್ನು ಕಾಣುತ್ತೇವೆ.[೧೪] ಜೀಯ ಎಂದರೆ ಧರ್ಮಗುರುಗಳು ಎಂದು ಅರ್ಥೈಸಬಹುದು. ಇಂಥ ಧರ್ಮಗುರುಗಳಿಗೆ ನೀಡುವ ತೆರಿಗೆಯನ್ನು ಜೀಯರ ತೆರಿಗೆಯೆಂದು ತಿಳಿಯಬಹುದು.

ದೇವರಾಸಿಜೀಯರಾದಂಥ ಪರಮಗುರು ಚುಂಚಿನಾದಿಶೆಟ್ಟಿ ಇಲ್ಲಿಯ ಪರಮಗುರುವಾಗಿದ್ದನು. ಆಚೇಶ್ವರ ದೇವರ ಆಲಯದಲ್ಲಿ ಇವರು ಇದ್ದು ಎಲ್ಲ ಜವಾಬ್ದಾರಿಗಳನ್ನು ನೋಡಿಕೊಳ್ಳುತ್ತಿದ್ದರೆಂದು ಮತ್ತು ಇವರೆಲ್ಲರಾದಿಯಾಗಿ ಭಕ್ತರಿಗೆ ದೀರ್ಘಾಯುಷ್ಯವಾಗಲೆಂದು ಶಾಸನಗಳಲ್ಲಿ ಪ್ರಸ್ತಾಪಿಸಲಾಗಿದೆ. ದೇವರಿಗೆ ಸಾವಿರಾರು ಜನರು ಬಿಟ್ಟ ಎಲೆಹೇರಿಗೆ ೫೦ಎಲೆ, "ಪೆಜಿಗೆ" ೨೫ ಎಲೆಗಳನ್ನು ಧರ್ಮವಾಗಿ ಬಿಡುತ್ತಾರೆ. ದೇವರಿಗೆಂದು ಮತ್ತೆ ಅರವತ್ತೊಕ್ಕಲು, ಆರಂಭದ ಒಕ್ಕಲಲ್ಲಿ ಪ್ರತಿವರ್ಷ ಹಾಗ ಲೆಕ್ಕದಲ್ಲಿ ದಾನ ನೀಡುತ್ತಾರೆ. ಸೂರ್ಯ-ಚಂದ್ರರಿರುವವರೆಗೂ ಇದು ಮುಂದುವರೆಯಲಿ ಎಂದು ತಿಳಿಸಲಾಗಿದೆ.

'ಹೇಜೆಂಗೆ' ೫೦ ಎಲೆ ಮತ್ತು 'ಪೊಜೆಗೆ' ೨೫ ಎಲೆ ಎಂಬ ಪದಗಳನ್ನು ನೋಡಿದಾಗ ಹೇಜೆಂಗೆ ಎನ್ನುವುದು ಹೇಜು ಎಂಬ ಅರ್ಥವನ್ನು ಕಲ್ಪಿಸುತ್ತದೆ. 'ಹೇಜು' ಎಂಬ ಶಬ್ದಕ್ಕೆ ಕನ್ನಡ ನಿಘಂಟುವಿನಲ್ಲಿ ಅದೇರೀತಿ 'ಹೇರಿಗ' ಎಂದರೆ ಗೂಢಾಚಾರ, ಬೇಹುಗಾರ ಎಂದು ಅರ್ಥವಿದೆ. ಅಂದರೆ ದೇವಾಲಯವನ್ನು ನೋಡಿಕೊಳ್ಳುವುದಕ್ಕಾಗಿ ಗುಪ್ತಚರರಾಗಿ ಕಾರ್ಯನಿರ್ವಹಿಸುವವರಿಗೆ ಅಂದರೆ ಹೇಜೆಂಗೆ ೫೦ಎಲೆ ಎಂದು ತಿಳಿಯಬಹುದಾಗಿದೆ. 'ಪೊಜೆಗೆ' ಅಂದರೆ ರಕ್ಷಣೆಯನ್ನು ಮಾಡುವಂಥವನು, ಹಾಳಾಗದಂತೆ ನೋಡಿಕೊಳ್ಳುವವನಿಗೆ ೨೫ ಎಲೆಯನ್ನು ನೀಡಬೇಕೆಂದು ತಿಳಿಯಬಹುದಾಗಿದೆ. ಇನ್ನೂ ಎಲೆ ಮೇಲೆ ತೆರಿಗೆ ಎಂದರೆ ವೀಳ್ಯದೆಲೆಯನ್ನು ಮಾರುವಂಥ ವ್ಯಾಪಾರಿಗಳಿಂದ ಬಂದ ತೆರಿಗೆಯನ್ನು ಗುಪ್ತಚಾರಿಗಳಿಗೂ ಮತ್ತು ೨೫ ವ್ಯಾಪಾರಿಗಳಿಂದ ಬಂದ ತೆರಿಗೆಯನ್ನು ರಕ್ಷಣೆ, ಶುದ್ಧಿ ಮಾಡುವವರಿಗೆ ನೀಡಲಾಗಿತ್ತು ಎಂದಾಗುತ್ತದೆ.

ದೇವರಿಗೆ ಅರವತ್ತು ಒಕ್ಕಲು ಆರಂಭದೊಕ್ಕಲು ವರ್ಷಪರಿಯಂತ ನಡೆದು ಬರಲಿ ಇದು ಸೂರ್ಯ-ಚಂದ್ರರಿರುವ ತನಕ ಎಂದು ಉಲ್ಲೇಖಿಸಲಾಗಿದೆ. ಅರವತ್ತೊಕ್ಕಲು ದೇವರಿಗೆ ಎಂದರೆ ಅರವತ್ತು ಕುಟುಂಬಗಳನ್ನು ಹೊಂದಿರುವ ಗುಂಪು ಎಂದಾಗುತ್ತದೆ. ವರ್ಷದ ಪ್ರಾರಂಭದಲ್ಲಿ ಈ ಒಕ್ಕಲನ್ನು ನೀಡಬೇಕು ಎಂದು ತಿಳಿಸುತ್ತದೆ. ಹೀಗೆ ಶಾಸನಗಳಲ್ಲಿ ಸಾಂಸ್ಕೃತಿಕ ವಿಷಯವಾಗಿರುವುದನ್ನು ನೋಡಬಹುದು. ಕೂಡಲಸಂಗಮದಲ್ಲಿಯ ಶಾಸನಗಳು ಸಾಂಸ್ಕೃತಿಕ ಅಂಶಗಳ ಆಗರವಾಗಿ ನಮಗೆ ಅನೇಕ ಪ್ರಾಚೀನ ವಿಷಯಗಳನ್ನು ತಿಳಿಸಿಕೊಡುತ್ತವೆ. ಈ ಹಿನ್ನೆಲೆಯಲ್ಲಿ ಕೂಡಲಸಂಗಮದ ದೇವಾಲಯಗಳು ಹಾಗೂ ಅಲ್ಲಿ ನಡೆಯುವ ಜಾತ್ರೆ ಮತ್ತು ಉತ್ಸವಗಳನ್ನು ಕುರಿತಾಗಿ ಆಚರಣೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ದೇವಾಲಯಗಳಿಲ್ಲದ ಗ್ರಾಮಗಳು ನಮ್ಮ ದೇಶದಲ್ಲಿ ಸಿಗಲಿಕ್ಕಿಲ್ಲವೆಂದು ತೋರುತ್ತದೆ. ಭಾರತ ದೇಶವನ್ನು ದೇವಾಲಯಗಳ ಸಮುಚ್ಚಯದ ದೇಶವೆಂದು ಕರೆದರೆ ತಪ್ಪಾಗಲಿಕ್ಕಿಲ್ಲ. ಪ್ರತಿಯೊಂದು ಗ್ರಾಮಗಳಲ್ಲಿ ಚಾವಡಿಯಿಲ್ಲದಿದ್ದರೂ, ಅಂಗಡಿಗಳಿಲ್ಲದಿದ್ದರೂ ಗುಡಿಗೇನು ಕೊರತೆಯಿಲ್ಲ. ಜನರಲ್ಲಿ ಗುಡಿಗೆ ಆಗಾಗ ಹೋಗಿಬರುವ ವಾಡಿಕೆಯಿದ್ದರೂ ಮನೆಮನೆಯಲ್ಲಿಯೇ ದೇವತಾ ಮೂರ್ತಿಗಳನ್ನಿರಿಸಿಕೊಂಡು ಪೂಜಿಸುವ ಪದ್ಧತಿಯಿದೆ. ಅನುಕೂಲವಿದ್ದವರು ಮನೆಯ ಒಂದು ಕೋಣೆಯನ್ನೆ ಗುಡಿಯಂತೆ ಮಾಡಿಕೊಂಡಿರುತ್ತಾರೆ. ಅನುಕೂಲ ಇಲ್ಲದವರು ಒಂದು ಗುಡಿನ್ನೋ ಅಥವಾ ಒಂದು ಕಡೆ ಫೋಟೋವನ್ನು ನೇತುಹಾಕಿ ಪೂಜಿಸುತ್ತಾರೆ. ಹೀಗೆ ಒಂದೊಂದು ಮನೆಯಲ್ಲಿಯೂ ಗುಡಿಯಿದ್ದ ಮೇಲೆ ಊರಿಗೊಂದು ಗುಡಿಯೇಕೆ? ಎಂಬ ಪ್ರಶ್ನೆಯನ್ನು ಹಾಕಿಕೊಂಡರೆ ಸ್ಥಳದ ಅಗತ್ಯವಿದೆ ಎಂದೆನಿಸುತ್ತದೆ. ಹಲವಾರು ಸಾಮಾಜಿಕ, ಆರ್ಥಿಕ, ಧಾರ್ಮಿಕ ಪ್ರಯೋಜನಗಳಿಗೆ ಇದು ನೆರವಾಗುತ್ತದೆ. ಮದುವೆ, ಸಂತೆ, ಸಭೆ, ಸಮಾರಾಧನೆ, ಜಾತ್ರೆ, ಜಾಗರಣೆ, ಓಲಗ ಎಲ್ಲಕ್ಕೂ ಗುಡಿಯೇ ಆಧಾರವಾಗಿರುತ್ತದೆ. ಗುಡಿಯೇನು ಯಾರೊಬ್ಬರದ್ದೂ ಅಲ್ಲ, ಯಾರೊಬ್ಬರು ಕಟ್ಟಿಸಿದರೂ ಕಟ್ಟಿ ಮುಗಿದೊಡನೆ ಗುಡಿ ಊರಿಗೆಲ್ಲ ಸೇರಿದ್ದು. ಕಟ್ಟಿಸಿದವನ ಒಡೆತನ ಅಲ್ಲಿಗೆ ಮುಗಿಯಿತು. ಗುಡಿಗೆ ಈ ಗುಣ ಇರುವುದರಿಂದಲೇ ಊರ ಹಿರಿಯರು ಅದನ್ನು ಕೇಂದ್ರಸ್ಥಾನವಾಗಿಸಿಕೊಂಡು ಪೂಜೆ, ಪುನಸ್ಕಾರಗಳು ತಪ್ಪದೆ ನಡೆಯಲು ಪ್ರಯತ್ನಿಸುತ್ತಾರೆ. ಕಾಲಕಾಲಕ್ಕೆ ಉತ್ಸವ, ಜಾತ್ರೆಗಳನ್ನು ನಡೆಸುತ್ತಾರೆ. ಇವೆಲ್ಲ ಊರವರ ಹೊಣೆಗಾರಿಕೆಯಲ್ಲಿ ನಡೆಯುತ್ತವೆ.

ದೇವಾಲಯಗಳ ಪ್ರಾಚೀನತೆಯನ್ನು ತಿಳಿಯುತ್ತಾ ಹೋದಾಗ ಅವುಗಳು ಪ್ರಾರಂಭಗೊಳ್ಳುವುದು ನಾಗರಿಕತೆಗಳ ಹುಟ್ಟಿನಿಂದಲೇ ಇರಬೇಕು ಎಂದು ಅನ್ನಿಸುತ್ತದೆ. ವೇದಕಾಲದಲ್ಲಿ ಗುಡಿಗಳಿದ್ದವೆ? ಇದ್ದದ್ದೇ ಆದಲ್ಲಿ ಯಾವುದೂ ಈವರೆಗೆ ಉಳಿದಿಲ್ಲ. ಇದ್ದ ಉಲ್ಲೇಖವು ವೇದಗಳಲ್ಲಿ ಎಲ್ಲಿಯೂ ಬರುವುದಿಲ್ಲ. ಪ್ರತಿಮಾ ಪೂಜೆಯನ್ನೇ ವೈದಿಕ ಜನ ಒಪ್ಪಿರಲಿಲ್ಲವೆಂದ ಮೇಲೆ ಗುಡಿಯೆಲ್ಲಿ ಬರಬೇಕು? ಅದೇ ತೆರನಾಗಿ ಹರಪ್ಪಾ-ಮೆಹೆಂಜೋದಾರೋ ಅವಶೇಷಗಳಲ್ಲಿ ದೇವತಾ

ಮೂರ್ತಿಗಳಿರುವ ಮುದ್ರೆಗಳು ದೊರೆತಿರುವದು ಗೊತ್ತಿರುವ ವಿಷಯವಾಗಿದೆ. ಆದರೆ ದೇವಾಲಯಗಳಿರುವ ಉಲ್ಲೇಖವಿಲ್ಲ. ಅಲ್ಲಿ ದೊರೆತಿರುವ ಮೂರ್ತಿಗಳು ಮನೆಯಲ್ಲಿ ಪೂಜಿಸುತ್ತಿರಬಹುದು ಎಂದೆನಿಸುತ್ತವೆ. ಅದನ್ನೂ ಸಹ ಖಚಿತವಾಗಿ ಹೇಳುವುದು ಕಷ್ಟ. ಧಾರ್ಮಿಕ ಕಲ್ಪನೆಗಳಿದ್ದ ಮಾತ್ರಕ್ಕೆ ಗುಡಿಗಳು ಇರಬೇಕೆಂಬ ನಿಯಮವಿಲ್ಲ.

ದೇವಾಲಯಗಳನ್ನು ಕಲ್ಲಿನಿಂದ ನಿರ್ಮಿಸುವುದರಲ್ಲಿ ಪ್ರಮುಖವಾದ ಹೆಜ್ಜೆಯನ್ನಿಟ್ಟವರು ಗುಪ್ತರು. ಹಿಂದೂ ಧರ್ಮದ ಶ್ರದ್ಧಾವಂತ ಅನುಯಾಯಿಗಳಾದ ಗುಪ್ತರಿಂದ ದೇವಾಲಯಗಳ ರಚನೆಗೆ ವಿಶೇಷ ಪ್ರೋತ್ಸಾಹ, ಪೋಷಣೆಗಳು ಸಿಕ್ಕವು. ಆ ಕಾಲದ ದೇವಾಲಯಗಳೆಂದರೆ ಮುಖ್ಯವಾಗಿ ಗರ್ಭಗೃಹ ಮಾತ್ರ. ಚೌಕಾಕಾರದ ಕಲ್ಲಿನಿಂದ ನಿರ್ಮಿತವಾದ ಕೋಣೆ, ಅದರ ಮಧ್ಯದಲ್ಲಿ ಉದ್ದೇಶಿತ ಮೂರ್ತಿಯ ಸ್ಥಾಪನೆ, ಗರ್ಭಗೃಹಕ್ಕೆ ಒಳಗೆ ಹೋಗುವ ಒಂದು ಬಾಗಿಲನ್ನು ಬಿಟ್ಟರೆ ಬೇರೆಲ್ಲಿಯೂ ಕಿಟಕಿಗಳಾಗಿಲಿ, ಬಾಗಿಲುಗಳಾಗಲಿ ಇರುತ್ತಿರಲಿಲ್ಲ. ಆದ್ದರಿಂದ ಗರ್ಭಗೃಹದ ಒಳಭಾಗದ ಗೋಡೆಯಿಂದ ಕೆತ್ತನೆಯ ಕೆಲಸಗಳು ಮೂಡಿಬರುತ್ತಿದ್ದವು. ಕೆಲವು ದೇವಾಲಯಗಳಲ್ಲಿ ಈ ಗರ್ಭಗೃಹದ ಮುಂದೆ ಒಂದು ಚಿಕ್ಕ ಮಂಟಪವೂ ಇರುತ್ತಿತ್ತು. ಇದೇ ಮುಂದೆ ಅನೇಕ ಕಂಬಗಳಿಂದ ಕೂಡಿದ ಮುಖಮಂಟಪವಾಗಿ ಪರಿಣಮಿಸಿತು.[೧೫]

ಪ್ರಾಚೀನ ಕಾಲದಲ್ಲಿ ಊರಿಗೆ ದೇವಸ್ಥಾನವೇ ಕೇಂದ್ರಬಿಂದು. ಅದರ ಸುತ್ತ ಆ ಊರಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನವು ರೂಪುಗೊಳ್ಳುತ್ತಿದ್ದಿತು. ದೇವಸ್ಥಾನವು ಜನರ ದೈವಭಕ್ತಿಯ ಕೇಂದ್ರವಾಗಿದ್ದಂತೆ ವಿದ್ಯಾಕೇಂದ್ರವೂ ಆಗಿದ್ದಿತು. ಶಿಲ್ಪ, ಚಿತ್ರ, ಸಂಗೀತ, ನರ್ತನ ಮುಂತಾದ ಕುಶಲಕಲೆಗಳು ದೇವಸ್ಥಾನದ ಆಶ್ರಯದಲ್ಲಿದ್ದವು. ದೇವಸ್ಥಾನವು ಜನರ ನ್ಯಾಯಾಲಯವೂ ಆಗಿದ್ದವು. ದುಃಖ ಬಂದಾಗ ಜನರು ದೇವಸ್ಥಾನಕ್ಕೆ ಹೋಗಿ ಅಲ್ಲಿ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುತ್ತಿದ್ದರು. ಹಬ್ಬ-ಹರಿದಿನಗಳಲ್ಲಿ ದೇವಸ್ಥಾನವನ್ನು ಅಲಂಕರಿಸಿ ಪೂಜೋತ್ಸವಗಳನ್ನು ನಡೆಯಿಸಿ ಸುಖಿಸುತ್ತಿದ್ದರು. ದೇವಸ್ಥಾನವು ಬಡವರಿಗೆ ಸತ್ರವಾಗಿದ್ದಿತು.[೧೬] ಹೀಗೆ ಬಹುಮುಖವಾದ ಚಟುವಟಿಕೆಗಳಿಗೆ ಆದರವಾಗಿ ಊರಿನ ಜೀವನವನ್ನು ನಿಯಂತ್ರಿಸುತ್ತಿದ್ದ ದೇವಸ್ಥಾನಕ್ಕೆ ಒಂದು ಸ್ವತಂತ್ರ ವ್ಯಕ್ತಿತ್ವ ಇದೆ ಎಂಬುದು ತಿಳಿಯುತ್ತದೆ.

ಗುಡಿಯು ಒಂದು ದೇವತೆಯ ಹೆಸರಿನಲ್ಲೇ ಇರುವುದು ವಾಡಿಕೆ. ಈ ದೇವತೆಯ ಮೂರ್ತಿಯನ್ನು (ಶಿವನಾದರೆ ಲಿಂಗವನ್ನು) ಇರಿಸುವ ಭಾಗಕ್ಕೆ 'ಗರ್ಭಗೃಹ' ಎಂದು ಹೆಸರು. ಇದೇ ಗುಡಿಯ ಮುಖ್ಯಭಾಗ ತುಂಬ ಪವಿತ್ರವೆನಿಸುವ ಭಾಗ. ಅದರ ಒಳಗೋಡೆ ಸಾಮಾನ್ಯವಾಗಿ ಬರಿದಾಗಿರುತ್ತದೆ. ಕೆಲವು ಪಲ್ಲವ ದೇವಾಲಯಗಳಲ್ಲಿ ಮಾತ್ರ ಇಲ್ಲಿಯೂ ಶಿಲ್ಪವಿರುತ್ತದೆ. ಹೊರ ಗೋಡೆಯ ಮೇಲೆ ತೋರಣಗಳಿಂದ ಕೂಡಿದ ದೇವಕೋಷ್ಠಕಗಳಿರುವುದು ವಾಡಿಕೆ. ಶಿವದೇವಾಲಯವಾದರೆ ಪೂರ್ವ ದಿಕ್ಕು. ದೇವಕೋಷ್ಠಕದಲ್ಲಿ ನಂದಿಕೇಶ್ವರ, ಕಾಲ. ಪಶ್ಚಿಮದಲ್ಲಿ ಮಹಾವಿಷ್ಣು, ಲಿಂಗೋದ್ಭವ ಮೂರ್ತಿ, ಉತ್ತರದಲ್ಲಿ ಬ್ರಹ್ಮ ದಕ್ಷಿಣದಲ್ಲಿ ದಕ್ಷಿಣಮೂರ್ತಿ ಹೀಗೆ

ವಿವಿಧ ದೇವತಾ ಮೂರ್ತಿಗಳನ್ನು ಕೆತ್ತಿರುತ್ತಾರೆ. ಗರ್ಭ ಗುಡಿಯ ಎದುರಿಗಿರುವ ಅರ್ಧಮಂಟಪದಲ್ಲಿ ವಿನಾಯಕನೂ, ಈಶಾನ್ಯ ಮೂಲೆಯಲ್ಲಿ ಕ್ಷೇತ್ರಪಾಲನೂ ಇರಬೇಕೆಂದು ಈಶಾನ್ಯ ಶಿವಗುರು ದೇವ ಪದ್ಧತಿ ವಿಧಿಸುತ್ತದೆ.

ದಕ್ಷಿಣ ಭಾರತದ ದೇವಾಲಯಗಳಲ್ಲಿ ಗೋಪುರವೇ ಪ್ರಮುಖವಾಗಿರುತ್ತದೆ. ಮಹಾದ್ವಾರದ ಮೇಲ್ಭಾಗದಲ್ಲಿ ಹಲವಾರು ಮಾಳಿಗೆಗಳ ಗೋಪುರ ತುಂಬ ಕಲಾಪೂರ್ಣವಾಗಿ ಆಕಾಶದುದ್ದಕ್ಕೂ ಎದ್ದು ನಿಂತಿರುವುದೇ ವೈಶಿಷ್ಟ್ಯ. ಪುರಾತನ ದೇವಾಲಯಗಳಲ್ಲಿ ಗೋಪುರವೇನೋ ಎದ್ದು ಕಾಣುವ ಭಾಗವಲ್ಲ. ಆದರೆ ಚೋಳರಾಜರಿಗೆ ಗೋಪುರದ ಮೇಲಿನ ಒಲವು ಹೆಚ್ಚಾಗಿದ್ದಿತು. ಒಂದೇ ದೇವತೆಗೆ ಮೀಸಲಾದ ಗುಡಿಯಲ್ಲಿಯೂ ಇತರ ಗುಡಿಗಳಿರುವ ವಾಡಿಕೆಯಿದೆ. ಶಿವದೇವಾಲಯಗಳಲ್ಲಿ ವಿಷ್ಣುವಿನ ಸನ್ನಿಧಿಯು ಇರುತ್ತದೆ. ಹೀಗಿದ್ದಾಗ ಶಿವನ ಗುಡಿಯು ಊರ ಹೊರಗೆ ಮುಖ ಮಾಡಿಕೊಂಡಂತೆಯೂ ವಿಷ್ಣುವಿನ ಗುಡಿ ಊರಳೊಗೆ ಮುಖ ಮಾಡಿಕೊಂಡಂತೆಯೂ ಇರಬೇಕೆಂದು ಶಾಸ್ತ್ರ ಹೇಳುತ್ತದೆ. ಹಲವು ಕಡೆ ಈ ನಿಯಮವನ್ನು ಅನುಸರಿಸಿದ್ದಾರೆ. ಹಲವು ಕಡೆ ಇಲ್ಲ. ಹೀಗೆ ದೇವಾಲಯಗಳ ನಿರ್ಮಾಣದಲ್ಲಿಯೂ ನಮ್ಮ ಪೂರ್ವಜರು ಪ್ರಕೃತಿ ಮತ್ತು ಆಧ್ಯಾತ್ಮದ ಹಿನ್ನೆಲೆಯಲ್ಲಿ ನಿರ್ಮಾಣ ಮಾಡಿದ್ದನ್ನು ನೋಡಬಹುದಾಗಿದೆ.

ಮನುಷ್ಯನ ನೂರಾರು ಬಯಕೆಗಳನ್ನು ನಮ್ಮ ಹಿಂದಿನವರು ನಾಲ್ಕು ನೆಲೆಗಳಲ್ಲಿ ಅಳವಡಿಸಿ ಅವಕ್ಕೆ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂದು ಹೆಸರಿಟ್ಟು ಇವು ಪುರುಷಾರ್ಥಗಳೆಂದು ಪ್ರಸಿದ್ಧವಾಗಿವೆ. ಮೋಕ್ಷವೆಂಬುದು ತಾತ್ವಿಕವಾಗಿ ಪರಮ ಪುರುಷಾರ್ಥವಾದರೂ ಜನಗಳಿಗೆ ಅರ್ಥ–ಕಾಮಗಳ ತೃಪ್ತಿಯೇ ಅಗತ್ಯವೆಂದಾಗಿದೆ. ಇವುಗಳನ್ನು ಒದಗಿಸತಕ್ಕವರು ದೇವತೆಗಳು ಎನ್ನುವ ಕಾರಣದಿಂದ "ತಸ್ಮಾತ್ ಸರ್ವ ಪ್ರಯತ್ನೇನ ನೃಣಾಂ ಪುಣ್ಯ ದಿವೌರಸಃ" ಎನ್ನುವ ವಿಧಿ ಮೈದಳೆಯಿತು. ಸಂಸ್ಕೃತಿಯು ಮುಂದುವರೆದಂತೆ ಆಧ್ಯಾತ್ಮಿಕ ಪ್ರಸಕ್ತಿ ಒದಗಿದಂತೆ ಮುಕ್ತಿಯ ಪರಿಕಲ್ಪನೆಯು ಸೇರಿಕೊಂಡಿತು. ಆದರೆ ಇದರ ಆಕರ್ಷಣೆ ಕೆಲವರಿಗೆ ಮಾತ್ರ ಇದ್ದಿತು. ದೇವಾಲಯಗಳಿಗೆ ಹೋಗಿ ಪೂಜೆಯನ್ನು ನಿಷ್ಕಾಮದಿಂದ ಮಾಡುವಂತೆ ಭಕ್ತಿಗೆ ಯಾರದೇ ಆಗಲಿ, ಯಾವುದೇ ಆಗಲಿ ಹಂಗಿನ ಅವಶ್ಯಕತೆ ಇದ್ದಿರಲಿಲ್ಲ. ಸ್ವಯಂಭುವಾಗಿ ಆತ್ಮಸಾಕ್ಷಾತ್ಕಾರಕ್ಕೆ ದೇವರ ಮೇಲೆ ನಂಬಿಕೆ ಇಟ್ಟು ಪ್ರಾರ್ಥಿಸುವ ಶುದ್ಧ ಶಾಂತ ಮಂದಿರಗಳಾಗಿ ದೇವಾಲಯಗಳ ಪ್ರಾಮುಖ್ಯತೆಯನ್ನು ಪಡೆದವು.

ಕೂಡಲಸಂಗಮ ಕ್ಷೇತ್ರದಲ್ಲಿಯು ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿಯನ್ನು ಪಡೆದಂಥ ದೇವಾಲಯಗಳಿದ್ದು, ಕೆಲವು ಶಾಸನೋಕ್ತ ದೇವಾಲಯಗಳ ಕುರಿತಂತೆ ಜಿಜ್ಞಾಸೆಗಳಿವೆ. ಶಾಸನಗಳಲ್ಲಿ ಉಲ್ಲೇಖವಾದಂಥ ಸಂಗಮೇಶ್ವರ ಆಚೇಶ್ವರ ಮತ್ತು ಕಾಳೇಶ್ವರ ಎಂಬ ಹೆಸರಿನ ದೇವಾಲಯಗಳು ಉಲ್ಲೇಖವನ್ನು ಕಾಣುತ್ತೇವೆ. ಅದೇ ತೆರನಾಗಿ ಇತರ ದೇವಾಲಯ ದೇವಿಯ ದೇವಾಲಯಗಳು ಕೂಡಲಸಂಗಮದಲ್ಲಿ ಇದ್ದು ಅವುಗಳ ವಿಚಾರಗಳನ್ನು ಈ ತೆರನಾಗಿ ಕೂಲಂಕಷವಾಗಿ ತಿಳಿಯಬಹುದಾಗಿದೆ.

ಸಂಗಮನಾಥ ದೇವಾಲಯ :

ಕೂಡಲಸಂಗಮನಾಥ ದೇವಾಲಯವು ಮೂಲದಲ್ಲಿ ಸುಮಾರು ಹನ್ನೊಂದನೆಯ ಶತಮಾನದಲ್ಲಿ ನಿರ್ಮಾಣವಾಗಿದೆಯೆಂದು ಹೇಳಬಹುದು. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿಯದು ಎನ್ನುವುದಕ್ಕೆ ಕಾಲ ನಿರ್ಮಿತಿಯ ಶೈಲಿಯಿಂದ ತಿಳಿಯಬಹುದು. ಆದರೆ ಕಾಲಾನುಕ್ರಮದಲ್ಲಿ ಹಲವಾರು ರೀತಿಯಲ್ಲಿ ಇದು ರೂಪಾಂತರಗೊಂಡಿದೆ. ಗರ್ಭಗುಡಿ, ಅರ್ಧಮಂಟಪ, ರಂಗಮಂಟಪ ಮತ್ತು ಮುಖ ಮಂಟಪಗಳನ್ನೊಗೊಂಡ ಈ ದೇವಾಲಯ ಕಲ್ಯಾಣ ಚಾಲುಕ್ಯರ ಕಾಲದ ಬೇರೆ ದೇವಾಲಯಗಳಿಗೆ ಹೋಲಿಸಿದರೆ ತೀರಾ ಸಾಧಾರಣ. ರಂಗಮಂಟಪದ ಕಂಬಗಳು ಮಾತ್ರ ಕುಶಲಕರ್ಮಿಗಳ ಕುಶಲತೆಗೆ ಸಾಕ್ಷಿಯಾಗಿದೆ. ಅರ್ಧಮಂಟಪ ಮತ್ತು ರಂಗಮಂಟಪದ ಮಧ್ಯದಲ್ಲಿರುವ ತೋರಣವು ಸುಂದರವಾಗಿದ್ದರೂ ಇತ್ತೀಚೆಗೆ ವಿರೂಪಗೊಂಡಿವೆ. ಈ ಗುಡಿಯ ರಚನೆಗೆ ಒಂದೇ ಬಗೆಯ ಶಿಲೆಯನ್ನು ಉಪಯೋಗಿಸಿಲ್ಲ. ಇದಲ್ಲದೆ ಮುಖಮಂಟಪ ಮತ್ತು ರಂಗಮಂಟಪದ ಮೇಲೆ ಅಸಂಗತವೆನಿಸುವ ಚಿಕ್ಕ ಚಿಕ್ಕ ಗೋಪುರಗಳನ್ನು ಸೌಂದರ್ಯದ ಅನುಭೂತಿ ಇಲ್ಲದೆ ಕಟ್ಟಿದೆ ಎನ್ನಲಾಗುತ್ತದೆ. ನಾರಾಯಣ ಅಣೆಕಟ್ಟಿನಿಂದ ನಿಲ್ಲುವ ಹಿನ್ನೀರಿನಲ್ಲಿ ಮುಳುಗಡೆಯಾಗಬಹುದೆಂಬ ತಪ್ಪು ಲೆಕ್ಕಾಚಾರದಲ್ಲಿ ಸ್ಥಳಾಂತರಿಸಲು ಯೋಚಿಸಲಾಯಿತು. ಆದರೆ ಈ ಸಮಸ್ಯೆಯನ್ನು ಸರ್ಕಾರವು ಜನರ ಒತ್ತಡಕ್ಕೆ ಮಣಿದು ಪುನರ್ ಪರಿಶೀಲಿಸಿತು. ದೇವಸ್ಥಾನದ ಬುನಾದಿಯನ್ನು ಸುಭದ್ರಗೊಳಿಸಿ ಅಲ್ಲಿಯೇ ಪುನರಚಿಸಿದ್ದಾರೆ.

ಸಂಗಮೇಶ್ವರ ದೇವಾಲಯದ ಅಂತರಾಳ ಗರ್ಭಗುಡಿಗಿಂತ ಚಿಕ್ಕದಾಗಿದ್ದು ಆಯತಾಕಾರದಲ್ಲಿದೆ. ಇದರ ಭಿತ್ತಿನಲ್ಲಿ ಎರಡು ಚೌಕಗಳು ಒಂದರ ಮೇಲೊಂದರಂತೆ ಜೋಡಿಸಿದ್ದು ಕಂಡುಬರುತ್ತದೆ. ಈ ಅಂತರಾಳದೆದುರು ಸ್ವತಂತ್ರವಾದ ಎರಡು ಭದ್ರಕ ಸ್ತಂಭಗಳ ಮೇಲೆ ಮಕರ ತೋರಣವಿದೆ. ಈ ಸ್ತಂಭಗಳು ಹತ್ತನೆಯ ಶತಮಾನದ ಮಾದರಿಯಲ್ಲಿದ್ದು, ಆರು ಪುಟ್ಟ ಬೋಗುಣಗಳನ್ನು ಕೌಚಿಟ್ಟಂತಿವೆ. ಇವುಗಳ ಬಲ–ಎಡ ಬರಹಗಳಲ್ಲಿ ಎರಡು ದೇವ ಕೋಷ್ಠಗಳಿವೆ. ಇವುಗಳು ನೀಲಾಂಬಿಕೆ ಹಾಗೂ ಗಂಗಾಂಬಿಕೆಯರ ಬಿಡಿ ಶಿಲ್ಪಗಳಿದ್ದಿರಬೇಕು. ಈ ಸ್ತಂಭ ತೋರಣದೆದುರು ಭುವನೇಶ್ವರಿಯ ಕೆಳಗೆ ಜೋಡು ನಂದಿ ಶಿಲ್ಪಗಳನ್ನಿಡಲಾಗಿದೆ. ಇದರ ಮುಂದಿನ ಭಾಗವೇ ವಿಶಾಲವಾದ ನವರಂಗ ಮಂಟಪ. ಇದರ ತಲ ವಿನ್ಯಾಸ ಹಿಂಬಣಿ–ಮುಂಬಣಿಗಳಿಂದ ಕೂಡಿದೆ.[೨೨] ಇದಕ್ಕೆ ಮೂಲತಃ ಮೂರು ದ್ವಾರಗಳಿದ್ದಿರಬೇಕು. ಈಗ ಉತ್ತರ ಮತ್ತು ದಕ್ಷಿಣ ದ್ವಾರಗಳನ್ನು ಮುಚ್ಚಲಾಗಿದ್ದು ವಿಶೇಷ ದಿನಗಳಲ್ಲಿ ಉತ್ತರ ದ್ವಾರವನ್ನು ತೆಗೆಯಲಾಗುತ್ತದೆ. ಪೂರ್ವಾಭಿಮುಖವಾಗಿರುವ ದ್ವಾರ ಮಾತ್ರ ಬಳಕೆಯಲ್ಲಿದೆ. ನವರಂಗದ ಕೇಂದ್ರ ಭಾಗ ಭುವನೇಶ್ವರಿ. ಇದರ ವಿನ್ಯಾಸ ಚೌಕವಾಗಿದ್ದು ಉಳಿದವುಗಳಿಗಿಂತ ಸ್ವಲ್ಪ ಉನ್ನತ ಮಟ್ಟದಾಗಿರುವುದು ವಿಶೇಷ. ಇದರ ನಾಲ್ಕು ಕಡಾಯಿ ಹಿಡಿದ ಶ್ರೀಕಾರ ಕಂಬಗಳು ಕಲ್ಯಾಣ ಚಾಲುಕ್ಯ ಶೈಲಿಯ ಉತ್ತಮ ನಿದರ್ಶನಗಳಾಗಿವೆ. ಉಳಿದಂತೆ ಇವು ವಿಷ್ಣುಕಾಂತ ಮಾದರಿಯನ್ನು ಹೊಂದಿವೆ.

ಕಂಬದ ಚೌಕ ಪೀಠದ ಬುಡದಲ್ಲಿ ಹಲವು ಕಿರು ಉಬ್ಬುಶಿಲ್ಪಗಳಿವೆ. ಇವುಗಳನ್ನು ಪ್ರತ್ಯೇಕವಾಗಿ ಅಭ್ಯಸಿಸಬೇಕು. ಈ ಸ್ತಂಭಗಳನ್ನು ಹೊತ್ತ ಭುವನೇಶ್ವರಿಯನ್ನು ಮೂರು ಚೌಕಾಸನಗಳನ್ನು ಸೇರಿಸಿ ನಿರ್ಮಿಸಲಾಗಿದ್ದು, ಕೇಂದ್ರಸ್ಥಾನದ ಫಲಕದಲ್ಲಿ ಒಂದು ವೃತ್ತದೊಳಗೆ ಬಹುದಳದ ಪದ್ಮ ವಿನ್ಯಾಸವಿದೆ. ಈ ಛತ್ತಿಗೆ ತಾಗಿದಂತೆ ನಾಲ್ಕು ದಿಕ್ಕುಗಳ ಛತ್ತುಗಳ ಆಯತಾಕಾರದಲ್ಲಿದ್ದು, ಅವುಗಳಲ್ಲಿ ಎರಡೆರಡು ಚೌರಸಗಳಿಂದ ರಚಿಸಲ್ಪಟ್ಟಿವೆ. ಇವುಗಳ ಛತ್ತುಗಳಲ್ಲಿ ಮೂರು ಒಂದು ಬಗೆಯ ಪದ್ಮ ವಿನ್ಯಾಸಗಳಿದ್ದರೆ, ನಾಲ್ಕನೆಯ ಛತ್ತಿನಲ್ಲಿ ನಾಲ್ಕು ದಳಗಳ ಪದ್ಮ ವಿನ್ಯಾಸವಿದೆ. ನವರಂಗದ ಒಂಬತ್ತು ಅಂಕಣದ ಹೊರತಾಗಿ ಪೂರ್ವ, ದಕ್ಷಿಣ, ಉತ್ತರಕ್ಕೆ ಮತ್ತೆ ಮೂರು ಪುಟ್ಟ ಅಂಕಣಗಳೂ ಆಯತಾಕಾರದಲ್ಲಿದ್ದು, ಅವುಗಳ ಎರಡು ಚೌರಸಗಳಿಂದ ಮಧ್ಯ ಪದ್ಮ ವಿನ್ಯಾಸದ ಫಲಕಗಳಿಂದ ಅಲಂಕೃತವಾಗಿದೆ. ಹೀಗೆ ಈ ದೇಗುಲದಲ್ಲಿ ಒಟ್ಟು ಹದಿನಾಲ್ಕು ಛತ್ತುಗಳಿರುವುದು ವಿಶೇಷತೆಯ ಜೊತೆಗೆ ಶ್ರೇಷ್ಠತೆಯನ್ನು ಬಿಂಬಿಸಬಹುದಾಗಿದೆ. ನವರಂಗ ಮಂಟಪದ ಮುಖ್ಯ ಪ್ರವೇಶದ ದ್ವಾರಬಂಧದ ಸುಂದರವಾದ ಅಷ್ಟ ರಥ ವಿನ್ಯಾಸದ ಹೊಸ್ತಿಲು ಬಾಗಿಲುವಾಡದ ಮೇಲ್ಪಟ್ಟಿಯಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯ ಐದೈದು ಶಿಖರ ಮಾದರಿಗಳ ಎರಡು ಸಾಲುಗಳು ಕಂಡುಬರುತ್ತದೆ. ಹೊಸ್ತಿಲಿನ ಎದುರಿಗೆ ಕಮಲ ವಿನ್ಯಾಸವುಳ್ಳ ಒಂದು ಹಾಸುಗಲ್ಲನ್ನಿಡಲಾಗಿದೆ. ಈ ಬಾಗಿಲು ವಾಡದೆದುರಿಗೆ ಒಂದು ಹಳೆಯ ಗಂಟೆಯನ್ನು ತೂಗು ಹಾಕಲಾಗಿದೆ. ಅದರ ಮೇಲಣ ಶಾಸನವೂ ಗಮನಾರ್ಹ. ಈಚೆಗೆ ಅದನ್ನು ಪತ್ತೆ ಮಾಡಿದೆ. ಇದರಲ್ಲಿ ಆ ಗಂಟೆಯನ್ನು ಮಾಡಿಸಿಕೊಟ್ಟ ದಾನಿಯ ಹೆಸರು ದಾಖಲಾಗಿದೆ.

ನವರಂಗ ದ್ವಾರದ ಎದುರಿಗೆ ತೆರೆದ ಮುಖಮಂಟಪ ಅಥವಾ ಮುಖ ಚುತುಕ್ಷಿಯಿದೆ. ಇದರ ಕಕ್ಷಾಸನ ಒಳಭಾಗದಲ್ಲಿ ಸರಳವಾಗಿದ್ದರೂ ಹೊರಭಾಗ ಹಲವು ಉಬ್ಬುಶಿಲ್ಪಗಳಿಂದ ಸ್ವಾರಸ್ಯಕರವಾಗಿದೆ. ಮಿಥುನ ಶಿಲ್ಪಗಳು, ಲೈಂಗಿಕ ಶಿಲ್ಪಗಳು, ಪ್ರಾಣಿ, ಪಕ್ಷಿ, ಹಾವಾಡಿಗ, ಹುಲಿ, ವ್ಯಾಳಿ ಬೇಟೆ, ಗಜಬೇಟೆ ಇನ್ನಿತರ ಸಮಕಾಲೀನ ಸಮಾಜೋ-ಧಾರ್ಮಿಕ ಜೀವನ ದೃಶ್ಯಾವಳಿ, ಜನನ ದೃಶ್ಯ ಮುಂತಾದವುಗಳು ಸ್ವಾರಸ್ಯಕರವಾಗಿವೆ. ಈ ಶಿಲ್ಪಗಳ ಕೆಳಭಾಗದಲ್ಲಿ ರತ್ನಪುಷ್ಪ ಪಟ್ಟಿಕೆ ಹಾಗೂ ಅದರ ಕೆಳಗೆ ಅಧಿಷ್ಠಾನದ ಐದು ಪಟ್ಟಿಕೆಗಳು ಕಂಡುಬರುತ್ತವೆ. ಬಾಗಿಲ ಎದುರಲ್ಲಿ ಸಿಂಹ, ಆನೆಗಳ ಶಿಲ್ಪಗಳಿಂದ ಅಲಂಕೃತವಾದ ತಾಳ್ವಾರಗಳಿಗೆ ಈ ಬಗೆಯ ಐದು ಪಟ್ಟಿಕೆಗಳುಳ್ಳ ಅಧಿಷ್ಠಾನ ಇಡೀ ದೇಗುಲಕ್ಕೆ ಸುತ್ತುವರಿದಿದೆ. ಅಂದರೆ ಸಮಾನವಾಗಿವೆ. ಒಳಭಾಗವನ್ನು ಅವಲೋಕಿಸಿ ದೇವರ ದರ್ಶನ ಪಡೆದು ನಂತರ ದೇಗುಲದ ಹೊರಭಾಗವನ್ನು ಅವಲೋಕಿಸುತ್ತಾ ಹೋದರೆ ಎದ್ದು ಕಾಣುವ ಒಂದು ಗುಣಲಕ್ಷಣವೆಂದರೆ ಸರಳತೆ. ಇದರಲ್ಲಿ ವಿನ್ಯಾಸವೇ ಎದ್ದು ಕಾಣುತ್ತದೆಯೇ ವಿನಃ ಶಿಲ್ಪಾಲಂಕಾರವಲ್ಲ. ಮುಚ್ಚಿದ ನವರಂಗ ಹಾಗೂ ಅಂತರಾಳಗಳ ಬಾಹ್ಯ ಭಿತ್ತಿ ಸರಳವಾಗಿ ನಿರ್ಮಾಣ ಮಾಡಲ್ಪಟ್ಟಿದೆ. ದಕ್ಷಿಣ ಭಾರತದಲ್ಲಿ ಈ ರೀತಿಯ ವಿನ್ಯಾಸ ಈಗ ಕಂಡುಬರುವುದಿಲ್ಲ.

ದೇವಾಲಯದ ಹೊರ ಭಿತ್ತಿಗಳ ಮೇಲೆ ಕಿರಿದಾದ ಸಜ್ಜಾ ಅದರ ಮೇಲಿನ ಕೈಪಿಡಿ ಭಾಗದಲ್ಲಿ ಇಟ್ಟಿಗೆ ಗಾರೆಗಳಿಂದ ನಿರ್ಮಿತ ಪುಟ್ಟ ಪುಟ್ಟ ಶಿಖರ ಮಾದರಿಗಳೂ ಅಲ್ಲಲ್ಲಿ ನಂದಿ, ಸಿಂಹ, ಯತಿಗಳ ಸ್ವಚ್ಛೋ ಬಿಂಬಗಳು ಕಂಡುಬರುತ್ತವೆ. ಆದರೆ ಇವು ಯಾವ ಕಲ್ಯಾಣ ಚಾಲುಕ್ಯ ಸೇವುಣರ ಕಾಲದವುಗಳು ಅಲ್ಲ; ಪ್ರಾಯಶಃ ವಿಜಯನಗರೋತ್ತರ ಕಾಲದಲ್ಲಿ ಸ್ಥಳೀಯ ದೇಶಗತಿಗಳ ಆಶ್ರಯದಲ್ಲಿ ನಿರ್ಮಿಸಲ್ಪಟ್ಟ ಗಾರೆಗಚ್ಚಿನ ನಿರ್ಮಿತಿಗಳು ಇವನ್ನೇ ಅನುಸರಿಸಿ ಪುರಾತತ್ವ ಇಲಾಖೆಯವರು ಈಚೆಗೆ ಪುನರ್‌ಚಿಸಿದ್ದಾರೆ. ಮೂಲ ವಾಸ್ತು ವಿನ್ಯಾಸಕ್ಕೆ ಅಷ್ಟೊಂದು ಸಮಂಜಸವಾಗಿ ಸಂಗಮನಾಥನ ದೇವಾಲಯದ ಮೇಲ್ಕಟ್ಟಡವು ಪೂರ್ತಿಯಾಗಿ ಇಟ್ಟಿಗೆ, ಗಾರೆ, ಗಚ್ಚಗಳಿಂದ, ಸುಣ್ಣ–ಬಣ್ಣಗಳಿಂದ ನವೀಕರಣಗೊಂಡಿದೆ. ಕೆಳಭಾಗದಲ್ಲಿ ಕಲ್ಯಾಣ ಚಾಲುಕ್ಯ ಶೈಲಿಗೆ ಪೂರ್ಣ ಪ್ರಮಾಣದಲ್ಲಿ ಮತ್ತು ಸಮಂಜಸವಾಗಿ ಅಷ್ಟೊಂದು ಹೊಂದಾಣಿಕೆ ಆಗುವುದಿಲ್ಲ. ಸಾಲದ್ದಕ್ಕೆ ಜೀರ್ಣೋದ್ಧಾರ ಮಾಡಿದ ಬಳಿಕ ಶಿಲಾಭಾಗವನ್ನು ನವೀಕರಣ ಮಾಡಿದ್ದರಿಂದ ಮೂಲದ ನವಿರುತನ, ಚೂಪುತನ ಸ್ವಲ್ಪ ಮೊಂಡಾಗಿದೆ. ಇಷ್ಟಾಗಿಯೂ ಇಡೀ ಸಮುಚ್ಚಯವನ್ನು ನವೀಕರಿಸಲಾಗಿದೆ. "ಕಾಷ್ಟ ಶಿಲ್ಪ"ಗಳಿಂದ[೨೬] ಅಲಂಕರಿಸಲ್ಪಟ್ಟ ಬಾಗಿಲುಗಳನ್ನು ಗರ್ಭಗೃಹ ಪೂರ್ವ ಮತ್ತು ಉತ್ತರ ಭಾಗದ ನವರಂಗ ಭಾಗಗಳಿಗೆ ಜೋಡಿಸಲಾಗಿದೆ.

ಬ್ಯಾಳಿಬಸವಣ್ಣ (ತೇರಿನ ಬಸವಣ್ಣ)

ತೇರಿನ ಮನೆಯ ಮುಂದೆ ಚಿಕ್ಕದಾದ ನಂದಿಯ ವಿಗ್ರಹವಿದ್ದು ಸಣ್ಣ ದೇವಾಲಯವನ್ನು ನಿರ್ಮಿಸಲಾಗಿದೆ. ಇದಕ್ಕೆ ಬ್ಯಾಳಿ ಬಸವಣ್ಣನ ದೇವಸ್ಥಾನವೆಂದು ಕರೆಯುತ್ತಾರೆ. ಜಾತ್ರಾ ಸಂದರ್ಭದಲ್ಲಿ ತೇರನ್ನು ಈ ದೇವಸ್ಥಾನದವರೆಗೆ ಎಳೆದುಕೊಂಡು ಹೋಗಿ ಪುನಃ ಮೂಲಸ್ಥಾನಕ್ಕೆ ಬಂದು ನಿಲ್ಲುತ್ತದೆ. ಪ್ರತಿನಿತ್ಯ ಪೂಜೆಗೊಳ್ಳದಿದ್ದರೂ ಹಬ್ಬ ಹರಿದಿನಗಳ ಸಂದರ್ಭದಲ್ಲಿ ಭಕ್ತರು ಬಂದು ಪೂಜೆ ಸಲ್ಲಿಸುತ್ತಾರೆ. ಪುರಾತನ ಕಾಲದಿಂದಲೂ ಶೈವ ಪರಂಪರೆಯಲ್ಲಿ ಈಶ್ವರನ ಕಲ್ಪನೆಗಳಲ್ಲಿ ಬಸವಣ್ಣನದು ಪ್ರಮುಖವಾದ ಪಾತ್ರವಾಗಿದ್ದು ಇದರಿಂದಲೇ ಈಶ್ವರನ ಬೆಲೆ ಹೆಚ್ಚಾದಂತೆ ಹಲವು ಕಡೆಗಳಲ್ಲಿ ಉಲ್ಲೇಖಗಳಿದ್ದು ಇಲ್ಲಿಯೂ ಪ್ರತಿ ವಿಶೇಷ ಕಾರ್ಯ ಕಲಾಪಗಳು ಇಲ್ಲಿಂದಲೇ ಆರಂಭವಾದ ಐತಿಹ್ಯಗಳಿವೆ.

ಪಾದಗಟ್ಟೆ

ಪಾದಗಟ್ಟೆಯು ತೇರಿನ ಮನೆಯ ಎಡಭಾಗದಲ್ಲಿ ಇದ್ದು, ಜಾತ್ರೆಯ ಸಂದರ್ಭದಲ್ಲಿ ಬಂಗಾರದ ಕಳಸವನ್ನು ಇಲ್ಲಿ ಇಟ್ಟು ನಂತರ ತೇರಿನ ಹತ್ತಿರ ಒಯ್ಯುತ್ತಾರೆ. ಬೇವಿನ ಮರಕ್ಕೆ ಕಟ್ಟೆಯನ್ನು ಕಟ್ಟಿ ಈ ಕಟ್ಟೆಯ ಮೇಲೆ ನಾಗಪ್ಪನ ಶಿಲ್ಪವಿದ್ದು ನಾಲ್ಕು ಜೊತೆ ಪಾದಗಳಿವೆ. ಹೀಗಾಗಿ ಇದಕ್ಕೆ ಪಾದಗಟ್ಟೆ ಎಂದು ಕರೆಯುತ್ತಾರೆ. ಇದು ಸಂಗಮನಾಥನ ಗೋಪುರದ ಎದುರುಗಡೆ ಇದೆ. ಬಹಳಷ್ಟು ಪ್ರಾಚೀನ ಕಾಲದಿಂದಲೂ ಈ ಕಟ್ಟೆ ಇದ್ದಿರಬಹುದೆಂದು ಊಹಿಸಲಾಗುತ್ತದೆ. ಸ್ಥಳೀಯ

ಹಿರಿಯರನ್ನು ವಿಚಾರಿಸಿದಾಗ ಮೊದಲಿನಿಂದಲೂ ಇವೆ ಪಾದಗಳು ಇಲ್ಲಿದ್ದು ಕಟ್ಟೆಯನ್ನು ಮಾತ್ರ ನವೀಕರಿಸಲಾಗಿದೆ ಎಂದು ಹೇಳುತ್ತಾರೆ. ಒಂದು ಐತಿಹ್ಯದ ಪ್ರಕಾರ ದೇವಸ್ಥಾನದಲ್ಲಿನ ದೇವರುಗಳು ಲೋಕಸಂಚಾರ ಕೈಗೊಳ್ಳುತ್ತವೆಂದು ಆಗ ಇವುಗಳ ಬಳಕೆಮಾಡಿ ಪುನಃ ಅದೇ ಸ್ಥಾನದಲ್ಲಿ ಬಿಟ್ಟು ಹೋಗುವುದು ಪ್ರತೀತಿ. ಇಂದಿಗೂ ಕದಿರಮಂಡಲಗಿಯ ಕಾಂತೇಶ ದೇವಸ್ಥಾನದ ಪಾದುಕೆಗಳು ಇದಕ್ಕೆ ಸೂಕ್ತ ಉದಾಹರಣೆ. ಅಲ್ಲದೇ ಎಲ್ಲ ದೇವಸ್ಥಾನಗಳಲ್ಲೂ ಇವು ಕಂಡುಬರುತ್ತವೆ. ಇವುಗಳು ದೇವಸ್ಥಾನದ ಆಯಕಟ್ಟಿನ ನೇರ ಪೀಠದಲ್ಲಿ ಸ್ಥಾಪಿತವಾಗಿರುವುದು ಒಂದು ವೈಜ್ಞಾನಿಕ ಕಾರಣದಿಂದ ಎಂಬುದು ಹಲವರ ಅರಿಕೆ.

ಗೂಳಿಬಸವನ ಗುಡಿ

ಬಸವ ವೃತ್ತದ ಬಲಭಾಗದ ರಸ್ತೆಯಲ್ಲಿ ಪಂಚಾಯಿತಿ ಆಫೀಸಿನ ಹತ್ತಿರ ಗೂಳಿ ಬಸವನ ಗುಡಿ ಇದೆ. ಊರಿನ ಮುಖ್ಯ ರಸ್ತೆಯಲ್ಲಿ ಇದ್ದು, ಬಸವಣ್ಣನ ಮೂರ್ತಿ ತೆರೆದ ಮಂಟಪದೊಳಗೆ ಇದ್ದು, ಚಿಕ್ಕದಾದ ಬಯಲುಗೋಪುರವನ್ನು ಹೊಂದಿದೆ. ಬೇವಿನ ಮರದ ಕೆಳಗಡೆ ಕಟ್ಟೆಯ ಮೇಲೆ ಇದನ್ನು ಪ್ರತಿಷ್ಠಾಪಿಸಿದ್ದು ಬಹಳ ಪ್ರಾಚೀನ ಕಾಲದಿಂದಲೂ ಇದನ್ನು ಪೂಜಿಸುತ್ತ ಬಂದಿದ್ದಾರೆ. ಇತ್ತೀಚೆಗೆ ಜೀರ್ಣೋದ್ಧಾರವನ್ನು ಮಾಡಿದ್ದು, ದೇವಸ್ಥಾನದ ಸುತ್ತಮುತ್ತಲಿನ ಜನರು ಪ್ರತಿನಿತ್ಯ ಇದನ್ನು ಪೂಜಿಸುವುದು ವಾಡಿಕೆ. ಕೂಡಲಸಂಗಮನಾಥನ ಬಂಗಾರದ ಕಳಸದ ಮೆರವಣಿಗೆ ಗ್ರಾಮದಲ್ಲಿ ನಡೆಯುವಾಗ ಈ ದೇವಸ್ಥಾನದ ಜಗುಲಿಯ ಕಟ್ಟೆಯ ಮೇಲೆ ಪ್ರತಿಷ್ಠಾಪನೆಗೊಳ್ಳುತ್ತದೆ. ಇದರ ಬಗ್ಗೆ ಹೇಳುವುದಾದರೆ ಸ್ಥಾನಿಕ ಹಿರಿಯರಿಂದ ತಿಳಿದ ಮಾಹಿತಿಯನ್ವಯ ಶ್ರೀ ಸಂಗಮನಾಥ ಸ್ವಾಮಿಗೆ ಬಿಡಲಾದ ಗೂಳಿಯೊಂದರ ಸಮಾಧಿ ಸ್ಮರಣಾರ್ಥವಾಗಿ ಒಂದು ಚಿಕ್ಕ ದೇವಾಲಯವನ್ನು ನಿರ್ಮಿಸಿದ್ದಾರೆ. ದೊಡ್ಡದಾದ ಕಟ್ಟೆಯ ಮೇಲೆ ನಿರ್ಮಿತವಾದ ಈ ದೇವಾಲಯ ಸುಂದರವಾಗಿದೆ. ಶ್ರೀ ಗೂಳಿಬಸವೇಶ್ವರನ ಹೆಸರಿನಲ್ಲಿ ಒಂದು ಭಜನಾ ಮಂಡಳಿಯನ್ನು ಹಲವಾರು ವರ್ಷಗಳ ಹಿಂದಿನಿಂದಲೇ ಸ್ಥಾಪಿಸಿದ್ದಾರೆ.

ಹಾವಿನ ಕಟ್ಟೆ

ಪಂಚಾಯಿತಿಯ ಮುಂದೆ ಹೋಗುವ ದಾರಿಯಲ್ಲಿ ಹಾವಿನ ಚಿತ್ರದ ಜೊತೆಗೆ ನಾಲ್ಕು ಕೈಗಳುಳ್ಳ ಶಿಲ್ಪವಿದೆ. ಶ್ರೀ ಗುರು ಪ್ರಸನ್ನ ಎಂದು ಬರೆಯಲಾಗಿದೆ. ಇದರ ಪಕ್ಕದಲ್ಲಿ ಗೂಳಿಯ ಶಿಲ್ಪವಿದೆ. ಅದರ ಮೇಲೆ ಬಸವೇಶ್ವರ ಪ್ರಸನ್ನ ಎಂದು ಬರೆಯಲಾಗಿದೆ. ಇದು ಸಂಪೂರ್ಣ ಹಾಳಾಗಿದ್ದು, ಜನರು ಇದಕ್ಕೆ ಹಾವಿನ ಕಟ್ಟೆ ಎಂದು ಕರೆಯುತ್ತಾರೆ.

ಸಾಲಿಬಸವೇಶ್ವರ ದೇವಸ್ಥಾನ

ಎತ್ತರವಾದ ಜಗುಲಿಯ ಪ್ರದೇಶದಲ್ಲಿದ್ದು, ಬಸವಣ್ಣನ ಮೂರ್ತಿಯನ್ನು ಹೊಂದಿದೆ. ಮೆಟ್ಟಿಲಿನ ಆಕಾರದ ಗೋಪುರವಿದ್ದು, ಮೇಲುಗಡೆ ತಗಡಿನ ಸೀಟುಗಳನ್ನು ಹಾಕಿದ್ದಾರೆ. ಈ ದೇವಸ್ಥಾನಕ್ಕೆ

ಸಾಲಿ ಬಸವೇಶ್ವರ ಎಂದು ಹೆಸರು ಬರಲು ಕಾರಣ ಸುಮಾರು ನೂರು ವರ್ಷಗಳ ಹಿಂದೆ ಈ ದೇವಸ್ಥಾನದಲ್ಲಿ ಮಕ್ಕಳಿಗೆ ಪಾಠ-ಪ್ರವಚನಗಳು ನಡೆಯುತ್ತಿದ್ದು ಆ ಹೆಸರೇ ಇಲ್ಲಿ ಮುಂದುವರಿಯಲಾಗಿದೆ.

ಲಕ್ಕಮ್ಮದೇವಿ ದೇವಾಲಯ

ಇದು ಊರಿನ ಹೊರಗಡೆ ಮಲಪ್ರಭಾ ನದಿಯ ದಂಡೆಯ ಮೇಲೆ ಇದೆ. ಎರಡು ಕಲ್ಲಿನ ಕಂಬಗಳನ್ನು ಒಳಗೊಂಡಿದ್ದು ಗರ್ಭಗುಡಿಯನ್ನು ಹೊಂದಿದೆ. ಮೇಲೆ ಮೆಟ್ಟಿಲಿನ ಆಕಾರದ ಗೋಪುರವನ್ನು ಹೊಂದಿದೆ. ೧೯೬೧ನೇ ಇಸವಿಯಲ್ಲಿ ಜೀರ್ಣೋದ್ಧಾರವನ್ನು ಮಾಡಿದ್ದು, ಅರಳಿ ಮರದ ನೆರಳಿನಲ್ಲಿ ದೇವಸ್ಥಾನದ ಸುತ್ತಮುತ್ತ ತಂಪಾದ ವಾತಾವರಣವಿದೆ. ದೀಪಾವಳಿಯ ಸಂದರ್ಭದಲ್ಲಿ ಜಾತ್ರೆ ನಡೆಯುತ್ತದೆ. ಇದು ಊರಿನ ಗ್ರಾಮ ದೇವತೆಯಾಗಿದ್ದು ಹಲವಾರು ಭಕ್ತರು ಇಲ್ಲಿ ಹರಕೆಗಳನ್ನು ಕಟ್ಟುತ್ತಾರೆ. ಗುಡಿಯ ಮುಂಭಾಗದಲ್ಲಿ ಅನೇಕ ಸಣ್ಣಸಣ್ಣ ಮೂರ್ತಿಶಿಲ್ಪಗಳಿವೆ. ಮತ್ತು ನಾಗರ ಕಲ್ಲುಗಳಿವೆ.

ಆಂಜನೇಯ ಗುಡಿ

ಈ ದೇವಸ್ಥಾನವು ಸಂಪೂರ್ಣ ಜೀರ್ಣಾವಸ್ಥೆಯಲ್ಲಿದ್ದು ಹಿಂದಿನ ಭಾಗ ಬಿದ್ದು ಹೋಗಿದೆ. ಕಾರ್ತಿಕ ಮಾಸದಲ್ಲಿ ಸಣ್ಣ ಪ್ರಮಾಣದ ಕಾರ್ತಿಕೋತ್ಸವವು ನೆರವೇರುತ್ತದೆ. ಇಲ್ಲಿ ಭಕ್ತರ ಇಷ್ಟಾರ್ಥಗಳು ಸಿದ್ಧಿಸುತ್ತವೆಂಬುದು ಒಂದು ವಾಡಿಕೆಯಾಗಿದೆ. ಭಕ್ತರು ಪ್ರತಿದಿನ ಇಲ್ಲಿಗೆ ಬಂದು ಹೋಗುವುದನ್ನು ಕಾಣಬಹುದಾಗಿದೆ.

ದತ್ತಾತ್ರೆಯ ಗುಡಿ

ಶಂಕರಾಚಾರ್ಯರ ಸಂಪ್ರದಾಯದ ಶೃಂಗೇರಿ ಪೀಠದ ಹಿನ್ನೆಲೆಯಲ್ಲಿ ದತ್ತಾತ್ರೆಯ ಗುಡಿಯನ್ನು ನಿರ್ಮಿಸಿದ್ದಾರೆ. ಈ ಗುಡಿಯು ಜೀರ್ಣಾವಸ್ಥೆಯಲ್ಲಿದ್ದು ದುರಸ್ತಿಕಾರ್ಯ ನಡೆದಿದೆ. ದೇವಸ್ಥಾನದ ಎದುರುಗಡೆ ಬಾವಿ ಇದೆ. ಮತ್ತು ಬಲಭಾಗಕ್ಕೆ ಗುಹೆ ಇದ್ದು, ಅದು ಪುರಾತನ ಕಾಲದ ಐತಿಹ್ಯವನ್ನು ಒದಗಿಸುತ್ತದೆ. ಅಲ್ಲದೆ ಇಲ್ಲಿಯವರೆಗೂ ಅದರ ಕುರಿತಾಗಿ ಯಾವುದೇ ಸಂಶೋಧನೆಗಳು ನಡೆಯದಿರುವುದು ಸೋಜಿಗ. ಅಲ್ಲದೆ ಇದು ಎಲ್ಲಿಯವರೆಗೆ ಇರುವುದೆಂಬ ಕುರಿತು ನಿಖರವಾದ ಮಾಹಿತಿಗಳು ಸಿಗುವುದಿಲ್ಲ. ಈ ದೇವಸ್ಥಾನದ ಅರ್ಚಕರಾಗಿ ನಾರಾಯಣ ಭಟ್ಟರು ಇದ್ದಾರೆ. ಶೃಂಗೇರಿ ಮಠ ಸಂಗಮನ ಗುಡಿಯ ಹತ್ತಿರವಿದ್ದು ನಂತರ ಅವುಗಳನ್ನು ದತ್ತಾತ್ರೆಯ ಗುಡಿಯಲ್ಲಿ ಇಟ್ಟಿದ್ದಾರೆ. ಅಗ್ನಿಹೋತ್ರಿಗಳು ಬಂದು ಹೋಗುತ್ತಾರೆ. ಈಗ ೭೨ ವರ್ಷದ ರಾಜಣ್ಣ ಪುರೋಹಿತ ಇವರು ಈ ದೇವಸ್ಥಾನದ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾರೆ.

ದುರಗಮ್ಮನ ಗುಡಿ

ದುರಗಮ್ಮನ ಗುಡಿಯು ಇಜಾರದಾರ ಓಣಿಯ ಸಮೀಪದ ಮಲ್ಲಯ್ಯ ಹಿರೇಮಠ ಅವರ ಮನೆಯ ಹತ್ತಿರವಿದೆ. ಇತ್ತೀಚೆಗೆ ಈ ದೇವಾಲಯ ಜೀರ್ಣೋದ್ಧಾರಗೊಂಡಿದ್ದು, ಶಕ್ತಿದೇವತೆಯೆಂದು

ಪೂಜಿಸುತ್ತಾರೆ. ಈ ದೇವಾಲಯದ ವಿಶೇಷವೆಂದರೆ ಪ್ರಾಣಿಬಲಿಯನ್ನು ಕೊಡುವುದಿಲ್ಲ. ಕೂಡಲಸಂಗಮದಲ್ಲಿ ಹಲವಾರು ಶಕ್ತಿದೇವತೆಗಳಿದ್ದರೂ ಯಾವುದೇ ಬಲಿ ಕೊಡುವ ಸಂಪ್ರದಾಯವಿಲ್ಲ. ೧೨ನೆಯ ಶತಮಾನದ ಶರಣರ ಆದರ್ಶಗಳು ಇಲ್ಲಿ ಜೀವಂತವಾಗಿರುವುದು. ಈ ದೇವಾಲಯವನ್ನು ಅಂಬಿಗರ ವಂಶಸ್ಥರಾದ ಮಾಯಕೋಡಿ ಮನೆತನದವರು ಅರ್ಚಕರಾಗಿದ್ದಾರೆ.

ಬೆಳಗಲ್ ಬಂಡೆ

ಕೂಡಲಸಂಗಮ ಕ್ಷೇತ್ರದ ಸಂಗಮೇಶ್ವರ ದೇವಸ್ಥಾನದ ನಿರ್ಮಾಣ ಕಾರ್ಯದಲ್ಲಿ ಅದರ ನಕ್ಷೆಯನ್ನು ಬೆಳಗಲ್ಲಿನ ಒಂದು ಬಂಡೆಯ ಮೇಲೆ ಚಿತ್ರಿಸಿದ್ದಾರೆಂದು ಪ್ರತೀತಿ ಇದೆ. ಅದು ಇಂದಿಗೂ ಸಹ ರಕ್ಷಿಸಲ್ಪಟ್ಟಿದ್ದು ರಾಷ್ಟ್ರೀಯ ಹೆದ್ದಾರಿ ೧೩ರ ಮಲಪ್ರಭಾ ನದಿಯ ದಂಡೆಯ ಹತ್ತಿರದ ಬೆಳಗಲ್ಲಿನಲ್ಲಿ ಇದೆ. ಕೂಡಲ ಸಂಗಮದಿಂದ ಇಲ್ಲಿಗೆ ರಸ್ತೆಯ ಮೂಲಕ ಬಂದರೆ ಕೇವಲ ಹತ್ತು ಕಿ.ಮೀ ಆಗುತ್ತದೆ. ನದಿಯ ಮೂಲಕ ಇನ್ನೂ ಹತ್ತಿರವಾಗುತ್ತದೆ. ಈ ಹಾಸು ಬಂಡೆಯ ನಕ್ಷೆ ನವರಂಗ ಮತ್ತು ಮುಖ ಮಂಟಪದ ಭಾಗಗಳನ್ನು ಬಿಟ್ಟು ಗರ್ಭಗುಡಿ ಮತ್ತು ಅದರ ಮುಂದಿನ ಸುಖಾಸೀನ ಭಾಗ ಮಾತ್ರ ಇದೆ. ಗರ್ಭಗುಡಿಯ ನಕ್ಷೆಯ ಮಧ್ಯದಲ್ಲಿ ಲಿಂಗದ ರೇಖಾಚಿತ್ರವಿದೆ. ಇಲ್ಲಿರುವ ನಕ್ಷೆಯು ಗರ್ಭಗುಡಿಯ ಆಕಾರಕ್ಕೆ ಹೊಂದಿಕೊಳ್ಳದಿರುವುದು ಇದು ಸಂಗಮನಾಥ ಗುಡಿಯ ನಕ್ಷೆಯಲ್ಲ ಎಂದು ಕೆಲವರು ಅಭಿಪ್ರಾಯಪಡುತ್ತಾರೆ.

ಕಳಸದ ಪೂಜಾ ಕಟ್ಟೆ

ಸಂಗಮ ಗ್ರಾಮದ ಅಗಸಿಯ ಒಳಗಡೆ ಇರುವ ಮಳಿಗೆಯೊಂದರಲ್ಲಿ ಮಧ್ಯಾಹ್ನದಿಂದ ಸಾಯಂಕಾಲದವರೆಗೂ ಬಂಗಾರದ ಕಳಸವನ್ನು ಕೂರಿಸುವ ಪರಂಪರೆ ರೂಢಿಯಲ್ಲಿದೆ. ಈ ಸ್ಥಳಕ್ಕೆ ಕಳಸದ ಪೂಜಾ ಕಟ್ಟೆ ಎಂದು ಕರೆಯುತ್ತಾರೆ. ಕಳಸದ ಪೂಜಾ ವಿಧಿವಿಧಾನಗಳಿಗೆ ಸರ್ವ ಸಿದ್ಧತೆಗಳನ್ನು ಇಲ್ಲಿ ಮಾಡಿಕೊಡುತ್ತಾರೆ. ಹಾಗೂ ಹಿಂದಿನ ದಿವಸಗಳಲ್ಲಿಯೇ ಸಂಪ್ರದಾಯ ಬದ್ಧ ಹಂದರವನ್ನು ಮುಂಭಾಗದಲ್ಲಿ ಹಾಕಿರುತ್ತಾರೆ. ಜಾತ್ರೆಯ ಸಲುವಾಗಿ ಹಾಕಲಾದ ಈ ಮಂಟಪವನ್ನು ಮುಂದಿನ ಎರಡು ಮೂರು ತಿಂಗಳವರೆಗೂ ತೆಗೆಯುವುದಿಲ್ಲ. ಈ ಮಳಿಗೆಯ ಕುರಿತು ಹೇಳುವುದಾದರೆ ಇದೊಂದು ಪುರಾತನ ಕಟ್ಟಡವಾಗಿದ್ದು ವ್ಯಾಪಾರ ವಹಿವಾಟಿಗೆ ಬಳಸಲಾದ ಸ್ಥಳವಾಗಿದೆ. ಪ್ರಾರಂಭದಲ್ಲಿ ಇದು ಗೌಡರ ಎಂಬ ಮನೆತನದವರಿಗೆ ಸೇರಿದ್ದು, ನಂತರದಲ್ಲಿ ಹಾಳಕೇರಿಯವರ ಅಧೀನಕ್ಕೆ ಒಳಪಟ್ಟಿದೆ. ಹಾಳಕೇರಿ ಮನೆತನದ ಪೂರ್ವಜರ ಕಾಲದಿಂದಲೂ ಈ ಮಳಿಗೆಯಲ್ಲಿ ಕಳಸಕ್ಕೆ ಸಂಬಂಧಿಸಿದ ಪೂಜಾ ವ್ಯವಸ್ಥೆಯ ಕಾರ್ಯಕ್ರಮಗಳು ನೆರವೇರುತ್ತ ಬಂದಿವೆ.

ಈ ಮಳಿಗೆಯ ಮುಂಭಾಗದಲ್ಲಿ ವಿಶಾಲವಾದ ಜಗುಲಿಕಟ್ಟೆ ಇದ್ದು, ಮಳಿಗೆಗೆ ಬಳಸಲಾದ ಸಾಗುವಾನಿ ಕಟ್ಟಿಗೆಗಳಲ್ಲಿ ಸುಂದರವಾದ ಕೆತ್ತನೆಗಳನ್ನು ಕಾಣಬಹುದಾಗಿದೆ. ಪ್ರಸ್ತುತ ಈ ಮಳಿಗೆಯನ್ನು

ವ್ಯಾಪಾರಕ್ಕೆ ಬಳಸದೆ ಸಂಗಮೇಶ್ವರನ ಕಳಸ ಪ್ರತಿಷ್ಠಾಪನೆಗೆ ಸೀಮಿತವಾಗಿರಿಸಿದ್ದಾರೆ. ಈ ಮಳಿಗೆ ಸುಮಾರು ನಾಲ್ಕು ನೂರು ವರ್ಷಗಳಷ್ಟು ಹಿಂದಿನದೆನ್ನಬಹುದು.

೫.೨. ಜಾತ್ರೆ ಮತ್ತು ಉತ್ಸವಗಳು

ಸಂಸ್ಕೃತದ ಯಾತ್ರಾ ಪದವು ಕನ್ನಡದಲ್ಲಿ ಜಾತ್ರೆ ಎಂದಾಗಿದೆ. ಜಾತ್ರೆಗೆ ಪರಿಷೆ ಎಂಬ ಪರ್ಯಾಯ ಪದವೂ ಇದೆ. ಪರಿಷೆ ಪರ್ಷೆ ಪದಗಳು ಸಂಸ್ಕೃತದ ಪರಿಷತ್ ಎಂಬ ಪದದಿಂದ ಬಂದಿವೆ. ಜಾತ್ರೆಗಳು ಜನಪದದಲ್ಲಿ ಭಾವನಾತ್ಮಕ ಏಕತೆಯನ್ನು ತರುತ್ತವೆ. ಜಾತ್ರೆ ಎಂಬ ಶಬ್ದಕ್ಕೆ ಪುಣ್ಯಕ್ಷೇತ್ರ ದರ್ಶನವೇ ಮೊದಲಾದ ಧಾರ್ಮಿಕ ಉದ್ದೇಶದಿಂದ ಮಾಡುವ ಪ್ರಯಾಣ ಯಾತ್ರೆ ಎಂದು ನಿಘಂಟುಗಳ ಅರ್ಥ ವಿವರಣೆ ಇದೆ. ಅಲ್ಲದೆ ಯಾವುದಾದರೂ ಒಂದು ದೇವಾಲಯ ರಥೋತ್ಸವವೇ ಮೊದಲಾದ ವಿಶೇಷ ಕಾರ್ಯಕ್ರಮಗಳನ್ನು ಜಾತ್ರೆಗಿರುವ ಅರ್ಥವೆಂದು ಪರಿಗಣಿಸಲಾಗಿದೆ. ದೇವರ ರಥೋತ್ಸವ ಮುಂತಾದ ಸಂದರ್ಭದಲ್ಲಿ ಸೇರುವ ಜನರ ಗುಂಪು ಸಮೂಹ ಪರಿಷೆ ಎಂಬ ಅರ್ಥವನ್ನು ಹೇಳಲಾಗಿದೆ. ಜಾತ್ರೆಗೆ ತೀರ್ಥಯಾತ್ರೆಗೆ ಪ್ರಯಾಣ ಹೊರಟ ಯಾತ್ರಾರ್ಥಿಯನ್ನು ಜಾತ್ರಿಗ ಎಂದು ಕರೆಯುತ್ತಾರೆ.

ಜಾತ್ರೆ ಉತ್ಸವಗಳನ್ನು ಈ ನಾಡಿನ ಸಂಸ್ಕೃತಿಯ ಪ್ರತೀಕಗಳಿದ್ದಂತೆ ಎನ್ನಬಹುದು. ವರ್ಷದುದ್ದಕ್ಕೂ ದುಡಿಮೆ ಕೆಲಸಗಳಲ್ಲಿ ತೊಡಗುವ ಜನತೆ ನಿಗದಿಪಡಿಸಿದ ಕಾಲದಲ್ಲಿ ಜಾತ್ರೆ, ಹಬ್ಬ, ಉತ್ಸವ, ಹರಿದಿನಗಳನ್ನು ಆಚರಿಸುತ್ತ ಬಂದಿರುವುದು. ಈ ನಾಡಿನ ಸಂಸ್ಕೃತಿಯ ಶ್ರೀಮಂತಿಕೆಯನ್ನು ಹೆಚ್ಚಿಸಿರುವುದನ್ನು ಕಾಣಬಹುದು. ಅದರಂತೆ ಲಕ್ಷಾಂತರ ಭಕ್ತರ ಆರಾಧ್ಯದೈವ ಶ್ರೀ ಕೂಡಲ ಸಂಗಮೇಶ್ವರ ಜಾತ್ರೆಯನ್ನು ಚೈತ್ರಮಾಸದಲ್ಲಿ ದವನದ ಹುಣ್ಣಿಮೆಯಾದ ಐದನೇ ದಿನಕ್ಕೆ ವಿಜೃಂಭಣೆಯಿಂದ ಮಾಡಲಾಗುತ್ತದೆ. ಈ ಜಾತ್ರೆಯು ತನ್ನದೇ ಆದ ವಿಧಿ-ವಿಧಾನಗಳನ್ನು, ಪೂಜಾ ಪದ್ಧತಿಗಳನ್ನು ಒಳಗೊಂಡಿದೆ. ಸಂಪ್ರದಾಯವಾದಿಗಳಾದ ಈ ಭಾಗದ ಜನತೆಯು ಹಿರಿಯರು ಹಾಕಿಕೊಟ್ಟಂತಹ ಮಾರ್ಗದಲ್ಲಿ ಚಾಚು ತಪ್ಪದೆ ಯಥಾವತ್ತಾಗಿ ಸಂಭ್ರಮ-ಸಡಗರದಿಂದ ಆಚರಿಸಿಕೊಂಡು ಬಂದಿದ್ದಾರೆ.

ಭಾರತೀಯ ಕಾಲಮಾನದ ಪ್ರಕಾರ ವರ್ಷದ ಮೊದಲ ತಿಂಗಳು ಅಂದರೆ ಚೈತ್ರ ಮಾಸದಲ್ಲಿ ಜಾತ್ರೆ ನಡೆಯುತ್ತದೆ. ಜಾತ್ರೆಯ ಮುಂಚೆ ೧೫-೨೦ದಿನ ಮೊದಲೇ ಅಂದರೆ ಯುಗಾದಿಯ ಪಾಡ್ಯದಿನ ದೇವಸ್ಥಾನದ ಆವರಣದಲ್ಲಿ ನೆಲವನ್ನು ಸಾರಣೆಮಾಡಿ ಸುಣ್ಣದ ಬಟ್ಟೆಯನ್ನು ಹಾಕುತ್ತಾರೆ. ಸಂಪ್ರದಾಯ ಬದ್ಧ ಪೂಜಾ ಪುನಸ್ಕಾರಗಳು ದೇವಸ್ಥಾನದ ಗರ್ಭಗುಡಿ ಶಿಖರ ಹಾಗೂ ಇತರೆ ಎಲ್ಲ ದೇವಾಲಯಗಳಿಗೂ ಸುಣ್ಣವನ್ನು ಹಚ್ಚುತ್ತಾರೆ. ಈ ವಿಧಾನವಾಗಿ ಜಾತ್ರೆ ಒಂಬತ್ತು ದಿನಗಳು ಇರುವಂತೆಯೇ ಜಾತ್ರಾ ಕಾರ್ಯಕ್ರಮಗಳು ಗರಿಗೆದರುತ್ತವೆ. ಒಂಬತ್ತು ದಿನವೂ ಅನ್ನಪ್ರಸಾದ ಏರ್ಪಡಿಸುತ್ತಿದ್ದು, ಜಾತ್ರೆಯ ಸಂಕೇತವನ್ನು ಪ್ರತಿನಿಧಿಸಲು ಎಂಬಂತೆ ಜಾತ್ರೆಯ ಒಂಬತ್ತು ದಿನ ಪೂರ್ವದಲ್ಲಿಯೇ ಬಸವ ಪಟವನ್ನು ಕಟ್ಟುತ್ತಾರೆ. ಪಾದಗಟ್ಟೆಯ ವೃಕ್ಷದ

ಮೇಲೆ ಈ ಪಟವನ್ನು ಕಾಣಬಹುದು. ಅದೇ ರೀತಿ ಕಡುಬಿನ ಕಾಳಗವೆಂಬ ಪದ್ಧತಿಯನ್ನು ಜಾತ್ರೆಯ ಸಮಯದಲ್ಲಿ ಮಾಡುತ್ತ ಬಂದಿದ್ದಾರೆ. ಶ್ರೀ ಸಂಗಮನಾಥನ ಮದುವೆಯನ್ನು ಪ್ರತಿನಿಧಿಸುವ ಸಂಪ್ರದಾಯಕವಾಗಿ ಲಗ್ನಪತ್ರಿಕೆ ಕಟ್ಟುವುದು, ಮದುವೆ ಮಾಡಿಸುವ ಪದ್ಧತಿಯೂ ಜಾರಿಯಿತ್ತೆಂದು ತಿಳಿದುಬರುತ್ತದೆ.

ಒಂಬತ್ತು ದಿನಗಳವರೆಗೆ ಎಲ್ಲರ ಮನೆಗಳಲ್ಲಿ ಉಪವಾಸ ವ್ರತ ಆಚರಿಸುತ್ತಾರೆ. ಒಂಬತ್ತು ದಿನವೂ ಮುತ್ತೈದೆಯರು ಕಳಸ ಕನ್ನಡಿ ಹಿಡಿದು ದೇವಸ್ಥಾನಕ್ಕೆ ಬರುತ್ತಾರೆ ಮತ್ತು ಸಂಗಮನಾಥನಿಗೆ ವಿಶೇಷ ಪೂಜೆ ಪಲ್ಲಕ್ಕಿ ಮೆರವಣಿಗೆ ಪುರವಂತರ ಮೆರವಣಿಗೆ ನಡೆಯುತ್ತದೆ. ಈ ಒಂಬತ್ತು ದಿನಗಳ ವಿಶೇಷ ಪೂಜೆ ಏಕೆಂದರೆ ಹಿರಿಯರು ಈ ರೀತಿಯ ಅಭಿಪ್ರಾಯಗಳನ್ನು ಹೊರಹಾಕುತ್ತಾರೆ. ಮನುಷ್ಯನು ಒಂಬತ್ತು ತಿಂಗಳು ತಾಯಿಯ ಗರ್ಭದಲ್ಲಿದ್ದು ಹೊರಬರುತ್ತಾನೆ. ಅದರ ಸಂಕೇತವೇ ಒಂಬತ್ತು ದಿನಗಳ ವಿಶೇಷ ಪೂಜೆ. ತೇರುಗಳು ಸೃಷ್ಟಿಯ ಸಂಕೇತ ಅವುಗಳನ್ನು ಎಳೆಯುವುದು ಎಂದರೆ ಹೊಸ ಜನ್ಮ ಪಡೆದಂತೆ ಅದಕ್ಕಾಗಿ ಒಂಬತ್ತು ದಿನ ವಿಶೇಷ ಪೂಜಾಧಿ ಕಾರ್ಯಕ್ರಮಗಳು ಮುಗಿದ ತರುವಾಯ ತೇರನ್ನು ಎಳೆದರೆ ಮನುಷ್ಯನಿಗೆ ಯಾವುದೇ ಅಪಘಾತ ಸಂಭವಿಸದೇ ಸದಾ ಕಾಲ ಹಸನ್ಮುಖಿಯಾಗಿರುತ್ತಾನೆಂಬ ನಂಬಿಕೆ ಇದೆ.

ಹುಚ್ಚಪ್ಪನ ಕಳಸ

ಶ್ರೀ ಸಂಗಮೇಶ್ವರನ ಜಾತ್ರೆಯ ಅಂಗವಾಗಿ ಚೈತ್ರ ಬಹುಳ ಚತುರ್ಥಿಯಂದು ಮುಂಜಾನೆ ಹಾಗೂ ಜಾತ್ರೆಯ ದಿನ ಮುಂಜಾನೆ ಹುಚ್ಚಯ್ಯನ ತೇರನ್ನು ಎಳೆಯುತ್ತಾರೆ. ತೇರಿನ ಮೇಲಿನ ಕಳಸವನ್ನು ಗುಳೆದ ಗುಡ್ಡದಿಂದ ಪಾದಯಾತ್ರೆಯ ಮೂಲಕ ತರುತ್ತಾರೆ. ಈ ಕುರಿತು ಜಾತ್ರೆಯನ್ನು ಪ್ರತಿನಿಧಿಸಲು ಎಲ್ಲ ಧಾರ್ಮಿಕ ಕ್ಷೇತ್ರಗಳಲ್ಲಿ ಉತ್ಸವ ತೇರನ್ನು ಎಳೆಯುವುದು ಸಾಂಪ್ರದಾಯಿಕವಾಗಿ ನಡೆದುಕೊಂಡು ಬಂದಿದೆ. ಅದರಂತೆ ಕೂಡಲ ಸಂಗಮದಲ್ಲಿ ಉತ್ಸವ ತೇರನ್ನು ಎರಡು ದಿವಸ ಎಳೆಯಲಾಗುತ್ತದೆ. ಈ ತೇರು ದೊಡ್ಡತೇರು ನಿರ್ಮಾಣವಾದ ಕಾಲದಲ್ಲಿಯೇ ನಿರ್ಮಾಣವಾಗಿದೆ. ನೋಡಲು ಆಕರ್ಷಕವಾಗಿದೆ. ವಿಶೇಷ ಕೆತ್ತನೆಯ ಕೆಲಸವನ್ನು ಈ ರಥವು ಹೊಂದಿದೆ. ಹಲವಾರು ಶತಮಾನಗಳ ಹಿಂದೆಯೇ ನಿರ್ಮಾಣವಾಗಿದ್ದರೂ ಅದು ತನ್ನ ನೈಜತೆಯನ್ನು ಕಳೆದುಕೊಂಡಿಲ್ಲ. ಜಾತ್ರೆಯ ಸಲುವಾಗಿ ತೇರನ್ನು ವಿಶೇಷವಾಗಿ ಸಿಂಗರಿಸುತ್ತಾರೆ. ಉತ್ಸವ ತೇರಿನ ಕಳಸವು ಹಿಂದಿನ ಸ್ಥಾನಿಕ ಹಿರಿಯರು, ಅರ್ಚಕರು, ಮಠಾಧೀಶರು ಕೈಗೊಂಡ ನಿರ್ಣಯದಂತೆ ಗುಳೇದಗುಡ್ಡ ಪುರದಿಂದ ಕಳಸವನ್ನು ಹಾಗೂ ಪಲ್ಲಕ್ಕಿ ದೇವರನ್ನು ಪಾದಯಾತ್ರೆಯ ಮೂಲಕ ತರಲಾಗುತ್ತದೆ.

ಈ ಕಳಸವು ಕಂಚು ಮತ್ತು ತಾಮ್ರ ಲೋಹಗಳಿಂದ ನಿರ್ಮಿತವಾಗಿದ್ದು ಐದು ಗಡಿಗೆ (ಬಿಂದಿಗೆ)ಗಳನ್ನು ಒಳಗೊಂಡಿದೆ. ಮೇಲ್ಭಾಗದಲ್ಲಿ ಸಣ್ಣದಾದ ಬೆಳ್ಳಿಯ ಚತ್ರಿಕೆಯಿದೆ. ಕಳಸದ ಬಿಂದಿಗೆಗಳನ್ನು ಬಿಡಿಬಿಡಿಯಾಗಿ ತೆಗೆದು ತೇರಿಗೆ ಏರಿಸಬಹುದಾಗಿದ್ದು ಸಣ್ಣ ತೇರಿಗೆ ಇದು

ಸೂಕ್ತವಾದ ಕಳಸವಾಗಿದೆ. ಗುಳೇದ ಗುಡ್ಡದಲ್ಲಿನ ಪ್ರತಿಷ್ಠಿತ ಹಾಗೂ ದೈವಭಕ್ತ ಕುಟುಂಬದವರಾದ ದೇವರ ಮನೆ (ರಂಜಣಗಿ) ಅವರ ಮನೆಯಲ್ಲಿ ಕಳಸ ಹಾಗೂ ಪಲ್ಲಕ್ಕಿ ದೇವರು ಇರುತ್ತದೆ. ಇವುಗಳನ್ನು ದೇವಾಲಯದ ಅರ್ಚಕರಾದ ಭೂದೂರಿ, ಗೊರಚಿಕನವರ ಕುಟುಂಬದವರು ತಮ್ಮ ತಮ್ಮ ಪಾಳೆಯದನುಗುಣವಾಗಿ ಪಾದಯಾತ್ರೆಯ ಮೂಲಕ ತರುತ್ತಾರೆ. ಜಾತ್ರೆಯ ಮೂರ್ನಾಲ್ಕುದಿನ ಮೊದಲು ಅರ್ಚಕರು ಹಾಗೂ ದೇವಸ್ಥಾನದ ಅಭಿವೃದ್ಧಿ ಮಂಡಳಿ ವತಿಯಿಂದ ಪಲ್ಲಕ್ಕಿ ತರುವವರು ಗುಳೇದ ಗುಡ್ಡಕ್ಕೆ ಆಗಮಿಸುತ್ತಾರೆ. ಶ್ರೀಯುತ ರೇವಣಸಿದ್ದಪ್ಪ ದೇವರಮನೆ ಇವರ ಮನೆಯಲ್ಲಿ ಕಳಸ ಹಾಗೂ ಪಲ್ಲಕ್ಕಿಯನ್ನು ಪೂಜೆ ಮಾಡಿ ಸಾಯಂಕಾಲ ಐದು ಗಂಟೆಯವರೆಗೂ ಅವರ ಮನೆಯಲ್ಲಿ ಕೂರಿಸಲಾಗುತ್ತದೆ. ಸುಮಾರು ಐವತ್ತಕ್ಕೂ ಅಧಿಕ ಇರುವ ರಂಜಣಗಿ ಮನೆತನಗಳು ಅಲ್ಲಿಗೆ ಬಂದು ಪೂಜೆ ಸಲ್ಲಿಸುತ್ತಾರೆ. ಸಾಯಂಕಾಲ ಐದು ಗಂಟೆಯ ತರುವಾಯ ವಿಜೃಂಭಣೆಯಿಂದ ಕಳಸ ಹಾಗೂ ಪಲ್ಲಕ್ಕಿಯನ್ನು ಭಕ್ತಿಯಿಂದ ಜಾತ್ರೆಗೆ ಬೀಳ್ಕೊಡುತ್ತಾರೆ.

ರಾತ್ರಿ ಹತ್ತು ಗಂಟೆಯವರೆಗೂ ಪೂಜಾ ವಿಧಿ-ವಿಧಾನಗಳು ನೆರವೇರಿದ ನಂತರ ಅರ್ಚಕರು ಕಳಸವನ್ನು ತಲೆಯ ಮೇಲೆ ಹಾಗೂ ಪಲ್ಲಕ್ಕಿಯನ್ನು ಹೆಗಲ ಮೇಲೆ ಹೊತ್ತುಕೊಂಡು ಪಾದಯಾತ್ರೆಯ ಮೂಲಕ ಸಾಗಿಸುತ್ತಾರೆ. ಗುಳೇದ ಗುಡ್ಡದಿಂದ ಕಮತಗಿ, ಗಂಜಿಹಾಳ, ಹೂವನೂರು, ವರಗೊಡದಿನ್ನಿ, ಅರ್ಚಕರ ಕಾಲೋನಿ ಮಾರ್ಗದ ಮೂಲಕ ಕೂಡಲಸಂಗಮಕ್ಕೆ ಬರುತ್ತದೆ.

ಮಾರ್ಗ ಮಧ್ಯದಲ್ಲಿ ಭಕ್ತರು ಕಳಸವನ್ನು ಕೂಡಿಸಿ ಭಕ್ತಿಯಿಂದ ಪೂಜಿಸಿ ಕಳಿಸಿಕೊಡುತ್ತಾರೆ. ಬೆಳಗಿನ ಜಾವ ಆರು ಗಂಟೆಯ ಹೊತ್ತಿಗೆ ಗಂಜಿಹಾಳ ಭಕ್ತರಿಂದ ಪೂಜೆಗೊಂಡು ಹೂವನೂರ ಸಮೀಪಕ್ಕೆ ಬರುತ್ತಾರೆ. ಅಲ್ಲಿನ ಗಣಜಾರಿ ಸ್ವಾಮಿಯವರ ಮನೆಯ ಹತ್ತಿರ ಮೆರವಣಿಗೆಯ ಮೂಲಕ ತಂದು ಭಕ್ತಜನರ ಪೂಜೆಗಾಗಿ ಕೂರಿಸಲಾಗುತ್ತದೆ. ಸಾಯಂಕಾಲ ಐದರವರೆಗೂ ಪೂಜೆ ಸಲ್ಲಿಸುತ್ತಾರೆ. ಹೂವನೂರಿನಿಂದ ಕಳಸವನ್ನು ತರಲು ಸಂಗಮದ ಕೆಲವು ಭಕ್ತರು ಮಾಲೆ ಹಾಕಿದ ಸ್ವಾಮಿಗಳು ಬಂದಿರುತ್ತಾರೆ. ಅರ್ಚಕರೊಡನೆ ಸೇರಿ ಸುಮಾರು ಎಂಟು ಕಿ.ಮೀ ಮಾರ್ಗವನ್ನು ಭಜನೆ, ಕೀರ್ತನೆಗಳ ಸ್ಮರಣೆಯ ಮೂಲಕ ಕಳಸ ಮತ್ತು ಪಲ್ಲಕ್ಕಿಯನ್ನು ಹೊತ್ತು ಸಂಗಮದ ಕಡೆಗೆ ಬರುತ್ತಾರೆ. ಪಾದಯಾತ್ರೆಯ ಮೂಲಕ ಸಾಗುತ್ತ ಅರ್ಚಕರ ಕಾಲೋನಿ ಸೇರಲು ಸಂಜೆ ಏಳು ಗಂಟೆಯಾಗುತ್ತದೆ. ಅಲ್ಲಿ ಅರ್ಚಕರ ಮನೆತನದ ಕಾತೇದಾರ ಎಂಬ ಮನೆತನದವರು ಕಳಸ ಹಾಗೂ ಪಲ್ಲಕ್ಕಿಗೆ ಕುಲಾಯಿ ಹೊದಿಸುತ್ತಾರೆ. ನಂತರ ಸಂಗಮ ಗ್ರಾಮ ಪ್ರವೇಶಿಸುತ್ತದೆ. ಪುರಾತನ ದೇವಾಲಯವಾದ ಬ್ಯಾಳಿ ಬಸವೇಶ್ವರ ದೇವಸ್ಥಾನದ ಜಗಲಿಯ ಮೇಲೆ ರತ್ನಗಂಬಳಿ ಹಾಕಿ ಕೂರಿಸುತ್ತಾರೆ. ಸಮಸ್ತ ಸಂಗಮದ ಗ್ರಾಮಸ್ಥರು ವರ್ಷಕ್ಕೊಮ್ಮೆ ಬರುವ ಕಳಸ ಹಾಗೂ ಪಲ್ಲಕ್ಕಿ ದೇವರನ್ನು ಹೃದಯತುಂಬಿ ಬರಮಾಡಿಕೊಳ್ಳುತ್ತಾರೆ. ತಂಡಿಗೇರೆ ಮನೆತನದವರು ಕಳಸದ ಮುಂದುಗಡೆ ಸಂಪ್ರದಾಯ ಬದ್ಧವಾದ ದೀವಟಿಗೆಗಳನ್ನು ಹಿಡಿಯುತ್ತಾರೆ. ಚೌದರಿ ಮನೆತನದವರು ಚೌರವನ್ನು ಬೀಸುತ್ತಾರೆ. ಇದರೊಂದಿಗೆ ದೇವಸ್ಥಾನಕ್ಕೆ ಬಂದು ತಲುಪುತ್ತದೆ.

ಚೈತ್ರ ಬಹುಳ ಚತುರ್ಥಿಯಂದು ಬೆಳಗಿನ ಜಾವ ಐದು ಗಂಟೆಗೆ ಕಳಸವನ್ನು ಹೊತ್ತು ತೇರಿನತ್ತ ಸಾಗುತ್ತಾರೆ. ಸಾವಿರಾರು ಜನ ಮುತ್ತೈದೆಯರು ಕಳಸ ಕನ್ನಡಿ ಹಿಡಿದು ಸಾಗುತ್ತಾರೆ. ಅರ್ಚಕರು ರಥಕ್ಕೆ ಕಳಸವನ್ನು ಏರಿಸುತ್ತಾರೆ. ಪಲ್ಲಕ್ಕಿಯಲ್ಲಿ ಶ್ರೀ ಸಂಗಮನಾಥನ ಮೂರ್ತಿಯನ್ನು ಪ್ರತಿಷ್ಠಾಪಿಸುತ್ತಾರೆ. ನಂತರದಲ್ಲಿ ಘಂಟಾನಾದದೊಂದಿಗೆ ತೇರನ್ನು ಎಳೆಯಲಾಗುತ್ತದೆ. ಉತ್ಸವದ ತೇರನ್ನು ಚೈತ್ರ ಬಹುಳ ಚತುರ್ಥಿಯಂದು ಮುಂಜಾನೆಗೆ ಹಾಗೂ ಮಹಾ ತೇರು ಸಾಗುವ ಪಂಚಮಿಯ ಬೆಳಗಿನ ಜಾವ ತೇರನ್ನು ಎಳೆಯುತ್ತಾರೆ.

ಹೀಗೆ ಉತ್ಸವದ ತೇರನ್ನು ಚೈತ್ರ ಬಹುಳ ಚತುರ್ಥಿಯಂದು ಮುಂಜಾನೆ ಹಾಗೂ ಮಾಹಾ ತೇರನ್ನು ಪಂಚಮಿಯ ಬೆಳಗಿನ ಜಾವ ಎಳೆಯುತ್ತಾರೆ. ತೇರು ಎಳೆದ ಐದು ದಿನಕ್ಕೆ ದೇವಸ್ಥಾನದ ಮುಂದುಗಡೆ ಕಳಸ ಹಾಗೂ ಪಲ್ಲಕ್ಕಿ ದೇವರನ್ನು ಹೊತ್ತು ಸಾಗುತ್ತಾರೆ. ದೇವಾಲಯದ ಅರ್ಚಕರು ವಿಶೇಷ ಪೂಜೆ ಮಾಡಿ ಕಳಸವನ್ನು ಗುಳೇದಗುಡ್ಡಕ್ಕೆ ಕಳಿಸಿಕೊಡುತ್ತಾರೆ. ಪದ್ಧತಿಯಂತೆ ಭೂದುರಿ, ಗೊರ್ಚಕನವರ, ಸಂಗಮೇಶ್ವರ ದೇವಾಲಯದ ಅರ್ಚಕ ಮನೆತನದವರು ಪಾದಯಾತ್ರೆಯ ಮೂಲಕ ಗುಳೇದಗುಡ್ಡಕ್ಕೆ ಒಪ್ಪಿಸಿ ಬರುತ್ತಾರೆ.

ಬಂಗಾರದ ಕಳಸ :

ವೈಭವದಿಂದ ನಡೆಯುವ ಕೂಡಲ ಸಂಗಮದ ಸಂಗಮೇಶ್ವರ ದೇವರ ರಥೋತ್ಸವದ ಪ್ರಮುಖ ಆಕರ್ಷಣೆ ಈ ಬಂಗಾರದ ಕಳಸ ಬಾಗಲಕೋಟೆಯಿಂದ ಸುಮಾರು ೪೭ಕಿ.ಮೀ.ದೂರದಲ್ಲಿರುವ ಕೂಡಲ ಸಂಗಮಕ್ಕೆ ಪಾದಯಾತ್ರೆಯ ಮೂಲಕ ಬಂಗಾರದ ಕಳಸವನ್ನು ಹೊತ್ತುಕೊಂಡು ಬಂದು ತೇರಿಗೆ ಹಾಕಲಾಗುತ್ತದೆ. ಈ ಕಳಸಕ್ಕೆ ರೋಚಕವಾಗಿರುವ ಇತಿಹಾಸವಿದೆ. ಬಂಗಾರದ ಲೇಪವುಳ್ಳ ಭವ್ಯವಾದ ಈ ಕಳಸವನ್ನು ಮಾಡಿಸಿಕೊಟ್ಟವರು ಹಿಂದಿನ ಕಾಲದ ಜಮೀನ್ದಾರರಾದ ಅಮರಾವತಿಯ ದೇಸಾಯಿಯವರು. ಈ ಮೊದಲು ಕಳಸವು ಜಾತ್ರೆಯ ದಿವಸ ಒಂದು ದಿನ ಮೊದಲು ಅಮರಾವತಿಯಿಂದ ಬರುತ್ತಿತ್ತು ಎಂದು ಹೇಳುತ್ತಾರೆ. ಅಮರಾವತಿಯು ಹುನಗುಂದದಿಂದ ಪೂರ್ವಕ್ಕೆ ನಾಲ್ಕು ಕಿ.ಮೀ ದೂರದಲ್ಲಿದೆ. ಹುನಗುಂದದಿಂದ ಕೂಡಲ ಸಂಗಮಕ್ಕೆ ಬರುವ ಕಾಲುದಾರಿಯಲ್ಲಿ ಈಗಲೂ ಅಲ್ಲಲ್ಲಿ ಇರುವ ಕಳಸದ ಕಟ್ಟೆಗಳನ್ನು ನೋಡಬಹುದಾಗಿದೆ. ಇವು ಜಾತ್ರೆಗೆ ಕಳಸವನ್ನು ತರುತ್ತಿದ್ದ ಭಕ್ತರು ಮಾರ್ಗ ಮಧ್ಯ ವಿಶ್ರಮಿಸುತ್ತಿದ್ದ ತಂಗುದಾಣಗಳು ಆಗಿರಬಹುದು.

ಕಳಸವು ಈಗ ಬಾಗಲಕೋಟೆಯಲ್ಲಿದೆ. ಅದು ಬಾಗಲಕೋಟೆಗೆ ಹೇಗೆ ಮತ್ತು ಯಾವಾಗ ಬಂದಿತೆಂಬುದನ್ನು ಹೇಳಲು ಖಚಿತವಾದ ದಾಖಲೆಗಳಿಲ್ಲ. ಪ್ರಚಲಿತ ಇರುವ ಪ್ರತೀತಿಗಳ ಪ್ರಕಾರ ಶ್ರೀಮಂತ ಅಮರಾವತಿ ದೇಸಾಯಿಯವರ ಮಾರಾಟಕ್ಕೆ ಬಂದ ಹತ್ತಿ ಮೂಟೆಗಳಲ್ಲಿ ಕಳಸದ ವಿವಿಧ ಭಾಗಗಳನ್ನು ಯಾರೋ ಅಡಗಿಸಿ ಇಟ್ಟಿದ್ದರು ಅರಳೆ ಮೂಟೆಗಳನ್ನು ತೂಕ ಮಾಡುವಾಗ ಭಾರ ವಿಪರೀತ ಹೆಚ್ಚು ಕಂಡು ಬಂದಿದ್ದರಿಂದ ಅರಳೆ ಮೂಟೆಗಳನ್ನು ಒಡೆದು ನೋಡಲಾಗಿ

ಕಳಸದ ವಿವಿಧ ಭಾಗಗಳು ಕಂಡುಬಂದವು. ಈ ವಿಷಯವು ಸರ್ಕಾರಕ್ಕೆ ತಿಳಿಸಲಾಗಿ ಕಳಸವನ್ನು ತನ್ನ ವಶಕ್ಕೆ ತೆಗೆದುಕೊಂಡು ಕೋಟೆಯಲ್ಲಿರುವ ಶ್ರೀ ನಾರಾಯಣ ದೇವರ ಗುಡಿಯಲ್ಲಿ ಸಂರಕ್ಷಿಸಿ ಇಡಲು ಆಜ್ಞೆ ಮಾಡಿತು. ಪ್ರತಿವರ್ಷ ಜಾತ್ರೆಯ ಹಿಂದಿನ ಬೆಳಿಗ್ಗೆ ವೀರಶೈವ ಸಮಾಜದ ಪಂಚಮರು ಬಾಗಲಕೋಟೆಯ ತಹಸೀಲ್ದಾರರಿಂದ ಅನುಮತಿ ಪಡೆದು ಶ್ರೀ ನಾರಾಯಣ ದೇವರ ಗುಡಿಯಿಂದ ಕಳಸವನ್ನು ಮೆರವಣಿಗೆಯಲ್ಲಿ ತಂದು ಬಾಗಲಕೋಟೆಯ ಅಡತಿ ಬಜಾರ ಮತ್ತು ಕಪ್ಪಡ ಬಜಾರದ ಮಧ್ಯ ಇಡುತ್ತಾರೆ. ರಥೋತ್ಸವದ ಪ್ರಯುಕ್ತ ಕೂಡಲಸಂಗಮದ ಅರ್ಚಕರು ಕಳಸದ ಸೇವಾಕರ್ತ ಮನೆತನದವರಾದ ಬುದೂರಿ, ಗೊರಚಿಕ್ಕನವರ, ಪೂಜಾರಿ ಮನೆತನದವರು ಬಾಗಲಕೋಟೆಯ ತಹಸೀಲ್ದಾರ ಕಚೇರಿಯಲ್ಲಿ ಮುಚ್ಚಳಿಕೆ ಪತ್ರಕ್ಕೆ ಸಹಿಮಾಡಿ ೭೨ ಗಂಟೆಯೊಳಗಾಗಿ ಮರಳಿ ಒಪ್ಪಿಸಬೇಕೆಂಬ ಕರಾರಿನ ಮೇಲೆ ಒಪ್ಪಿಸುತ್ತಾರೆ. ಸಂಜೆಯವರೆಗೆ ನಗರದ ಭಕ್ತಾದಿಗಳು ನೈವೇದ್ಯ ಸಲ್ಲಿಸಿ ಪೂಜೆ ಮಾಡಿದ ಮೇಲೆ ಕಳಸವನ್ನು ಪೊಲೀಸ್ ಬಂದೋಬಸ್ತಿನಲ್ಲಿ ಕಾಲುನಡಿಗೆಯಲ್ಲಿಯೇ ಸಂಗಮಕ್ಕೆ ತೆಗೆದುಕೊಂಡು ಹೋಗಿ ಜಾತ್ರೆ ಮುಗಿದ ಮೇಲೆ ಮರಳಿ ಬಾಗಲಕೋಟೆಗೆ ತಂದು ಒಪ್ಪಿಸುತ್ತಾರೆ.

ಸಂಗಮನಾಥನ ಕಳಸವು ಬಾಗಲಕೋಟೆಗೆ ಹತ್ತಿ ಅಂಡಿಗೆಯಲ್ಲಿ ಬಂದ ಪ್ರಸಂಗವನ್ನು ಕಥೆ ಎಂದು ಭಾವಿಸದೆ ಅದೊಂದು ಸಂಗಮನಾಥನ ಲೀಲೆ ಎಂದು ಅಲ್ಲಿಯ ಭಕ್ತ ಜನರು ನಂಬಿಕೊಂಡಿದ್ದಾರೆ. ಕಾನೂನು ರಕ್ಷಣಾ ವ್ಯವಸ್ಥೆ ಅಷ್ಟೊಂದು ಹೇಳಿಕೊಳ್ಳುವಂತೆ ಇರದ ಕಾಲದಲ್ಲಿ ಸುಮಾರು ನೂರೈವತ್ತು ವರ್ಷಗಳ ಹಿಂದೆ ಕಳ್ಳರ ದರೋಡೆಕೋರರ ರಜಾಕಾರರ ಹಾವಳಿ ಹೆಚ್ಚಾಗಿತ್ತು. ಶ್ರೀಮಂತರ ಬ್ರಾಹ್ಮಣರ ವ್ಯಾಪಾರಸ್ಥರ ಮನೆಗಳನ್ನು ಹಗಲು ದರೋಡೆ ನಡೆಸಿ ಕೊಲೆ ಸುಲಿಗೆ ಮಾಡುತ್ತಿದ್ದರು. ಇಂತಹ ಪರಿಸ್ಥಿತಿ ಅಮರಾವತಿಯ ಸುತ್ತಮುತ್ತಲೂ ಹೆಚ್ಚಾಗಿತ್ತು. ಅತೀ ಎತ್ತರದ ವಿಶಾಲ ವ್ಯಾಪ್ತಿಯ ಕಳಸವನ್ನು ರಕ್ಷಿಸುವ ಸಲುವಾಗಿ ದಿಕ್ಕು ತೋಚದಾಗಿ ಅಂದು ಹೆಚ್ಚಾಗಿ ಬೆಳೆಯುತ್ತಿದ್ದ ಹತ್ತಿಯನ್ನು ಅಂಡಿಗೆಗಳಲ್ಲಿ ಇಡುತ್ತಿದ್ದರು. ಈ ದಿಂಡಿನಲ್ಲಿ ಇಟ್ಟರೆ ಭದ್ರವಾಗಿರುತ್ತದೆ ಎಂಬ ಕಾರಣದಿಂದ ಹತ್ತಿ ದಿಂಡಿನಲ್ಲಿ ಕಳಸವನ್ನು ಅಡಗಿಸಿ ಇಡಲಾಯಿತು. ಅದು ಅಚಾತುರ್ಯದಿಂದ ಅಂಡಿಗೆಗಳನ್ನು ಮಾರಲು ಹೋದಾಗ ಬಾಗಲಕೋಟೆ ಅಡತಿ ಅಂಗಡಿಯಲ್ಲಿ ಸೇರಿಕೊಂಡಿತು.

ಈಗ ನಡೆಯುವ ಸಂಗತಿಯೇ ಪವಾಡ ಸದೃಶ್ಯಕರವಾಗಿದೆ. ಜನರ ಐತಿಹ್ಯದ ಪ್ರಕಾರ ಈ ಘಟನೆ ನೈಜ ಘಟನೆಯಾಗಿದೆಯೇ ಹೊರತು ಯಾರೋ ಕಲ್ಪಿಸಿ ಸೃಷ್ಟಿಸಿದ ಘಟನೆಯಲ್ಲ. ಈ ಪವಾಡದಿಂದಲೇ ಸಂಗಮನಾಥನ ಕಳಸವು ಇನ್ನೂ ನಮ್ಮ ನಾಡಿನಲ್ಲಿಯೇ ಉಳಿಯುವಂತಾಗಿದೆ. ಇಲ್ಲವಾದಲ್ಲಿ ಹೊರರಾಜ್ಯ ಹೊರದೇಶ ತಲುಪಿ ಕಳಸದ ಪರಿಕಲ್ಪನೆ ಕೇವಲ ಕಥೆಯಾಗಿ ಇರುತ್ತಿತ್ತು. ಸಾಮಾನ್ಯವಾಗಿ ಮಾರಾಟಕ್ಕೆ ತಂದ ಹತ್ತಿ ಅಂಡಿಗೆಗಳನ್ನು ತೂಕಮಾಡುವುದು ಸರ್ವೇ ಸಾಮಾನ್ಯ ಅದೇ ರೀತಿ ಅಮರಾವತಿಯ ದೇಸಾಯಿಯವರ ಮನೆಯಿಂದ ತಂದ ಅಂಡಿಗೆಗಳನ್ನು

ತೂಕ ಮಾಡುತ್ತಾರೆ. ಕಳಸವಿದ್ದ ಅಂಡಿಗೆಯನ್ನೂ ಸಹ ತೂಕಕ್ಕೆ ಇಟ್ಟಾಗ ಅಂಗಡಿಯ ಎಲ್ಲ ಕಲ್ಲುಗಳನ್ನು ಹಚ್ಚಿ ತೂಕ ಮಾಡುತ್ತಾರೆ. ಅಂಡಿಗೆ ಮೇಲೇಳುವುದಿಲ್ಲ. ಕೊನೆಗೆ ಪಕ್ಕದ ಅಂಗಡಿಯ ಎಲ್ಲ ಕಲ್ಲುಗಳನ್ನು ತಂದು ಹಚ್ಚುತ್ತಾರೆ. ಆದರೂ ಅಂಡಿಗೆ ಮೇಲೇಳುವುದಿಲ್ಲ. ಏಕೆ ಹೀಗೆ ಎಂದು ನೋಡಲಾಗಿ ಅದರಲ್ಲಿ ಅಡಗಿಸಿಟ್ಟಿದ್ದ ಬಂಗಾರದ ಕಳಸ ಪತ್ತೆಯಾಗುತ್ತದೆ.

ಈ ವಿಷಯವನ್ನು ತಿಳಿದ ದೇಸಾಯಿಯವರು ಬಾಗಲಕೋಟೆಗೆ ತೆರಳಿ ನಮ್ಮ ಕಳಸ ನಮಗೆ ಕೊಡಲೇ ಬೇಕು ಎಂದು ಕೇಳಿದಾಗ ಬಾಗಲಕೋಟೆಯ ಜನತೆ ಬಂದ ಭಾಗ್ಯವನ್ನು ಬಿಡಲು ಸಾಧ್ಯವಿಲ್ಲ ಎಂದು ಹೇಳಿದಾಗ ಅದು ನ್ಯಾಯಾಲಯದ ಮೊರೆ ಹೋಗುತ್ತದೆ. ನ್ಯಾಯಾಲಯದ ತೀರ್ಪು ಬಾಗಲಕೋಟೆಯ ಜನರ ಪರವಾಗಿ ಕಳಸ ಅಲ್ಲಿಯೇ ಉಳಿಯುತ್ತದೆ. ನಂತರ ಕಳಸ ವರ್ಷ ಪೂರ್ತಿ ಎಲ್ಲಿ ಇರಬೇಕು ಯಾರ ಬಳಿ ಇರಬೇಕು ಎಂಬ ಹಿನ್ನೆಲೆಯಲ್ಲಿ ಅಂದಿನ ಬ್ರಿಟೀಷ್ ಆಡಳಿತದಲ್ಲಿ ಕಲಾದಗಿ ಜಿಲ್ಲಾಡಳಿತದಲ್ಲಿ ಬಾಗಲಕೋಟೆಯು ಆಡಳಿತ ನಿರ್ವಹಣೆಯ ಸ್ಥಳವಾಗಿದ್ದರಿಂದ ಬಾಗಲಕೋಟೆಯ ಶ್ರೀ ಬದರಿ ನಾರಾಯಣ ದೇವಾಲಯ ಸಮೀಪದಲ್ಲಿ ಸರ್ಕಾರದ ಲೆಕ್ಕ ಪತ್ರ ವ್ಯವಹಾರಗಳು ನಡೆಯುತ್ತಿದ್ದರಿಂದ ಅಲ್ಲಿ ಸರ್ಕಾರದ ವತಿಯಿಂದ ವರ್ಷ ಪೂರ್ತಿ ಅದೇ ದೇವಸ್ಥಾನದಲ್ಲಿ ಸುರಕ್ಷಿತವಾಗಿಡಬೇಕೆಂದು ಆಜ್ಞೆ ಹೊರಡಿಸಿತು. ಅದು ಅಲ್ಲಿಯೇ ಉಳಿಯಬೇಕಾಯಿತು.

ಶ್ರೀ ಸಂಗಮೇಶ್ವರ ಕಳಸವು ಬಾಗಲಕೋಟೆಗೆ ಆಗಮನವಾಗಿದ್ದ ಕಾಲದಿಂದಲೂ ಹಿಡಿದು ಪ್ರಸ್ತುತ ಇಂದಿನವರೆಗೂ ತಹಸೀಲ್ದಾರ ಕಚೇರಿಯಿಂದ ಮೆರವಣಿಗೆ ಮೂಲಕ ತರಲಾದ ಕಳಸವನ್ನು ಬೆಳಿಗ್ಗೆ ಹತ್ತು ಗಂಟೆಯಿಂದ ಸಂಜೆ ಐದು ಗಂಟೆಯವರೆಗೆ ಬಾಗಲಕೋಟೆಯ ಸರ್ವ ಭಕ್ತರ ದರ್ಶನಕ್ಕಾಗಿ ಕಪ್ಪಡ ಬಾಜಾರದಲ್ಲಿನ ನಾರಾರವರ ಅಂಗಡಿಯಲ್ಲಿ ಕೂರಿಸಲಾಗುತ್ತದೆ. ಈ ಕಳಸವು ರಥೋತ್ಸವಕ್ಕಾಗಿ ಹೋಗುವ ವಿಚಾರ ಅಂಗಡಿಯವರೇ ಹೇಳುವಂತೆ ದಿಂಡಿನಲ್ಲಿ ಅಳತೆಗೆ ಬಂದದ್ದು ಎಲ್ಲರಿಗೂ ತಿಳಿದ ವಿಚಾರ ನಾರಾರವರ ಅಂಗಡಿಯಿಂದಲೇ ಠರಾವನ್ನು ಹೊರಡಿಸಿ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿತು. ಇನ್ನು ಜಾತ್ರೆಗಾಗಿ ಕಳಸವನ್ನು ಕಳುಹಿಸಲು ಒಪ್ಪದ ಅಂದಿನ ಸ್ಥಾನಿಕ ಹಿರಿಯರು ಚರ್ಚಿಸಿ ಜವಳಿ ಬಾಜಾರಿನ ಅಂಗಡಿಯಲ್ಲಿ ಹೂವಿನಲ್ಲಿ ಕೂಡಿಸಿ ಪೂಜೆ ಮಾಡಿ ಕಳುಹಿಸುತ್ತೇವೆಂದು ತೆಗೆದುಕೊಂಡ ನಿರ್ಣಯದಂತೆ ಇಂದಿಗೂ ಆ ಪದ್ಧತಿ ನಡೆದುಕೊಂಡು ಬಂದಿದೆ.

ಕಳಸವು ಬಾಗಲಕೋಟೆಯಲ್ಲಿ ಹಲವಾರು ರೀತಿಯ ಪೂಜೆಗಳೊಂದಿಗೆ ಛತ್ರಿ, ಚಾಮರ, ಬಾಜಾ, ಭಜಂತ್ರಿಯೊಂದಿಗೆ ತೆರಳುತ್ತದೆ. ಕಳಸವನ್ನು ಬೆಳಗುವವರು, ಅದನ್ನು ಮೆರಗುವಂತೆ ಮಾಡುತ್ತಾರೆ. ಬೆಳ್ಳಿ ಛತ್ರಿಯನ್ನು ತರುವವರು ಸುಮಾರು ೪-೫ ಕೆಜಿ ತೂಕವಿರುವ ಛತ್ರಿಯನ್ನು ಕಳಸಕ್ಕೆ ಹಿಡಿಯುತ್ತಾರೆ. ಛತ್ರಿ ಚಾಮರ ಹಿಡಿಯುವವರು ರಥೋತ್ಸವ ಮುಗಿಯುವವರೆಗೂ ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಾರೆ. ನೀಲಿ ಕುಲಾಯಿಗಳನ್ನು ದಾರಿಯುದ್ದಕ್ಕೂ ಭಕ್ತಿಯಿಂದ ಜನರು

ಕಳಸಕ್ಕೆ ಹೊದಿಸುತ್ತಾರೆ. ಹೀಗೆ ವಿವಿಧ ರೀತಿಯ ವಿಧಿವಿಧಾನಗಳೊಂದಿಗೆ ಕಳಸವು ಬಾಗಲಕೋಟೆಯಿಂದ ಬೀಳ್ಕೊಡುತ್ತದೆ. ಇನ್ನೊಂದು ವಿಶೇಷವೆಂದರೆ ಕಳಸಕ್ಕೆ ಕಟ್ಟುವ ನಡಕಟ್ಟಿನ ಹಗ್ಗವನ್ನು ಮುಸ್ಲಿಂ ಸಮುದಾಯದ ಹಿರಿಯರು ಜವಾಬ್ದಾರಿ ತೆಗೆದುಕೊಳ್ಳುತ್ತಾರೆ. ಸುಮಾರು ೩೦ ಮಾರು ಉದ್ದವಿರುವ ನೂಲಿನ ಹಗ್ಗವನ್ನು ಕೊಡುತ್ತಾ ಬಂದಿದ್ದಾರೆ.

ರಥದ ಶೃಂಗಾರ

ಕೂಡಲ ಸಂಗಮನಾಥನ ಸ್ವಾಮಿಯ ಜಾತ್ರೆಯ ನಿಮಿತ್ತ ಮಹಾ ತೇರನ್ನು ವಿಶೇಷವಾಗಿ ಅಲಂಕರಿಸಿರುತ್ತಾರೆ. ಸಂಪ್ರದಾಯದಂತೆ ಇದ್ದಲಗಿಯ ಹಿಲಾಲ, ಬೆಳಗಲ್ಲಿನ ಹಗ್ಗ, ಗಂಜಿಹಾಳ ತರಗು ಬಾಳೆಕಂಬ ಬಂದಾಗ ಬಾಗಲಕೋಟೆಯಿಂದ ಬಂದಂತಹ ಬಂಗಾರದ ಕಳಸ ರಥದ ಮೇಲೇರಿದಾಗ ಮಹಾರಥೋತ್ಸವ ಜರುಗುತ್ತದೆ.

ಇದ್ದಲಗಿಯ ಹಿಲಾಲ

ಕೂಡಲ ಸಂಗಮದ ಪಕ್ಕದ ಗ್ರಾಮವಾದ ಇದ್ದಲಗಿ ಗ್ರಾಮದ ವತಿಯಿಂದ ಜಾತ್ರೆಯ ಸಲುವಾಗಿ ಹಿಲಾಲ ಬರುವ ಸಂಪ್ರದಾಯ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಈ ಹಿಲಾಲ ಗ್ರಾಮದ ಹೊಸಗೌಡ್ರ ಮನೆಯಲ್ಲಿ ಇರುತ್ತದೆ. ದೇವರ ಜಗುಲಿಯ ಮೇಲೆ ಇರಿಸಿ ನಿತ್ಯ ಪೂಜೆ ನೆರವೇರಿಸುತ್ತಾರೆ. ಶ್ರೀಯುತ ಕೂಡ್ಲಯ್ಯ ಇರಸಂಗಯ್ಯ ಹೊಸಗೌಡ್ರ ಇವರು ಹೇಳುವಂತೆ ಸಂಗಮನಾಥ ಸ್ವಾಮಿಯ ಜಾತ್ರೆಯ ನಿಮಿತ್ತ ಹಿಲಾಲ ಒಯ್ಯುವ ಪದ್ಧತಿ ಬಹಳ ಕಾಲದಿಂದಲೂ ರೂಢಿಯಲ್ಲಿದೆ. ಈ ಹಿಲಾಲ ವಿಶೇಷ ಮಾದರಿಯಲ್ಲಿ ನಿರ್ಮಾಣಗೊಂಡಿದೆ. ಇದಕ್ಕೆ ಹನ್ನೆರಡು ದೀಪದ ಹಣತೆಗಳಿವೆ. ಜಾತ್ರೆಯ ದಿನ ಊರಿನ ದೈವದವರೆಲ್ಲರೂ ಸೇರಿಕೊಂಡು ಈ ಪೂಜಾ ಅಭಿಷೇಕವನ್ನು ಮಾಡುತ್ತಾರೆ. ನಂತರ ಊರಿನ ಗುರುಹಿರಿಯರೆಲ್ಲರೂ ಸೇರಿಕೊಂಡು ಊರ ತುಂಬೆಲ್ಲ ವಿಜೃಂಭಣೆಯ ಮೆರವಣಿಗೆಯನ್ನು ಮಾಡಿಸಿ ತುರಾಯಿ ಕೂಡಲ ಸಂಗಮಕ್ಕೆ ಬರುವ ಬಳಗದ ಕಾಲುದಾರಿಯ ಮೂಲಕ ಹಾಯ್ದು ನಸುಕಿನ ಜಾವ ಐದು ಗಂಟೆಗೆ ಸಂಗಮದತ್ತ ಬರುತ್ತಾರೆ. ಇತ್ತೀಚಿನ ಕೆಲ ವರ್ಷಗಳಿಂದಲೂ ಕಾಲು ದಾರಿಯಲ್ಲಿ ಹೊಳೆ ತುಂಬಿ ಹರಿಯುವುದರಿಂದ ಮುಖ್ಯ ರಸ್ತೆಯ ಮೂಲಕ ಪಾದಯಾತ್ರೆಯು ಸಾಗಿ ಸಂಗಮದತ್ತ ಬರುತ್ತದೆ.

ಸಂಗಮ ಗ್ರಾಮವನ್ನು ಪ್ರವೇಶಿಸಿದ ಹಿಲಾಲನ್ನು ಕೂಡಲ ಸಂಗಮ ದೈವಮಂಡಳಿಯವರೆಲ್ಲರೂ ಕೂಡಿಕೊಂಡು ಸಾಂಪ್ರದಾಯಿಕ ಪೂಜೆ ಪುನಸ್ಕಾರಗಳನ್ನು ನೆರವೇರಿಸಿ ಗ್ರಾಮದೊಳಗೆ ಬರಮಾಡಿಕೊಳ್ಳುತ್ತಾರೆ. ಹಿರಿಯರೊಬ್ಬರು ಹಿಲಾಲ ಹಿಡಿದು ಸಾಗುತ್ತಾರೆ. ಅದಕ್ಕೆ ಎಡ ಬಲ ಹಾಗೂ ಮಧ್ಯದಲ್ಲಿ ಹೂವಿನ ಹಾರಗಳನ್ನು ಹಾಕುತ್ತಾರೆ. ಹಿಲಾಲ ಸಂಗಮ ಗ್ರಾಮದ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯ ಮೂಲಕ ಸಾಗುತ್ತದೆ. ಭಕ್ತ ಜನತೆ ಸಂಗಮನಾಥನ ಉದ್ಗಾರ

ಘೋಷ ಜಯಘೋಷಗಳನ್ನು ಮಾಡುತ್ತ ಹಿಲಾಲ ನಡೆದು ಬರುವ ಹಾದಿಯಲ್ಲಿ ಗೌರವಸೂಚಕವಾಗಿ ತುಂಬಿದ ಕೊಡಗಳಿಂದ ನೀರನ್ನು ಹಾಕುತ್ತ ಸಾಗುತ್ತಾರೆ. ದೀಪಗಳಿಗೆ ಎಣ್ಣೆಯನ್ನು ಹಾಕಿ ಭಕ್ತಿಯಿಂದ ಪೂಜಿಸಿ ಹಣ್ಣು ಕಾಯಿಗಳನ್ನು ಒಡೆಯುತ್ತಾರೆ. ಸುಮಾರು ಏಳು ಗಂಟೆಗಳ ಅದ್ದೂರಿ ಮೆರವಣಿಗೆಯ ಮೂಲಕ ಪ್ರಜ್ವಲವಾಗಿ ಬೆಳಗುತ್ತ ಸಾಗುವ ಹಿಲಾಲ ದೇವಸ್ಥಾನದತ್ತ ನಡೆಯುತ್ತದೆ. ದೇವಸ್ಥಾನವನ್ನು ಪ್ರದಕ್ಷಣೆ ಹಾಕಿ ವಿಶೇಷ ಪೂಜೆ ಪುನಸ್ಕಾರ ನೆರವೇರಿಸಿದ ತರುವಾಯ ತುರಾಯಿ ಪಾದಗಟ್ಟೆಯ ಬಳಿ ಬಂದು ನಿಲ್ಲುತ್ತದೆ.

ಆ ಸಂದರ್ಭದಲ್ಲಿ ಉತ್ಸವ ತೇರಾದ ಹುಚ್ಚಯ್ಯನ ತೇರನ್ನು ಎಳೆಯಲು ಸರ್ವಸಿದ್ಧತೆಗಳು ನಡೆಯುತ್ತಿರುತ್ತವೆ. ಪಾದಗಟ್ಟೆಯಿಂದ ಸಾಗಿ ರಥೋತ್ಸವದಲ್ಲಿ ಪಾಲ್ಗೊಳ್ಳುತ್ತದೆ. ಬಾಗಲಕೋಟೆಯಿಂದ ಪಾದಯಾತ್ರೆಯಿಂದ ತರಲಾದ ಕಳಸಕ್ಕೆ ತೇರಿನ ಬಸವಣ್ಣನ ಗುಡಿಯ ಹತ್ತಿರ ವಿಶೇಷ ಪೂಜೆ ನೆರವೇರಿಸುತ್ತಾರೆ. ಪಲ್ಲಕ್ಕಿ ಮೆರವಣಿಗೆ, ಪುರವಂತರ ಮೆರವಣಿಗೆ, ಕಳಸಗನ್ನಡಿ, ಸನಾದಿ, ಸಂಬಾಳದ ಅದ್ದೂರಿ ಮೆರವಣಿಗೆಯ ಮೂಲಕ ಸಾಗುವ ಕಳಸದ ಮುಂದೆ ಬೆಳಗಿನ ಹಿಲಾಲನ್ನು ಹಿಡಿದು ಸಾಗುತ್ತಾರೆ. ಕಳಸವು ಅಗಸಿ ಒಳಗಿನ ಮಳಿಗೆಯಲ್ಲಿ ಪ್ರತಿಷ್ಠಾಪನೆಗೊಳ್ಳುವವರೆಗೂ ಕಳಸದ ಮುಂದೆ ಪ್ರಜ್ವಲವಾಗಿ ಬೆಳಗುತ್ತ ಸಾಗುತ್ತದೆ. ಸಾಯಂಕಾಲದ ರಥೋತ್ಸವ ಮುಗಿದ ತರುವಾಯ ಮರಳಿ ಇದ್ದಲಿಗಿ ಗ್ರಾಮದ ದೈವದವರು ಕೂಡಿಕೊಂಡು ಮೂಲಸ್ಥಾನಕ್ಕೆ ಕೊಂಡೊಯ್ಯುತ್ತಾರೆ.

ಈ ಹಿನ್ನೆಲೆಯಲ್ಲಿ ಕೂಡಲಸಂಗಮೇಶ್ವರನ ಜಾತ್ರೆಯು ಸಂಪ್ರದಾಯ ಬದ್ಧವಾಗಿಯೂ, ವಿಜೃಂಭಣೆಯಿಂದಲೂ ನೆರವೇರುವಲ್ಲಿ ಇದ್ದಲಿಗಿ ಗ್ರಾಮದ ಭಕ್ತ ಪರಂಪರೆಯವರು ಪ್ರತಿವರ್ಷ ತರಲಾಗುವ ಹಿಲಾಲು ತನ್ನದೇ ಆದ ಪಾರಂಪರಿಕ ಹಿನ್ನೆಲೆಯನ್ನು ಹೊಂದಿದೆ ಎನ್ನಬಹುದು.

ಬೆಳಗಲ್ಲದಿಂದ ಬರುವ ರಥದ ಹಗ್ಗ

ಜಾತ್ರಾ ರಥೋತ್ಸವಕ್ಕೆ ಬೆಳಗಲ್ಲದಿಂದ ರಥದ ಹಗ್ಗವನ್ನು ತರುವ ಸಂಪ್ರದಾಯ ನಡೆದುಕೊಂಡು ಬಂದಿದೆ. ಜಾತ್ರೆಯ ದಿವಸ ಬೆಳಗಲ್ ಗ್ರಾಮದಲ್ಲಿ ಸಂಭ್ರಮ, ಸಡಗರದ ವಾತಾವರಣ ಏರ್ಪಟ್ಟಿರುತ್ತದೆ. ಅಂದಿನ ದಿವಸ ಬೆಳಗಿನ ಜಾವ ಆ ಗ್ರಾಮದ ಬಸವೇಶ್ವರ ದೇವಸ್ಥಾನದಲ್ಲಿರುವ ರಥದ ಎರಡೂ ಬೃಹತ್ ಹಗ್ಗಗಳಿಗೆ ವಿಶೇಷ ಪೂಜೆ ಪುನಸ್ಕಾರ ಅಭಿಷೇಕಗಳನ್ನು ನೆರವೇರಿಸುತ್ತಾರೆ. ದೇವಸ್ಥಾನದಿಂದ ಮೆರವಣಿಗೆಯ ಮೂಲಕ ಹಗ್ಗಗಳನ್ನು ಕೊಂಡೊಯ್ದು ಆ ಗ್ರಾಮದ ದೈವ ಭಕ್ತರಾದ ಅಂಗಡಿ ಎಂಬುವರ ಮಳಿಗೆಯಲ್ಲಿ ರತ್ನಗಂಬಳಿ ಹಾಸಿ ಎರಡೂ ಹಗ್ಗಗಳನ್ನು ಪ್ರತಿಷ್ಠಾಪಿಸುತ್ತಾರೆ. ಇಲ್ಲಿಯೂ ಹಗ್ಗಗಳಿಗೆ ವಿಶೇಷ ಪೂಜೆ ನೆರವೇರುತ್ತದೆ. ಸ್ಥಾನಿಕ ಹಿರಿಯರು ಹೇಳುವ ಪ್ರಕಾರ ಈ ಹಿಂದೆ ರಥದ ಹಗ್ಗಗಳು ಆ ಗ್ರಾಮದ ಸರಗಣಾಚಾರಿ ಎಂಬುವರ ಮನೆಯಲ್ಲಿ ಇರುತ್ತಿದ್ದವು. ಇವರ ಮನೆಯಿಂದಲೇ ಹಿಂದಿನ ಕಾಲದಲ್ಲಿ ಜಾತ್ರೆಯ ಹಗ್ಗಗಳನ್ನು

ಒಯ್ಯುತ್ತಿದ್ದರು. ಇತ್ತೀಚಿನ ಕೆಲ ವರ್ಷಗಳ ಹಿಂದೆ ಅವರು ರಥದ ಹಗ್ಗದ ಸಂಪೂರ್ಣ ಜವಾಬ್ದಾರಿಯನ್ನು ಗ್ರಾಮದ ದೈವ ಮಂಡಳಿಗೆ ಒಪ್ಪಿಸಿದರೆಂದು ತಿಳಿದುಬರುತ್ತದೆ.

ಜಾತ್ರೆಯ ದಿನ ಬೆಳಗಿನ ಹತ್ತು ಗಂಟೆಯಿಂದ ಮಧ್ಯಾಹ್ನ ಮೂರು ಗಂಟೆಯ ವರೆಗೂ ಹಗ್ಗಗಳನ್ನು ಮಳಿಗೆಯಲ್ಲಿ ಪ್ರತಿಷ್ಠಾಪಿಸಿರುತ್ತಾರೆ. ಈ ಸಂದರ್ಭದಲ್ಲಿ ಗ್ರಾಮದ ಹಾಗೂ ಸುತ್ತಮುತ್ತಲ ಗ್ರಾಮಗಳ ಭಕ್ತ ಜನತೆ ಹಗ್ಗಗಳಿಗೆ ನೈವೇದ್ಯ ಅರ್ಪಿಸಿ ಪೂಜೆ ಸಲ್ಲಿಸುತ್ತಾರೆ. ಈ ಸಂದರ್ಭದಲ್ಲಿ ಬೆಳಗಲ್ ಗ್ರಾಮದಲ್ಲಿ ಅನ್ನಪ್ರಸಾದದ ವ್ಯವಸ್ಥೆ ಏರ್ಪಡಿಸುತ್ತಾರೆ. ಮಧ್ಯಾಹ್ನ ಮೂರು ಗಂಟೆಗೆ ಹಗ್ಗಗಳನ್ನು ಸಿಂಗರಿಸಿ ಟ್ರ್ಯಾಕ್ಟರ್‌ಗಳಲ್ಲಿ ಸಿಂಗರಿಸಿ (ಹಿಂದೆ ಎತ್ತಿನ ಬಂಡಿಗಳಲ್ಲಿ) ಊರ ತುಂಬೆಲ್ಲ ಮೆರವಣಿಗೆ ಮಾಡುತ್ತಾರೆ. ಸಾಯಂಕಾಲದ ಹೊತ್ತಿಗೆ ಸಂಗಮವನ್ನು ಪ್ರವೇಶಿಸಿದಾಗ ಬಾಜಾ ಭಜಂತ್ರಿ ಪಟಾಕಿ ಮದ್ದಿನ ಆರ್ಭಟದೊಂದಿಗೆ ಗ್ರಾಮದ ಮುಖ್ಯ ಬೀದಿಗಳಲ್ಲಿ ಸಂಚರಿಸಿ ದೇವಸ್ಥಾನದತ್ತ ಸಾಗುತ್ತದೆ. ಈ ಸಂದರ್ಭದಲ್ಲಿ ಭಕ್ತ ಜನತೆ ಹಗ್ಗಗಳನ್ನು ಸ್ಪರ್ಶಿಸಿ ನಮಸ್ಕರಿಸುತ್ತಾರೆ. ದೇವಸ್ಥಾನದ ಅರ್ಚಕರು ಹಗ್ಗಗಳಿಗೆ ವಿಶೇಷ ಪೂಜೆ ನೆರವೇರಿಸಿದ ತರುವಾಯ ರಥದ ಬಳಿ ತಂದು ಬೃಹತ್ ಕಬ್ಬಿಣದ ಬಳೆಗಳಿಗೆ ಕಟ್ಟಿ ರಥವನ್ನು ಎಳೆಯಲು ಅಣಿ ಮಾಡುತ್ತಾರೆ.

ಪ್ರಚಲಿತ ಇರುವ ಪ್ರತೀತಿ ಪ್ರಕಾರ ರಥದ ಹಗ್ಗವು ಬೆಳಗಲ್ ಗ್ರಾಮದಲ್ಲಿ ಇರುವುದರಿಂದ ಬೆಳಗಲ್ ಭಕ್ತ ಪರಂಪರೆ ಬರುವವರೆಗೂ ರಥ ಮುಂದಕ್ಕೆ ಸಾಗುವುದಿಲ್ಲ. ಜಾತ್ರೆಯ ನಿಮಿತ್ತ ತೇರಿನ ಮನೆಯಿಂದ ಹೊರ ಹಾಕುವಾಗ ಜಾತ್ರೆ ಮುಗಿದ ತರುವಾಯ ರಥವನ್ನು ಮರಳಿ ಮನೆಯೊಳಗೆ ಹಾಕುವಾಗ ಬೆಳಗಲ್ ಗ್ರಾಮದ ಭಕ್ತರನ್ನು ರಥ ಎಳೆಯಲು ಕರೆಯಿಸಿಕೊಳ್ಳುವ ಸಂಪ್ರದಾಯ ರೂಢಿಯಲ್ಲಿದೆ.

ಗಂಜಿಹಾಳದ ತರಗು, ಬಾಳೆಕಂಬ, ನಂದಿಕೋಲು

ಸಂಗಮನಾಥನ ಜಾತ್ರಾ ರಥೋತ್ಸವಕ್ಕೆ ಸಮೀಪದ ಗಂಜಿಹಾಳ ಗ್ರಾಮದ ವತಿಯಿಂದ ತರಗು, ಬಾಳೆಕಂಬ ಮತ್ತು ನಂದಿಕೋಲು ತರುವ ಪದ್ಧತಿ ಹಿಂದಿನ ಕಾಲದಿಂದಲೂ ನಡೆದು ಬಂದಿದೆ. ತರಗು ಎಂದರೆ ಕಡಲೆ/ಗೋಧಿ ಹಿಟ್ಟಿನಿಂದ ಎಣ್ಣೆಯಲ್ಲಿ ಕರೆದಂತಹ ವೃತ್ತಾಕಾರದ ಪದಾರ್ಥವಾಗಿದೆ. ಸಾಂಪ್ರದಾಯಿಕ ಪೂಜಾ ಉತ್ಸವ ಕಾರ್ಯಕ್ರಮಗಳಲ್ಲಿ ಇವುಗಳನ್ನು ಬಳಸುತ್ತಾರೆ. ಅದೇ ರೀತಿ ಸಂಗಮನಾಥನ ರಥದ ಸಿಂಗಾರಕ್ಕಾಗಿ ಐದು ಕೆ.ಜಿ.ಯಷ್ಟು ಕಡಲೆ ಗೋಧಿ ಹಿಟ್ಟಿನಿಂದ ಎಣ್ಣೆಯಲ್ಲಿ ತರಗುಗಳನ್ನು ಮಡಿಯಿಂದ ಕರೆಯುತ್ತಾರೆ. ವೃತ್ತಾಕಾರದ ಇವುಗಳನ್ನು ರಥಕ್ಕೆ ಕಟ್ಟುವ ಮತ್ತು ಸಿಂಗರಿಸುವ ಪದ್ಧತಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಗಂಜಿಹಾಳ ಗ್ರಾಮದ ಹಿರಿಯರಿಂದ ತಿಳಿದ ಮಾಹಿತಿಯ ಪ್ರಕಾರ ನಂದಿಕೋಲು ಶ್ರೀ ಅರವಟಿಗಿ ಈರಣ್ಣ ಎಂಬುವರ ಮನೆಯಲ್ಲಿ ಇರುತ್ತದೆ. ಜಾತ್ರೆಯ ದಿವಸ ಕಳಸ ಕನ್ನಡಿ ವಾದ್ಯಮೇಳಗಳೊಂದಿಗೆ ಹೋಗಿ ಅವರ ಮನೆಯಲ್ಲಿನ ನಂದಿಕೋಲನ್ನು ಅನ್ನದಾನೇಶ್ವರ ಮಠಕ್ಕೆ ತರುತ್ತಾರೆ. ಅದರಂತೆ ಮಡಿಯಿಂದ ಎಣ್ಣೆಯಲ್ಲಿ ಕರೆದಂತಹ ತರಗುಗಳನ್ನು ಹಾಗೂ ಐದು ಬಾಳೆಕಂಬಗಳನ್ನು ಈ ಮಠದಲ್ಲಿಯೇ

ತಂದು ಇಟ್ಟಿರುತ್ತಾರೆ. ಗಂಜಿಹಾಳ ಗ್ರಾಮದವರೆಲ್ಲರೂ ಕೂಡಿಕೊಂಡು ಗ್ರಾಮದ ವತಿಯಿಂದ ಇವುಗಳಿಗೆ ವಿಶೇಷ ಪೂಜೆ ನೆರವೇರಿಸುತ್ತಾರೆ. ನಂತರ ಇವುಗಳನ್ನು ಮೆರವಣಿಗೆ ಮಾಡುವುದರ ಮೂಲಕ ಊರಿನ ಪ್ರಮುಖ ಬೀದಿಗಳಲ್ಲಿ ಸಂಚರಿಸುತ್ತಾರೆ. ಹಿಂದಿನ ವರ್ಷಗಳಲ್ಲಿ ಬಾಳೆಕಂಬ ತರಗು ನಂದಿಕೋಲುಗಳನ್ನು ಸಿಂಗರಿಸಿದ ಜೋಡೆತ್ತಿನ ಬಂಡಿಗಳಲ್ಲಿ ಇರಿಸಿಕೊಂಡು ಸಂಗಮಕ್ಕೆ ತರುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ಸಿಂಗರಿಸಿದ ಟ್ರ್ಯಾಕ್ಟರ್‌ಗಳಲ್ಲಿ ತರುವ ಸಂಪ್ರದಾಯ ನಡೆದುಕೊಂಡು ಬಂದಿದೆ. ಗಂಜಿಹಾಳದಿಂದ ಇವುಗಳನ್ನು ತರುವಾಗ ಮಾರ್ಗ ಮಧ್ಯದ ಊರುಗಳಲ್ಲಿ ಭಕ್ತ ಜನತೆ ಇವುಗಳನ್ನು ಭಕ್ತಿಯಿಂದ ಪೂಜಿಸಿ ಬೀಳ್ಕೊಡುತ್ತಾರೆ. ಸಾಯಂಕಾಲದ ಸುಮಾರಿಗೆ ಸಂಗಮವನ್ನು ಪ್ರವೇಶಿಸಿದಾಗ ಊರಿನ ಗುರು ಹಿರಿಯರು ಭಕ್ತಿ ಭಾವಗಳಿಂದ ಸ್ವಾಗತಿಸಿಕೊಳ್ಳುತ್ತಾರೆ.

ಗಂಜಿಹಾಳದಿಂದ ಬರುವ ಈ ತರಗು, ಬಾಳೆಕಂಬ ಮತ್ತು ನಂದಿಕಂಬಗಳನ್ನು ಸಂಗಮ ಗ್ರಾಮದ ಮುಖ್ಯ ರಸ್ತೆಗಳಲ್ಲಿ ಸಂಚರಿಸುತ್ತ ಸಂಗಮನಾಥನ ದೇವಸ್ಥಾನದ ಬಳಿ ತರಲಾಗುತ್ತದೆ. ಈ ಹಿಂದಿನ ವರ್ಷಗಳಲ್ಲಿ ನಂದಿಯ ಕೋಲನ್ನು ಜಾನಕಿ ಮಠ ಅಥವಾ ದೇವನಾಯಕನ ಮಠದಲ್ಲಿ ತಂದು ರಥದ ಕಾರ್ಯಕ್ರಮಕ್ಕೆ ಹೋಗುವ ಮುನ್ನ ಪೂಜಾ ವಿಧಿವಿಧಾನಗಳೊಂದಿಗೆ ತೇರಿಗೆ ಕಟ್ಟುವ ಪದ್ಧತಿ ರೂಢಿಯಲ್ಲಿದ್ದಿತು. ಈಗ ಅದೇ ಪರಂಪರೆ ದೇವಸ್ಥಾನದ ಆವರಣದಲ್ಲಿ ಇರುವ ಸಾರಂಗಮಠದ ಪಕ್ಕದಲ್ಲಿನ ಶ್ರೀ ಸಿದ್ದೇಶ್ವರ ಗುಡಿಯಲ್ಲಿ ಪಾರಂಪರಿಕ ವಿಧಿ-ವಿಧಾನಗಳಿಂದ ಇವುಗಳನ್ನು ಒಯ್ದು ರಥಕ್ಕೆ ಕಟ್ಟುತ್ತಾರೆ. ಪೂಜೆಯನ್ನು ನೆರವೇರಿಸುವ ಮೂಲಕ ನಂದಿಕೋಲಿನ ಕುಣಿತ ನಡೆಯುತ್ತದೆ. ಈ ಹಿನ್ನೆಲೆಯಲ್ಲಿ ಶ್ರೀ ಕೂಡಲ ಸಂಗಮನಾಥನ ಜಾತ್ರೋತ್ಸವ ಸಂಪ್ರದಾಯ ಬದ್ಧವಾಗಿ ನೆರವೇರುವಲ್ಲಿ ಗಂಜಿಹಾಳ ಗ್ರಾಮದ ಭಕ್ತ ಪರಂಪರೆಯವರ ಭಕ್ತಿಯ ಸೇವೆಯು ತನ್ನದೇ ಆದ ಔಚಿತ್ಯವನ್ನು ಹೊಂದಿದೆ ಎನ್ನಬಹುದು.

ರುದ್ರಾಕ್ಷಿ ಮಾಲೆಗಳ ಸಮರ್ಪಣೆ

ರುದ್ರಾಕ್ಷಿ ಮಾಲೆಗೆ ಹಿಂದೂ ಧಾರ್ಮಿಕ ಪರಂಪರೆಯಲ್ಲಿ ತನ್ನದೇ ಆದಂತಹ ಶ್ರೇಷ್ಠತೆ ಪಾವಿತ್ರ್ಯತೆ ಪೂಜಾರ್ಹತೆ ಇರುವುದರಿಂದ ಸಂಗಮನಾಥನ ಜಾತ್ರೋತ್ಸವ ದಿನದಂದು ಲಿಂಗಾಯತ ಪಂಚಮಸಾಲಿ ಜಗದ್ಗುರು ಮಹಾಪೀಠದ ವತಿಯಿಂದ ರಥಕ್ಕೆ ಎರಡು ಬೃಹತ್ ರುದ್ರಾಕ್ಷಿ ಮಾಲೆಗಳನ್ನು ಭಕ್ತಿ ಗೌರವದ ದ್ಯೋತಕವಾಗಿ ಸಮರ್ಪಿಸಲಾಗಿದೆ. ಲಿಂಗಾಯತ ಪಂಚಮಸಾಲಿ ಜಗದ್ಗುರು ಮಹಾಪೀಠ ಕೂಡಲಸಂಗಮ ಇದರ ವತಿಯಿಂದ ನಾಡಿನ ತುಂಬೆಲ್ಲ ಸಾಮಾಜಿಕ ಧಾರ್ಮಿಕ ಅಭಿವೃದ್ಧಿ ಕಾರ್ಯಗಳನ್ನು ನಿರಂತರವಾಗಿ ಸಾಗಿಸುತ್ತ ಬಂದಿದೆ. ಮಹಾ ಪೀಠದ ಜಗದ್ಗುರುಗಳಾದ ಪೂಜ್ಯ ಶ್ರೀ ಬಸವಜಯ ಮೃತ್ಯುಂಜಯ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಬಸವತತ್ವದ ಕಾರ್ಯಕ್ರಮಗಳು ವೈಚಾರಿಕ ತಳಹದಿಯ ಸಮಾಜದ ಅಭಿವೃದ್ಧಿ ಕುರಿತಾದ ಮಹತ್ವದ ಸಭೆ ಸಮಾರಂಭಗಳು ನಾಡಿನ ಸಂಸ್ಕೃತಿಯನ್ನು ಪ್ರೋತ್ಸಾಹಿಸುವಂತಹ, ಪೋಷಿಸುವಂತಹ

ನಿಟ್ಟಿನಲ್ಲಿ ತುಂಬ ಅರ್ಥಪೂರ್ಣವಾಗಿ ನಡೆಯುತ್ತ ಬಂದಿವೆ. ಅದರಂತೆ ಸಂಭ್ರಮ ಸಡಗರದ ಈ ಜಾತ್ರಾ ಮಹೋತ್ಸವಕ್ಕೆ ಅನೇಕ ರೀತಿಯ ಸಹಕಾರವನ್ನು ನೀಡುತ್ತ ಬಂದಿದ್ದಾರೆ.

ಶರಣಮೇಳ

೧೯೮೭ರಲ್ಲಿ ನಾರಾಯಣಪುರ ಆಣೆಕಟ್ಟಿನ ಹಿನ್ನೀರಿನಿಂದ ಆವೃತವಾದ ಕೂಡಲಸಂಗಮದ ಸಂಗಮೇಶ್ವರ ದೇವಾಲಯವನ್ನು ಬೇರೆ ಕಡೆ ವರ್ಗಾಯಿಸದಂತೆ ದೇವಾಯಲದ ಆಡಳಿತವನ್ನು ಸರಕಾರವು ವಹಿಸಿಕೊಳ್ಳುವಂತೆ ಕೂಡಲಸಂಗಮ ಕ್ಷೇತ್ರದ ಅಭಿವೃದ್ಧಿಗಾಗಿ ಆಗ್ರಹಿಸಿ ಯಶಸ್ವಿ ಹೋರಾಟವನ್ನು ಮಾಡಿ ಮಾತೆ ಮಾಹದೇವಿಯವರು ಕೂಡಲಸಂಗಮ ಲಿಂಗಾಯತ ಧರ್ಮದ ಧರ್ಮಕ್ಷೇತ್ರವೆಂದು ಘೋಷಣೆ ಮಾಡಿ ೧೯೮೮ ಜನವರಿ ೧೩, ೧೪, ೧೫ರಂದು ಕೂಡಲಸಂಗಮದಲ್ಲಿ ಐತಿಹಾಸಿಕ ಮೊದಲನೆಯ ಶರಣಮೇಳವನ್ನು ನೇರವೇರಿಸಿದರು. ಈ ಸಮ್ಮೇಳನದಲ್ಲಿ ಸುಮಾರು ೨ ಲಕ್ಷಕ್ಕೂ ಹೆಚ್ಚು ಜನ ಸೇರುವ ಮೂಲಕ ಶರಣಮೇಳವನ್ನು ಯಶಸ್ವಿಗೊಳಿಸಿದರು. ಪ್ರತ್ಯೇಕ ಲಿಂಗಾಯತ ಧರ್ಮ ಅಸ್ಥಿತ್ವಕ್ಕೆ ಬರಬೇಕೆಂಬ ನಿಲುವುಗಳು ಗಟ್ಟಿಯಾಗಲು ಈ ಶರಣಮೇಳ ಅಧಿಕೃತ ಸಾಕ್ಷಿಯಾಯಿತು.[೧೭]

೧೯೯೨ ಜನವರಿ ೧೩ರಂದು ಕೂಡಲಸಂಗಮದಲ್ಲಿ ಬಸವಧರ್ಮದ ಪರಮೋಚ್ಛಪೀಠ ಸ್ಥಾಪನೆ, ಬಸವಧರ್ಮದ ಮಹಾಜಗದ್ಗುರು ಪೀಠದ ಪ್ರಥಮ ಪೀಠಾಧ್ಯಕ್ಷರಾಗಿ ಲಿಂಗಾನಂದ ಮಹಾಸ್ವಾಮಿಯವರು ಪೀಠಾರೋಹಣ ಮಾಡಿದರು. ಇದೇ ವರ್ಷ ಬಸವಧರ್ಮ ಸಮ್ಮೇಳನ ತಮಿಳುನಾಡಿನ ಯು.ಪಿ.ಯಲ್ಲಿ ೧೯೯೪ರಲ್ಲಿ ದ್ವಿತೀಯ ಬಸವಧರ್ಮ ಸಮ್ಮೇಳನ, ಹೈದ್ರಾಬಾದ್‌ನಲ್ಲಿ ನೆರವೇರಿಸುವ ಮೂಲಕ ಮಾತೆಮಹಾದೇವಿಯವರು ಕರ್ನಾಟಕದಿಂದ ಆಚೆಗೂ ಬಸವಣ್ಣನವರ ತತ್ವಗಳನ್ನು ಮತ್ತು ಕೂಡಲಸಂಗಮದ ಮಹಿಮೆಯನ್ನು ಸಾರಿದವರಾಗಿದ್ದಾರೆ.

ಶರಣಮೇಳ ಎಂದರೆ ಅದೊಂದು ಯುಗದ ಭಕ್ತಿ-ಭಾವಗಳ ಸಂಗಮ. ಸುಮಧುರ ಭಕ್ತಿ ಸಂಬಂಧಗಳ ಮಿಲನ. ಶರಣರಿಂದ ಶರಣರಿಗಾಗಿ ಶರಣರೇ ನಡೆಸುವ ಸಮ್ಮೇಳನ. ಅಲ್ಲಿ ಕಾಯಕ ಸಿದ್ಧಾಂತದ ಪ್ರಾಯೋಗಿಕ ಜ್ಞಾನವಿದೆ. ಇಂತಹ ಶರಣಮೇಳ ಪ್ರತಿವರ್ಷ ಲಿಂಗಾಯತ ಧರ್ಮ ಸ್ಥಾಪನಾ ದಿನದ ಅಂಗವಾಗಿ ಆಚರಿಸುತ್ತಲಿದ್ದು, ಈವರೆಗೆ ೩೧ ಶರಣಮೇಳ ಕಾರ್ಯಕ್ರಮಗಳು ನಡೆದಿವೆ. ಶರಣಮೇಳಕ್ಕೆ ಹಲವಾರು ಬಾರಿ ಅಡೆತಡೆಗಳು ಬಂದರೂ ಯಾವ ಆಂತಕವೂ ಇಲ್ಲದೆ ಇಂದು ಸರಾಗವಾಗಿ ನಡೆಯುತ್ತಿದೆ. ಶರಣಮೇಳದ ಪ್ರಮುಖ ರೂವಾರಿಗಳಾದ ಮಾತೆಮಹಾದೇವಿಯವರು ಬಸವಣ್ಣನವರ ವಚನಗಳ ಅಂಕಿತನಾಮವನ್ನು ಬದಲಾವಣೆ ಮಾಡಿದ್ದು, ನಾಡಿನಾದ್ಯಾಂತ ವಿವಾದಕ್ಕೊಳಗಾಗಿ (ಬಸವ ವಚನ ದೀಪ್ತಿ ಎಂಬ ಕೃತಿಯು ೧೯೯೬ರಲ್ಲಿ ಬಿಡುಗಡೆಯಾದಾಗ) ಬಸವಣ್ಣನವರ ಮೂಲ ಅಂಕಿತನಾಮ 'ಕೂಡಲಸಂಗಮದೇವ' ಎಂಬುದನ್ನೇ ಇಟ್ಟುಕೊಳ್ಳುವಂತೆ ಜನರು ಆಗ್ರಹಿಸಿದರು. ಮಾತೆಮಹಾದೇವಿಯವರು 'ಕೂಡಲಸಂಗಮದೇವ' ಎಂಬುದರ ಬದಲು 'ಲಿಂಗದೇವಾ' ಎಂದು ಬದಲಾಯಿಸಿದ್ದು, ಅವರ ಗುರುಗಳಾದ ಲಿಂಗಾನಂದರ

ಮೇಲಿನ ಗೌರವದಿಂದ ಹೀಗೆ ಮಾಡಿದ್ದಾರೆಂದು ಆಪಾದನೆಗಳು ಕೇಳಿಬಂದವು. ಪ್ರಸ್ತುತ ಮಾತೆಮಹಾದೇವಿಯವರು ಲಿಂಗಾಯತ ಧರ್ಮದ ಹೋರಾಟದ ಪ್ರಮುಖ ರೂವಾರಿಗಳಾಗಿ ಇತ್ತೀಚೆಗೆ ಹೋರಾಡುತ್ತಿರುವ ಸಂದರ್ಭದಲ್ಲಿ ದಿನಾಂಕ: ೧೪.೦೩.೨೦೧೯ರಂದು ಲಿಂಗೈಕ್ಯರಾಗಿದ್ದಾರೆ. ಶರಣಮೇಳದ ರೂವಾರಿಗಳೆಂದೇ ಇವರನ್ನು ನಾಡಿನಲ್ಲಿ ಗುರುತಿಸುತ್ತಾರೆ.

ಅಡಿ ಟಿಪ್ಪಣಿಗಳು

೧. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-೧೫

೨. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-೩೪

೩. ಅದೇ, ಪುಟ-೧೫

೪. ಅದೇ, ಪುಟ-೧೫

೫. ಹಿರೇಮಠ ಆರ್.ಸಿ., ವೀರಶೈವ ದರ್ಶನ, ಚೆನ್ನಬಸವ ಪ್ರಕಾಶನ, ಪುಟ-೨೨

೬. ಅದೇ, ಪುಟ-೨೨

೭. ದೇವರಕೊಂಡಾರೆಡ್ಡಿ (ಸಂ), ಕೃಷ್ಣಾ ಮೇಲ್ದಂಡೆ ಯೋಜನೆ ಮುಳುಗಡೆ ಗ್ರಾಮಗಳಲ್ಲಿ ಶಾಸನಗಳ ಅಧ್ಯಯನ, ಪುಟ-೪೭

೮. ಅದೇ, ಪುಟ-೪೭

೯. ಅದೇ, ಪುಟ-೪೮

೧೦ ಎಂ.ಎಂ. ಕಲಬುರ್ಗಿ, ಮಾರ್ಗ ಸಂಪುಟ-೪

೧೧. ದೇವರಕೊಂಡಾರೆಡ್ಡಿ (ಸಂ), ಕೃಷ್ಣಾ ಮೇಲ್ದಂಡೆ ಯೋಜನೆ ಮುಳುಗಡೆ ಗ್ರಾಮಗಳಲ್ಲಿ ಶಾಸನಗಳ ಅಧ್ಯಯನ, ಪುಟ-೪೮

೧೨. ಅದೇ, ಪುಟ-೪೮

೧೩. ಅದೇ, ಪುಟ-೪೯

೧೪. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-೪೪೯

೧೫. ಎಚ್. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ-೫೩೩

೧೬. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-೨೨೪

೧೭. ಪ್ರಜಾವಾಣಿ, ಕನ್ನಡ ದಿನ ಪತ್ರಿಕೆ, ಜನವರಿ ೧೪, ೨೦೧೭

ಅಧ್ಯಾಯ : ೬

ಕೂಡಲಸಂಗಮ ಮತ್ತು ಇತರ ಸಾಂಸ್ಕೃತಿಕ ಕೇಂದ್ರಗಳ ಸಂಬಂಧ

೬.೧. ತಂಗಡಗಿ

೬.೨. ಬಸವಕಲ್ಯಾಣ

೬.೩. ಬಾಗೇವಾಡಿ

ಅಧ್ಯಾಯ : ಆರು

ಕೂಡಲಸಂಗಮ ಮತ್ತು ಇತರ ಸಾಂಸ್ಕೃತಿಕ ಕೇಂದ್ರಗಳ ಸಂಬಂಧ

ಕೂಡಲಸಂಗಮವು ಬೇರೆ ಬೇರೆ ಸ್ಥಳಗಳೊಂದಿಗೆ ಯಾವ ರೀತಿಯಾಗಿ ಸಂಬಂಧಗಳನ್ನು ಹೊಂದಿದೆ ಎಂಬ ಅಂಶಗಳು ಪ್ರಾಚೀನ ಕಾಲದಲ್ಲಿ, ಶಾಸನಗಳಲ್ಲಿ ಮತ್ತು ಜಾನಪದ ಸಾಹಿತ್ಯದಲ್ಲಿ ಉಲ್ಲೇಖಗೊಂಡಿದೆ ಎಂಬ ಅಂಶಗಳನ್ನಿಟ್ಟುಕೊಂಡು ಇಲ್ಲಿಯ ವಿಚಾರಗಳನ್ನು ತಿಳಿಯಬಹುದಾಗಿದೆ. ಕೂಡಲಸಂಗಮದಿಂದ ಕೆಲವೇ ಅಂತರದಲ್ಲಿ ದೂರವಿರುವ ತಂಗಡಗಿ, ಬಸವಣ್ಣ ಜನಿಸಿದ ಬಾಗೇವಾಡಿ, ಬಸವಣ್ಣ ಕಾರ್ಯಕ್ಷೇತ್ರವಾದ ಕಲ್ಯಾಣ ಮತ್ತು ಬಸವಣ್ಣನ ಪತ್ನಿ ಗಂಗಾಂಬಿಕೆ ಐಕ್ಯವಾದ ಮುಗಟಕಾನ ಹುಬ್ಬಳ್ಳಿ ಈ ಪ್ರದೇಶಗಳ ಜೊತೆಗೆ ಕೂಡಲಸಂಗಮವು ಒಂದು ಆತ್ಯಾಂತಿಕ ಸಂಬಂಧವನ್ನಿಟ್ಟುಕೊಂಡು ತನ್ನ ಗಣತೆಯನ್ನು ಹೆಚ್ಚಿಸಿಕೊಂಡಂತಾಗಿದೆ. ಆ ಹಿನ್ನೆಲೆಯಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನಿಟ್ಟುಕೊಂಡು ಅವುಗಳ ಮೌಲಿಕ ವಿಚಾರಗಳನ್ನು ಇಲ್ಲಿ ತಿಳಿಯಬಹುದಾಗಿದೆ.

ತಂಗಡಗಿ :

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನಲ್ಲಿರುವ ಗ್ರಾಮ ತಂಗಡಗಿ. ನೀಲಾಂಬಿಕೆಯು ಇಲ್ಲಿ ಬಂದು ತಂಗಿದ್ದರ ನೆನಪಿಗಾಗಿ ತಂಗಡಗಿ ಎಂದು ಈ ಊರಿಗೆ ಹೆಸರು ಬಂದಿದೆ ಎನ್ನಲಾಗುತ್ತಿದೆ. "ತಂಗಿ ಅಡಗಿದ ಊರು ತಂಗಡಗಿ" ಎನ್ನುವ ಪ್ರತೀತಿ ಇದೆ. ಕಲ್ಯಾಣ ಕ್ರಾಂತಿಯ ನಂತರ ನೀಲಾಂಬಿಕೆ ಹಡಪದ ಅಪ್ಪಣನವರು ಜೊತೆಗೂಡಿ ಇಲ್ಲಿಗೆ ಬಂದಳೆಂಬ ಸಂಗತಿ ಮೊದಲಿನಿಂದಲೂ ಇದೆ.

ಜನಪದರು ತ್ರಿಪದಿಯಲ್ಲಿ ಕೂಡಲಸಂಗಮದ ಸಂಗಮನಾಥನನ್ನು ನೀಲಮ್ಮನ ಅಣ್ಣನೆಂದು ಭಾವಿಸಿದ್ದಾರೆ. ತಂಗಿಯನ್ನು ಕರೆಯುವುದಕ್ಕೆ ಸಂಗಮನಾಥ ತಂಗಡಗಿಗೆ ಬಂದಿದ್ದಾನೆ ಎಂಬ ತ್ರಿಪದಿಯು ಇಂದಿಗೂ ಸಹ ಈ ಭಾಗದಲ್ಲಿ ಪ್ರಸಿದ್ಧವಾಗಿದೆ.

ತಂಗಿಯ ಕರಿಹೋಗಿ ತಿಂಗಳ ತಡದಾನ
ತಂಗಡಗಿ ಮುಂದ ನೆನೆದಾನ। ಸಂಗಣ್ಣ
ತಂಗಿ ನೀಲಾನ ಕರಿಹೋಗಿ⁹

ತಂಗಡಗಿಯ ಸೀಮೆಯಲ್ಲಿ ನೀಲಮ್ಮನ ನೆನೆಯುವುದರಿಂದ ತಂಗಡಗಿ ನೀಲಮ್ಮನ ತವರುಮನೆ ಎಂದು ಸಂಗಮ ಗಂಡನ ಮನೆಯೆಂದು ಸಂಗಮನಾಥ ನೀಲಮ್ಮನ ಅಣ್ಣನೆಂದು ಒಂದು ಭಾವನಾತ್ಮಕ ಸಂಬಂಧ ಜನರಲ್ಲಿದೆ. ಬಸವಣ್ಣನವರು ಕೂಡಲಸಂಗಮದಲ್ಲಿ ಲಿಂಗೈಕ್ಯರಾದ ನಂತರ ನೀಲಮ್ಮ ಹೆಚ್ಚು ದಿನ ತಂಗಡಗಿಯಲ್ಲಿ ಉಳಿದುಕೊಂಡಿದ್ದಳು. ನಂತರ ತನಗಾದ ಅನುಭವಗಳನ್ನು ವಚನಗಳಲ್ಲಿ ವ್ಯಕ್ತಪಡಿಸಿದಳು ಎಂದು ಜನರಲ್ಲಿ ಪ್ರತೀತಿ ಇದೆ.

ಪ್ರತಿವರ್ಷ ಕೂಡಲಸಂಗಮದಲ್ಲಿ ನಡೆಯುವ ಜಾತ್ರೆಯಲ್ಲಿ ತಂಗಡಗಿಯಿಂದ ನೀಲಮ್ಮನನ್ನು ಕರೆದುಕೊಂಡು ಬರುವುದು ಇಂದಿಗೂ ಆಚರಣೆಯಲ್ಲಿದೆ. ಸಂಗಣ್ಣ ತನ್ನ ತಂಗಿ ನೀಲಮ್ಮನನ್ನು ತನ್ನ ಜಾತ್ರೆಗೆ ಕರೆದುಕೊಂಡು ಹೋಗುತ್ತಾನೆ. ಅಲ್ಲಿಯ ಜಾತ್ರೆ ಮುಗಿದ ನಂತರ ನೀಲಮ್ಮನನ್ನು ಕಳುಹಿಸುವ ಕಾರ್ಯವೆಂದೇ ಆಚರಿಸುವ ಉತ್ಸವ ತಂಗಡಗಿಯಲ್ಲಿ ಜಾತ್ರೆಯಾಗಿ ಆಚರಿಸಲ್ಪಡುತ್ತದೆ. ಸಂಗಮನಾಥನ ತೇರು ಎಳೆದ ಮೇಲೆ ಏಳು ದಿನಕ್ಕೆ ನೀಲಮ್ಮನನ್ನು ಕಳುಹಿಸುವ ಸಂಪ್ರದಾಯ ಇದೆ. ಆಗ ತಂಗಡಗಿಯಲ್ಲಿ ನಂದಿಕೋಲ ಉತ್ಸವ, ಪಲ್ಲಕ್ಕಿ ಉತ್ಸವ ನಡೆಯುತ್ತದೆ. ನೀಲಮ್ಮನ ಪಲ್ಲಕ್ಕಿಯು ಸಂಗಮದಿಂದ ಹೊರಟು ಹೊಳೆದಾಟಿ ಬರುತ್ತದೆ. ತಂಗಡಗಿ ಜಮೀನಿನಲ್ಲಿ ಪಲ್ಲಕ್ಕಿ ಇಡುವ ಕಟ್ಟೆಗೆ 'ನೀಲಮ್ಮನ ಕಟ್ಟೆ' ಎನ್ನುತ್ತಾರೆ. ಇದು ನೇರವಾಗಿ ಸಂಗಮನಾಥನ ಗುಡಿಯಿಂದ ಹೊಳೆಯ ಈಚೆದಂಡೆಯ ಜಮೀನಿನಲ್ಲಿ ಇದೆ. ನೀಲಮ್ಮನಿಗೆ ಉಡಿ ಅಕ್ಕಿ ಹಾಕಿ ಮೆರವಣಿಗೆ ಮುಂದೆ ಸಾಗುತ್ತದೆ. ನಂತರ ಉತ್ಸವ ಅಲ್ಲಿಂದ ಹೊರಟು ಊರಿನ ಮಧ್ಯದಲ್ಲಿ ಒಮ್ಮೆ ಪಲ್ಲಕ್ಕಿಯನ್ನು ಇಳಿಸಲಾಗುತ್ತದೆ. ಮತ್ತೆ ಇಲ್ಲಿಯೂ ಒಂದು ನೀಲಮ್ಮನ ಕಟ್ಟೆ ಇದೆ. ಈ ಎರಡು ಕಟ್ಟೆಗಳು ಮೊದಲಿನಿಂದಲೂ ನೀಲಮ್ಮನ ಕಟ್ಟೆಗಳೆಂದು ಪ್ರಸಿದ್ಧಿಯಾಗಿವೆ.

ಜನಪದರು ಸಂಗಮನಾಥನನ್ನು ಮತ್ತು ನೀಲಮ್ಮನನ್ನು ಕುರಿತಂತೆ ತ್ರಿಪದಿಗಳಲ್ಲಿ ಕೊಂಡಾಡಿದ್ದಾರೆ. ನೀಲಮ್ಮನನ್ನು ಕರೆಯುವುದಕ್ಕೆ, ಕಳಿಸುವುದಕ್ಕೆ ಸಾಕ್ಷಾತ್ ಸಂಗಮನಾಥನೇ ಬರುತ್ತಾನೆ ಎಂಬ ನಂಬಿಕೆ ಜನರಲ್ಲಿದೆ.

ಬೆಳ್ಳನ ಬೆಳಕ ಹರಿದು ಬಿಳಿ ಕುದುರೆ ತಡಿಹಾಕಿ
ಎಲ್ಲಿಗೆ ಸಂಗಣ್ಣ ನಿನವಸ್ತು ತಂಗಡಗಿ
ತಂಗಿ ನೀಲಮ್ಮನ ಅರಮನಿಗಿ¹⁰

ಮುಂಜಾನೆ ಬೆಳಕು ಹರಿದ ತಕ್ಷಣ ಸಂಗಮನಾಥ ಬಿಳಿ ಕುದುರೆಗೆ ತಡಿಹಾಕಿ ಹೊರಡಲು ಸಿದ್ಧನಾಗುತ್ತನೆ. ಆಗ ಎಲ್ಲಿಗೆ ಎಂದು ಕೇಳಿದರೆ ತಂಗಡಗಿಯಲ್ಲಿರುವ ನೀಲಮ್ಮ ತಂಗಿಯ ಅರಮನೆಗೆ ಎಂದು ಉತ್ತರಿಸುತ್ತಾನೆ. ಜನಪದರು ತಾವು ನಂಬಿರುವ ದೈವಗಳಿಗೆ ತಮ್ಮದೇ

ಕಲ್ಪನೆಗಳೊಂದಿಗೆ ಜೀವ ತುಂಬುವಂತೆ ಕೆಲಸವನ್ನು ಮಾಡುತ್ತಾರೆ. ಜಗತ್ತು ಎಷ್ಟೇ ವೈಜ್ಞಾನಿಕವಾಗಿ ಮುಂದುವರೆದಿದ್ದರೂ ಈ ಸಂಪ್ರದಾಯಗಳು ಮುಂದುವರಿಯುತ್ತಲೇ ಇರುತ್ತವೆ. ಈ ಪರಂಪರೆಯು ಮುಂದುವರಿಯುವುದರಿಂದಲೂ ಪ್ರಾಚೀನ ಕಾಲದ ಆಚರಣೆಗಳಿಗೆ ಒಂದು ಅರ್ಥ ಬರುತ್ತದೆ.

ನೀಲಮ್ಮನನ್ನು ಕುರಿತಂತೆ ತಂಗಡಗಿ ಭಾಗದ ಜನರಿಗೆ ವಿಶೇಷವಾದ ಅಕ್ಕರೆ ಇದೆ. ನೀಲಮ್ಮನನ್ನು ಮನೆಯ ಮಗಳಂತೆ ಪ್ರೀತಿಸುವ ಜನಕ್ಕೆ ವಿಶಿಷ್ಟ ಆಚರಣೆಗಳಿವೆ. ಇತರ ಶಕ್ತಿ ದೇವತೆಗಳಂತೆ ಅಥವಾ ಗ್ರಾಮ ದೇವತೆಗಳಲ್ಲಿ ಇರುವ ಭಯ ನೀಲಮ್ಮನ ಮೇಲೆ ಇಲ್ಲ. ಏಕೆಂದರೆ ನೀಲಮ್ಮ ಮನೆಯ ಒಬ್ಬ ಮಗಳಂತೆ ಸದಸ್ಯೆಯಾಗಿ ಪರಿಣಮಿಸುತ್ತಾಳೆ.

ನೀಲವ್ವ ನೀ ಬಾರ ನೀಲಲೋಚನೆ ಬಾರ
ನೀ ನೆನ್ನ ಮನೆಗೆ ಇರಬಾರ। ಸೋಮವಾರ
ಹಾಲಿಗೆ ಹೆಪ್ಪ ಕೊಡಬಾರ[೩]

ಹೀಗೆ ಹಾಡುಗಳ ಮೂಲಕ ನೀಲಮ್ಮನನ್ನು ಇಂದಿಗೂ ಜೀವಂತವಾಗಿರಿಸುವ ಮೂಲಕ ಉತ್ಸವ ಮೂರ್ತಿಯಾಗಿ ಪೂಜಿಸುತ್ತಾರೆ. ನೀಲಮ್ಮನ ಉತ್ಸವ ಮುತ್ತೈದೆಯರು ಆರತಿ ತಂದಿರುತ್ತಾರೆ. ಒಬ್ಬೊಬ್ಬರ ಮನೆಯೊಳಗೂ ಒಂದೊಂದು ಬಾಬು ಇರುತ್ತದೆ. ನಂದಿಕೋಲು ಕುಣಿತ, ಡೊಳ್ಳು ಕುಣಿತ, ಪುರವಂತರ ಕುಣಿತ ಇದೆ. ನೀಲಮ್ಮನನ್ನು ಕಳಿಸುವ ಸಂಪ್ರದಾಯವನ್ನು ಸುತ್ತಮುತ್ತಲಿನ ಊರಿನ ಜನರು ಪಾಲ್ಗೊಳ್ಳುವ ಮೂಲಕ ಮೆರಗನ್ನು ತರುತ್ತಾರೆ.

ಈ ಕ್ಷೇತ್ರವನ್ನು ಸಹಿತ ಅಭಿವೃದ್ಧಿ ಮಾಡಬೇಕೆಂಬ ನಿರ್ಧಾರದಿಂದ ಕೂಡಲಸಂಗಮದ ಅಭಿವೃದ್ಧಿ ಮಂಡಳಿಯವರು ನೀಲಮ್ಮನ ಐಕ್ಯ ಸ್ಥಳವನ್ನು ಆಯ್ಕೆ ಮಾಡಿಕೊಂಡರು. ಕಲ್ಯಾಣದ ಕ್ರಾಂತಿಯ ನಂತರ ಶರಣರು ಚದುರಿ ಹೋದರು. ಆಗ ಬಸವಣ್ಣನವರು ಮಂತ್ರಿ ಪದವಿಯನ್ನು ಬಿಟ್ಟು ಕೂಡಲಸಂಗಮಕ್ಕೆ ಬಂದರು. ಇವರ ಜೊತೆಗೆ ಅಕ್ಕ ನಾಗಮ್ಮ, ಗಂಗಾಂಬಿಕೆಯರು ಹಾಗೂ ಇತರ ನೂರಾರು ಶರಣರು ಕೃಷ್ಣಾ ನದಿಯ ಬಲದಿಕ್ಕಿನಲ್ಲಿ ಪ್ರಯಾಣ ಬೆಳೆಸಿದರೆ, ಇನ್ನೊಂದು ತಂಡದಲ್ಲಿ ಬಸವಣ್ಣನವರ ದ್ವಿತೀಯ ಪತ್ನಿ ನೀಲಾಂಬಿಕೆ, ಹಡಪದ ಅಪ್ಪಣ್ಣ ಮತ್ತು ಇತರ ಅನೇಕ ಶರಣರು ಕೃಷ್ಣಾ ನದಿಯ ಎಡದಂಡೆಯತ್ತ ಬಂದರು. ಈ ಸುದ್ದಿಯನ್ನು ತಿಳಿದು ಬಸವಣ್ಣನವರು ನೀಲಾಂಬಿಕೆಯನ್ನು ಕೂಡಲಸಂಗಮಕ್ಕೆ ಬರಲು ತಿಳಿಸುತ್ತಾರೆ. ಅವರು ಬರಲು ತಡವಾಗುತ್ತದೆ. ಅಷ್ಟರೊಳಗೆ ಬಸವಣ್ಣನವರು ಕಾಲವಶರಾಗುತ್ತಾರೆ. ಆ ಸ್ಥಳದಲ್ಲಿ ಒಂದು ಮಂಟಪವನ್ನು ಅವರ ಅನುಯಾಯಿಗಳು ನಿರ್ಮಿಸಿದ್ದಾರೆ. ಆ ಮಂಟಪಕ್ಕೆ ನೀಲಾಂಬಿಕೆ ಐಕ್ಯ ಮಂಟಪವೆಂದು ಕರೆಯುತ್ತಾರೆ. ಈ ಐಕ್ಯ ಮಂಟಪವನ್ನು ಕೂಡಲಸಂಗಮದ ಅಭಿವೃದ್ಧಿ ಪ್ರಾಧಿಕಾರದವರು ಪುನರ್ ನಿರ್ಮಾಣ ಕಾರ್ಯಕ್ಕೆ ಕೈಗೆತ್ತಿಕೊಂಡು ಬಸವಣ್ಣನವರ ಐಕ್ಯ ಮಂಟಪದ ಮಾದರಿಯಲ್ಲಿ ಅಭಿವೃದ್ಧಿಪಡಿಸಿದ್ದಾರೆ.

ನೀಲಾಂಬಿಕಾ ಐಕ್ಯ ಮಂಟಪವನ್ನು ನಾರಾಯಣಪುರ ಜಲಾಶಯದಲ್ಲಿ ಮುಳುಗುವುದನ್ನು ತಪ್ಪಿಸಲು ೧೯೮೨ರ ಸುಮಾರಿಗೆ ಅದರ ಸುತ್ತಲೂ ಒಂದು ಒಣ ಬಾವಿಯನ್ನು ಕಟ್ಟಿ ಪಕ್ಕದ ರಸ್ತೆಗೆ ಸೇತುವೆಯನ್ನು ನಿರ್ಮಾಣ ಮಾಡಿದರು. ಆದರೆ ಕಳಪೆ ಗುಣಮಟ್ಟದ ಕೆಲಸದಿಂದ ಒಣ ಬಾವಿ ನೀರಿನಿಂದ ತುಂಬಿ ಅದರಲ್ಲಿಯ ಮಂಟಪ ಪ್ರತಿವರ್ಷ ಜಲಾಶಯದ ನೀರಿನಲ್ಲಿ ಮುಳುಗುತ್ತಿತ್ತು. ಈ ಕೆಲಸವು ಸಮಂಜಸವಾಗಿರದೆ ಜನರು ಹೋಗಿ ಬರುವುದಕ್ಕೆ ಅನಾನುಕೂಲವಾಗಿತ್ತು. ಇಲ್ಲಿ ಇನ್ನೊಂದು ದುರಂತವೆಂದರೆ ಹಳೆಯ ಗುಡಿಯ ಒಂದೇ ಮಂಟಪದಲ್ಲಿ ಮೂರು ಭಾಗಗಳಿದ್ದವು. ಮಧ್ಯ ಭಾಗದಲ್ಲಿ ನೀಲಾಂಬಿಕಾದೇವಿ, ಎಡಕ್ಕೆ ಹಡಪದ ಅಪ್ಪಣ್ಣ, ಬಲಕ್ಕೆ ಮಡಿವಾಳ ಮಾಚಿದೇವರ ಮಂಟಪಗಳಿದ್ದವು. ಅಭಿಯಂತರರು ನೀಲಾಂಬಿಕೆಯ ಮಂಟಪಕ್ಕೆ ಮಾತ್ರ ಒಣ ಬಾವಿಯನ್ನು ನಿರ್ಮಿಸಿದ್ದರು. ಕೆಳವರ್ಗದ ಶರಣರನ್ನು ನಿರ್ಲಕ್ಷಿಸಿದ್ದಾರೆನ್ನುವಂಥ ಭಾವನೆಯು ಮೂಡಿತ್ತು. ಹಡಪದ ಮತ್ತು ಮಡಿವಾಳ ಸಮಾಜದವರು ಅಸಮಾಧಾನಗೊಂಡಿದ್ದರು. ಆಗ ಸರ್ಕಾರದ ವಿಶೇಷ ಅನುದಾನದಲ್ಲಿ ಕೂಡಲಸಂಗಮ ಅಭಿವೃದ್ಧಿ ಮಂಡಳಿಯಿಂದ ಪುನರ್ ನಿರ್ಮಾಣ ಮಾಡಲಾಯಿತು. ಸಾಂಸ್ಕೃತಿಕವಾಗಿ ಜನಮಾನಸದಲ್ಲಿ ಪ್ರಾಚೀನ ಕಾಲದಿಂದ ನಂಬಿಕೊಂಡು ಬಂದಿರುವಂಥ ನೀಲಮ್ಮನ ದೇವಸ್ಥಾನವನ್ನು ಪ್ರವಾಸಿ ಕೇಂದ್ರ ಮಾದರಿಯಲ್ಲಿ ನಿರ್ಮಾಣ ಮಾಡಿರುವುದು ಔಚಿತ್ಯಪೂರ್ಣವಾಗಿದೆ.

ಬಸವ ಕಲ್ಯಾಣ :

ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿರುವುದರಲ್ಲಿ ಚಾಲುಕ್ಯ ಮತ್ತು ಕಲಚೂರಿ ವಂಶಗಳು ಪ್ರಮುಖವಾಗಿ ಎರಡನೆಯ ತೈಲಪನು ಚಾಲುಕ್ಯ ಸಾಮ್ರಾಜ್ಯದ ಸ್ಥಾಪಕನಾಗಿ ಕ್ರಿ.ಶ. ೯೭೩ರಿಂದ ೯೯೭ರವರೆಗೆ ಆಳ್ವಿಕೆಯನ್ನು ಮಾಡುತ್ತಾನೆ. ಮುಂದೆ ಹಲವು ರಾಜರು ಆಳ್ವಿಕೆಯನ್ನು ಮಾಡಿ ಕಲ್ಯಾಣ ಚಾಲುಕ್ಯರು ಪ್ರಸಿದ್ಧಿಯನ್ನು ಪಡೆಯುತ್ತಾರೆ. ಇವರಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದವನೆಂದರೆ ಆರನೆಯ ವಿಕ್ರಮಾದಿತ್ಯ (೧೦೭೬-೧೧೨೬). ಇವನ ಆಳ್ವಿಕೆಯಲ್ಲಿ ಕಲ್ಯಾಣ ಪಟ್ಟಣವು ಸ್ವರ್ಗ ನಾಚಿಸುವಂತಿತ್ತು ಎಂದು ಹೇಳಲಾಗುತ್ತದೆ. ಮುಂದೆ ಕಲ್ಯಾಣ ಚಾಲುಕ್ಯರ ಸಾಮಂತ ಅರಸನಾಗಿ ಪ್ರಾಮುಖ್ಯತೆಯನ್ನು ಪಡೆದವರು ಕಲಚೂರಿಗಳು. ಇವರು ಮಂಗಳವೇಡ (ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆ)ವನ್ನು ರಾಜಧಾನಿಯಾಗಿ ಮಾಡಿಕೊಂಡು ಆಡಳಿತ ಮಾಡುತ್ತಾರೆ. ಮುಂದೆ ಇವರು ಪ್ರಸಿದ್ಧ ದೊರೆಯಾದ ಎರಡನೆಯ ಬಿಜ್ಜಳನು ಆಳ್ವಿಕೆಗೆ ಬಂದಾಗ (ಕ್ರಿ.ಶ. ೧೧೩೦ರಿಂದ ೧೧೬೮ರವರೆಗೆ) ಕಲ್ಯಾಣ ಚಾಲುಕ್ಯರನ್ನು ಸೋಲಿಸಿ ತಾನೇ ಚಕ್ರವರ್ತಿಯಾಗುತ್ತಾನೆ. ಆಗ ಕಲ್ಯಾಣವು ಕಲಚೂರ್ಯರ ವಶವಾಗುತ್ತದೆ.[೪]

ಬಿಜ್ಜಳ ಮತ್ತು ಬಸವ ಸಮಕಾಲಿನರು. ಬಿಜ್ಜಳನು ಬಸವಣ್ಣನಿಗೆ ವಿಶೇಷ ಸ್ಥಾನಮಾನಗಳನ್ನು ನೀಡಿದ್ದನು. ಹೀಗಾಗಿ ಸಮಾಜದಲ್ಲಿ ಸರ್ವರು ಸಮಾನರು ಎಂದು ಸಾರುವ ಸಲುವಾಗಿ ಅನುಭವ ಮಂಟಪವನ್ನು ನಿರ್ಮಿಸಿದರು. ಶರಣರು ತಮ್ಮ ಅನುಭಾವಗಳನ್ನು ಪರಸ್ಪರ ವಿನಿಯೋಗಿಸುವ

ಕಾರ್ಯ ಪ್ರಾರಂಭವಾಯಿತು. ಇಂದಿಗೂ ಸಹಿತ ಜನಮಾನಸದಲ್ಲಿ ಕಲ್ಯಾಣವನ್ನು ಹಾಡಿಹೊಗಳುವ ಪದ್ಯಗಳು ಹಲವಾರು ಇವೆ. ಬಸವಣ್ಣನು ಕೂಡಲಸಂಗಮದಿಂದ ಮಂಗಳವಾಡಿಗೆ ನಂತರ ಕಲ್ಯಾಣಕ್ಕೆ ಹೋಗಿ ಕೂಡಲಸಂಗಮನಾಥನನ್ನು ಆರಾಧಿಸುತ್ತ ಹಲವಾರು ಸುಧಾರಣೆಗಳನ್ನು ತರಲು ಪ್ರಯತ್ನಿಸುತ್ತಾನೆ.

ಚಾಲುಕ್ಯ ಕಳಸೂರ್ಯನೆಂದು ಪ್ರಸಿದ್ಧಿಯನ್ನು ಪಡೆದಂಥ ಬಿಜ್ಜಳನನ್ನು ಕುರಿತು ಸಿಂಗಿರಾಜ ಪುರಾಣದಲ್ಲಿ ಈ ರೀತಿಯಾಗಿ ಚಿತ್ರಿಸಿದ್ದಾರೆ.

ಇಳೆಗಿಳದರಿಳೆಯ ತೊಡವೆನಿಪ ಭರತಖಂಡ
ಸ್ಥಳವಿಡಿದನಾದಿ ಮಂಗಳ ದೇವತೆ ನೆಲೆಯ
ಒಳುವೆಸರು ಕಲ್ಯಾಣ ಪುರವನಿಪುದಾ ಪುರದ ರಾಜಸಿಂಹಾಸನಗಳ
ಏಳಿಯ ಪಾರಂಪರೆಯ ಚಾಳುಕ್ಯ ಕಳಸೂರ್ಯ
ಕುಲತಿಲಕ ಬಲ್ಲಹಗೆ ಸಿಂಹಕೇಶ ದ್ರವಿಡ
ರಿಳಿದು ಬಿಜ್ಜಳ ಕರ್ನದೇವರೆಗಿಸವರೊಳಗ್ರಜ ಪಟ್ಟವನೇರಲ್ಕೆ[೫]

ಈ ಧರೆಗೆ ಒಡವೆಯ ಹಾಗೆ ಭರತಖಂಡವಿದೆ. ಇದು ಮಂಗಳ ದೇವತೆಯ ನೆಲೆಯಾಗಿದೆ. ಅದು ಕಲ್ಯಾಣಪುರವು ಅಲ್ಲಿ ರಾಜಸಿಂಹಾಸನವನ್ನು ಏರುವಂಥವನು ಚಾಲುಕ್ಯ ಕಲಚೂರ್ಯ (ಸೂರ್ಯ)ನಾದ ಬಿಜ್ಜಳ ಮಹಾರಾಜನು ಎಂದು ಹೇಳುವ ಮೂಲಕ ಕೂಡಲಸಂಗಮದಿಂದ ಬಸವಣ್ಣನವರು ಕಲ್ಯಾಣವನ್ನು ಪ್ರವೇಶ ಮಾಡುವ ಸಂದರ್ಭದಲ್ಲಿ ಬಿಜ್ಜಳ ಮಹಾರಾಜನು ಚಾಲುಕ್ಯ ಸೂರ್ಯನ ಹಾಗೆ ಪ್ರಜ್ವಲಿಸುತ್ತಿದ್ದನು ಎಂದು ತಿಳಿಸುತ್ತಾನೆ. ಬಸವಣ್ಣನವರು ಮತ್ತು ಬಿಜ್ಜಳ ಅರಸ ಬಹಳ ಹೊಂದಾಣಿಕೆಯಿಂದ ರಾಜ್ಯವನ್ನು ನೋಡಿಕೊಳ್ಳುವುದರ ಜೊತೆಗೆ ಶರಣರನ್ನು ಮತ್ತು ಜನಸಾಮಾನ್ಯರನ್ನು ಬಹಳ ನೆಮ್ಮದಿಯಿಂದ ಇರುವಂತೆ ಮಾಡಿದ್ದರೆಂಬುವುದಕ್ಕೆ ನಮ್ಮ ಜನಪದರು ಬಹಳ ಮನೋಜ್ಞವಾಗಿ ಜನಪದ ಸಾಹಿತ್ಯದಲ್ಲಿ ತಿಳಿಸಿದ್ದಾರೆ.

ಶರಣರ ನೆನೆದರ ಸರಗಿಯ ಇಟ್ಟಾಂಗ
ಅರಳ ಮಲ್ಲಿಗೆ ಮುಡಿದಾಂಗ। ಕಲ್ಯಾಣ
ಶರಣರ ನೆನೆಯೆ ನನಮನವ[೬]

ಜನಪದ ಸಾಹಿತ್ಯವು ಮೌಖಿಕವಾಗಿ ಜನರಿಂದ ಜನರಿಗೆ, ಪೀಳಿಗೆಯಿಂದ ಪೀಳಿಗೆಗೆ ಬಳುವಳಿಯಾಗಿ ಬಂದಿರುವಂಥದ್ದು. ಹೀಗಾಗಿ ಕಲ್ಯಾಣದ ಶರಣರನ್ನು ನೆನೆಯುವುದೇ ಒಂದು ಭಾಗ್ಯವೆಂದು ತಿಳಿದಿದ್ದಾರೆ. ಕಲ್ಯಾಣದ ಶರಣರನ್ನು ನೆನೆದರೆ ಸರಗಿಯನ್ನು ಇಟ್ಟಾಂಗ ಮತ್ತು ಅರಳಿರುವಂಥ ಮಲ್ಲಿಗೆಯ ಹೂಗಳನ್ನು ಮೂಡಿದ ಹಾಗೆ. ಹೀಗಾಗಿ ಸದಾಕಾಲವು ಕಲ್ಯಾಣದ ಶರಣರನ್ನು ನೆನೆಯುವಂಥದ್ದು ಬಹಳ ಮುಖ್ಯವಾದದ್ದು ಎಂದು ಜನಪದರ ಆಶಯವಾಗಿತ್ತು.

ಬಸವಣ್ಣನವರು ಕೂಡಲಸಂಗಮದಿಂದ ಕಲ್ಯಾಣಕ್ಕೆ ಹೋಗಿ ಎಲ್ಲ ಶರಣರನ್ನು ಒಂದುಮಾಡಿ ಸಮಾನತೆಯಿಂದ ಕಾಯಕ ತತ್ವದ ಮಹತ್ವವನ್ನು ತಿಳಿಸಿದ ಮೇಲೆ ಶರಣರಿಗೆ ಬಸವಣ್ಣನವರನ್ನು ಬಿಟ್ಟು ಬೇರೆ ಯಾವುದೇ ದೈವಗಳು ಬೇಡ ಎನಿಸುತ್ತದೆ. ಹೀಗಾಗಿಯೇ ಅವರು ಹೀಗೆ ಒಂದು ಪದ್ಯದಲ್ಲಿ ಹೇಳುತ್ತಾರೆ.

ಹಾಡ ಇಲ್ಲಿಗೆ ಸುರುವ ನೀಡೆ ಎಮ್ಮಗ ವರವ
ಗುರು ಬ್ಯಾಡೋ ನಮುಗ ಬಸವಣ್ಣ। ನಿನನಾಮ
ಗಳಿಗಳಿಗೊಮ್ಮೆಮ್ಮೆ ನೆನದೇವ[೭]

ಜನಪದರು ಯಾವುದೇ ಕಾರ್ಯವನ್ನು ಪ್ರಾರಂಭ ಮಾಡಿದರು ಜನಪದ ಹಾಡುಗಳನ್ನು ಹೇಳುವ ಮೂಲಕ ಪ್ರಾರಂಭಿಸುವುದು ರೂಢಿಯಲ್ಲಿರುವ ವಿಚಾರವಾಗಿದೆ. ಇಂದಿಗೂ ಸಹಿತ ಹಳ್ಳಿಗಳಲ್ಲಿ ವ್ಯವಸಾಯ ಮಾಡುವ ಕೃಷಿ ಮಹಿಳೆಯರು ಇದನ್ನು ರೂಢಿಸಿಕೊಂಡಿದ್ದಾರೆ. ಹಾಗೆ ಆ ಸಂದರ್ಭದಲ್ಲಿ ಗುರುವಿನ ಅವಶ್ಯಕತೆ ನಮಗಿಲ್ಲ, ಕೇವಲ ಬಸವಣ್ಣ ನಿನ್ನ ನಾಮ ಒಂದೇ ಸಾಕು ಎಂದು ಹೇಳುವುದನ್ನು ನೋಡಿದಾಗ ಕಲ್ಯಾಣದಲ್ಲಿ ಬಸವಣ್ಣ ಮಾಡಿದ ಕಾರ್ಯ ಪ್ರತಿಯೊಬ್ಬ ಜನಸಾಮಾನ್ಯರ ಮನವನ್ನು ಮುಟ್ಟಿದ್ದವು ಎಂಬುವುದರಲ್ಲಿ ಸಂಶಯವಿಲ್ಲ.

ಮಾನವ ಜನ್ಮದಲ್ಲಿ ಹುಟ್ಟಿದ ಮೇಲೆ ಸಂಕಟಗಳು ಸಾಮಾನ್ಯವಾಗಿ ಎಲ್ಲರಿಗೂ ಬರುವಂಥವೆ. ಸಂಕಟ ಬಂದಾಗ ಎಲ್ಲರೂ ತಮ್ಮ ಮನೆಯವರನ್ನು ಅಥವಾ ಆ ಸಂಕಟದಿಂದ ಪಾರುಮಾಡಲು ಯಾರಿಂದ ಸಾಧ್ಯವೋ ಅಂಥವರನ್ನು ನೆನೆಯುವುದು ಸಾಮಾನ್ಯ ಸಂಗತಿಯಾಗಿದೆ. ಆದರೆ ಇಲ್ಲಿ ಕಲ್ಯಾಣದ ಶರಣರನ್ನು ನೆನೆಯುವಂಥ ರೀತಿ ಹೀಗಿದೆ.

ವ್ಯಾಳೆಯು ಬಂದರ ಯಾರಿಗಿ ನೆನೆಯಲಿ
ಕಲ್ಯಾಣ ಪುರದ ಶರಣರ। ನೆನೆದರೆ
ಬಂದ ಸಂಕಟ ಬಯಲಾಗಿ[೮]

ಹೀಗೆ ಸಮಯ ಬಂದಾಗ ಯಾರನ್ನು ನೆನೆಯಬೇಕು ಎಂಬ ವಿಚಾರವಾಗಿ ಹೇಳುವ ಸಂದರ್ಭದಲ್ಲಿ ಕಲ್ಯಾಣದಲ್ಲಿಯ ಶರಣರನ್ನು ನೆನೆಯಬೇಕು. ಯಾಕೆಂದರೆ ಕಲ್ಯಾಣ ನಗರದಲ್ಲಿ ಯಾವ ಸಮಯದಲ್ಲಿಯೂ ಕುಂದುಕೊರತೆಗಳನ್ನು ನಿವಾರಿಸುವಂತಹ ಶಕ್ತಿ ಮತ್ತು ನೊಂದವರ ಮನಸ್ಸಿಗೆ ಮಿಡಿಯುವಂತಹ ಹೃದಯವಂತಿಕೆ ಇದ್ದದ್ದು ಬಸವಣ್ಣನವರಲ್ಲಿ ಮಾತ್ರವೆಂದು ತೋರುತ್ತದೆ. ಹೀಗಾಗಿ ನೆನೆಯುವುದಾದರೆ ಬಸವಣ್ಣನನ್ನು ನೆನೆಯಬೇಕು ಎನ್ನುವಂತಹ ಮಾತುಗಳು ಜನಪದರ ಸಮಾಧಾನವನ್ನು ಮಾಡುವಂಥ ಮತ್ತು ಸಂಕಟವನ್ನು ದೂರಮಾಡುವಂಥ ಮಾತುಗಳಿವೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಕಲ್ಯಾಣ ಮತ್ತು ಬಸವಣ್ಣ ಎಂದರೆ ಆ ಸಂದರ್ಭದಲ್ಲಿ ಒಂದು ಶಕ್ತಿಯಾಗಿದ್ದವು ಎಂದು ಹೇಳಬಹುದು. ಯಾಕೆಂದರೆ ಸುಳ್ಳು, ವಂಚನೆ, ಮೋಸ ಎಂಬುದು ಇಲ್ಲವಾಗಿ ಇರುವ ನೈಜ

ವಿಷಯಗಳಿಗೆ ಹೆಚ್ಚಿನ ಆದ್ಯತೆ ಇದ್ದಂತಿತ್ತು. ಹೀಗಾಗಿಯೆ ಅವರು ಮಾನ–ಮರ್ಯಾದೆಗಳಿಗೆ ಅಂಜಿ ನಡೆಯುವಂಥವರಾಗಿದ್ದರು. ಅದನ್ನು ಹೀಗೆ ಪ್ರಸ್ತುತಪಡಿಸುತ್ತಾರೆ.

ಕರುಣಬಂದರ ಕಾಯೋ ಮರಣಬಂದರೆ ಒಯ್ಯೋ
ಕರುಣಿ ಕಲ್ಯಾಣ ಬಸವಣ್ಣ। ಕಾಶಿಲಿಂಗ
ಕಡೆತನಕ ಕಾಯೋ ಅಭಿಮಾನ್

ನೇರ ನಡೆ–ನುಡಿಗಳಿಗೆ ಹೆಸರಾದವರು ನಮ್ಮ ಜನಪದರು. ಒಮ್ಮೆ ನಂಬಿದರೆ ಅದನ್ನು ಕಡೆಯತನಕ ಆರಾಧಿಸುವಂಥವರು. ಹೀಗಾಗಿ ತಮ್ಮ ಕಾಯಕದ ಹಿನ್ನೆಲೆಯಲ್ಲಿ ಅಥವಾ ತಮ್ಮ ನಡವಳಿಕೆಯ ಹಿನ್ನೆಲೆಯಲ್ಲಿ ಅವರು ಆಡುವ ಮಾತುಗಳು ಸತ್ಯನಿಷ್ಠವಾದಂತವು. ಹೀಗಾಗಿ ನನ್ನ ಪ್ರಾಮಾಣಿಕತೆಗೆ ತಕ್ಕಂತೆ ನನ್ನನ್ನು ನಡಿಸಿಕೊ ಎಂದು ಹೇಳುವಲ್ಲಿ ಅವರ ಮಾತುಗಳು ಅವರ ಪರಿಶುದ್ಧತೆಯನ್ನು ಎತ್ತಿ ತೋರಿಸುತ್ತದೆ. ಹೀಗಾಗಿಯೇ ಅವರು ಕರುಣ ಬಂದರೆ ಕಾಯೋ ಮರಣ ಬಂದರೆ ಒಯ್ಯೋ ಎಂಬ ನುಡಿಗಳನ್ನು ಆಡಿದ್ದಾರೆ. ನಾನು ಮಾಡಿದ ಕೆಲಸ ಸರಿಯಾಗಿದ್ದರೆ ನನ್ನನ್ನು ಕಾಯಿ ಇಲ್ಲದಿದ್ದರೆ ನನ್ನನ್ನು ಮರಣಗೊಳಿಸು ಎಂಬ ನಂಬಿಕೆಯಿಂದ ನಡೆದವರು ನಮ್ಮ ಜನಪದರು. ಹೀಗಾಗಿಯೇ ಕಲ್ಯಾಣದ ಬಸವಣ್ಣನನ್ನು ಕಾಶಿಯ ಶಿವಲಿಂಗಕ್ಕೆ ಸಮಾನವಾಗಿ ಕಾಣುತ್ತ ನಮ್ಮ ಅಭಿಮಾನವನ್ನು ಕೊನೆಯ ತನಕ ಕಾಯೋ ಎಂದು ಕೇಳಿಕೊಂಡಿದ್ದಾರೆ. ಬಸವಣ್ಣನೆಂದರೆ ಸಾಕ್ಷಾತ್ ಶಿವನೇ ಎಂಬ ಪರಿಕಲ್ಪನೆ ಜನಮಾನಸದಲ್ಲಿ ಇದ್ದಂತಿದೆ. ಅದಕ್ಕೆ ಸಾಕ್ಷಿ ಎಂಬಂತೆ ತಮ್ಮ ಜನಪದ ನುಡಿಯಲ್ಲಿ ಹೀಗೆ ಕೊಂಡಾಡಿದ್ದಾರೆ.

ಕಲ್ಯಾಣದಯ್ಯ ಬಂದ ಕಾಲಿಗಿ ನೀರಕೊಡು
ನೀಲಗದ್ದಿಗಿ ಹೊರಗೀಡು। ಹಡೆದವ್ವ
ಶರಣಿ ನಿನಮನಿಗಿ ಶಿವಬಂದ[೧೦]

ಮನೆಗೆ ಯಾರಾದರು ಶರಣರು ಬಂದರೆ ಅವರನ್ನು ಗೌರವದಿಂದ ಕಾಣಬೇಕು ಎಂಬುವುದನ್ನು ಇಲ್ಲಿ ಪ್ರಸ್ತುತಪಡಿಸಿದ್ದಾರೆ. ಕಲ್ಯಾಣದ ಶರಣರು ಬಂದಿದ್ದಾರೆ ಅವರಿಗೆ ನೀರು ಕೊಡು ಅವರು ಸಾಕ್ಷಾತ್ ಶಿವನ ರೂಪವೇ ಆಗಿದ್ದಾರೆ ಎಂದು ಹೇಳಿದ್ದಾರೆ. ಹೀಗೆ ಶರಣರ ಬೀಡಾಗಿದ್ದ ಕಲ್ಯಾಣವು ಬಸವಣ್ಣ ಕೂಡಲಸಂಗಮದಿಂದ ಹೋದ ಬಸವಣ್ಣ ನೀನು ಇಷ್ಟುದಿನ ಎಲ್ಲಿದ್ದಿ ಎಂದು ಹೇಳುವ ಪರಿ ಕಲ್ಯಾಣವನ್ನು ಕೂಡಲಸಂಗಮವನ್ನು ಬೆಸೆಯುವಂಥದ್ದಾಗಿದೆ.

ಕಲ್ಯಾಣ ಕಟ್ಟಾಗ ಎಲ್ಲಿದ್ದಿ ಬಸವಣ್ಣ
ಹಳ್ಳಿಮಂತಾಳ ತಿಪುರಂತ। ಕೆರಿಮ್ಯಾಗ
ಚೆನ್ನಮಾಡ್ಯಾನ ಬಸವಣ್ಣ[೧೧]

ಕಲ್ಯಾಣವನ್ನು ಪ್ರಾರಂಭದಲ್ಲಿ ಕಟ್ಟುವಾಗ ಬಸವಣ್ಣ ನೀನು ಇರಬೇಕಿತ್ತು ಎಂಬ ಅಭಿಪ್ರಾಯ ಜನರಲ್ಲಿ ಇದ್ದಂತಿದೆ. ತ್ರಿಪುರಾಂತ ಕೆರೆಯನ್ನು ಬಸವಣ್ಣ ಚೆನ್ನಾಗಿ ಮಾಡಿದ್ದಾನೆ. ಅದರಿಂದ

ಜನರಿಗೆ ಒಳಿತಾಗಿದೆ ಎಂಬ ವಿಚಾರವನ್ನು ಜನಪದರು ಹಾಡಿ ಹರಸಿದ್ದಾರೆ. ಬಸವಣ್ಣನವರು ಕೂಡಲಸಂಗಮದಿಂದ ಮಂಗಳವಾಡಕ್ಕೆ ಮುಂದೆ ಕಲ್ಯಾಣಕ್ಕೆ ಹೋದ ವಿಚಾರ ಸಿಂಗಿರಾಜನ ಬಸವರಾಜ ಚಾರಿತ್ರದಲ್ಲಿ ಬರುತ್ತದೆ. ಬಲದೇವ ಮಂತ್ರಿಯು ಕಳುಹಿಸಿಕೊಡುತ್ತಾನೆ ಎಂಬ ವಿಚಾರ ಅಲ್ಲಿ ವ್ಯಕ್ತವಾಗಿದೆ.

ಪರಮಕಲ್ಯಾಣ ಕಲ್ಯಾಣಕ್ಕೆ ನೆಲೆಗೊಂಡು
ದುತರದ ಮುಕ್ತಿಮೂಲ ಸ್ಥಾನ ದೈದುವಂ
ತಿರೆಲಿಂಗ ಜಂಗಮದ ಪ್ರಾಣಿನಾಗಾಯುತ ಪ್ರಾಣನನು ಮರ್ಮಸ್ಥಲಕ್ಕೆ
ಬರಮಾಡುವೀ ಬೆಡಂಗಿನ ಮರೆಜೆಯ ಬಳಿವಿಡಿದು
ಬರುತಿರ್ದ ನೇಮದೊಡೆಯರು ವೆರೆಸಿ ಮುಂದೆ ನಾ
ಲ್ಕೆರಡು ಮಯಣಮದೇನಲು ಚರರುಬಂದುಸುರ್ದರಂ ಬಲದೇಮಂತ್ರೀಶಗೆ[೧೨]

ಪರಮ ಕಲ್ಯಾಣ ಕಲ್ಯಾಣಪುರಕ್ಕೆ ಮುಕ್ತಿಯ ಮೂಲಪುರವೆಂದು ಕರೆಯುತ್ತಿದ್ದರು. ಕಲ್ಯಾಣದ ಸ್ಥಳದ ನಾಡಲ್ಲಿಯೇ ಮುಕ್ತಿಯ ನಿರ್ವಚನವಿದೆ. ಹೀಗಾಗಿ ಬಲದೇವ ಮಂತ್ರಿಯು ಕಲ್ಯಾಣವನ್ನು ಬಸವಣ್ಣ ಪ್ರವೇಶ ಮಾಡುವುದರಿಂದ ಪರಮ ಕಲ್ಯಾಣ ಆಗುವುದೆಂದು ಅಭಿಪ್ರಾಯಪಡುತ್ತಾನೆ.

ಕಲ್ಯಾಣ ಪಟ್ಟಣವನ್ನು ಪ್ರವೇಶ ಮಾಡುವಾಗ ಇರಬೇಕಾದ ಎಚ್ಚರಿಕೆಯನ್ನು ಅಕ್ಕಮಹಾದೇವಿಯು ಒಂದು ವಚನದಲ್ಲಿ ಹೀಗೆ ಹೇಳಿದ್ದಾಳೆ.

ಕಲ್ಯಾಣವೆಂಬುದಿನ್ನಾರಿಗೆ ಹೋಗಬಹುದು
ಹೋಗಬಾರದು ಅಸಾಧ್ಯವಯ್ಯಾ
ಆಸೆ ಆಮಿಷ ಅಳಿದಂಗಲ್ಲದೆ
ಕಲ್ಯಾಣದತ್ತಲಡಿಯಿಡಬಾರದು
ಒಳಹೊರಗು ಶುದ್ಧನಾದಂಗಲ್ಲದೆ
ಕಲ್ಯಾಣವ ಹೋಗಬಾರದು
ನೀನಾನೆಂಬುದ ಹರಿದಂಗಲ್ಲದೆ
ಕಲ್ಯಾಣದ ಒಳಗು ತಿಳಿಯಬಾರದು
ಚೆನ್ನಮಲ್ಲಿಕಾರ್ಜುನಂಗೊಲಿದು
ಉಭಯ ಲಜ್ಜೆ ಅಳಿದೆನಾಗಿ
ಕಲ್ಯಾಣವಂ ಕಂಡು ನಮೋ ನಮೋ ಎನುತಿದ್ದೆನು[೧೩]

ಕಲ್ಯಾಣಕ್ಕೆ ಯಾರಿಗೆ ಹೋಗಲು ಸಾಧ್ಯವೆನ್ನುವುದನ್ನು ಇಲ್ಲಿ ತಿಳಿಸಿದ್ದಾಳೆ ಅಕ್ಕಮಹಾದೇವಿ. ಆಸೆ ಮತ್ತು ಆಮಿಷಗಳನ್ನು ಅಳಿದವರಿಗಲ್ಲದೆ ಕಲ್ಯಾಣದತ್ತ ಅಡಿ ಇಡಬಾರದು ಎಂಬ ವಿಚಾರವನ್ನು ತಿಳಿಸಿದ್ದಾರೆ. ಕಲ್ಯಾಣಕ್ಕೆ ಪ್ರವೇಶವನ್ನು ಮಾಡಬೇಕಾದರೆ ಮನಸ್ಸಿನಲ್ಲಿ ಯಾವುದೇ

ಆಸೆ, ಆಮಿಷಗಳು ಇರಬಾರದು. ಆಸೆಯನ್ನು ಮನದಲ್ಲಿ ತುಂಬಿಕೊಂಡಿದ್ದರೆ ಅಂಥವರು ಕಲ್ಯಾಣದತ್ತ ಮುಖವನ್ನು ಹಾಕಬಾರದು. ಅದೇರೀತಿಯಾಗಿ ಒಳ ಮತ್ತು ಹೊರಗೆ ಒಂದು ಎಂಬ ಭಾವನೆ ಇರದಿದ್ದರೆ ಮತ್ತು ಶುದ್ಧತೆ ಇಲ್ಲದಿದ್ದರೆ ಕಲ್ಯಾಣಕ್ಕೆ ಹೋಗಬಾರದೆಂತಲೂ ಮನುಷ್ಯ ಒಳ ಮನಸ್ಸಿನಲ್ಲಿ ಒಂದು ಮತ್ತು ಹೊರ ಮನಸ್ಸಿನಲ್ಲಿ ಒಂದು ಭಾವನೆ ಉಳ್ಳವನಾಗಿದ್ದರೆ ಅಂಥವನಿಗೆ ಕಲ್ಯಾಣದಲ್ಲಿ ಪ್ರವೇಶವಿಲ್ಲ. ಇಲ್ಲಿ ಒಳಗೂ ಮತ್ತು ಹೊರಗು ಶುದ್ಧ ಎಂಬ ಭಾವವನ್ನು ನೋಡಿದಾಗ ಶುಚಿತ್ವವನ್ನು ಕೇವಲ ದೇಹಕ್ಕೆ ಮಾಡಿಕೊಂಡು ನಾನು ಶುದ್ಧನಿದ್ದೇನೆ ಎಂದು ಹೇಳಿಕೊಂಡರೆ ಅದು ಸಾಧ್ಯವಿಲ್ಲ. ತೋರಿಕೆಗಾಗಿ ಪೋಷಾಕುಗಳನ್ನು ಹಾಕಿಕೊಂಡು ಪರಿಮಳ ದ್ರವ್ಯಗಳನ್ನು ಹಾಕಿಕೊಂಡು ಶುದ್ಧನಾಗಿದ್ದೇನೆ ಎಂದು ಹೇಳಿಕೊಂಡರೆ ಅದಲ್ಲ. ಅಂತರಂಗದಲ್ಲಿ ಅಂದರೆ ಮನಸ್ಸಿನ ಅಂತರಾಳದಲ್ಲಿ ಹೃದಯ ತುಂಬ ಶುದ್ಧತೆಯನ್ನು ಕಾಪಾಡಿಕೊಂಡು ಬರುವಂತಾದರೆ ಮಾತ್ರ ಕಲ್ಯಾಣವನ್ನು ಪ್ರವೇಶ ಮಾಡಬಹುದೆಂದು ಅಕ್ಕಮಹಾದೇವಿ ನುಡಿಯುತ್ತಾಳೆ. ಅದೇ ತೆರನಾಗಿ ನೀ ಮತ್ತು ನಾ ಎಂಬ ಉಭಯವನಳಿದಲ್ಲದೆ ಕಲ್ಯಾಣದ ಒಳಗೂ ತಿಳಿಯಬಾರದು ಎಂಬ ವಿವರವಾಗಿ ಆ ಭಾವ ಹರಿದುಹೋಗಬೇಕು. ಕೆಲವು ಸಂದರ್ಭಗಳಲ್ಲಿ ನಾನು ಮಾಡಿದ್ದು ನನ್ನಿಂದಲೇ ಎಂಬ ಭಾವನೆಯಿಂದ ಅಹಂಕಾರದಿಂದ ಮೆರೆಯುವಂಥವನನ್ನು ನೋಡಿದ್ದೇವೆ. ಕೆಡುಕಾದಾಗ ನಿನ್ನಿಂದಲಾದದ್ದು ನಿನ್ನ ತಪ್ಪು ಎಂದು ಬೇರೆಯವರ ಮೇಲೆ ಹಾಕುವ ಪ್ರವೃತ್ತಿ ರೂಢಿಸಿಕೊಂಡು ನೀ–ನಾ ಎನ್ನುವಂಥ ಭಾವವಿಲ್ಲದವರು ಕಲ್ಯಾಣವನ್ನು ತಿಳಿಯಲು ಸಾಧ್ಯ. ಚೆನ್ನಮಲ್ಲಿಕಾರ್ಜುನನ್ನು ಒಲಿಸಿಕೊಂಡು ಅಭಿಮಾನ ಮತ್ತು ಲಜ್ಜೆಯನ್ನು ಅಳಿದವನಿಗೆ ಕಲ್ಯಾಣದಲ್ಲಿ ಪ್ರವೇಶವೆನ್ನುವಂಥ ಮಾತುಗಳನ್ನು ಅಕ್ಕಮಹಾದೇವಿ ಹೇಳುತ್ತಾಳೆ. ಅಕ್ಕಮಹಾದೇವಿಯಂಥ ಶರಣರು ಕಲ್ಯಾಣವನ್ನು ಪ್ರವೇಶ ಮಾಡಲು ಕಾರಣರಾದವರು ಬಸವಣ್ಣನವರು. ಕಲ್ಯಾಣದ ನಾಡಲ್ಲಿ ಬಸವಣ್ಣನವರ ಕೀರ್ತಿಯು ಹೆಚ್ಚುತ್ತಾ ಹೋದಂತೆ ಬೇರೆ ಬೇರೆ ಪ್ರದೇಶಗಳಿಂದ ಜನ ಕಲ್ಯಾಣಕ್ಕೆ ಬರುತ್ತಿದ್ದರು. ಆಗ ಅಕ್ಕಮಹಾದೇವಿಯು ಈ ಮಾತನ್ನು ಹೇಳಿದ್ದಾಳೆ.

ಈ ಮೇಲೆ ಹೇಳಿದಂತೆ ಅಕ್ಕಮಹಾದೇವಿಯ ವಚನದ ಮಾದರಿಯಲ್ಲಿ ಸತ್ಯವೆಂಬಂತೆ ಬಸವಣ್ಣನ ನಡೆ–ನುಡಿ ಇದ್ದ ರೀತಿಯನ್ನು ಹೀಗೆ ನೋಡಬಹುದಾಗಿದೆ.

ಬಸವನ ಹೆಸರಳಿಯಿತ್ತು
ಬಸವನ ಕುರುಹಳಿಯಿತ್ತು
ಬಸವನ ಭಾವವಳಿಯಿತ್ತು
ಬಸವನ ಮೂರ್ತಿಯ ಕರ್ಮಹರಿದು
ಆನು ನಿಃಕರ್ಮಿಯಾದೆನಯ್ಯಾ
ನಿಃಕರ್ಮಿಯಾದ ಕಾರಣ ಅರಿವನರಿದು
ಪ್ರಣವ ಮೂರ್ತಿಯ ತಿಳಿಯ

ಆನು ಬದುಕಿದೆನಯ್ಯಾ
ಸಂಗಯ್ಯಾ[೪]

ನೀಲಮ್ಮನ ಈ ವಚನವನ್ನು ಅವಲೋಕಿಸಿದಾಗ ಅಕ್ಕಮಹಾದೇವಿ ಹೇಳಿದ ರೀತಿಯಲ್ಲಿಯೇ ಬಸವಣ್ಣನಿದ್ದ ಎನ್ನುವುದನ್ನು ತಿಳಿಯಬಹುದು. ಸಂಗಯ್ಯನ ಕೃಪೆಯಿಂದ ಬಸವಣ್ಣನಿಗೆ ಬಸವನೆಂಬ ಹೆಸರೇ ಅಳಿದಿತ್ತು. ನಾನು ಎಂಬ ಅಹಂಕಾರ ಅಳಿದವನಾಗಿದ್ದ ಎಂಬ ಅರ್ಥದಲ್ಲಿ ತಿಳಿಸಿದ್ದಾರೆ. ಬಸವನೆಂಬ ಭಾವನೆಯು ಸಹಿತ ಇಲ್ಲವಾಗಿತ್ತು. ಕೇವಲ ಹೆಸರಿಗಾಗಿ ಬಡಿದಾಡುವಂಥವರು ಹೆಚ್ಚಾಗಿರುವ ಸಂದರ್ಭದಲ್ಲಿ ಬಸವನು ತನ್ನದಾವ ಕುರುಹು ಇಲ್ಲದಂತೆ ಇದ್ದನು. ಬಸವನ ಭಾವವಳಿಯಿತ್ತು ಎಂದಾಗ ನಾನು ಒಬ್ಬ ಮಂತ್ರಿ ಭಂಡಾರದ ಒಡೆಯ ಎನ್ನುವ ಯಾವ ಭಾವನೆಯು ಇಲ್ಲದವನಾಗಿದ್ದೆ ಎಂದು ಹೇಳುತ್ತಾರೆ. ಬಸವನ ಮೂರ್ತಿಯ ಕರ್ಮವ ಹರಿದು ಅನು ನಿಃಕರ್ಮಿಯಾದೆನಯ್ಯ ಹೀಗೆ ಎಲ್ಲವನ್ನು ಮೀರಿ ನಿಂತಿರುವ ಬಸವಣ್ಣನನ್ನು ಮತ್ತು ಅವನ ಜೊತೆಗಿನ ಕರ್ಮಬಂಧನವನ್ನು ಹರಿದು ನೀಲಮ್ಮ ನಿಃಕರ್ಮಿಯಾದೆನೆಂದು ಹೇಳುವ ಪರಿಯನ್ನು ನೋಡಿದಾಗ ನೀಲಮ್ಮ ಬಸವಣ್ಣನ ಹಾದಿಯಲ್ಲಿ ಸಾಗಿ ಯಾವ ಬಂಧನಕ್ಕೂ ಸಿಲುಕದೆ ಪ್ರಣವ ಮೂರ್ತಿ ಎಂಬ ರೀತಿಯಲ್ಲಿ ಇರುವಂಥ ಬಸವನನ್ನು ನೋಡಿ ಬದುಕಿದೆ ಸಂಗಯ್ಯಾ ಎಂದು ಹೇಳಿದ್ದಾಳೆ. ಕೂಡಲಸಂಗಮದ ಸಂಗಯ್ಯನಿಗೆ ಎಲ್ಲವನ್ನು ಒಪ್ಪಿಸುವ ರೀತಿಯನ್ನು ನೋಡಿದರೆ ಬಸವಣ್ಣನ ಪರಿವಾರ ಅಂದರೆ ಶರಣರ ಪರಿವಾರ ಎಲ್ಲೇ ಇದ್ದರು ಅದಕ್ಕೆ ಮೂಲ ಕೂಡಲಸಂಗಮನಾಥ ಎಂಬ ಅಂಶವು ಬಹಳ ಮುಖ್ಯವಾಗುತ್ತದೆ.

ಅದೇ ತೆರನಾಗಿ ಮತ್ತೊಂದು ವಚನದಲ್ಲಿ ನೀಲಮ್ಮನು ಸಂಗಯ್ಯನಲ್ಲಿ ನಿರ್ಮಲ ಮೂರ್ತಿಯಾದ ರೀತಿಯನ್ನು ಹೀಗೆ ಕಟ್ಟಿಕೊಟ್ಟಿದ್ದಾಳೆ.

ಬಸವಯ್ಯಾ ಬಸವಯ್ಯಾ
ಹುಯ್ಯಲಿಲ್ಲದ ಹುಲ್ಲೆಯಾದೆಯಾ
ಬಸವಯ್ಯಾ ಬಸವಯ್ಯಾ
ಕಾಯಕವಿಲ್ಲದ ದೇಹಿಯಾದೆಯಾ
ಬಸವಯ್ಯಾ ಬಸವಯ್ಯಾ
ಕರ್ಮವಿರಹಿತನಾದೆಯಾ
ಸಂಗಯ್ಯನಲ್ಲಿ ನಿರ್ಮಳಮೂರ್ತಿ
ಬಸವಯ್ಯಾ[೫]

ಬಸವಣ್ಣನವರು ಕೂಡಲಸಂಗಮನಾಥನಲ್ಲಿ ಸಮಾಗಮವಾದ ನಂತರ ಅವರು ಇದ್ದ ಸ್ಥಿತಿಯನ್ನು ಈ ವಚನ ಹೇಳಿದಂತಿದೆ. ಬಸವಣ್ಣನವರು ಗೋಳಾಟವಿಲ್ಲದ ಹೆಣ್ಣು ಜಿಂಕೆಯಂತೆ ಮೃದುವಾದವರೆಂತಲೂ, ಅದೇ ತೆರನಾಗಿ ದೇಹದ ಕಲ್ಪನೆ ಇಲ್ಲದಂತೆಯೂ ಆಗಿರುವುದಾಗಿ,

ಅದೇ ತೆರನಾಗಿ ಯಾವ ಕರ್ಮಬಾಧೆಗಳೂ ಇಲ್ಲದಂತೆ ಕೂಡಲಸಂಗಮದಲ್ಲಿ ನಿರ್ಮಲ ಭಕ್ತಿಯುಳ್ಳವನಾಗಿದ್ದರು ಎಂಬ ಅಂಶವನ್ನು ಹೇಳಿದ್ದಾಳೆ. ಅಂದರೆ ಆ ಕಾರಣದಿಂದಲೆ ಶರಣರೆಲ್ಲರು ಬಸವನಿಗಾಗಿ ಹಂಬಲಿಸಿದರು ಎಂದು ಅನ್ನಿಸದೆ ಇರಲಾರದು.

ಕಲ್ಯಾಣದಿಂದ ಹೊರಗೆ ಹೋಗುವಾಗ ನೀಲಮ್ಮ ತನ್ನ ಬಯಲಾಗುವ ಬಯಕೆಯನ್ನು ಹೀಗೆ ಹೇಳಿಕೊಂಡಿದ್ದಾಳೆ.

ಬಸವಾ ಬಸವಾ ಎಂಬ ಶಬ್ದವಡಗಿತ್ತು
ಬಸವಾ ಬಸವಾಯೆಂಬ ರೂಪು ನಿರೂಪಾಯಿತ್ತು
ಬಸವನ ಕಾಯವಳಿದು ನಿರಾಕುಳವಾಗಲು
ಆನು ಬಸವಾ ಬಸವಾ ಬಸವಾಯೆಂದು
ಬಯಲಾದೆನಯ್ಯಾ ಸಂಗಯ್ಯಾ[೧೬]

ಬಸವಾ ಬಸವಾ ಎಂಬ ಶಬ್ದವು ಮಾಯವಾಗಿ ಅಂದರೆ ಬಸವನಿಂದ ಸಕಲವನ್ನು ಅರಿತಿರುವ ನೀಲಮ್ಮ ಕೊನೆಗೆ ತನ್ನ ಮನಸ್ಸಿಗೆ ಅರಿಯದಂತೆಯೆ ಬಸವಾ ಎಂಬ ಶಬ್ದ ಅಡಗಿ ಹೋಗಿತ್ತು ಎನ್ನುವಂತೆಯೂ, ಬಸವನ ರೂಪವು ನಿರೂಪಗೊಂಡಿತ್ತು ಎಂತಲೂ ತಿಳಿಸಿದ್ದಾಳೆ. ಬಸವನ ಕಾಯವನ್ನು ಅಳಿದು ನಿರಾಕುಳವಾಗಿ ನಾನು ಬಸವಾ ಬಸವಾ ಎಂದು ಬಯಲಾದೆನು ಎಂದು ತಿಳಿಸಿದ್ದಾಳೆ.

ಕಲ್ಯಾಣವನ್ನು ಕೈಲಾಸವೆಂದು ಬಿಂಬಿಸುವ ಹಲವಾರು ಪ್ರಾಚೀನ ಕೃತಿಗಳು ಉಲ್ಲೇಖಿಸುತ್ತವೆ. ಕಲ್ಯಾಣವನ್ನು ಹೇಳುವಾಗ ಬಸವಣ್ಣನವರ ವಿಚಾರಗಳು ಬಂದೇ ಬರುತ್ತವೆ. ಇದು ಮೌಖಿಕ ಕಾವ್ಯಗಳಲ್ಲಿಯು ಕಂಡುಬರುತ್ತವೆ. ಇದಕ್ಕೆ ಉದಾಹರಣೆ ಎಂಬಂತೆ ಮಲೆಮಹಾದೇಶ್ವರ ಕಾವ್ಯದಲ್ಲಿ ಹೀಗೆ ಕಲ್ಯಾಣವನ್ನು ಕರೆಯಲಾಗಿದೆ.

ಅಯ್ಯಾ ಕಲ್ಯಾಣವೆಂಬುದು ತ್ತೊಂಬತ್ತೇಳು ಬೀದಿ
ಕಲ್ಯಾಣವಲ್ಲ ನಂದಿ ಕೈಲಾಸ
ಕಲ್ಯಾಣವಲ್ಲ ನಂದಿಯಾ ಕೈಲಾಸದಲ್ಲಿ
ಬಸವಣ್ಣನವರ ಗುರುಮಠ ॥ಸುವ್ವಾ ಬಾ॥

ಹಸುರಂಗಿ ಬಸವಣ್ಣ ಲೋಕಕ್ಕೆ ಹೆಸರಾದರು
ಏಳುನೂರು ಮಠಕೆ ಶರಣಾರು ॥ಸುವ್ವಾ ಬಾ॥

ಅವರು ಬಸುರಾಜರ ಮಡದಿ ಸಹುನಾದ ನೀಲಮ್ಮ
ಹುಸಿಯನಾಡುವರಲ್ಲ ಧರೆಯಲ್ಲಿ ॥ಸುವ್ವಾ ಬಾ॥[೧೭]

ಮಲೆ ಮಹಾದೇಶ್ವರದ ಈ ಕಾವ್ಯದಲ್ಲಿ ಕಲ್ಯಾಣ ಮತ್ತು ಬಸವಣ್ಣನ ಪ್ರಸ್ತಾಪಗಳು ಬರುತ್ತವೇನೋ ನಿಜ. ಆದರೆ ಹನ್ನೆರಡನೆಯ ಶತಮಾನದಲ್ಲಿ ಮಾದಪ್ಪನ ಉಲ್ಲೇಖ ಎಲ್ಲಿಯೂ ಬರುವುದಿಲ್ಲ. ಆದರೆ ಕೋಡೆಕಲ್ಲ ಬಸವಣ್ಣನವರ ಸಮಕಾಲೀನ ಎನ್ನುವುದಕ್ಕೆ ಈ ಮೇಲಿನ ಪದ್ಯವೇ ಸಾಕ್ಷಿಯಾಗಿದೆ. ಇಲ್ಲಿ "ಹಸುರಂಗಿ ಬಸವಣ್ಣ ಲೋಕಕ್ಕೆ ಹೆಸರಾದ" ಎಂದು ಬರುವುದರಿಂದ ಕಲ್ಯಾಣ ಪರಂಪರೆಯು ಹಲವಾರು ಶತಮಾನ ಕಳೆದರೂ ತನ್ನ ಪ್ರಭಾವವನ್ನು ಕಳೆದುಕೊಳ್ಳದೇ ಕೂಡಲಸಂಗಮದಂತೆ ಪವಿತ್ರ ಕ್ಷೇತ್ರವಾಗಿದೆ. ಈ ಕಾರಣಕ್ಕಾಗಿಯೇ ಈ ಪ್ರದೇಶವನ್ನು ಕೂಡಲಸಂಗಮ ಅಭಿವೃದ್ಧಿ ಮಂಡಳಿಯ ರೀತಿಯಲ್ಲಿ ಮಂಡಳಿಯನ್ನು ರಚನೆ ಮಾಡಿ ಕಲ್ಯಾಣ ಕ್ಷೇತ್ರವನ್ನು ಅಭಿವೃದ್ಧಿಪಡಿಸಲಾಗಿದೆ. ಬಸವಣ್ಣನ ಆದರ್ಶಗಳಿಂದ ಮಾನವ ಕಲ್ಯಾಣಕ್ಕಾಗಿ ದುಡಿದ ಫಲವಾಗಿ ಕಲ್ಯಾಣವನ್ನು ಬಸವಕಲ್ಯಾಣವೆಂದು ಕರೆಯುತ್ತಾ ಈಗ ಅದೇ ಹೆಸರಿನಿಂದ ಹೆಸರುವಾಸಿಯಾಗಿದೆ.

ಬಸವಕಲ್ಯಾಣ ಅಭಿವೃದ್ಧಿ ಮಂಡಳಿ

ಕೂಡಲಸಂಗಮ ಅಭಿವೃದ್ಧಿ ಮಂಡಳಿಯನ್ನು ೧೯೯೦ರಲ್ಲಿ ರಚನೆಮಾಡಿದ ರೀತಿಯಲ್ಲಿ ಬಸವಕಲ್ಯಾಣದ ಅಭಿವೃದ್ಧಿಯನ್ನು ೨೦೦೫ರಲ್ಲಿ ಪ್ರಾರಂಭಿಸಲಾಯಿತು. ಈ ಮಂಡಳಿಯ ಸಲಹಾ ಸಮಿತಿಯ ಸದಸ್ಯರಾಗಿ ಪಾಟೀಲ ಪುಟ್ಟಪ್ಪ, ಎಂ.ಎಂ. ಕಲಬುರ್ಗಿ, ಎ. ಸುಂದರ, ಚಂದ್ರಶೇಖರ, ಷ. ಶೆಟ್ಟರ, ಎಸ್.ಬಿ. ಮುದ್ದಪ್ಪ, ಬೆಲ್ದಾಳ ಶರಣರು, ಬಾಲ್ಕಿ ಶ್ರೀಗಳು ಪ್ರಮುಖರಾಗಿದ್ದರು. ಇವರೆಲ್ಲರ ಮಾರ್ಗದರ್ಶನದಲ್ಲಿ ಬಸವಕಲ್ಯಾಣದ ಸರ್ವತೋಮುಖ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಲಾಯಿತು. ಇದರ ಸರ್ವ ಜವಾಬ್ದಾರಿಯು ಕೂಡಲಸಂಗಮವನ್ನು ಅಭಿವೃದ್ಧಿ ಮಾಡಿದ್ದ ಎಸ್.ಎಮ್. ಜಾಮ್ದಾರ ಅವರೆ ವಹಿಸಿಕೊಂಡಿದ್ದರು.

ಬಸವಕಲ್ಯಾಣವು ಸೊಲ್ಲಾಪುರ ಮತ್ತು ಹೈದ್ರಾಬಾದ್ ರಾಷ್ಟ್ರೀಯ ಹೆದ್ದಾರಿ ೯ಕ್ಕೆ ಹತ್ತಿಕೊಂಡಂತೆ ಐದು ಕಿ.ಮೀ. ದೂರದಲ್ಲಿ ಇದೆ. ಈ ಹೆದ್ದಾರಿಯಿಂದ ಬಸವಕಲ್ಯಾಣಕ್ಕೆ ಮೊದಲಿಗೆ ಚಿಕ್ಕ ರಸ್ತೆ ಇದ್ದಿತ್ತು. ಪ್ರಾಧಿಕಾರ ರಚನೆಯಾದ ನಂತರದಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಮಹಾದ್ವಾರವನ್ನು ನಿರ್ಮಿಸಿ ಪ್ರಾಸಿಗರನ್ನು ಕೈಮಾಡಿ ಕರೆಯುವಂತೆ ನೂರು ಅಡಿ ಅಗಲ ಮತ್ತು ನೂರು ಅಡಿ ಎತ್ತರದ ಆಕರ್ಷಕ ಮಹಾದ್ವಾರ ನಿರ್ಮಿಸಿದ್ದಾರೆ. ರಸ್ತೆಯನ್ನು ದ್ವಿ ಪಥದಲ್ಲಿ ನಿರ್ಮಿಸಿ ರಸ್ತೆ ಬದಿಗೆ ಮರಗಳನ್ನು ಮತ್ತು ಮಧ್ಯದಲ್ಲಿ ಹೂದೋಟವನ್ನು ನಿರ್ಮಿಸಿದ್ದಾರೆ. ಪ್ರಾಧಿಕಾರ ರಚನೆಗೂ ಮುಂಚೆ ಅಲ್ಲಿಯ ಭೂಮಿಯನ್ನು ಇತರ ಸರಕಾರಿ ಕಚೇರಿಗಳ ನಿರ್ಮಾಣಕ್ಕೆ ಮತ್ತು ಖಾಸಗಿಯವರು ಒತ್ತುವರಿ ಮಾಡುವ ಮೂಲಕ ಒಳಪಡಿಸಿಕೊಂಡಿದ್ದರು. ಪ್ರಾಧಿಕಾರವು ಈ ಎಲ್ಲ ಪ್ರದೇಶವನ್ನು ಪಡೆದುಕೊಂಡು ಬಸವಕಲ್ಯಾಣ ಅಭಿವೃದ್ಧಿ ಮಂಡಳಿಯ ಕಚೇರಿ ಕಟ್ಟಡ ಮಂಡಳಿಯ ಸಭಾಭವನ ಮತ್ತು ಅತಿಥಿಗೃಹದ ಜೊತೆಗೆ ಸಿಬ್ಬಂದಿಯ ವಸತಿ ಗೃಹಗಳನ್ನು ಮತ್ತು ಸುಂದರವಾದ ಉದ್ಯಾನವನ್ನು ನಿರ್ಮಿಸಿದ್ದಾರೆ.

ಬಂದವರ ಓಣಿ ಮತ್ತು ಗೊಲ್ಲಾಳೇಶ್ವರ ಗವಿ ಪ್ರದೇಶಗಳನ್ನು ಮಂಡಳಿಯ ವಶಕ್ಕೆ ತೆಗೆದುಕೊಂಡು ಬಸವಕಲ್ಯಾಣ ಸಂಪರ್ಕ ರಸ್ತೆಯಿಂದ ಅರ್ಧ ಕಿ.ಮೀ. ಉದ್ದದ ಸಣ್ಣ ಸಂಪರ್ಕ ರಸ್ತೆಯನ್ನು ಅದಕ್ಕೆ ಹೆದ್ದಾರಿ ಪಕ್ಕದಲ್ಲಿ ಒಂದು ಸುಂದರವಾದ ಪ್ರವೇಶ ದ್ವಾರವನ್ನು ನಿರ್ಮಿಸಿದ್ದಾರೆ. ಬಲಭಾಗದಲ್ಲಿ ಜೀರ್ಣಾವಸ್ಥೆಯಲ್ಲಿ ಇದ್ದಂಥ ಗೊಲ್ಲಾಳೇಶ್ವರ ಗವಿಯನ್ನು ರಕ್ಷಿಸಿ ಸುಂದರಗೊಳಿಸಿ ಅದರ ಎದುರಿಗೆ ಒಂದು ಕಲ್ಲಿನ ಮಂಟಪವನ್ನು ನಿರ್ಮಿಸಿದ್ದಾರೆ. ಅದೇ ಮಾರ್ಗದಲ್ಲಿ ಮುಂದುವರಿದು ಕೇವಲ ಮೂರು ಎಕರೆ ವಿಸ್ತೀರ್ಣ ಹೊಂದಿದ್ದು ಬಂದವರ ಓಣಿಯನ್ನು ಇಪ್ಪತ್ತೈದು ಎಕರೆಗೆ ವಿಸ್ತರಿಸಿ ಅದರಲ್ಲಿ ಅಂದವಾದ ಹೂದೋಟವನ್ನು ಮತ್ತು ಸುಮಾರು ಇಪ್ಪತ್ತು ಎಕರೆಯಲ್ಲಿ ವಿವಿಧ ಜಾತಿಯ ಸುಮಾರು ಹತ್ತು ಸಾವಿರ ಮರಗಳನ್ನು ನೆಟ್ಟು ಬೆಳೆಸಿದ್ದಾರೆ. ಇದೇ ಉದ್ಯಾನವನದ ಕಡಿದಾದ ಕೊಳ್ಳದ ಮೂರು ಗುಹೆಗಳಲ್ಲಿ ಉದ್ಭವವಾಗುವ ಝುರಿಯನ್ನು ಅಗಲವಾಗಿ ಮತ್ತು ಆಳವಾಗಿಸುವ ಮೂಲಕ ನೀರನ್ನು ನಿಲ್ಲಿಸಿ ಸರೋವರ ರೂಪದಲ್ಲಿ ನಿರ್ಮಿಸಿದ್ದಾರೆ. ಅದರ ಎರಡು ಕಡೆಗಳಲ್ಲಿ ಉದ್ಯಾನವನಗಳನ್ನು ಎತ್ತರದ ಜಾಗಕ್ಕೆ ಹೋಗಲು ಒಂದು ಅಂದವಾದ ಸೇತುವೆಯನ್ನು ಕಟ್ಟಲಾಗಿದೆ. ಝುರಿಯ ಉಗಮ ಸ್ಥಾನದ ಮೂರು ಗುಹೆಗಳಲ್ಲಿ ಒಂದೊಂದು ಶಿವಲಿಂಗವಿದ್ದು, ಬಹುಜನರು ನಿತ್ಯ ಅಲ್ಲಿ ಪೂಜೆ ಸಲ್ಲಿಸುತ್ತಾರೆ. ಬಲಗಡೆ ಕಣಿವೆಯಲ್ಲಿ ಒಂದು ಗವಿ ಇದೆ. ಅದು ಅಕ್ಕಮಹಾದೇವಿಯ ಗವಿಯೆಂದು ಪ್ರಸಿದ್ಧವಾಗಿದೆ. ಈ ಗವಿಯನ್ನು ಕೂಡ ರಕ್ಷಿಸಿದ್ದಾರೆ.

ಬಂದವರ ಓಣಿಯಿಂದ ಒಂದು ಕಿ.ಮೀ. ಅಂತರದಲ್ಲಿ ಅಂಬಿಗರ ಚೌಡಯ್ಯನ ಗವಿ ಮತ್ತು ಎರಡು ಕಿ.ಮೀ. ದೂರದಲ್ಲಿರುವ ನುಲಿಯ ಚಂದಯ್ಯನ ಗವಿ ಸುತ್ತಮುತ್ತಲಿನ ಪ್ರದೇಶ ಅತಿಕ್ರಮಣದಿಂದ ಚಿಕ್ಕದಾಗಿದ್ದಿತು. ಅತಿಕ್ರಮಣಗಳನ್ನು ತೆರವುಗೊಳಿಸಿ ಅಂಬಿಗರ ಚೌಡಯ್ಯನ ಗವಿಗೆ ನಾಲ್ಕು ಎಕರೆ ಜಮೀನನ್ನು ನುಲಿಯ ಚಂದಯ್ಯನ ಗವಿಗೆ ಐದು ಎಕರೆ ಜಮೀನನ್ನು ಒದಗಿಸಿ ಆವರಣ ಗೋಡೆಯನ್ನು ನಿರ್ಮಿಸಿ ರಕ್ಷಿಸಲಾಗಿದೆ. ಈ ಎರಡು ಗವಿಗಳ ಆವರಣಗಳಲ್ಲಿ ಚಾಲುಕ್ಯ ಶೈಲಿಯ ಅಗ್ನಿ ಶಿಲೆಯ ಭದ್ರವಾದ ಮಂಟಪಗಳನ್ನು ನಿರ್ಮಿಸಿದ್ದಾರೆ.

ಜನಪದ ಪದ್ಯದಲ್ಲಿ ಹಿಂದೆ ಹೇಳಿದ ಹಾಗೆ ತ್ರಿಪುರಾಂತ ಕೆರೆಯು ಬಸವಣ್ಣನವರ ಕಾಲದಲ್ಲಿ ನಿರ್ಮಾಣವಾಗಿರುವಂಥದ್ದು. ಆ ಪ್ರಸಿದ್ಧವಾದ ಕೆರೆಯನ್ನು ಅಭಿವೃದ್ಧಿ ಮಂಡಳಿಯ ಸರೋವರ ಅಭಿವೃದ್ಧಿ ಮಂಡಳಿಯ ಸಹಯೋಗದಲ್ಲಿ ಹೂಳು ತೆಗೆಯುವ ಮೂಲಕ ನವೀಕರಣ ಮಾಡಿದ್ದಾರೆ. ಈ ಕೆರೆಯ ಬಲಭಾಗದಲ್ಲಿ ಸುಮಾರು ಒಂದೂವರೆ ಕಿ.ಮೀ. ಉದ್ದದ ಏರಿಯ ಹಿಂಭಾಗದಲ್ಲಿ ಕಡಿದಾದ ಪ್ರದೇಶದ ಅಂಚಿನಲ್ಲಿ ಅಲ್ಲಲ್ಲಿ ಚದುರಿ ಹೋದ ಇತರ ಶರಣರ ಗವಿಗಳಿದ್ದವು. ಅವುಗಳಲ್ಲಿ ತ್ರಿಪುರಾಂತಕೇಶ್ವರ ಗುಡಿ ಜೀರ್ಣಗೊಂಡು ಅಕ್ಕ ನಾಗಮ್ಮನ ಗವಿ ಜೀರ್ಣಾವಸ್ಥೆಯಲ್ಲಿದ್ದ ಅರಿವಿನ ಮನೆ, ಹರಳಯ್ಯನ ಗವಿ, ಪ್ರಭುದೇವರ ಗದ್ದುಗೆ, ಮಡಿವಾಳ ಮಾಚಿದೇವನ ಗುಡಿಗಳು ಪ್ರಮುಖವಾಗಿವೆ. ಈ ಎಲ್ಲ ಸ್ಥಳಗಳಿಗೆ ಸಂಪರ್ಕ ಕಲ್ಪಿಸಿ ಕಿರು ದಾರಿಯನ್ನು ಎರಡು ಕಿ.ಮೀ.

ಉದ್ದಕ್ಕೂ ಐವತ್ತು ಅಡಿ ಅಗಲಕ್ಕೆ ವಿಸ್ತರಿಸಿ ಇತರ ಶರಣರ ಗವಿಗಳಿಗೆ ಸಂಪರ್ಕವನ್ನು ಕಲ್ಪಿಸಿದ್ದಾರೆ.

ಕಲ್ಯಾಣ ನಗರವನ್ನು ರಕ್ಷಣೆ ಮಾಡಲು ಕಟ್ಟಿದ್ದ ಪ್ರಾಚೀನ ಕೋಟೆಯು ಹುಲಸೂರು ರಸ್ತೆಗೆ ಹೊಂದಿಕೊಂಡಿದೆ. ಈ ಕೋಟೆಯನ್ನು ರಕ್ಷಣೆ ಮಾಡುವ ಮೂಲಕ ಅಲ್ಲಿ ಮ್ಯೂಜಿಯಂನ್ನು ನಿರ್ಮಿಸಿದ್ದಾರೆ. ಪಟ್ಟಣದ ಜನನಿಬಿಡ ಪ್ರದೇಶದಲ್ಲಿ ಜೇಡರ ದಾಸಿಮಯ್ಯನ ಗುಡಿಯು ಹಾಳಾಗಿದ್ದಿತ್ತು. ಅದೇ ರೀತಿಯಾಗಿ ಉರಿಲಿಂಗ ಪೆದ್ದಿಗಳ ಗುಡಿಯು ಹಾಳಾಗಿದ್ದಿತು. ಈ ಚಿಕ್ಕ ಗುಡಿಗಳನ್ನು ಮರುನಿರ್ಮಾಣ ಮಾಡುವ ಮೂಲಕ ಅವನ್ನು ಚಾಲುಕ್ಯ ಶೈಲಿಯಲ್ಲಿ ಬೃಹತ್ ಆಕಾರದ ಗುಡಿಗಳಾಗಿ ಮಾರ್ಪಡಿಸಿದ್ದಾರೆ.

ಸ್ವಾತಂತ್ರ್ಯದ ನಂತರ ೧೯೫೦ರಲ್ಲಿ ಸೊಲ್ಲಾಪುರದ ಶ್ರೀ ಬಾಬಾಸಾಹೇಬ ವಾರದ ಅವರು ಬಸವಣ್ಣನ ಅಭಿಮಾನಿಯಾಗಿದ್ದರು. ಕಲ್ಯಾಣಕ್ಕೆ ಬಂದು ಅಲ್ಲಿಯ ಶ್ರೀಮಂತರನ್ನು, ಬಲಾಢ್ಯರನ್ನು ಸಂಘಟಿಸಿ ಪಂಚ ಕಮಿಟಿ ಎಂಬ ಸಂಸ್ಥೆಯನ್ನು ಹುಟ್ಟುಹಾಕಿದರು. ಆ ಸಂಸ್ಥೆಯ ಮೂಲಕ ಹಲವು ಶರಣರ ಸ್ಥಳಗಳನ್ನು ರಕ್ಷಿಸುವ ಮೂಲಕ ಅನೇಕ ಕೆಲಸಗಳನ್ನು ಕೈಗೊಂಡಿದ್ದರು. ಅದೇ ಪಂಚ ಕಮಿಟಿಯು ಈಗಲೂ ತುಂಬ ಸಕ್ರಿಯವಾಗಿದೆ. ಆ ಸಮಿತಿಯ ಸಹಾಯ ಮತ್ತು ಮಾರ್ಗದರ್ಶನವನ್ನು ಅಭಿವೃದ್ಧಿ ಮಂಡಳಿಯವರು ಪಡೆದುಕೊಂಡಿದ್ದಾರೆ. ಒಂದು ವೇಳೆ ಆ ಕೆಲಸ ಆಗಿರದಿದ್ದರೆ ಮಂಡಳಿಗೆ ತೊಂದರೆಯಾಗಿರುತ್ತಿತ್ತೇನೋ ಅನಿಸುತ್ತದೆ.

ಬಸವಕಲ್ಯಾಣದಲ್ಲಿ ಬಹುತೇಕ ಶರಣರ ಗುಡಿಗಳನ್ನು ಕಾಣಬಹುದಾಗಿದೆ. ಅಕ್ಕ ನಾಗಮ್ಮನ ಗುಡಿ, ಸಂಬೋಳಿ ನಾಗಿದೇವನ ಗುಡಿ, ಜೇಡರ ದಾಸಿಮಯ್ಯನ ಗುಡಿ, ಉರಿಲಿಂಗ ಪೆದ್ದಿಗಳ ಗುಡಿ, ಮಡಿವಾಳ ಮಾಚಿದೇವನ ಗುಡಿ ಹೀಗೆ ಹಲವಾರು ಶರಣರ ಗುಡಿಗಳು ಮರು ನಿರ್ಮಾಣಗೊಳ್ಳುವ ಮೂಲಕ ೧೨ನೆಯ ಶತಮಾನದ ವಾತಾವರಣವನ್ನು ನೆನಪಿಗೆ ತರುತ್ತವೆ.

ಬಸವಣ್ಣನವರು ಕಲ್ಯಾಣ ನಗರವನ್ನು ಕುರಿತಂತೆ ತಮ್ಮ ಹಲವಾರು ವಚನಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆ ವಚನಗಳನ್ನು ಹಲವರು ಹಲವು ಬಗೆಯಲ್ಲಿ ವಿವರಣೆಯನ್ನು ಮಾಡಿದ್ದಾರೆ. ಅದೇನೆ ಇರಲಿ, ಬಸವಣ್ಣನವರು ಕಲ್ಯಾಣವನ್ನು ಕಟ್ಟಿದ ರೀತಿ ಮತ್ತು ಕಲ್ಯಾಣದಲ್ಲಿ ಇದ್ದ ಸಂದರ್ಭ ಹಾಗೂ ಕಲ್ಯಾಣವನ್ನು ಬಿಟ್ಟ ಕಾರಣ ಇವುಗಳನ್ನು ವಚನಗಳಲ್ಲಿ ಹೇಳಿಕೊಂಡಿದ್ದಾರೆ.

> ಅಯ್ಯಾ ಭಕ್ತಿಗೆ ಬೀಡಾದುದು ಕಲ್ಯಾಣ ೩೬ ವರ್ಷ
> ಅಯ್ಯಾ ಅನುಭವಕ್ಕೆ ಶಿವಸದನವಾದುದು ೨೭ ವರುಷ
> ಅಯ್ಯಾ ಹಿಂದಿನಂತನುಭಾವ ಹಿಂದಿನಂತೆ ಭಕ್ತಿಯಿಲ್ಲ
> ಮೂರು ಮಾಸದೊಳಗಾಗಿ ಅಲ್ಲಿ ಆಡಲುಭಯವಿಲ್ಲ
> ಕೇಳಯ್ಯಾ ಕೂಡಲಸಂಗಮದೇವ[೧೮]

ಈ ಮೇಲಿನ ವಚನದಿಂದ ತಿಳಿಯಬಹುದಾದ ವಿಚಾರಗಳು ಹಲವಾರು ಇವೆ. ಬಸವಣ್ಣನವರು ಕೂಡಲಸಂಗಮದಲ್ಲಿ ವಿದ್ಯಾಭ್ಯಾಸದ ಸಾಧನಾ ಜೀವನವನ್ನು ಸುಮಾರು ಹನ್ನೆರಡು ವರ್ಷಗಳು ಕಳೆದಿದ್ದಾರೆ. ಹೀಗಾಗಿ ಕಲ್ಯಾಣದಲ್ಲಿ ಮೂವತ್ತಾರು ವರ್ಷಗಳು ಕಳೆದರೆ ಅದರಲ್ಲಿ ಇಪ್ಪತ್ತೇಳು ವರ್ಷಗಳನ್ನು ಅನುಭವ ಮಂಟಪದಲ್ಲಿ ಕಳೆದಿದ್ದಾರೆ. ಅವರು ಕಲ್ಯಾಣಕ್ಕೆ ಬಂದನಂತರ ಒಂಬತ್ತು ವರ್ಷಗಳ ತರುವಾಯ ಅನುಭವ ಮಂಟಪವನ್ನು ನಿರ್ಮಾಣ ಮಾಡಿದ್ದಾರೆ. ಇಂತಹ ಕಲ್ಯಾಣ ಅಂತ್ಯ ಕಾಲದಲ್ಲಿ ಕೇವಲ ಮೂರು ತಿಂಗಳಲ್ಲಿ ಅಲ್ಲಿ ನೆಲೆ ಇಲ್ಲದಂತಾಯಿತ್ತು ಎಂದು ಹೇಳುವುದನ್ನು ನೋಡಿದಾಗ ಹಲವು ವರ್ಷಗಳು ಕಟ್ಟಿ ಬೆಳೆಸಿದ ಶರಣರ ಕಲ್ಯಾಣ ಬಸವಣ್ಣನವರ ಕಣ್ಣ ಮುಂದೆಯೇ ನಾಶವಾದಂತೆ ಕಾಣುತ್ತದೆ.

ಹೀಗೆ ಕಲ್ಯಾಣ ನಾಶವಾಗುವುದಕ್ಕೆ ಕಾರಣವೇನು ಎನ್ನುವುದಕ್ಕೆ ಸಂಬಂಧಿಸಿದ ಅವರ ಒಂದು ವಚನ ಈ ತೆರನಾಗಿದೆ.

ಅರಸು ವಿಚಾರ ಸಿರಿಯು ಶೃಂಗಾರ ಸ್ಥಿರವಲ್ಲ ಮಾನವ
ಕೆಟ್ಟಿತ್ತು ಕಲ್ಯಾಣ ಹಾಳಾಯಿತ್ತು ನೋಡಾ
ಒಬ್ಬ ಜಂಗಮದ ಅಭಿಮಾನದಿಂದ
ಚಾಳುಕ್ಯರಾಯನ ಆಳ್ವಿಕೆ ತೆಗೆಯಿತ್ತು
ಸಂದಿತ್ತು ಕೂಡಲಸಂಗಮದೇವ ನಿಮ್ಮ ಕವಳಿಗೆ[೧೯]

ಅರಸನಾದವನು ಎಷ್ಟೇ ದೊಡ್ಡ ಸಾಮ್ರಾಜ್ಯವನ್ನು ನಿರ್ಮಿಸಲಿ ಮತ್ತು ಸಂಪತ್ತನ್ನು ಗಳಿಸಲಿ ಅವು ಎಂದಿಗೂ ಸ್ಥಿರವಾದುವುಗಳಲ್ಲ. ಅದೇ ರೀತಿ ಅಧಿಕಾರವು ಸಹ ಸ್ಥಿರವಾದದ್ದಲ್ಲ. ಸಂಪತ್ತು ಶಾಶ್ವತವಲ್ಲ ಅದು ಇಂದಿಲ್ಲ ನಾಳೆ ಹೋಗುತ್ತದೆ. ಈ ವಿಚಾರಗಳು ಸತ್ಯವೆನ್ನುವುದಕ್ಕಾಗಿಯೇ ಅಲ್ಲಮಪ್ರಭುವಿನಂಥವರು ತಮ್ಮ ವಚನದಲ್ಲಿ "ನಿನ್ನೊಡವೆ ಎಂಬುವುದು ಜ್ಞಾನರತ್ನ ನೋಡಾ ಅದನ್ನು ನೀನು ಅಲಂಕರಿಸಿದೆಯಾದೊಡೆ ನಿನಗಿಂತ ಸಿರಿವಂತರಿಲ್ಲ ಕಾಣ" ಎಂದು ಹೇಳಿರುವುದನ್ನು ನೋಡಿದಾಗ ಅರಸ ಏನೇ ವಿಚಾರಗಳನ್ನು ಮಾಡಿದರೂ ಆ ನಿರ್ಧಾರಗಳು ಕೇವಲ ಕ್ಷಣಿಕವಾದವುಗಳು. ಹೀಗೆ ಬಿಜ್ಜಳನ ನಿರ್ಧಾರಗಳು ಕಲ್ಯಾಣವನ್ನು ನಾಶ ಮಾಡಿದವೆಂಬ ಭಾವ ಇಲ್ಲಿ ಮೂಡದಿರದು.

ಬಿಜ್ಜಳ ಮತ್ತು ಬಸವಣ್ಣನ ಸಂಬಂಧ ಕಳಚಿದ ನಂತರ ಬಸವಣ್ಣ ಕಲ್ಯಾಣದಲ್ಲಿ ಇರಲು ಮನಸ್ಸು ಮಾಡುವುದಿಲ್ಲ. ಅಲ್ಲಿಂದ ನಿರ್ಗಮಿಸುವುದಕ್ಕೆ ನಿರ್ಧಾರ ಮಾಡುತ್ತಾನೆ.

ಮನ್ನಣೆ ತಪ್ಪಿದ ಬಳಿಕ ಅಲ್ಲಿರಬಹುದೆ?
ಸಲುಗೆ ತಪ್ಪಿದ ಬಳಿಕ ಸಲುವುದೇ ಮಾತು?
ತಿವಿದು ತಪ್ಪಿದಡೆ ಸಾವೊಂದು ತಪ್ಪದು
ಬರಿದೆ ಚಿಂತಿಸಿ ಬಳಲಿ ಕೆಡಬೇಡ ಮನವೆ
ಅಹುದಾಗದೆಂಬ ಸಂದೇಹವುಳ್ಳೊಡೆ ಅಹುದೆ?
ಕೂಡಲಸಂಗಮದೇವಾ ಕೊಟ್ಟಲ್ಲದಿಲ್ಲ[೨೦]

ಒಬ್ಬರ ಹತ್ತಿರವಿರುವಂತಹ ಸಂದರ್ಭದಲ್ಲಿ ಅವರೊಂದಿಗೆ ವಿಶ್ವಾಸ ಮತ್ತು ನಂಬಿಕೆಯಿಂದ ಇರುವುದು ಲೋಕರೂಢಿಯಾಗಿದೆ. ಆದರೆ ಆ ಸಂದರ್ಭದಲ್ಲಿ ವಿಶ್ವಾಸವಿಲ್ಲದಿರಲು ಅಲ್ಲಿ ಇರಲು ಸಾಧ್ಯವಿಲ್ಲ ಮತ್ತು ಇರಲೂಬಾರದು. ಆ ನಿಯಮಕ್ಕೆ ಒಳಪಟ್ಟು ಬಸವಣ್ಣನವರು ಚಿಂತೆಯನ್ನು ಬಿಟ್ಟು ಬಳಲದೆ ಕೆಡಬಾರದು ಎಂಬ ಮಾತುಗಳನ್ನು ನುಡಿಯುತ್ತ ಕೂಡಲಸಂಗದೇವಾ ನಮ್ಮನ್ನು ಯಾವಾಗಲೂ ಕಾಯುತ್ತಾನೆ ಎಂದು ಹೇಳುತ್ತಾ ಕೂಡಲಸಂಗಮದ ಕಡೆಗೆ ಪ್ರಯಾಣವನ್ನು ಬೆಳೆಸುತ್ತಾರೆ.

೬.೩. ಬಸವನಬಾಗೇವಾಡಿ

ಬಸವನಬಾಗೇವಾಡಿಯು ಇಂದಿನ ವಿಜಯಪುರ ಜಿಲ್ಲೆಯಲ್ಲಿ ಪ್ರಮುಖವಾದ ತಾಲೂಕು ಕೇಂದ್ರವಾಗಿದೆ. ೧೨ನೆಯ ಶತಮಾನದಲ್ಲಿ ಬಸವಣ್ಣನವರು ಹುಟ್ಟಿದ ಗ್ರಾಮ ಇದಾಗಿದ್ದು, ಅವರಿಂದ ಇಂದು ಬಸವನಬಾಗೇವಾಡಿ ಎಂದು ಗುರುತಿಸಲ್ಪಡುತ್ತದೆ. ಪ್ರಾಚೀನ ಕಾವ್ಯಗಳು ಹೇಳುವ ಪ್ರಕಾರ ಬಾಗೇವಾಡಿ ಮತ್ತು ಕೂಡಲಸಂಗಮಕ್ಕೂ ಅವಿನಾಭಾವ ಸಂಬಂಧ ಇರುವುದು ಗೊತ್ತಾಗುತ್ತದೆ. ಬಸವರಾಜ ದೇವರ ರಗಳೆಯಲ್ಲಿ ಹರಿಹರ ಕವಿಯು ಬಾಗೇವಾಡಿಯಲ್ಲಿ ಬಸವನ ಜನ್ಮ ಆಗುವುದಕ್ಕೆ ಕಾರಣ ಮತ್ತು ಅವನು ಜಗತ್ತಿಗೆ ಅವತರಿಸಿ ಬಂದ ವಿಚಾರಧಾರೆಗಳನ್ನು ಹೇಳುವ ರೀತಿ ವಿಶೇಷತೆಯಿಂದ ಕೂಡಿದ್ದಾಗಿದೆ.

ಶಿವನ ಆಜ್ಞೆಯನ್ನು ಶಿರಸಾವಹಿಸಿ ನೇರವೇರಿಸುವುದಕ್ಕಾಗಿ ವೃಷಭಮುಖನು ಬಾಗೇವಾಡಿಯ ಅಗ್ರಹಾರದಲ್ಲಿ ಮಾದಿರಾಜನೆಂಬ ಶಿವಬ್ರಾಹ್ಮಣನ ಪತ್ನಿಯಾದ ಮಾದಲಾಂಬೆಯ ಗರ್ಭದಲ್ಲಿ 'ಚಿಪ್ಪಿನೊಳ್ ಮುತ್ತು ಕಾಸಾರದೊಳ್ ಪಂಕಜಂ ಪುಟ್ಟುವಂತೆ ಜನಸಿದನು'[೨೧] ಮಾತಾ–ಪಿತೃಗಳು ಈ ಕಾರಣಿಕ ಶಿಶುವಿಗೆ ಜಾತ–ಕರ್ಮಗಳನ್ನು ಮಾಡಿ ಬಸವನೆಂದು ಹೆಸರಿಟ್ಟರು. ತನ್ನ ಬಾಲಲೀಲೆಯಿಂದ ತಾಯಿ–ತಂದೆಗಳನ್ನು ಸಂತೋಷಪಡಿಸುತ್ತ ಬಸವಣ್ಣನು ಶೈಶವವನ್ನು ಬಾಗೇವಾಡಿಯಲ್ಲಿ ಕಳೆದನು. ಹೀಗೆ ಹಲವಾರು ಕಾವ್ಯಗಳು ಕಥೆಯನ್ನು ಹೇಳುತ್ತವೆ. ಬಾಗೇವಾಡಿಯಲ್ಲಿ ಬಸವಣ್ಣ ಬಾಲ್ಯವನ್ನು ಕಳೆದ ಎಂಬ ಅಂಶವನ್ನು ಮತ್ತು ಉಪನಯನದ ಸಂದರ್ಭದಲ್ಲಿ ಆಚರಣೆಯನ್ನು ನಿರಾಕರಿಸಿ ಕೂಡಲಸಂಗಮಕ್ಕೆ ಬಂದ ವಿಚಾರಗಳು ಗೋಚರವಾಗುತ್ತವೆ.

ಬಂದು ಭೂಲೋಕದೊಳು ಕೀತಿಯಂ ಪಡೆದಿರ್ಪ
ಸಂದಣಿಪ ವಿಪ್ರಸಂತಾನದಿಂದಿಡಿದಿರ್ಪ
ಶಿವಶಾಸ್ತ್ರಘೋಷ ಸಂಗೀತದಿಂದಿಡಿದಿರ್ಪ
ಅಗ್ರಹಾರಂ ಬಾಗೇವಾಡಿಯೊಳಗೆಸೆದಿರ್ಪ
ಅಗ್ರೇಶ್ವರಂ ಕಮ್ಮೆಕುಲದಿಂದೆ ಮೆಱೆದಿರ್ಪ
ವಿಪ್ರನಿರ್ಪಂ ಮಾದಿರಾಜನಾತನಸತಿಯು
ಅಪ್ರತಿಮ ಮಾದಾಂಬೆಯೆಂದೆಂಬ ಗುಣವತಿಯು[೨೨]

ಎಂದು ಹೇಳಿರುವುದನ್ನು ನೋಡಿದರೆ ಬಸವಣ್ಣ ಕಮ್ಮೆಕುಲದ ಬ್ರಾಹ್ಮಣ ವಂಶದಲ್ಲಿ ಜನಿಸಿದ ಅವನ ತಾಯಿಯು ಅಪ್ರತಿಮ ಗುಣವಂತೆಯಾಗಿದ್ದಳು ಎಂದು ಹೇಳುತ್ತಾನೆ. ತಂದೆ ಮತ್ತು ತಾಯಿಯ ಗುಣಗಳೇ ಬಸವಣ್ಣನಿಗೆ ಬಳುವಳಿಯಾಗಿ ಬಂದವೆಂದು ಹೇಳಬಹುದು.

ಬಸವಣ್ಣ ಬಾಗೇವಾಡಿಯಲ್ಲಿ ಬೆಳೆದು ದೊಡ್ಡವನಾಗುತ್ತ ಬಂದಂತೆ ಲೋಕಜ್ಞಾನವು ಬೆಳೆಯತೊಡಗಿತು. ನಿಜವಾದ ಕರ್ಮ ಯಾವುದು ಎಂದು ತಿಳುವಳಿಕೆ ಬಂದ ಮೇಲೆ ಲೋಕದ ಜನರ ಗೊಡವೆಗೆ ಹೋಗದೆ ಶಿವಭಕ್ತಿಯೇ ಕರ್ಮವೆಂದು ಬಗೆದು ಬಾಗೇವಾಡಿಯನ್ನು ಬಿಡುವ ಸಂದರ್ಭ ಬಂದುದನ್ನು ಈ ರೀತಿಯಾಗಿ ವರ್ಣಿಸಿದ್ದಾರೆ.

“ಜನನದ ಬಳಿವಿಡಿದೆಂತಕ್ಕೆ ಬಂದ ಜವ್ವನಂ ಶಿವಪೂಜೆಯಲ್ಲಿ ಸವೆಯವೇಳ್ಕುಂ ಇಂತಲ್ಲಲ್ಲಿ ಶಿವಭಕ್ತಿಯುಂ ಎಂದುವೊಂದಾಗಿರದು–ಎಂದೊಲ್ಲದೆ ಪರಮವೈರಾಗ್ಯಯುಕ್ತಂ ಶಿವಲಿಂಗಾರ್ಚನಾಯುಕ್ತ ಚಿತ್ತಂ ಕರ್ಮಲತೆಯಂತಿರ್ದ ಜನ್ನಿವಾರಮಂ ಕಳೆದು ಬಿಸುಟು ಹೋತಿನಗಂಟಲಂ ಬಿಗಿವಂತಿರ್ದ ಮೌಂಜಿಯಂ ಪಱಿದು ಬಿಸುಟು ನವ್ಯ ದುಕೂಲಮಂ ತೆಗೆದುಟ್ಟು ದಿವ್ಯ ವಸ್ತ್ರವಂ ಪೊದೆದು ಮನೆನೆಳಲಂ ನೆನೆಯದೆ ಅರ್ಥಮಂ ಲೆಕ್ಕಿಸದೇ ವೃತ್ತಿಯಂ ವಿಚಾರಿಸದೇ ಬಂಧುಗಳಂ ಬಗೆಯದೆ ಪುರಜನಮಂ ಪರಿಪಿಸದೆ ಹರಭಕ್ತ ಯೊಳಾತುರದಿಂ ಬಾಗೇವಾಡಿಯ ಪೊಱಮಟ್ಟ ಪೂರ್ವದಿಶಾಮುಖನಾಗಿ ಕಿಱಿದಂತರಂ ನಡೆದುಬಂದು”[೨೩]

ಜನನದ ನಂತರ ಬಂದ ಯೌವನದಲ್ಲಿ ಶಿವನ ಪೂಜೆಯನ್ನು ಮಾಡುವುದರಲ್ಲಿ ಕಾಲಕಳೆಯಬೇಕೆಂಬ ಆಸೆಯಿಂದ ಶಿವಭಕ್ತಿಯ ಕರ್ಮದಿಂದ ಪರಮವೈರಾಗ್ಯಯುಕ್ತಂ ಶಿವಲಿಂಗಾರ್ಚನೆಯುಕ್ತನಾಗಿ, ಕರ್ಮಲತೆಯಂತೆ ಇದ್ದ ಜನಿವಾರವನ್ನು ಬಿಸಾಕಿ ಇದು ಹೋತಿನ ಗಂಟಲನ್ನು ಬಿಗಿದಂತೆ ಎಂದು ತಿಳಿದುಕೊಳ್ಳುತ್ತಾನೆ. ನಂತರ ಹೊಸದಾದ ಪಂಜೆ, ವಸ್ತ್ರವನ್ನು ಧರಿಸಿ ಮನೆಯನ್ನು ಲೆಕ್ಕಿಸದೇ ಬಂಧುಗಳನ್ನು ಬಗೆಯದೆ, ಊರಿನ ಜನರನ್ನು ಲಕ್ಷಿಸಿದೇ ಹರಭಕ್ತಿಯಲ್ಲಿ ತಲ್ಲೀನನಾಗಿ ಬಾಗೇವಾಡಿಯನ್ನು ಬಿಟ್ಟು ಕೂಡಲಸಂಗಮಕ್ಕೆ ಬರುತ್ತಾನೆ ಬಸವಣ್ಣ. ಯೌವನಾವಸ್ಥೆಗೆ ಬರುವವರೆಗೂ ಬಾಗೇವಾಡಿ ಬಸವಣ್ಣನ ಬಾಲ್ಯದ ಕೇಂದ್ರವಾಗಿ ಮತ್ತು ಅವತಾರಿ ಪುರುಷನ ಜನ್ಮ ಗ್ರಾಮವಾಗಿ ಐತಿಹಾಸಿಕತೆಯನ್ನು ಹೊಂದಿದ ಗ್ರಾಮವಾಗಿ ಗೋಚರಿಸುತ್ತದೆ.

ಇವೇ ಅಂಶಗಳನ್ನು ಕೇಂದ್ರವಾಗಿಟ್ಟುಕೊಂಡು ಹರಿಹರನ ನಂತರ ಬಂದ ಎಲ್ಲಾ ಕವಿಗಳು ಕಾವ್ಯ ರಚನೆಯನ್ನು ಮಾಡಿದ್ದಾರೆ. ಬಸವಪುರಾಣ, ಸಿಂಗಿರಾಜಪುರಾಣ, ಪ್ರಭುಲಿಂಗಲೀಲೆ, ಶಿವತತ್ವ ಚಿಂತಾಮಣಿ ಹೀಗೆ ಬಂದಂತಹ ಎಲ್ಲ ಕೃತಿಗಳಲ್ಲಿಯೂ ಹರಿಹರನ ವಿಚಾರಗಳನ್ನೇ ಅಲ್ಪಸ್ವಲ್ಪ ಬದಲಾವಣೆ ಮಾಡುವುದರ ಮೂಲಕ ಮುಂದುವರಿಸಿಕೊಂಡು ಬಂದಿದ್ದಾರೆ. ಬಾಗೇವಾಡಿಯಿಂದ ತಿರಸ್ಕೃತಗೊಂಡು ಸಂಗಮಕ್ಕೆ ಹೋದ ಬಸವಣ್ಣ ಮತ್ತೊಮ್ಮೆ ಆ ಊರಿನ ಕಡೆ ಹೋದ ಬಗ್ಗೆ ಇತಿಹಾಸ ಹಾಗೂ ಪುರಾಣಗಳಲ್ಲಿ ಹೆಚ್ಚಿನ ಮಾಹಿತಿ ಇಲ್ಲ.

ಬಾಗೇವಾಡಿಯ ಮಧ್ಯದಲ್ಲಿ ಒಂದು ಪ್ರಾಚೀನ ದೇವಾಲಯವಿದೆ. ಸುಮಾರು ೧೯೫೦ರವರೆಗೆ ಬಸವಪೂರ್ವಯುಗದ ಈ ದೇವಾಲಯದ ಸುತ್ತ ರುದ್ರಭೂಮಿಯಿತ್ತು. ಆಗ ಜೀರ್ಣಗೊಂಡು ಬಿಳುತ್ತಿಲಿದ್ದ ಐತಿಹಾಸಿಕ ಮಹತ್ವದ ಈ ಮಂದಿರವನ್ನು ದುರಸ್ಥಿ ಮಾಡಲು ಕೂಡಸಂಗಮದ ಅಭಿವೃದ್ಧಿ ಮಂಡಳಿಯು ಬಹಳಷ್ಟು ಶ್ರಮಪಟ್ಟು ದಾನಿಗಳಿಂದ ಹಣವನ್ನು ಸಂಗ್ರಹ ಮಾಡಿ ಗುಡಿಯನ್ನು ಜೀರ್ಣೋದ್ಧಾರ ಮಾಡಿದ್ದಾರೆ. ಕೂಡಲಸಂಗಮದ ಕೆಲಸದ ಮಾದರಿಯಲ್ಲಿಯೇ ಜನರ ಅಭಿಪ್ರಾಯದಂತೆ ಹಲವಾರು ಯೋಜನೆಗಳನ್ನು ಹಾಕಿಕೊಂಡು ಅಭಿವೃದ್ಧಿ ಮಾಡಿದ್ದಾರೆ. ಪ್ರಮುಖವಾಗಿ ಬಸವ ಜನ್ಮಸ್ಥಳ ಸ್ಮಾರಕ, ಬಸವೇಶ್ವರ ದೇವಾಲಯ, ಅಂಗಡಿಗಳ ನಿರ್ಮಾಣ, ಕಲ್ಯಾಣ ಮಂಟಪ, ಶಿಕ್ಷಣ ಪ್ರಸಾರಕೇಂದ್ರ, ದಾಸೋಹಭವನ ಮತ್ತು ಯಾತ್ರಿನಿವಾಸ ಹೀಗೆ ಹಲವಾರು ಅಭಿವೃದ್ಧಿಕಾರ್ಯಗಳು ನಡೆದಿವೆ.

ಅಡಿ ಟಿಪ್ಪಣಿಗಳು

೧. ಜಯಶ್ರೀ ದಂಡೆ ಮತ್ತು ವೀರಣ್ಣ ದಂಡೆ, ಶರಣರ ಸ್ಮಾರಕಗಳು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ಪುಟ-೧೫೨

೨. ಅದೇ, ಪುಟ-೧೫೨

೩. ಅದೇ, ಪುಟ-೧೫೨

೪. ಬಿ. ಷೇಖ್ ಅಲಿ, ಕರ್ನಾಟಕ ಚರಿತ್ರೆ ಸಂಪುಟ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪುಟ-೯೪

೫. ಎಚ್. ದೇವಿರಪ್ಪ (ಸಂ), ಸಿಂಗಿರಾಜ ವಿರಚಿತ ಬಸರಾಜ ಚಾರಿತ್ರ್ಯ, ಪುಟ-೫೬

೬. ಜಯಶ್ರೀ ದಂಡೆ ಮತ್ತು ವೀರಣ್ಣ ದಂಡೆ, ಶರಣರ ಸ್ಮಾರಕಗಳು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ಪುಟ-೫೬

೭. ಅದೇ, ಪುಟ-೫೬

೮. ಅದೇ, ಪುಟ-೫೬

೯. ಅದೇ, ಪುಟ-೫೬

೧೦. ಅದೇ, ಪುಟ-೧೧

೧೧. ಅದೇ, ಪುಟ-೨೩೩

೧೨. ಎಚ್. ದೇವಿರಪ್ಪ (ಸಂ), ಸಿಂಗಿರಾಜ ವಿರಚಿತ ಬಸರಾಜ ಚಾರಿತ್ರ್ಯ, ಪುಟ-೫೬

೧೩. ಓ.ಎಲ್. ನಾಗಭೂಷಣಸ್ವಾಮಿ (ಸಂ), ವಚನ ಸಾವಿರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪುಟ-೧೦೮

೧೪. ಅದೇ, ಪುಟ-೨೨೨

೧೫. ಅದೇ, ಪುಟ-೨೨೩

೧೬. ಅದೇ, ಪುಟ-೨೨೩

೧೭. ಕೇಶವನ್ ಪ್ರಸಾದ್ ಕೆ., ಮಲೇಮಾದೇಶ್ವರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಪುಟ,೩

೧೮. ಎಂ.ಎಂ. ಕಲಬುರ್ಗಿ, ಮಾರ್ಗ ಸಂಪುಟ-೧, ಸ್ವಪ್ನಬುಕ್ ಹೌಸ್, ಬೆಂಗಳೂರು, ಪುಟ-೨೦೫

೧೯. ವಿಜಯಕುಮಾರ ಮಹಾನುಭಾವಿಗಳು, ಬಸವಣ್ಣನವರ ಚರಿತ್ರೆ ಮತ್ತು ಶೋಧಗಳು, ಪುಟ-೨೮೯

೨೦. ಅದೇ, ಪುಟ-೨೪೦

೨೧. ಟಿ.ಎಸ್. ವೆಂಕಣ್ಣಯ್ಯ (ಸಂ), ಹರಿಹರ ಕವಿಯ ಬಸವರಾಜ ದೇವರ ರಗಳೆ, ಪುಟ-XVi

೨೨. ಅದೇ, ಪುಟ-೫

೨೩. ಅದೇ, ಪುಟ-೧೦

ಅಧ್ಯಾಯ : ೭
ಕೂಡಲಸಂಗಮ ಮತ್ತು ಬಸವಣ್ಣನ ಸಂಬಂಧ

ಅಧ್ಯಾಯ : ಏಳು
ಕೂಡಲಸಂಗಮ ಮತ್ತು ಬಸವಣ್ಣನ ಸಂಬಂಧ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಚನ ಸಾಹಿತ್ಯ ಬೆಳೆದಷ್ಟು ಹುಲುಸಾದ ಬೆಳೆಯನ್ನು ಬೇರೆ ಯಾವ ಸಾಹಿತ್ಯವು ಬೆಳೆದಿಲ್ಲ. ಜನಸಾಮಾನ್ಯರ ಹತ್ತಿರಹೋಗಿ ಅವರ ಸಂಕಷ್ಟದ, ಕಣ್ಣೀರ ಹನಿಯನ್ನು ಒರೆಸಿದ ಪ್ರಥಮ ಸಾಹಿತ್ಯ ಪ್ರಕಾರ ಇದು. ಬಸವಣ್ಣನಂತಹ ಭಕ್ತಿ ಕವಿ ಕನ್ನಡದಲ್ಲಿ ಸಿಗುವುದು ಅಪರೂಪ. ಬಸವಣ್ಣನವರ ಜನನ, ಬಾಲ್ಯ, ವೈವಾಹಿಕ ಜೀವನ ಸಾಹಿತ್ಯ ದೃಷ್ಟಿಯಿಂದ ಹಿಡಿದು ಲಿಂಗೈಕ್ಯವಾಗುವವರೆಗಿನ ವಿಚಾರಧಾರೆಗಳನ್ನು ಕಾವ್ಯ, ಪುರಾಣಗಳು ಸೃಷ್ಟಿಸುತ್ತವೆ.

ಬಸವ ಪುರಾಣದಲ್ಲಿ ಭೀಮಕವಿಯು ಕೈಲಾಸದಲ್ಲಿ ಶಿವನ ಸಭೆ ನಡೆಸಿದ ಸಂದರ್ಭದಲ್ಲಿ ನಾರದನ ಮಾತಿಗೆ ಓಗೊಟ್ಟು ಶಿವನು ಭೂಲೋಕದಲ್ಲಿ ಲಿಂಗ, ಜಂಗಮ, ಪ್ರಸಾದ ಸ್ಥಲದ ಮಹಿಮೆಯನ್ನು ಸಾರಲು ನಂದಿಗೆ ಆದೇಶ ನೀಡುತ್ತಾನೆ. ಅದರ ಪರಿಣಾಮವಾಗಿ ಬಾಗೇವಾಡಿಯ ಇಂಗಳೇಶ್ವರ ಎಂಬ ಅಗ್ರಹಾರದಲ್ಲಿ ಮಂಡಗೆ ಮಾದಿರಾಜ ಮತ್ತು ಮಾದಲಾಂಬಿಕೆಯರಿಗೆ ಮಕ್ಕಳಿಲ್ಲದೆ ನಂದ ವ್ರತವನ್ನು ಕೈಗೊಂಡರು. ಅವರ ಉದರದಿಂದ ಹುಟ್ಟಿದ ಮಗನೇ ಬಸವಣ್ಣ, ಎಂದು ಭೀಮ ಕವಿ ಹೇಳುತ್ತಾನೆ.[೧]

ಹರಿಹರ ತನ್ನ ಬಸವರಾಜ ದೇವರ ರಗಳೆಯಲ್ಲಿ ಬಸವಣ್ಣನವರು ಶಾಪವಿಮೋಚನೆಗಾಗಿ ಭೂಲೋಕದಲ್ಲಿ ಜನಿಸಿದರು. ಶಿವನ ಸಭೆಯಲ್ಲಿ ಶಶಿಧರನ ಶಿರಿಮುಡಿಗೆಂದು ಮಾಲೆಗಾರನೋರ್ವನು ಕಂಪುಳ್ಳ ಸಂಪಿಗೆಯ ಹೂಗಳನ್ನು ತಿರಿದು ತಂದು ಅರ್ಪಿಸುತ್ತಾನೆ. ಆ ಪ್ರಸಾದವನ್ನು ಶರಣ ಸತಿಗೆ ಸಮರ್ಪಿಸುವ ಭಾಗ್ಯ ವೃಷಭ ಮುಖನೆಂಬ ಗಣೇಶ್ವರನಿಗೆ ಪಾತ್ರವಾಗುತ್ತದೆ. ಪ್ರಸಾದ ವಿತರಣೆಯ ಸಂದರ್ಭದಲ್ಲಿ ಶಿವನ ಪ್ರೀತಿಗೆ ಪಾತ್ರನಾದ ಸ್ಕಂದ ದೇವನನ್ನು ಮರೆತು ಬಿಡುತ್ತಾನೆ.

ಎಲ್ಲರಿಗೂ ಪ್ರಸಾದ ವಿತರಣೆ ಮಾಡಿದೆನೆಂದು ಸುಳ್ಳು ಹೇಳಿದ ಪರಿಣಾಮ ಇದರಿಂದ ಒಂದು ಜನನಂ ನಿನಗೆ ದೊರಕಿತ್ತು ಮುದದಿಂದಂ ಹೋಗಯ್ಯ ಜನನಮಂ ನೀಹೊತ್ತು.

ಎಂದು ಶಿವನು ಆದೇಶ ನೀಡುತ್ತಾನೆ. ಶಿವನ ಆಜ್ಞೆಯ ಮೇರೆಗೆ ಶಿರಿಮುಡಿಯನ್ನು ಹೊತ್ತು ವೃಷಭ ಮುಖನು ಭೂಲೋಕದಲ್ಲಿ ಜನಿಸುತ್ತಾನೆ.[೨] ಎಂದು ಹರಿಹರ ಚಿತ್ರಿಸುತ್ತಾನೆ.

ಹೀಗೆ ಅನೇಕ ಪುರಾಣಗಳು ಬಸವಣ್ಣನವರನ್ನು ಕುರಿತು ಪಾಲ್ಕುರಿಕೆ ಸೋಮನಾಥನ ಬಸವ ಪುರಾಣ, ಚಾಮರಸನ ಪ್ರಭುಲಿಂಗಲೀಲೆ, ಲಕ್ಕಣ ದಂಡೇಶನ ಶಿವತತ್ವ ಚಿಂತಾಮಣಿ, ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ, ಚೆನ್ನಪ್ಪ ಕವಿಯ ಶರಣ ಲೀಲಾ ಮೃತ ಮುಂತಾದ ಕೃತಿಗಳು ಜನನಕ್ಕೆ ಕಾರಣವಾದ ಹಿನ್ನೆಲೆಯನ್ನು ಒದಗಿಸುತ್ತವೆ. ತರ್ದವಾಡಿ ನಾಡಿನ ಬಾಗೇವಾಡಿಯ ಇಂಗಳೇಶ್ವರ ಬಸವೇಶ್ವರನ ತಂದೆಯ ಊರು. ಬಿಜಾಪುರ ಜಿಲ್ಲೆಯ ಪ್ರಮುಖ ತಾಲೂಕು ಕೇಂದ್ರಕ್ಕೆ ಹೊಂದಿಕೊಂಡಿರುವ ಒಂದು ಚಿಕ್ಕ ಗ್ರಾಮ ಬಸವನ ಬಾಗೇವಾಡಿ. ಸುಪ್ರಸಿದ್ಧ ಪ್ರಾಚೀನ ಅಗ್ರಹಾರವಾಗಿದ್ದು ಇಲ್ಲಿ ಮುಖ್ಯವಾಗಿ ಐದುನೂರು ಬ್ರಾಹ್ಮಣರ ಮನೆತನಗಳಿದ್ದು ಹಾಗೆಯೇ ಅದಕ್ಕೆ ಮಹಾಗ್ರಹಾರ ಎಂದು ಕರೆಯಲಾಗುತ್ತಿತ್ತು. ಅವರೆಲ್ಲರು ವೇದ, ಶಾಸ್ತ್ರ, ಉಪನಿಷತ್ತು, ಆಗಮ, ಪುರಾಣಗಳಲ್ಲಿ ಪಾರಂಗತರಾಗಿದ್ದರು. ಎಂದು ಕಾವ್ಯ ಪುರಾಣಗಳು, ಶಾಸನಗಳು ಸ್ಪಷ್ಟಪಡಿಸುತ್ತವೆ. ಇಲ್ಲಿಯ ಬ್ರಾಹ್ಮಣರಿಗೆ ಅಗ್ರೇಶ್ವರ ಅಥವಾ ನಾಯಕನಾಗಿದ್ದವನು ಮಂಡಿಗೆ ಮಾದಿರಾಜ ಅವನ ಪತ್ನಿ ಇಂಗಳೇಶ್ವರ ಮಾದಲಾಂಬಿಕೆ. ಇವರು ಕಮ್ಮೆ ಕುಲದ ಸಾಂಖ್ಯಾನಾ ಗೋತ್ರದ ಶೈವ ಬ್ರಾಹ್ಮಣರು. ಶೈವಾಗಮಾಚಾರ್ಯ ಎನಿಸಿಕೊಂಡಿದ್ದ ಶಿವ ಬ್ರಾಹ್ಮಣ ಮಾದಿರಾಜನು ಅಗ್ರಹಾರದ ನಾಯಕನಾಗಿದ್ದುದರಿಂದ ಅವನಿಗೆ ಆ ಊರಿನಲ್ಲಿ ಪ್ರಮುಖ ಸ್ಥಾನವಿದ್ದುದು ಸಹಜವೇ ಆಗಿದೆ. ಎಂದು ಚಿದಾನಂದಮೂರ್ತಿಯವರು ಅಭಿಪ್ರಾಯಪಡುತ್ತಾರೆ.[೩]

ಶಿವನ ಅನುಗ್ರಹದಿಂದ ಜನಿಸಿದ ಮಗು ಬಸವಣ್ಣನಿಗೆ ಜಾತ ಕರ್ಮಾದಿಗಳನ್ನು ಮಾಡಿ ಬಸವ ಎಂದು ಹೆಸರಿಡುತ್ತಾರೆ. ಬಸವಣ್ಣನು ಬೆಳೆದು ದೊಡ್ಡವನಾದ ಬಳಿಕ ವೈದಿಕ ನಿಷ್ಠೆ, ಆಚಾರರಾದ ತಂದೆ ಸಂಸ್ಕೃತ ವಿದ್ವಾಂಸರು ಆಗಿದ್ದರು. ಹೀಗಾಗಿ ಆ ಅಭ್ಯಾಸದ ಫಲ ಸಹಜವಾಗಿ ಅವನಿಗೆ ಪ್ರಾಪ್ತವಾಗಿರಬೇಕು. ಆ ಅಗ್ರಹಾರದಲ್ಲಿ ಅನೇಕ ಸ್ನೇಹಿತರ ಜೊತೆ ಆಟ ಹುಡುಗಾಟದಲ್ಲಿ ತೊಡಗಿಕೊಳ್ಳುತ್ತಿದ್ದು, ವಯಸ್ಸಿಗೆ ಮೀರಿದ ಆಲೋಚನೆ ಸ್ನೇಹ ಪರತೆ, ಇತರರಿಗೆ ಸಹಾಯ ಮಾಡುವ ಗುಣ ಸ್ವಭಾವದಿಂದ ಎಲ್ಲರ ಪ್ರೀತಿಗೆ ಪಾತ್ರನಾಗಿದ್ದ ಬಸವಣ್ಣನಿಗೆ ಆರಂಭದಿಂದಲೂ ಶಿವ ಶರಣರ ಕಥೆಗಳನ್ನು ಓದುವ ತಿಳಿದುಕೊಳ್ಳುವ ಆಲೋಚನೆ ಮಾಡುವ ಹವ್ಯಾಸ ಇರುವುದರಿಂದ ಭಕ್ತಿ, ಜ್ಞಾನದ ಗುಣಗಳು ಚಿಕ್ಕ ವಯಸ್ಸಿನಿಂದಲೇ ರೂಢಿಗತವಾಗಿದ್ದನ್ನು ತಿಳಿಯಬಹುದಾಗಿದೆ. ಕಣ್ಣಪ್ಪನ ಕಥೆ ಸಿರಿಯಾಳನ ಕಥೆ, ಚಂಗಳೆ ಕಥೆ, ತಿರುನೀಲಕಂಠರ ಕಥೆ ಬಸವಣ್ಣನವರ ಹಿರಿಯ ತಲೆಮಾರಿನ ದಾಸಿಮಯ್ಯ, ದುಗ್ಗಳೆಯರ ಕಥೆಯಿಂದ ಪ್ರೇರಣೆಗೊಂಡ ಬಸವಣ್ಣನಿಗೆ ಭಕ್ತಿಯ ಕಡೆಗೆ ಹೆಚ್ಚು ಒಲವು. ಕುಲ, ಶಾಸ್ತ್ರ, ಐಶ್ವರ್ಯ, ಆಡಂಬರ, ಡಾಂಭಿಕತೆ,

ಕಂದಾಚಾರಗಳನ್ನು ಎಂದೂ ಸಹಿಸುತ್ತಿರಲಿಲ್ಲ. ಅವನ ಮನಸ್ಸು ಅವುಗಳಿಂದ ಹೊರತಾದ ಆಲೋಚನೆಗೆ ಹೆಚ್ಚಿನ ಗಮನ ಕೊಡುತ್ತಿದ್ದವು.

ವೈದಿಕ ಧರ್ಮದಲ್ಲಿ ಉಪನಯಕ್ಕೆ ಹೆಚ್ಚಿನ ಮಹತ್ವವಿದ್ದು ಬಾಲ್ಯದಲ್ಲಿಯೇ ಸಂಸ್ಕಾರ ಹೊಂದಬೇಕು ಎಂಬ ತಂದೆಯ ಅಭಿಲಾಷೆ ಎಂಟು ವರ್ಷ ತುಂಬಿದ ಬಸವನಿಗೆ ವಿದ್ಯಾಭ್ಯಾಸದ ಜೊತೆಗೆ ಗುರುವಿನ ಬಳಿ ಬಿಡುವುದು ವೇದ–ಮಂತ್ರದ ಪ್ರಕಾರ ಬ್ರಾಹ್ಮಣನಾದವನಿಗೆ ಹದಿನಾರು ಸಂಸ್ಕಾರಗಳು ಅವಶ್ಯಕ ಇವುಗಳನ್ನು ವಿಧಿಯೋಕ್ತವಾಗಿ ಆಚರಿಸಬೇಕು ಎಂದು ಹೇಳುತ್ತಾನೆ. ಇವುಗಳನ್ನು ಇಷ್ಟಪಡದೆ ತಿರಸ್ಕಾರ ಮಾಡಿದ ಬಸವನಿಗೆ ಎಷ್ಟೇ ತಿಳುವಳಿಕೆ ನೀಡಿದರೂ ಒಪ್ಪದ ಅವನ ಮನಸ್ಸು ಕೂಡಲದಸಂಗಮನತ್ತ ವಾಲುತ್ತದೆ. ಆದರೆ ಕೆಲವೊಂದು ಪುರಾಣಗಳು ಉಪನಯನವಾದ ಬಳಿಕ ಮನೆಯನ್ನು ತೊರೆದು ಕೂಡಲ ಸಂಗಮಕ್ಕೆ ಬಂದನೆಂದು ಹೇಳುತ್ತವೆ.[೪] ಇಂತಹ ಭಿನ್ನ ಭಿನ್ನವಾದ ಹೇಳಿಕೆಯಿಂದ ಸತ್ಯವನ್ನು ಕಂಡು ಹಿಡಿಯುವುದು, ಸ್ವಲ್ಪ ಕಷ್ಟಕರ ಕೆಲಸವಾಗುತ್ತದೆ.

ಬಾಗೇವಾಡಿಯಿಂದ ಹೊರಟ ಬಸವಣ್ಣನ ಜೊತೆಗೆ ಅಕ್ಕ ನಾಗಲಾಂಬಿಕೆ ಚೆನ್ನಬಸವಣ್ಣ ಮಾವ ಶಿವದೇವ. ಇವನ ಜೊತೆಗೆ ಕೂಡಲಸಂಗಮಕ್ಕೆ ಬಂದರು. ಬಸವಣ್ಣನ ಭಕ್ತಿ ಪ್ರತೀಕವಾದ ಮನಸ್ಸು ಸಂಗಮನಾಥನ ಸೇವೆಯ ಕಡೆಗೆ ಹರಿದದ್ದು ಒಂದು ಚರಿತ್ರೆಯೇ ಸರಿ. ದೇವಸ್ಥಾನದಲ್ಲಿ ಈಶಾನ್ಯಗುರುಗಳ ದರ್ಶನ ಪಡೆದ ಬಸವಣ್ಣನಿಗೆ ಅವರ ವಿಚಾರಗಳಿಂದ ಪ್ರೇರಣೆಗೊಂಡು ಸಂಗಮನಾಥನಿಗೆ ಪೂಜೆಸಲ್ಲಿಸುವುದು, ಹೂಗಳನ್ನು ಭಕ್ತಿಯಿಂದ ಸಮರ್ಪಿಸುವುದು, ಭಸ್ಮಧಾರಣೆ ಮಾಡಿಕೊಳ್ಳುವುದು, ಸಾಷ್ಟಾಂಗ ನಮಸ್ಕಾರ ಮಾಡುವುದು, ಕೃಷ್ಣಾ, ಮಲಪ್ರಭೆ ನದಿಯ ತಟಾಕದಲ್ಲಿ ಬೆಳೆದ ಪುಷ್ಪವನದಲ್ಲಿ ಸಂಚರಿಸುವುದು, ಭಕ್ತಿಯ ಪಾರಮ್ಯವನ್ನು ಮೆರೆಯುತ್ತ ವಿದ್ಯಾಭ್ಯಾಸವನ್ನು ಮಾಡಿದ್ದನ್ನು ಕಾಣುತ್ತೇವೆ. ಕಪ್ಪಡಿ ಸಂಗಮವು ಅವನ ಸಾಧನಾ ಕ್ಷೇತ್ರವಾಗಿದ್ದು, ಸಂಗಮನಾಥನನ್ನು ಗುರುವೆಂದು ಭಾವಿಸಿ ಇಷ್ಟಲಿಂಗ ದೀಕ್ಷೆಯನ್ನು ಪಡೆದು ಜ್ಞಾನಭಂಡಾರವನ್ನು ತನ್ನದಾಗಿಸಿಕೊಂಡ ಕೀರ್ತಿ ಬಸವಣ್ಣನದ್ದು. ಇವನು ಹುಟ್ಟಿದಾಗಲೇ ಶಿವನು ಗುರುವಿನ ರೂಪದಲ್ಲಿ ಬಂದು ಅಂಗದ ಮೇಲೆ ಲಿಂಗವನ್ನು ಸಂಗಗೊಳಿಸಿದ ಎಂದು ಬಸವಪುರಾಣ ಹೇಳಿದರೆ, ಕಪ್ಪಡಿ ಸಂಗಮದಿಂದ ಜಾತವೇದ ಮುನಿಗಳು ಬಂದು ಇಷ್ಟಲಿಂಗವನ್ನಿತ್ತು ದೀಕ್ಷೆಯನ್ನು ಅನುಗ್ರಹಿಸಿದರು ಎಂದು ಸಿಂಗಿರಾಜ ಪುರಾಣ ಹೇಳುತ್ತದೆ. ಇವೆರಡು ಹೇಳಿಕೆಗಳನ್ನು ಒಪ್ಪುವುದು ಸ್ವಲ್ಪ ಕಷ್ಟ. ಹರಿಹರನು ಬಸವರಾಜ ದೇವರ ರಗಳೆಯಲ್ಲಿ ಈ ಸಮಸ್ಯೆಯ ಮೇಲೆ ಬೆಳಕು ಚೆಲ್ಲುತ್ತದೆ. ಬಾಗೇವಾಡಿಯಿಂದ ಕಪ್ಪಡಿ ಸಂಗಮಕ್ಕೆ ಬಂದ ಬಸವಣ್ಣನಿಗೆ ಅಲ್ಲಿಯ ಸ್ಥಾನಪತಿಯಾದ ಈಶಾನ್ಯ ಗುರುಗಳು ಆಶ್ರಯವಿತ್ತರೆಂದು ಹರಿಹರ ಹೇಳುತ್ತಾನೆ. ಇವರು ಬಹುಶಃ ಲಕುಲೀಶ ಪಾಶುಪತ ಸಂಪ್ರದಾಯದ ಸನ್ಯಾಸಿಗಳು ಸ್ಥಾನಪತಿ ಎಂಬ ಮಾತನ್ನು ನೋಡಿದರೆ ಅಲ್ಲಿಯ ಕೂಡಲ ಸಂಗಮೇಶ್ವರ ದೇವಸ್ಥಾನದ ಅಧಿಪತಿಗಳಾಗಿದ್ದರಬಹುದು. ಒಮ್ಮೆ ಇವರ ಹೆಸರನ್ನು

ಹೇಳಿದ ಹರಿಹರ ಮತ್ತೆ ಇವರ ಹೆಸರನ್ನೆತ್ತುವುದಿಲ್ಲ. ಬಸವಣ್ಣನಿಗೆ ಅಲ್ಲಿ ಇರುವಾಗ ಸಂಗಮದೇವರೇ ನಂದೀಶ್ವರ ವಿಗ್ರಹದ ಮೂಲಕ ಇಷ್ಟಲಿಂಗವನ್ನು ದಯಪಾಲಿಸಿರಬೇಕು ಎಂದು ಹೇಳುತ್ತಾನೆ. ಈ ಒಂದು ಸಂಗತಿಯಿಂದ ಸ್ಪಷ್ಟವಾಗುವುದೇನೆಂದರೆ ಬಸವಣ್ಣನವರು ವೀರಶೈವರಾದದ್ದು ಕಪ್ಪಡಿ ಸಂಗಮದಲ್ಲಿ ಎಂಬುದನ್ನು ಅವರಿಗೆ ದೀಕ್ಷೆಯನ್ನು ಕೊಟ್ಟವರು ಕಪ್ಪಡಿ ಸಂಗಯ್ಯ ಎಂಬ ಶುದ್ಧಶೈವದ ಗುರುವೆಂದು ಹೇಳಲು ಪ್ರಬಲ ಆಧಾರಗಳಿವೆ. ಅವನೇ ಬಸವಣ್ಣನವರಿಗೆ ಕೂಡಲ ಸಂಗಮದೇವ ಎಂಬ ಅಂಕಿತವನ್ನು ಇಷ್ಟಲಿಂಗದ ಜೊತೆ ನೀಡಿದ್ದು ಆ ಅಂಕಿತವು ಅವರ ಕೈಯಲ್ಲಿದ್ದ ಇಷ್ಟಲಿಂಗದ ಹೆಸರೂ ಕೂಡ ಇದೆ ಎಂದು ಚಿದಾನಂದಮೂರ್ತಿಯವರು ಅಭಿಪ್ರಾಯಪಡುತ್ತಾರೆ.[೫]

ಬಸವಣ್ಣನವರು ಕೂಡಲಸಂಗಮಕ್ಕೆ ಬರುವುದಕ್ಕಿಂತ ಪೂರ್ವದಲ್ಲಿ ಬಾಗೇವಾಡಿಯಲ್ಲಿ ಇದ್ದರು. ಬಸವಣ್ಣನವರ ಬಾಲ್ಯದಲ್ಲಿಯೇ ಆತನ ಮಾತಾ-ಪಿತೃಗಳು ತೀರಿಹೋಗಿದ್ದರು. ಆಗ ಬಾಲಕ ಬಸವಣ್ಣ ಶಿವಭಕ್ತಿ ಸಂಪನ್ನೆಯಾದ ಮುತ್ತಬ್ಬೆಯ ಹತ್ತಿರ ನಾಲ್ಕು ವರ್ಷಗಳನ್ನು ಕಳೆಯುತ್ತಾರೆ. ಹದಿನಾರು ವರ್ಷಗಳು ಕಳೆದ ನಂತರ "ಶಿವಭಕ್ತಿಯುಂ ಕರ್ಮಮುಂ ಎಂದೂ ಒಂದಾಗಿರದು" ಎಂದು ಬಗೆದು ಪರಮ ವೈರಾಗ್ಯಯುಕ್ತನಾಗಿ ಕರ್ಮಲತೆಯಂತಿರ್ದ ಜನಿವಾರವನ್ನು ತೆಗೆದುಹಾಕಿ ಬಾಗೇವಾಡಿಗೆ ಹೊರಟು ಮಲಪ್ರಹಲಿ ಕೃಷ್ಣವೇಣಿಗಳ ಸಂಗಮದಲ್ಲಿದ್ದ ಕಪ್ಪಡಿಸಂಗಮಕ್ಕೆ ಬರುತ್ತಾರೆ.

ಮಲಪ್ರಹರಿ ಕೃಷ್ಣವೇಣಿಗಳ ಸಂಘಸುಖಮ ಪಿಂಗದಾ ಕೂಡಲ
ಸಂಗವೆಲತ್ಪಾರನಿಪ್ಪ ಕಪ್ಪಡಿಸಂಗಮಂ ಪೊಕ್ಕು ಕೇರಿಕೇರಿಯೊಳು
ನಡೆತಪ್ಪಾಗಳು ಶಂಕರಾಲಯಮಂ ಬೋಂಕನೆ ಕಂಡು ಪೂರ್ವಸ್ಮರಣಿ
ಕೈಗೂಡಿ ಕಣ್ ಬಂದಂತೆ ಉಸಿರ್ ಬಂದಂತೆ ಪರಿತಂದು
ರಂಗಮಂಟಪದೊಳು ದೊಪ್ಪನೆ ಬಿದ್ದೆಂತಕ್ಕೆದ್ದು[೬]

ಜನಿವಾರನ್ನು ನಿರಾಕರಣೆ ಮಾಡಿದಂಥ ಬಸವಣ್ಣ ಕೂಡಲಸಂಗಮಕ್ಕೆ ಬಂದಾಗ ಕೇರಿ ಕೇರಿಗಳನ್ನು ತಿರುಗುತ್ತಾನೆ. ಹಾಗೆ ತಿರುಗುವಾಗ ಒಂದೇಸಾರಿ ಶಿವದೇವಾಲಯವನ್ನು ಕಾಣುತ್ತಾನೆ. ಆ ದೇವಾಲಯದಲ್ಲಿಯ ಸಂಗಮನಾಥನನ್ನು ಕಂಡು ಒಂದೇಸಾರಿ ಪೂರ್ವ ಸ್ಮರಣೆಯಾಗುತ್ತದೆ. ಹಿಂದೆ ಈ ಸಂಗಮನಾಥನನ್ನು ಸೇವೆ ಮಾಡಿದ್ದೇನೋ ಎಂಬ ಭಾವನೆ ಉಂಟಾಗುತ್ತದೆ. ಮರಳಿ ಕಣ್ಣು ಬಂದಂತಾಗುತ್ತದೆ. ಉಸಿರು ಬಂದಂತಾಗುತ್ತದೆ. ಆ ಸಂತಸದಲ್ಲಿ ಸಂಗಮನಾಥನ ದೇವಾಲಯದಲ್ಲಿ ದೊಪ್ಪನೆ ಬಿದ್ದು ಬಿಡುತ್ತಾನೆ. ಮತ್ತೆ ಮೇಲೆದ್ದು ಸಂಗಮನಾಥನನ್ನು ಈ ಪರಿಯಾಗಿ ಮೂದಲಿಸುತ್ತಾನೆ.

ದೇವದೇವ ಅನಾಥನಾಥ ಅನಿಮಿತ್ತ ಬಂಧುವೆ
ತಾಯ್ತಂದೆ ಬಂಧು ಬಳಗವೆ ಕುಲವೆ ಬಲವೆ
ಫಲವೆ ತರವೆ ಕಣ್ಣಿಗತಿಯೆ ಮತಿಯೆ ಪುಣ್ಯವೆ
ಪ್ರಾಣವೆ ಕಾವುದು ಕಾವುದೆಂಬೆನುತ[೭]

ದೇವರಿಗೆ ದೇವನಾದವನೆ ಅನಾಥನಾಥನೆ ಕಾರಣವಿಲ್ಲದೇ ಕೂಡಿದ ಬಂಧುವೆ ನೀ ನನ್ನ ತಾಯಿ-ತಂದೆ, ಬಂಧು-ಬಳಗ ಎಲ್ಲ ನೀನೇ, ನನ್ನ ಕುಲ, ನೀನೇ ನನ್ನ ಬಲ, ನನ್ನ ಪ್ರಾಣವು ನೀನೇ, ನನ್ನ ಕಾಯಬೇಕು ಎಂದು ಬೇಡಿಕೊಳ್ಳುತ್ತಾನೆ.

ಹೀಗೆ ಸಂಗಮೇಶ್ವರ ಲಿಂಗವನ್ನು ಕಂಡು ಬಲು ಹರ್ಷದಿಂದ ಕಣ್ಣುಗಳನ್ನು ಮುಚ್ಚಿ ದೊಪ್ಪನೆ ಬಿದ್ದು ಸಂಗ ಶರಣು-ಶರಣು ಎನ್ನುತ ಮೂರ್ಛೆ ಹೋಗುತ್ತಾನೆ. ಆಗ ಹರಕರಣದಿಂದ ನೋಡಿ ಬಸವಣ್ಣನಿಗೆ ಆಶೀರ್ವಾದಿಸುತ್ತಾನೆ. ಆಗ ಈಶಾನ್ಯ ಗುರುಗಳನ್ನು ಕಾಣುತ್ತಾನೆ. ಆಗ ಗುರುಗಳು ಬಸವಣ್ಣನಿಗೆ ಈ ರೀತಿಯಾಗಿ ಹೇಳುತ್ತಾರೆ.

ಎಲೆ ಭಕ್ತ ನೀನೆಲ್ಲಿಗಂ ಪೋಗಬೇಡ ಆವುದುಂ ಚಿಂತೆ ಬೇಡ
ಸಂಗಮೇಶ್ವರಂಗೆ ಹೊಸ ಪುಷ್ಪಮಂ ತಿಳಿಯಗ್ಘವಣಿಯಂ
ತಂದು ಓ ಜೆಯಿಂ ಪೂಜೆಗೈದು ಪ್ರಸಾದ ಕಾಯಕನಾಗಿ
ಸುಖದೊಳಿಪ್ಪುದು ಎನೂ ಮಾತಂ ಕೈಕೊಂಡು ಸಂಗನ
ಬಸವಂ ಬಸವಿದೇವಂ ಕಪ್ಪಡಿಸಂಗಮದೊಳು
ಕೂಡಲಸಂಗಮೇಶ್ವರ ಶ್ರೀ ಪಾದಕಮಳ ಮಕರಂದ
ಮಧುಕರಾಯಮಾನ ನಾಗಿವಣಝು ಅಂತುಮಲ್ಲದೆಯುಂ°

ಎಲೆ ಭಕ್ತನೆ ನೀನೆಲ್ಲಿಗೂ ಹೋಗಬೇಡ; ನಿನಗೆ ಯಾವ ಚಿಂತನೆಯು ಬೇಡ; ನೀನು ಪ್ರತಿನಿತ್ಯ ಸಂಗಮೇಶ್ವರನಿಗೆ ಹೊಸ ಹೊಸ ಹೂಗಳನ್ನು ಮತ್ತು ತಿಳಿಯಾದ ನೀರನ್ನು ತಂದು ಭಕ್ತಿಯಿಂದ ಪೂಜೆಯನ್ನು ಮಾಡು ಮತ್ತು ಪ್ರಸಾದ ಕಾಯಕನಾಗಿ ಸುಖದಿಂದ ಇರು ಎಂದು ಹೇಳುತ್ತಾನೆ. ಈ ತೆರನಾಗಿ ಕಪ್ಪಡಿಸಂಗಮದಲ್ಲಿ ಕೂಡಲಸಂಗಮೇಶ್ವರನ ಪಾದಕಮಲದಲ್ಲಿ ಮಧಕರಾಯ ಮಾನವಾಗಿ ಬಸವೇಶ್ವರನು ತಂಗಿದನು. ನಂತರ ಪ್ರತಿನಿತ್ಯವು ಸಂಗಮನಾಥನನ್ನು ಆರಾಧಿಸುವುದೇ ಅವನ ಕಾಯಕವಾಯಿತು.

ಕೂಡಲಸಂಗಮದಲ್ಲಿ ಬಸವಣ್ಣ ಸಂಗಮೇಶ್ವರನಿಗೆ ಯಾವ ರೀತಿಯಾಗಿ ಸೇವೆಯನ್ನು ಮಾಡುತ್ತಿದ್ದ ಎಂಬ ಅಂಶವನ್ನು ಹರಿಹರನ ಬಸವರಾಜ ದೇವರ ರಗಳೆಯಲ್ಲಿ ಸುಂದರವಾಗಿ ಮೂಡಿಬಂದಿದೆ. ಭಕ್ತಿಯನ್ನು ಬಸವನಿಂದ ಕಲಿಯಬೇಕು ಎನ್ನುವುದನ್ನು ಇದು ಸಾರಿ ಹೇಳಿದಂತಿದೆ.

ಇಂತು ಕಪ್ಪಡಿಸಂಗಮದೊಳಿರ್ದುರಾಗದಿಂ
ಸಂತತಂ ಶಶಿಧರನನರ್ಚಿಪುದ್ಯೊಗದಿಂ
ಬಸವಂ ಪ್ರಭಾತ ಸಮಯಕ್ಕೆ ಮುನ್ನವೆ ಎದ್ದು
ಒಸೆದು ಭಸಿತೋದ್ಧೂಳನಂ ಮಾಡುತಂಬಾಳ್ದು
ಸಂಗಂಗೆ ಸಾಷ್ಟಾಂಗದಿಂದಲ್ಲಿ ಪೊಡಮೊಟ್ಟು
ಓಿಂಗದೀಶಂಗೆ ಭಯಭಕ್ತಿಯಂ ಯುಂದಿಟ್ಟು'

ಹೀಗೆ ಕಪ್ಪಡಿಯ ಸಂಗಮದಲ್ಲಿ ಯಾವಾಗಲೂ ಶಿವನನ್ನು ಪೂಜಿಸುವುದೇ ಉದ್ಯೋಗವಾಯಿತು. ಪ್ರತಿದಿನವು ಸೂರ್ಯೋದಯ ಮುನ್ನವೆ ಎದ್ದು ಸ್ನಾನಾದಿಗಳನ್ನು ಮಾಡಿ ಸಂಗಮನಾಥನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಭಕ್ತಿಯಿಂದ ಪುಳಕಿತನಾಗಿ ಸಂಗಮನಾಥನ ದೇವಾಲಯದಿಂದ ಹೊರಗೆ ಬರುತ್ತಾನೆ. ಉತ್ಸಾಹ ಭರಿತನಾದ ಬಸವನಿಗೆ ಕೂಡಲಸಂಗಮದ ಆ ಪರಿಸರ ಸಂಗಮನಾಥ ನೆಲಸಿದ ಆ ಸ್ಥಳ ಬಸವಣ್ಣನಿಗೆ ಬಿಟ್ಟು ಹೋಗಲು ಮನಸ್ಸಾಗುವುದಿಲ್ಲ. ದೇವಾಲಯದ ಹೊರಗಿನ ಸೊಬಗು ಸ್ವರ್ಗ ಇಲ್ಲೆ ಇದೆ ಎಂಬ ಭಾವವನ್ನು ಮೂಡಿಸುತ್ತದೆ. ಸಂಗಮನಾಥನ ದೇವಾಲಯದಿಂದ ಮುಂದೆ ಬಂದಂತೆ ಸ್ವಲ್ಪ ದೂರದಲ್ಲಿ ಹೂದೋಟವೊಂದನ್ನು ಕಾಣುತ್ತಾನೆ ಬಸವಣ್ಣ. ಅದನ್ನು ಕಂಡು ಸಂತಸಗೊಳ್ಳುವ ಪರಿಯನ್ನು ಹರಿಹರ ಕವಿ ಈ ರೀತಿ ಬಣ್ಣಿಸಿದ್ದಾನೆ.

ನಡೆತರುತೆ ದೂರದೊಳು ಪೂದೋಂಟಮಂ ಕಂಡು
ಪೊಡಮಟ್ಟು ಕುಣಿ ಕುಣಿದು ಸಂತಸಮನೆಡೆಗೊಂಡು
ಪರಿಮಳಂ ಲೇಪಿದಡೆ ಕಡೆಗೆ ಸಂಗಂಗೆನುತೆ
ಚರಿತದಿಂ ಮುಖವಾಸಮಂ ಸುತ್ತಿರಂಬಿಸುತೆ
ಎಂಟುಮಡಿ ಹಿಗ್ಗಿ ಹೊರೆಯೇ ಉತಂ ಸಡಗರಿಸಿ[೧೦]

ದೇವಾಲಯದಿಂದ ಸ್ವಲ್ಪ ದೂರದಲ್ಲಿಯೇ ಇದ್ದ ಒಂದು ಹೂದೋಟವನ್ನು ಕಂಡು ಅಲ್ಲಿಗೆ ಹೋಗುತ್ತಾನೆ. ಸಂತಸದಿಂದ ಆ ಹೂಗಳ ಪರಿಮಳನ್ನು ನೋಡಿದ ಕೂಡಲೆ ಕುಣಿದಾಡುತ್ತಾನೆ. ಈ ಪರಿಮಳ ಸಂಗಮನಾಥನಿಗೆ ಮೀಸಲಾಗಿರುವುದು ಎಂಬ ಭಾವದಿಂದ ತೋಟವನ್ನು ಪ್ರವೇಶ ಮಾಡುತ್ತಾನೆ. ಸಹಜವಾಗಿ ಹಿಗ್ಗುವುದಕ್ಕಿಂತ ಎಂಟುಪಟ್ಟು ಹೆಚ್ಚು ಹಿಗ್ಗುತ್ತಾ ಸಡಗರಿಸುತ್ತಾನೆ. ಅದೇ ತೆರನಾಗಿ ಬೆಳಗಿನ ಪೂಜೆಯ ವೈಶಿಷ್ಟ್ಯವನ್ನು ನೋಡಿದರೆ ಕೂಡಲಸಂಗಮನನ್ನು ಇವನಷ್ಟು ಆರಾಧಿಸಿದ ಭಕ್ತ ಮತ್ತೊಬ್ಬರಿಲ್ಲ ಎಂಬ ಅಂಶವನ್ನು ಮನಗಾಣಬಹುದು.

ಅಳಿಯೆ ಅಗದನಿಲನಲುಗದ ರವಿಕರಂ ಪುಗದ
ಸುಳಿಗೊಂಡು ದಳಮೇಱ ಹಸುರಳಿದು ಬೆಳುಪುಳಿದ
ಸುರುಚಿರಮೆನಿಪ್ಪ ಮೀಸಲ ಮೊಗ್ಗೆಯಂ ಕೊಂಡು
ಇರುವಲೆಯೊಳ್ ಮೆಱೆವ ಬಿರಿಮುಗುಳ್ಗಳಂ ಕೊಂಡು
ಸೊಂಪಿನಿಂ ಕಂಪಿಡುವ ಸಂಪಂಗೆಗಳಂ ಕೊಂಡು
ಹೊಂಪೆಸೆವ ಹೊಂಗೇದಗೆಯ ಹೂಗಳಂ ಕೊಂಡು
ಅದೆ ಮಲ್ಲಿಕಾಕುಟ್ಮಲಂ ಸಂಗಂಗೆಂದೆನುತೆ[೧೧]

ಕೂಡಲಸಂಗಮನಾಥನಿಗೆ ಅರ್ಪಿಸುವಂಥ ಹೂಗಳನ್ನು ತರುವ ರೀತಿಯನ್ನು ನೋಡಿದರೆ ಬಸವಣ್ಣನವರಿಗೆ ಸಂಗಮನಾಥನ ಮೇಲಿದ್ದ ಪ್ರೀತಿಯ ಅರಿವಾಗುತ್ತದೆ. ಬೆಳಗಿನ ಹೂಗಳ

ಅರ್ಪಣೆ ಯಾರು ಮುಟ್ಟಿರದಂಥ ಮತ್ತು ಯಾವುದರಿಂದಲೂ ಮೈಲಿಗೆಯಾಗದಂತೆ ಹೂಗಳನ್ನು ತಂದು ಅರ್ಪಿಸುತ್ತಿದ್ದರೆಂದು ತಿಳಿಯುತ್ತದೆ. ದುಂಬಿಗಳು ಮುಟ್ಟದೇ ಇರುವಂಥ ಗಾಳಿಗೆ ಅಲುಗಾಡದೇ ಇರುವಂತ ಸೂರ್ಯನ ಕಿರಣಗಳು ಹೂಗಳ ಮೇಲೆ ಬೀಳದಿರುವಂಥ ಶುಚಿಯಾಗಿರುವ ಮೀಸಲಾಗಿಟ್ಟ ಮೊಗ್ಗೆಯನ್ನು ಬಿಡಿಸಿಕೊಂಡು ಬರುತ್ತಿದ್ದನು. ಇರುವಂತಿಗೆ, ಸಂಪಿಗೆ, ಹೊಂಗೆ, ಮಲ್ಲಿಗೆ ಹೀಗೆ ಬಗೆ ಬಗೆಯ ಹೂಗಳನ್ನು ತಂದು ಸಂಗಮನಾಥನಿಗೆ ಅರ್ಪಿಸುತ್ತಿದ್ದನು. ಬಸವಣ್ಣ ಕೂಡಲಸಂಗಮಕ್ಕೆ ಬಂದಾಗಿನಿಂದಲೂ ಸಂಗಮನಾಥನಲ್ಲಿ ಸಂಪೂರ್ಣ ಭಕ್ತಿ-ಭಾವದಿಂದ ತನ್ಮಯನಾಗಿ ಅರ್ಪಣಾಭಾವದಿಂದ ಭಕ್ತಿಯನ್ನು ಸಲ್ಲಿಸುವ ಪರಿ ಇದಾಗಿದೆ. ಯಾವ ವಿಚಾರಗಳಿಗೂ ವಿಚಲಿತನಾಗದ ಬಸವಣ್ಣನಿಗೆ ಸಂಗಮನಾಥನೆ ಸರ್ವಸ್ವವಾಗಿದ್ದನು.

ಮುಂಜಾವಿನಲ್ಲಿ ಈ ರೀತಿಯಾಗಿ ಸಂಗ್ರಹಿಸಿದ ಹೂಗಳನ್ನು ನದಿಯಲ್ಲಿ ತಂಪಾದ ನೀರಿನಿಂದ ತೊಳೆದು ಶುಭ್ರವಾಗಿಸಿ ಮೆಲ್ಲ ಮೆಲ್ಲಗೆ ಸಂಗಮನಾಥನ ದೇವಾಲಯಕ್ಕೆ ಬಂದು ನಯವಾಗಿ ಹೂವಿನ ಬುಟ್ಟಿಯನ್ನು ಕೆಳಗೆ ಇಡುತ್ತ ಅಯ್ಯ, ಅರಸ, ಬಂಧುವೆ ಎನ್ನುತ್ತ ನೀರಿನಿಂದ ಮತ್ತು ಗಂಧದ ಎಣ್ಣೆಯಿಂದ ಶುಭ್ರಗೊಳಿಸಿ ಸಂಗಮನಾಥನನ್ನು ಕೊಂಡಾಡುತ್ತಾನೆ.

ದೇವ ಚೆನ್ನನ ನಿಧಿಯೆ ಆರೋಗಿಸೆಲೆ ಸಂಗ
ದೇವ ಚೋಳನ ಸುಧೆಯ ಆರೋಗಿಸೆಲೆ ಸಂಗ
ಆರೋಗಿಸಯ್ಯ ನಿಜಲಿಂಗ ಸಂಗಮದೇವ
ಆರೋಗಿಸ ಉಮಾರ್ಧಾಂಗ ಸಂಗಮದೇವ
ಎನ್ನ ಸುಖನಿಧಿಯೆ ಗುಣನಿಧಯೆ ಕೂಡಲಸಂಗ
ಎನ್ನು ಭುಜಭುವೆ ಮನದೊಲವೆ ಕೂಡಲಸಂಗ
ಎಂದು ಕೊಂಡಾಡುತ್ತ ಲಾರೈಸಲರ್ಪಿಸುತೆ[೨]

ಸಂಗಮನಾಥನಿಗೆ ನೈವೇದ್ಯವನ್ನು ಅರ್ಪಿಸುವ ಪರಿಯು ಈ ಮೇಲೆ ಹೇಳಿದಂತೆ ದೇವ ಚೆನ್ನನ ನಿಧಿಯೇ ಅಂದರೆ ಚೆನ್ನನಿಗೆ ಕರುಣೆಯನ್ನು ತೋರಿದಂತೆ ಮತ್ತು ಕರಿಕಾಲ ಚೋಳನಿಗೆ ಅಮೃತವನುಣಿಸಿದಂತೆ ಈ ನೈವೇದ್ಯವನ್ನು ಸ್ವೀಕರಿಸು ನಿಜಲಿಂಗ ಸಂಗಮದೇವ ನನ್ನ ಸುಖದ ನಿಧಿಯು ನೀನಿದ್ದೀಯಾ, ನನ್ನ ಮನದ ಒಲುಮೆ ನೀನಿದ್ದೀಯ ಎಂದು ಕೊಂಡಾಡುತ್ತ ನೈವೇದ್ಯವನ್ನು ಅರ್ಪಣೆ ಮಾಡುತ್ತಿದ್ದನು.

ಬೇಧ-ಭಾವವಿಲ್ಲದೆ ಒಂದೇ ಆಗಿರ್ದ ರೀತಿಯನ್ನು ತಿಳಿಸುತ್ತದೆ. ಹೀಗೆ ಸಂಗಮನಾಥನೊಂದಿಗೆ ಒಂದಾಗಿದ್ದ ಬಸವಣ್ಣನು ಕೂಡಲಸಂಗಮವನ್ನು ಬಿಟ್ಟು ಹೋಗುವಂತಹ ಸ್ಥಿತಿ ನಿರ್ಮಾಣವಾಗುತ್ತದೆ. ಈ ಸಂದರ್ಭದಲ್ಲಿ ಕೂಡಲಸಂಗಮನಾಥ ಮತ್ತು ಬಸವಣ್ಣ ಒಂದೆಯಾಗಿದ್ದರು ಎಂಬ ಭಾವವನ್ನು ಕವಿ ಇಲ್ಲಿ ಹುಟ್ಟು ಹಾಕಿದ್ದಾನೆ. ಸಂಗಮನಾಥನು ಬಸವಣ್ಣನ ಕನಸಿನಲ್ಲಿ ಬಂದು ಮಂಗಳವಾಡಕ್ಕೆ ಹೋಗು ಅಲ್ಲಿ ನಿನ್ನಿಂದ ಆಗುವಂಥ ಕೆಲಸ ಬಹಳವಿದೆ ಎಂದಾಗ ಬಸವನು ನಿನ್ನನ್ನು ಅಗಲಿ

ಇರಲಾಗದು ಎನ್ನುವಂಥ ಮಾತುಗಳನ್ನು ಹೇಳುವುದರ ಮೂಲಕ ಬಸವನಿಗೆ ಸಂಗಮನಾಥ ಸಂಗಮನಾಥನಿಗೆ ಬಸವ ಹೇಗೆ ಸಂಬಂಧವನ್ನು ಹೊಂದಿದ್ದರು ಎಂಬ ಅಂಶವನ್ನು ಕವಿ ಹರಿಹರ ಹೇಳಿದ್ದಾನೆ.

ಕೂಡಲಸಂಗಮನಾಥನನ್ನು ಸ್ತುತಿಸುವ ಪರಿಯಂತು ಹರಿಹರ ಕವಿಯಲ್ಲಿ ಸುಂದರವಾಗಿ ಮೂಡಿಬಂದಿದೆ. ಕೂಡಲಸಂಗಮನ ಹೆಸರನ್ನು ಎಷ್ಟುಬಾರಿ ಹೇಳಿದರು ದಣಿವಾಗದಂತೆ ಬಳಸಿದ್ದಾನೆ.

ಗುರುಸಂಗ ಶಿವಲಿಂಗ ಸತ್ಯ ಶರಣರಸಂಗ
ವರಸಂಗ ಲಿಂಗ ಶರಣಾಗು ಬಸವನಸಂಗ
ಕರುಣರ ಸನಿಧಿ ಘನ ತರಂಗ ಸಂಗಮದೇವ
ಗಿರಿಸುತೆಯ ಸಮಸುಖಾಲಿಂಗ ಸಂಗಮದೇವ
ಸುಕುಮಾರ ಶಶಿಕಳಾಚೂಡ ಕೂಡಲಸಂಗ
ಸಕಲನಿರ್ಮಾಯಿಕ ಕ್ರೀಡ ಕೂಡಲಸಂಗ
ನಿತ್ಯನಿರ್ಮಳನೆ ನಿಃಕಳನೆ ಕೂಡಲಸಂಗ
ಹೊಗಳ್ವ ವೇದಾಳಿಗತಿಗೂಡ ಕೂಡಲಸಂಗ
ಸೊಗಯಿಸುವ ಘನಾವೃಷಾರೂಡ ಕೂಡಲಸಂಗ
ಎನ್ನನತಿ ಕರುಣದಿಂ ನೋಡು ಕೂಡಲಸಂಗ
ಎನ್ನ ಮನದಕ್ಕರದೊಳು ಕೂಡು ಕೂಡಲಸಂಗ
ಎನ್ನ ಕಣ್ಣೊಳಗೆ ಪರಿದಾಡು ಕೂಡಲಸಂಗ
ಎನ್ನ ಮನದೊಳಗೆ ಕುಣಿದಾಡು ಕೂಡಲಸಂಗ
ಎಂದು ಸ್ತುತಿಗೆಯ್ವತಂ ಸ್ನೇಹರಸದೊಳ್ ಕೂಡಿ[೧೩]

ಹೀಗೆ ಕೂಡಲಸಂಗಮ ನಾಥನ ಸ್ತುತಿಯನ್ನು ಮಾಡುವಾಗ ಹಲವಾರು ಬಾರಿ ಕೂಡಲಸಂಗ ಎಂಬ ಪದ ಬಳಕೆಯನ್ನು ಮಾಡಿದ್ದಾನೆ. ಬಸವಣ್ಣ ಮತ್ತು ಕೂಡಲಸಂಗಮನ ಸಂಬಂಧ ಗುರು ಮತ್ತು ಶಿಷ್ಯರ ನಡುವಿನ ಸಂಬಂಧವಾಗಿದೆ. ಶಿವಲಿಂಗವೇ ಗುರುವಾಗಿ ಸತ್ಯ ಶರಣರನ್ನು ಕೂಡುವಂಥ ಸಂಬಂಧವಾಗಿದೆ. ವರವಾಗಿರುವ ಸಂಗಮನಾಥ ಬಸವನಿಗೆ ಶರಣಾಗಿದ್ದಾನೆ. ಅವನ ಭಕ್ತಿಗೆ ಮೆಚ್ಚಿದ್ದಾನೆ. ಕರುಣೆಯ ರಸವೇ ನಿಧಿಯಾಗಿ ಸಂಗಮ ಮತ್ತು ಬಸವನ ಮಧ್ಯ ನಿಂತಂತಾಗಿದೆ. ಚಂದ್ರನನ್ನು ಧರಿಸಿದಂತವನು ಸಕಲ ಕೆಲಸವನ್ನು ನಿರ್ವಹಿಸುವಂತವನು, ನಿತ್ಯ ನಿರ್ಮಲನು, ಕಳಂಕವಿಲ್ಲದವನು, ನಿತ್ಯ ಭಯವಿಲ್ಲದವನು, ವೇದಗಳಿಗೆ ನಿಗದಂತವನು, ಆರೂಢನು, ಕರುಣಾಕರನು, ಕಣ್ಣೊಳಗ ಕಣ್ಣನ್ನ ಇಟ್ಟು ನನ್ನನ್ನು ಕಾಯುತ ಎಂಬ ಮಾತುಗಳಿಂದ ಸ್ತುತಿ ಮಾಡುತ್ತಾ ಸಂಗಮನಾಥನನ್ನು ಸ್ನೇಹ ರಸದಲ್ಲಿ ಕೂಡಿಕೊಂಡಿರುತ್ತಿದ್ದನು.

ಭಕ್ತಿಯ ಆಡಂಬರವಾಗಿರದೇ ಸ್ನೇಹದಂತೆಯು ಮತ್ತು ತಾಯಿ–ಮಗುವಿನ ಸಂಬಂಧದಂತೆಯು ಲೋಕ ಜನರ ಗೊಡವೆ ಇಲ್ಲದೇ ಅತ್ಯಂತ ಪ್ರಾಮಾಣಿಕವಾಗಿ ನಂಬುವ ವ್ಯಕ್ತಿಯಾಗಿ ನಿಲ್ಲುವ ಬಸವನು ಸಂಗಮನಾಥನನ್ನು ಕೂಡಲಸಂಗಮದಲ್ಲಿ ಪರಿಪೂರ್ಣವಾಗಿ ತನ್ನನ್ನು ತಾನು ಅರ್ಪಿಸಿಕೊಂಡಿದ್ದನು. ಕೂಡಲಸಂಗಮಕ್ಕೆ ಬಂದ ಮೇಲೆ ಸಂಗಮನಾಥನ ಮೇಲಿನ ಭಕ್ತಿಯಿಂದಲೇ ಬಸವಣ್ಣ ಒಂದು ಶಕ್ತಿಯಾಗಿ ರೂಪುಗೊಳ್ಳಲು ಸಾಧ್ಯವಾಯಿತು ಎಂದರೆ ತಪ್ಪಾಗಲಾರದು. ಸಂಗಮನಾಥನ ಮೇಲಿನ ಭಕ್ತಿಯು ದಿನದಿಂದ ದಿನಕ್ಕೆ ಕಡಿಮೆಯಾಗದೆ ಹೆಚ್ಚಾಗುತ್ತಾ ಹೋಗುತ್ತದೆ.

ದಿನದಿನಕೆ ಘಳಿಗೆಘಳಿಗೆಗೆ ಭಕ್ತಿ ಮಿಗಿಲಾಗೆ
ಅನುದಿನಂ ಸ್ನೇಹವಿಮ್ಮಡಿಸಿ ನೂರ್ಮಡಿಯಾಗೆ
ಸಂಗನಾಮಂಗಳಂ ಪುರಜನಕೆ ಕಲಿಸುತಂ
ಸಂಗಂಶರಣೆಂದವರ ಪದತಳಕ್ಕೆ ಐಗುತಂ
ನೆಡೆವಲ್ಲಿ–ನುಡಿಯಲ್ಲಿ ಸಂಗಶರಣೆಂದೆನುತೆ
ಉಡವಲ್ಲಿ ಉಂಬಲ್ಲಿ ಸಂಗ ಶರಣೆಂದೆನುತೆ
ಕೊಡುವಲ್ಲಿ ಕೊಂಬಲ್ಲಿ ಸಂಗ ಶರಣೆಂದೆನುತೆ
ತೊಡೆವಲ್ಲಿ ಪೊದೆಯಲ್ಲಿ ಸಂಗ ಶರಣೆಂದೆನುತೆ
ಸಂಗನಾಮದೊಳಚ್ಚು ವಿಡಿದು ಬೆಳೆವಂತಿರ್ದು
ಅಂಗಯನಿಂತಂ ಸಂಗನಂತರದೊಳೊಲಿದಿರ್ದು[೧೪]

ಹೀಗೆ ದಿನದಿಂದ ದಿನಕ್ಕೆ ಸಂಗಮನಾಥನ ಮೇಲಿನ ಭಕ್ತಿಯು ಹೇಗಾಯಿತು ಎಂಬುದನ್ನು ಹೇಳಿದ್ದಾನೆ. ಘಳಿಗೆಯಿಂದ ಘಳಿಗೆಗೆ ಭಕ್ತಿ ಮಿಗಿಲಾಯಿತು. ಪ್ರತಿದಿನವು ಸ್ನೇಹವು ಹೆಚ್ಚಾಗುತ್ತಾ ಹೋಯಿತು. ಸಂಗಮನ ನಾಮಸ್ಮರಣೆಯನ್ನು ಕೂಡಲಸಂಗಮದ ಜನರಿಗೆ ಕಲಿಸುತ್ತಾ ಸಂಗಮನಾಥನಿಗೆ ಶರಣೆಂದವರಿಗೆ ಅವರ ಪಾದಗಳಿಗೆ ನಮಸ್ಕರಿಸುತ್ತಾ ಎಲ್ಲೆ ಹೋದರೂ, ಏನೇ ಮಾತನಾಡಿದರೂ ಸಂಗಮನಿಗೆ ಶರಣೆನುತಾ ಕೊಡುವಲ್ಲಿಯೂ ಮತ್ತು ಕೊಳ್ಳುವಲ್ಲಿಯೂ ಸಂಗಮನಿಗೆ ಶರಣೆನುತಾ ಹೀಗೆ ಸರ್ವದರಲ್ಲಿಯೂ ಅವನನ್ನೆ ಕಾಣುತ್ತಾನೆ. ಬಸವಣ್ಣ ಪ್ರಮುಖವಾಗಿ ತಿಳಿಯುವ ಅಂಶವೆಂದರೆ ಬಸವಣ್ಣ ಕೇವಲ ತಾನಷ್ಟೇ ಅಲ್ಲ ಕೂಡಲಸಂಗಮದ ಜನಗಳಿಗೂ ಅವನ ಬಗ್ಗೆ ಹೇಳುತ್ತಾನೆ ಮತ್ತು ಅವನನ್ನು ಹೇಗೆ ಆರಾಧಿಸಬೇಕೆಂದು ತಿಳಿಸುತ್ತಾನೆ. ಅವನು ಹೇಳಿದಂತೆ ಸಂಗಮನಾಥನಿಗೆ ಮೊರೆಹೋದ ಜನಗಳಿಗೆ ಪಾದಕ್ಕೆ ಎರಗುತ್ತಾನೆ. ಅಂದರೆ ತಾನು ನಂಬಿರುವ ಸಂಗಮನಾಥನನ್ನು ಭಕ್ತಿಯಿಂದ ಯಾರು ನಂಬುತ್ತಾರೋ ಅವರನ್ನು ಸಂಗಮನಾಥನ ರೂಪದಲ್ಲಿಯೇ ಕಾಣುವ ಪರಿಯನ್ನು ರೂಢಿ ಮಾಡಿಕೊಳ್ಳುತ್ತಾನೆ.

ಬಸವಣ್ಣನು ಸಂಗಮನಾಥನನ್ನು ಎಷ್ಟರಮಟ್ಟಿಗೆ ಒಲಿಸಿಕೊಂಡಿದ್ದ ಎನ್ನುವುದನ್ನು ಪವಾಡ ಸದೃಶ್ಯ ರೂಪವೆಂಬಂತೆ ಚಿತ್ರಿಸಲಾಗಿದೆ.

“ವೃಷಭರಾಜಂ ಪತಿಯನುಜ್ಞೆಯೊಡನೆ ಬಸವಣ್ಣನ ಹಸ್ತದೊಳು
ಸಂಗಮೇಶ್ವರ ಲಿಂಗಮಂ ಬೊಂಕನೆ ಬಿಜಯಂಗೆಯ್ದಿ
ಮೃದು ಮೃದಂಗಪಟಿಹಕಹಳಾನಿನಾದ ಸುಮನ ಸಮೃದ್ಧಿ
ಗಳ ನಡುವೆ ಸುಪುತ್ರನಂ ನಿಜಜನಕಂ ಮೂರ್ಧ್ನಿಘಾಣಮ
ಮಾಡುವಂತೆ”[೧೫]

ಸಂಗಮನಾಥನ ದೇವಾಲಯದ ರಂಗಮಂಟಪದಲ್ಲಿ ಕುಳಿತುಕೊಂಡು ಬಸವನು ಸಂಗಮನಾಥನನ್ನು ಧ್ಯಾನ ಮಾಡುತ್ತ ಅವನನ್ನು ತನ್ನ ಹಸ್ತದ ಮೇಲಿನ ಲಿಂಗಕ್ಕೆ ತರುವ ರೀತಿಯನ್ನು ವರ್ಣಿಸಿದ್ದಾನೆ. ಕೂಡಲಸಂಗಮ ಬಸವಣ್ಣನಿಗೆ ಸಂಗಮನಾಥನಿಂದ ಎಲ್ಲವೂ ಆಗಿ ತೋರುತ್ತದೆ. ಭೂಮಿಯ ಮೇಲಿರುವ ಸ್ವರ್ಗವೆಂಬಂತೆ ಭಾಸವಾಗುತ್ತದೆ.

ಕೂಡಲಸಂಗಮದಲ್ಲಿ ಬಸವಣ್ಣನಿಗೆ ಸಂಗಮನಾಥನ ಒಲುಮೆಯಾಗಿ ಮುಂದೆ ಲೋಕ ಕಲ್ಯಾಣಕ್ಕೆ ಸಂಗಮನಾಥನು ಆದೇಶವನ್ನು ಕೊಡುತ್ತಾನೆ. ಬಸವಣ್ಣನಿಂದ ಮುಂದೆ ಸಮಾಜದ ಜನರ ಅಂಧಕಾರ, ಅಸಮಾನತೆ ಹೋಗಲಾಡಿಸಬೇಕೆಂದೇ ಸಂಗಮನಾಥನು ಮಂಗಳವಾಡಕ್ಕೆ ಬರಬೇಕೆಂದು ಆದೇಶಿಸುತ್ತಾನೆ.

“ಬಸವ ಮನೋರಥಂ ನಿನಗೆ ಸಂದುದು ನಿನ್ನನಗಲ್ವು
ದಿಲ್ಲ ಕೇಳ್ ಮಸುಮತಿಗೈದೆ ಪೂಣ್ದು ಮೆಱೆದಪ್ಪೆವು
ಮಂಗಳವಾಡದಲ್ಲಿ ಚಿಂತಿಸದೆ ಸಮಸ್ತ ಜಂಗಮಕ್ಕೆ
ಮಾಡುತೆ ಬಿಜ್ಜಳರಾಯನಿಂದ ವಂದಿಸಿಕೊಳುತಿರ್ಪು
ದೆಂದು ಬಸವಂಗುಸಿರ್ದುಂ ಗುರು ಸಂಗಮೇಶ್ವರಂ”[೧೬]

ಹೀಗೆ ಸಂಗಮನಾಥನು ಬಸವನನ್ನು ಅಗಲುವಂಥ ಪ್ರಸಂಗ ಬಂದಿರುವುದನ್ನು ಸ್ವತಃ ಸಂಗಮನಾಥನಿಗೆ ಹೇಳುತ್ತಾನೆ. ಬಸವನೇ ನಾನು ನಿನ್ನನ್ನು ಅಗಲುವುದಿಲ್ಲ ಆದರೆ ನಿನ್ನಿಂದ ಮಂಗಳವಾಡದಲ್ಲಿ ಮಹತ್ತರವಾದ ಕಾರ್ಯವಾಗುವುದಿದೆ. ಚಿಂತಿಸದೇ ಸಮಸ್ತ ಜಂಗಮರಿಗೆ ಒಳ್ಳೆಯ ಕಾರ್ಯವ ಮಾಡಲು ಬಿಜ್ಜಳರಾಯನನ್ನು ಒಪ್ಪಿಸು ಎಂದು ಆದೇಶವನ್ನು ಮಾಡುತ್ತಾನೆ. ಸಂಗಮನಾಥನನ್ನು ಅಗಲುವಂಥ ಸ್ಥಿತಿಯಲ್ಲಿ ಬಸವನಿರುವುದಿಲ್ಲ. ಕೂಡಲಸಂಗಮವನ್ನು ಬಿಟ್ಟುಬಂದ ಮೇಲೆ ಬಸವಣ್ಣನಿಗೆ ಸಂಗನಬಸವ ಎಂಬ ಹೆಸರು ಜನಜನಿತವಾಯಿತು ಎನ್ನುವುದಕ್ಕೆ ಹಲವಾರು ಉದಾಹರಣೆಗಳಿವೆ.

ಚಾಗಿಗಳ ನಡುವೆ ಕಡುಚಾಗಿ ಸಂಗನಬಸವ
ಭೋಗಿಗಳ ನಡುವೆ ಮಿಗೆ ಭೋಗಿ ಸಂಗನಬಸವ
ಚೆಲುವ ಸಂಗನಬಸವ ಒಲಿವ ಸಂಗನಬಸವ
ಗೆಲುವ ಸಂಗನಬಸವ ಸೋಲ್ವ ಸಂಗನಬಸವ

ಗೆಲುವ ಸಂಗನಬಸವ ಈವ ಸಂಗನಬಸವ
ದೇವ ಸಂಗನಬಸವ ತುಂಬಿತುಳುಕುವ ಬಸವ
ತಾಗಿ ಮರುಳದ ಬಸವ ಬೀಗಿ ಬೆದರದ ಬಸವ[೧೭]

ಕೂಡಲಸಂಗಮವನ್ನು ಬಿಟ್ಟಬಂದ ಮೇಲೆ ಬಸವಣ್ಣನಿಗೆ ಸಂಗನಬಸವನೆಂಬ ಹೆಸರು ಪ್ರಸಿದ್ಧಿಯಾಯಿತು. ಈ ಮೂಲಕ ಕೂಡಲಸಂಗಮದ ಸಂಬಂಧ ಮತ್ತಷ್ಟು ಗಟ್ಟಿಯಾಯಿತು. ಎಲ್ಲಿಯೂ ಸಹ ಬಾಗೇವಾಡಿಯ ಬಸವನೆಂದು ಕರೆಯದ ಬಸವನ ಸಮಕಾಲೀನರು ಸಂಗನಬಸವನೆಂದು ಬೋಧಿಸಿದ್ದಾರೆ.

ಕೂಡಲಸಂಗಮ ಎನ್ನುವುದು ಕೇವಲ ಒಂದು ಊರು ಎಂದು ಭಾವಿಸದ ಬಸವಣ್ಣನ ಸಮಕಾಲೀನ ಶರಣರು ಅದು ಒಂದು ಪವಿತ್ರ ಕ್ಷೇತ್ರ ಶಿವ–ಜೀವ ಸಂಗಮನಾಥ ಮತ್ತು ಬಸವ ಎನ್ನುವ ಪರಿಭಾವದಲ್ಲಿ ವಿಶಾಲವಾದ ಆಧ್ಯಾತ್ಮಿಕ ದೃಷ್ಟಿಕೋನದಿಂದ ನೋಡಿದ್ದಾರೆ. ಅಲ್ಲಮಪ್ರಭುವಿನ ಹಲವಾರು ವಚನಗಳಲ್ಲಿ ಬಸವಣ್ಣನನ್ನು ಸಂಗನಬಸವಣ್ಣ ಎಂದು ಕರೆಯುವುದರ ಮೂಲಕ ಕೂಡಲಸಂಗಮನಾಥನನ್ನು ಬಸವನೊಂದಿಗೆ ಸೇರಿಸುವ ಪರಿಭಾಷೆಯನ್ನು ಹಲವಾರು ವಚನಕಾರರು ಬಳಸಿದ್ದಾರೆ.

ಸಂಗದಿಂದಾಗಿತ್ತು ತನು ಆತನುವಿನಿಂದ ಆಗಿತು ಮರವೆ
ಆ ಮರವೆಯಿಂದಾಗಿತ್ತು ನೋಡಾ ನಾನೀನೆಂಬುದು
ನೀನೆಂಬ ಬಹಿರಂಗವಂತಿರಲಿ ನಾನೆಣಬ ಅಂತರಂ
ಗವಂತಿರಲಿ ಉಭಯ ಭಾವವಲ್ಲದೆ ನಿನ್ನಿಂದ
ನೀನರಿದಿಹನೆಂಬುದು ವಿಪರೀತಭಾವ
ಈ ಅರಿವು ಮರೆಯಾಟದ ಬ್ರಾಂತು ಬಿಡದು
ಗುಹೇಶ್ವರ ಲಿಂಗವು ನಿನ್ನಲ್ಲಿ ನಿಂತಪರಿ
ಎಂತುಹೇಳಾ ಸಂಗನಬಸವಣ್ಣಾ[೧೮]

ದೇಹ ಸೃಷ್ಟಿಯ ವಿಷಯ ಮತ್ತು ನಂತರ ಆ ದೇಹಕ್ಕೆ ಆಗುವ ಬಾಧೆ ಈ ವಿಚಾರಗಳ ಮಧ್ಯದಕೊಳ್ಳುವ ಬಗೆ ಹಾಗೂ ಆ ಅರಿವಿನ ಅಹಂಕಾರ ಭಾವ ಇವೆಲ್ಲವನ್ನು ಮೀರಿ ನಿಂತ ಬಸವಣ್ಣನ ಪರಿಯು ಹೇಗಾಯಿತು ಹೇಳು ಸಂಗನಬಸವಣ್ಣ ಎಂದು ಅಲ್ಲಮನು ಕೇಳಿದಾಗ ಭ್ರಾಂತಿನ್ನು ಅಳಿದವನು ಕೂಡಲಸಂಗಮನು. ಎಂದು ಹೇಳುತ್ತಾನೆ.

ಬಸವಣ್ಣ ಮತ್ತು ಚೆನ್ನಬಸವಣ್ಣ ಇಬ್ಬರೂ ಕೂಡಲಸಂಗಮದಲ್ಲಿ ಸಂಗಮನಾಥನನ್ನೇ ಆರಾಧ್ಯ ದೈವಾಗಿರಿಸಿಕೊಂಡು ಅವನನ್ನೇ ತಮ್ಮ ವಚನಗಳ ಅಂಕಿತನಾಮವಾಗಿ ಬಳಸಿಕೊಂಡು ವಚನಗಳನ್ನು ರಚನೆ ಮಾಡಿದ್ದಾರೆ. ಬಸವಣ್ಣನವರು ಕೂಡಲಸಂಗಮದೇವ ಎಂತಲೂ ಚೆನ್ನಬಸವಣ್ಣ ಕೂಡಲ ಚೆನ್ನಸಂಗಮದೇವನೆಂತಲೂ, ಬಸವಣ್ಣನ ಹೆಂಡತಿಯರಾದ ಗಂಗಾಂಬಿಕೆಯ ವಚನಗಳ ಅಂಕಿತನಾಮ

ಗಂಗಾಪ್ರೀಯ ಕೂಡಲಸಂಗಮನೆಂತಲೂ, ಮತ್ತೊಬ್ಬ ಪತ್ನಿ ನೀಲಾಂಬಿಕೆಯ ವಚನಗಳ ಅಂಕಿತನಾಮ ಬಸವ ಪ್ರೀಯ ಕೂಡಲಸಂಗಮದೇವನೆಂತಲೂ ಇರುವುದನ್ನು ನೋಡಿದರೆ ಕೂಡಲಸಂಗಮವು ಬಸವಣ್ಣನ ಮನೆಯ ಎಲ್ಲ ಸದಸ್ಯರಿಗೂ ಅತ್ಯಂತ ಪ್ರೀತಿಗೆ ಪಾತ್ರವಾದ ಸ್ಥಳ ಎಂಬುವುದರಲ್ಲಿ ಎರಡು ಮಾತಿಲ್ಲ. ಬಸವಣ್ಣನವರ ಮಟ್ಟಿಗೆ ಕೂಡಲಸಂಗಮವು ಕೇವಲ ಒಂದು ಸ್ಥಳವಾಗಿರದೇ ಒಂದು ಪವಿತ್ರ ಆಧ್ಯಾತ್ಮಿಕ ಕೇಂದ್ರವಾಗಿ ಮತ್ತು ಜಾಗೃತ ಸ್ಥಾನವಾಗಿ ರೂಪುಗೊಂಡಿತು.

ಕಪ್ಪಡಿಸಂಗಮ ಎನ್ನುವ ಹೆಸರಿನಿಂದ ಕರೆಯುತ್ತಿದ್ದ ಕೂಡಲಸಂಗಮವು ಬಸವಣ್ಣ ಬಂದ ನಂತರದಲ್ಲಿಯೂ ಕಪ್ಪಡಿಸಂಗಮವೆಂದೇ ಕರೆಯಲ್ಪಟ್ಟಿದೆ. ಆದರೆ ಈಚಿನ ಒಂದು ಶತಮಾನದಲ್ಲಿ ಕೂಡಲಸಂಗಮವೆಂದು ಕರೆಯಲಾಗುತ್ತಿದೆ. ಇದಕ್ಕೆ ಮುಖ್ಯ ಕಾರಣ ಬಸವಣ್ಣನವರ ವಚನಗಳ ಅಂಕಿತನಾಮ ಕೂಡಲಸಂಗಮ ಎಂದಿರುವುದೇ ಕಾರಣವಾಗಿದೆ ಎನ್ನಬಹುದು. ಬಸವಣ್ಣನವರಿಗಾದರೂ ಆ ಅಂಕಿತನಾಮವಿರಲು ಕಾರಣ ಕೂಡಲಸಂಗಮದಲ್ಲಿ ಸಂಗಮನಾಥನನ್ನು ಆರಾಧಿಸಿ ಇಷ್ಟಲಿಂಗವನ್ನಾಗಿಸಿದ ಪರಿಯನ್ನು ನೋಡಿದಾಗ ಗೊತ್ತಾಗುತ್ತದೆ.

ಕೂಡಲಸಂಗಮ ಎಂಬ ಅರ್ಥವನ್ನು ಬಸವಣ್ಣನವರ ಮಾತಿನಂತೆ “ಇಲ್ಲಿ ಎಂಬುವನೂ ಸಂಗಮೇಶ್ವರನೆ, ಅಲ್ಲಿ ಎಂಬುವನು ಸಂಗಮೇಶ್ವರನೆ ಆಗಿರುವಾಗ ಕದ್ದುಕೊಂಡು ಹೋದರೆನ್ನಬೇಡಿರಿ”[೧೯] ಎನ್ನುವಲ್ಲಿ ಇಲ್ಲಿ ಮತ್ತು ಅಲ್ಲಿ ಎಂಬಲ್ಲಿ ಹಾಗೂ ಒಳಗೂ ಮತ್ತು ಹೊರಗು ಎನ್ನುವಲ್ಲಿ ಲಿಂಗ ಮತ್ತು ಅಂಗ ಎನ್ನುವಂತೆ, ಶಿವ ಮತ್ತು ಜೀವ ಎನ್ನುವಂತೆ ಕೂಡಲ ಮತ್ತು ಸಂಗಮವಾಗಿದೆ. ಕೂಡಲ ಎನ್ನುವುದನ್ನು ಲಿಂಗವಾಗಿಯೂ, ಶಿವನಾಗಿಯೂ ಪರಿಗಣಿಸಿದರೆ ಸಂಗಮ ಎನ್ನುವುದನ್ನು ಜಂಗಮವಾಗಿ ಕಾಣಬಹುದಾಗಿದೆ. ಕೂಡಲಸಂಗಮವನ್ನು ಕೇವಲ ವಾಚ್ಯಾರ್ಥದ ದೃಷ್ಟಿಯಲ್ಲಿ ಪರಿಗಣಿಸದೇ ಲಕ್ಷ್ಯಾರ್ಥದಲ್ಲಿ ಭಾವಿಸಿದಾಗ ಶಿವ ಮತ್ತು ಜೀವನು ಒಂದಾದಂತೆ ಸಂಗಮನಾಥ ಮತ್ತು ಬಸವಣ್ಣ ಒಂದಾದಂತೆ ಕೂಡಲಸಂಗಮವಾಗಿದೆ ಎಂದು ತಿಳಿಯಬಹುದು.

ಬಸವಣ್ಣ ಮತ್ತು ಕೂಡಲಸಂಗಮನಾಥನ ಸಂಬಂಧವನ್ನು ಅಲ್ಲಮಪ್ರಭುವಿನ ಒಂದು ವಚನದಲ್ಲಿ ವಿಶ್ಲೇಷಣೆಯನ್ನು ಈ ರೀತಿಯಾಗಿ ತಿಳಿಯಬಹುದಾಗಿದೆ.

> “ಒಂದೆಂಬನೆ? ಎರಡಾಗಿದೆ
> ಎರಡೆಂಬನೆ? ಒಂದಾಗಿದೆ
> ಒಂದೆರೆಡೆಂಬ ಸಂದೇಹವಿದೇನೋ?
> ಅಗಲಲಿಲ್ಲದ ಕೂಟಕ್ಕೆ ಬಿಚ್ಚಿ ಬೇರಾಗದ ಉಪದೇಶ
> ಗುರು ಶಿಷ್ಯರೆಂಬ ಭಾವಕ್ಕೆ
> ಬೇಧ ಎಂಟೇ ಗುಹೇಶ್ವರ”[೨೦]

ಅಲ್ಲಮಪ್ರಭುವಿನ ಈ ವಚನವನ್ನು ಗಮನಿಸಿದಾಗ ಸಂಗಮನಾಥ ಮತ್ತು ಬಸವಣ್ಣರ ಸಂಬಂಧ ಅಷ್ಟು ಸುಲಭವಾದದ್ದಲ್ಲ. ಆಧುನಿಕರ ಕಣ್ಣಿಗೆ ವಿಪರೀತವಾಗಿ ಕಂಡರು ಗುರು ಶಿಷ್ಯರ

ಸಂಬಂಧ ಬಿಡಿಸಲಾಗದ ಮತ್ತು ಹೇಳಲಾಗದ ಅತೀತವನ್ನು ಹೊಂದಿದ್ದು ಅಗೋಚರವಾಗಿ ಕಾಣುವಂಥದ್ದಾಗಿದೆ. ಒಂದು ಮತ್ತು ಎರಡೆಂಬ ಸಂದೇಹ ಭಾವವೇ ಏನು? ಎನ್ನುವ ಮೂಲಕ ಸಂಶಯ ಪಡುವವರಿಗೆ ಒಳ್ಳೆಯ ರೀತಿಯಲ್ಲಿ ಎಚ್ಚರಿಸಿದ ಮಾತು ಇದಾಗಿದೆ. ಬಸವ ಮತ್ತು ಸಂಗಮನಾಥನದ್ದು ಅಗಲಲಿಲ್ಲದ ಕೂಟ ಅದು ಅಲ್ಪಮತಿಗಳಿಗೆ ಅರಿಯಲಾರದ ಕೂಟವೆನ್ನುವುದರಲ್ಲಿ ಎರಡು ಮಾತಿಲ್ಲವೆಂದು ಹೇಳಬಹುದಾಗಿದೆ.

ಮುಂದುವರಿದು ಅಲ್ಲಮ ಮತ್ತೊಂದು ವಚನದಲ್ಲಿ ಗುರುಶಿಷ್ಯರ ಸಂಬಂಧವನ್ನು ಹೇಳುವ ಪರಿಯನ್ನು ನೋಡಿದರೆ ಅದು ಸಂಗಮನಾಥ ಮತ್ತು ಬಸವಣ್ಣನವರ ವಿಚಾರವೆಂಬಂತೆ ಭಾಸವಾಗುತ್ತದೆ.

ಕಾಣಬಾರದ ಗುರುವು ಕಂಗೆ ಗೋಚರವಾದರೆ
ಹೇಳಲಿಲ್ಲದ ಭಿನ್ನಪ ಮುಟ್ಟಲಿಲ್ಲದ ಹಸ್ತಮಸ್ತಕ
ಸಂಯೋಗ ಹೂಸಲಿಲ್ಲದ ವಿಭೂತಿಯ ಪಟ್ಟ ಕೇಳಲಿಲ್ಲದ
ಕರ್ಣಮಂತ್ರ ತುಂಬಿ ತುಳುಕುವ ಕಲಶಾಭಿಷೇಕ
ಆಗಮವಿಲ್ಲದ ದೀಕ್ಷೆ ಪೂಜೆಗೆ ಬಾರದಲಿಂಗ
ಸಂಗವಿಲ್ಲದ ಸಂಬಂಧ ಸಮಯಮಪ್ಪ ಅನುಗ್ರಹದ
ಆನುಗೊಂಬಂತೆ ಮಾಡ ಗುಹೇಶ್ವರ[೨೧]

ಅಲ್ಲಮನ ಈ ವಚನ ಅವನು ತನ್ನ ಗುರು ಅನಿಮಿಷನ ಕೂಡಿದ ಮತ್ತು ಅನುಗ್ರಹ ಮಾಡುವ ರೀತಿಯನ್ನು ಹೇಳಿದಂತೆ ಕಂಡರೂ ಇದು ಸಂಗಮೇಶ್ವರ ಮತ್ತು ಬಸವಣ್ಣನನ್ನು ಹೋಲುವುದರಲ್ಲಿ ಎರಡು ಮಾತಿಲ್ಲ. ಸಂಗಮನಾಥನು ಇಷ್ಟದೇವವಾಗಿರದೇ ಗುರುವಾಗಿಯೂ, ತಂದೆಯಾಗಿಯೂ, ಸ್ನೇಹಿತನಾಗಿಯೂ ಅಷ್ಟೆ ಏಕೆ ಸರ್ವಸ್ವವೂ ಆದಾಗ ಅವರಿಬ್ಬರ ಮಧ್ಯದ ಸಂಬಂಧ ನಿಜವಾಗಿಯೂ ಅಲ್ಲಮನ ಈ ಮಾತನ್ನು ಸಮೀಕರಣಗೊಳಿಸುತ್ತಿರುವುದರಲ್ಲಿ ತಪ್ಪಿಲ್ಲವಾಗಿ ತೋರುತ್ತದೆ. ಬಸವಣ್ಣನು ಬಾಗೇವಾಡಿಯಿಂದ ಕೂಡಲಸಂಗಮಕ್ಕೆ ಬಂದಾಗ ಸಂಗಮನ ದರ್ಶನವಾದಾಗ ಬಹುಶಃ ಈ ಮೇಲಿನ ವಚನದ ಎಲ್ಲ ಅನುಭವಗಳು ಆಗಿರುವ ಸಾಧ್ಯತೆಗಳಿವೆ ಎನಿಸುತ್ತದೆ. ಕಾಣಬಾರದ ಗುರುವಾಗಿ ಸಂಗಮನಾಥ ಬಸವಣ್ಣನಿಗೆ ಗೋಚರವಾದಾಗ ಹೇಳಕೂಡದಂಥ ಆರೈಕೆ ಮತ್ತು ತಲೆಯ ಮೇಲೆ ಕೈಯಿಟ್ಟು ಆಶೀರ್ವಾದವನ್ನು ನೀಡದೇ ಇರುವಂಥ ಆಶೀರ್ವಾದ ಮತ್ತು ಕೂಡಿಕೆ ಇಲ್ಲದ ಅಂದರೆ ಉಪದೇಶವಿಲ್ಲದೇ ಕೂಡಿಕೊಂಡಂತೆ ವಿಭೂತಿಯ ಪಟ್ಟ ದೊರೆತಂತೆ ಮತ್ತು ಯಾವ ಮಂತ್ರವನ್ನು ಕೇಳದೆ ಇರುವಂಥ ಕಿವಿಗಳು, ಯಾವಾಗಲೂ ತುಂಬಿ ತುಳುಕುವಂಥ ಸಕಲ ಕುಶಲಾಭಿಷೇಕ, ವೇದಾಗಮಗಳ ಉಪದೇಶವಿಲ್ಲದ ದೀಕ್ಷೆ ಹೀಗೆಲ್ಲ ಇರುವಾಗ ಪೂಜೆಗೆ ಬಾರದೇ ಇರುವಂಥ ಲಿಂಗ ಎಂಬ ಪದ ಬಳಕೆ ವಿಶೇಷವಾಗುತ್ತದೆ. ಲಿಂಗವನ್ನು ಬಹಿರಂಗವಾಗಿ ಆಡಂಬರದಿಂದ ಪೂಜಿಸದೆ ತಾನೇ ಆ ಸ್ವರೂಪದಲ್ಲಿದ್ದು, ಒಂದಾದಂತೆ ಇರಬೇಕೆನ್ನುವ

ಅರ್ಥದಲ್ಲಿ 'ಲಿಂಗ' ಪೂಜೆಗೆ ಬಾರದಂತಾದ್ದು ಎಂದು ಹೇಳಿದ್ದಾರೆ. ಅದೇ ತೆರನಾಗಿ ಸಂಗವಿಲ್ಲದ ಸಂಬಂಧ ಎಂಬ ಪದ ಬಳಕೆಯನ್ನು ನೋಡಿದಾಗ ಅವರಿಬ್ಬರಲ್ಲಿ ಇರುವಂಥ ಏಕೋಭಾವವನ್ನು ಎತ್ತಿ ಹೇಳುತ್ತದೆ. ಹಾಗೆ ಸಮಯಕ್ಕೆ ಸರಿಯಾಗಿ ಬೇಕಾಗುವಂಥ ಅನುಗ್ರಹವನ್ನು ಹೇಳದೇ ಮಾಡುವಂಥವರಾಗಿರಬೇಕೆಂಬುದನ್ನು ನೋಡಿದಾಗ ಸಂಗಮೇಶ್ವರನ ಮತ್ತು ಬಸವಣ್ಣನವರ ಸಂಬಂಧ ಹೇಳಲು ಬಾರದೆನಿಸುತ್ತದೆ.

ಬಸವಣ್ಣನವರ ಮದುವೆ

ಬಸವಣ್ಣನವರು ಬಾಗೇವಾಡಿಯಲ್ಲಿ ಜನಿಸಿ ಕೂಡಲಸಂಗಮದಲ್ಲಿ ಸಂಗಮನಾಥನ ಸಾನಿಧ್ಯದಲ್ಲಿ ಜ್ಞಾನೋದಯವನ್ನು ಪಡೆದಿರುವಂತೆ ಅವರ ಮದುವೆಯೂ ಸಹ ಕೂಡಲಸಂಗಮದಲ್ಲಿ ಆಯಿತು ಎನ್ನುವುದನ್ನು ಕೆಲವು ಕಾವ್ಯಗಳ ಮೂಲಕ ಊಹಿಸಬಹುದಾಗಿದೆ. ಬಸವಣ್ಣನ ಪತ್ನಿಯರಾದ ಗಂಗಾಂಬಿಕೆ ಮತ್ತು ನೀಲಾಂಬಿಕೆಯರು ಬಸವಣ್ಣನವರ ಬಾಳಿನಲ್ಲಿ ಬರುವುದಕ್ಕೂ ಮತ್ತು ಕೂಡಲಸಂಗಮದ ಸಂಗಮನಾಥನಿಗೂ ಇರುವಂಥ ಸಂಬಂಧವನ್ನು ಅವಲೋಕಿಸಿದಾಗ ಬಸವಣ್ಣನವರು ಗಂಗಾಂಬಿಕೆಯನ್ನು ಕೂಡಲಸಂಗಮದಲ್ಲಿ ಮದುವೆಯಾಗಿರುವ ಸಾಧ್ಯತೆಗಳಿವೆ ಎಂದು ತಿಳಿಯಬಹುದಾಗಿದೆ. ಗಂಗಾಂಬಿಕೆಯ ತಂದೆ ಬಲದೇವ ಮಂತ್ರಿಯೆಂದು ಭೀಮಕವಿಯ ಬಸವಪುರಾಣ, ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ, ಷಡಕ್ಷರದೇವನ ಬಸವರಾಜ ವಿಜಯ, ಜನಪದ ಪುರಾಣಗಳಾದ ಮೌಖಿಕ ಕಾವ್ಯಗಳಲ್ಲಿ ದಾಖಲಾದ ಕರಪಾಲ ಬಸವಪುರಾಣಗಳಲ್ಲಿಯೂ ಗಂಗಾಂಬಿಕೆಯು ಮಂತ್ರಿ ಬಲದೇವನ ಮಗಳು ಎಂದು ಉಲ್ಲೇಖಿಸುತ್ತವೆ. ಆದರೆ ಹರಿಹರ ಕವಿಯು ಮಾತ್ರ ಗಂಗಾಂಬಿಕೆಯ ತಂದೆ ಸಿದ್ಧರಸನೆಂದು ಹೇಳುತ್ತಾನೆ.[೨೨] ಆದರೆ ಗಂಗಾಂಬಿಕೆ ತಾಯಿಯ ಹೆಸರು ಯಾವ ಕಾವ್ಯಗಳಲ್ಲೂ ಬರುವುದಿಲ್ಲ. ಹಾಗೂ ತಂದೆಯಾದ ಬಲದೇವ ಮಂತ್ರಿ ಹೆಸರನ್ನು ಕ್ರಿ.ಶ. ೧೧೬೩ರ ಕುಕನೂರು ಶಾಸನವು ಈ ರೀತಿಯಾಗಿ ಉಲ್ಲೇಖಿಸಿದೆ.

> ಇನ್ತೆನಿಸಿದ ಕುಕ್ಕನೂರ ಆ ಮೂವತ್ತಱ ಪಲವುಂ
> ಬಾಡಂಗಳಧಿಕಾರಿ ಮಹಾಪ್ರಧಾನಂ ದಂಡನಾಯಕ
> ಬಲದೇವಯ್ಯನ ಕರಣಂಗವಿ ಬಿನ್ನಪದಿಂ"[೨೩]

೧೧೬೩ರ ಈ ಶಾಸನದ ಪ್ರಕಾರ ಬಲದೇವನು ಬಿಜ್ಜಳನ ಆಳ್ವಿಕೆಯ ಕಾಲದಲ್ಲಿ ಕುಕನೂರು ಮೂವತ್ತರ ಹಲವು ಬಾಡಗಳ ಅಧಿಕಾರಿ ಪ್ರಧಾನ ದಂಡನಾಯಕ ಬಲದೇವಯ್ಯ ಆಗಿದ್ದಾನೆ ಎಂದು ಶಾಸನವು ತಿಳಿಸುತ್ತದೆ. ಇಲ್ಲಿ ಉಲ್ಲೇಖವಾಗಿರುವ ಬಲದೇವಯ್ಯ ಕಾವ್ಯಗಳಲ್ಲಿ ಬರುವ ಬಲದೇವಯ್ಯನೇ ಎಂದು ಊಹಿಸಬಹುದಾಗಿದೆ. ಇದರಿಂದ ಗಂಗಾಂಬಿಕೆಯ ತಂದೆಯು ಬಲದೇವನೆಂದು ಅವನು ಬಿಜ್ಜಳನ ಆಸ್ಥಾನದಲ್ಲಿ ಮಹಾ ದಂಡನಾಯಕನಾಗಿದ್ದನೆಂದು ತಿಳಿಯಬಹುದಾಗಿದೆ. ಅದೇ ತೆರನಾಗಿ ಬೀದರ ಜಿಲ್ಲೆಯ ಕ್ರಿ.ಶ. ೧೯೬೯ರ ಶಾಸನದಲ್ಲಿ ಈ ರೀತಿಯಾಗಿ ಉಲ್ಲೇಖವಾಗಿದೆ.

"ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮ (ಣ್ಣ)
(ಳೆ)ಶ್ವರಂ ಬಲದೇವರಸ ಕಯ್ಯಲು ಧಾರಪೂರ್ಬ್ಬಕಮಾಗೆ
ಪಡೆದು ಪರಮೇಶ್ವರ ದತ್ತಿಯಾಗಿ ಮಾಡಿ ಸಕವರ್ಷ
೧೧೯೧ನೆಯ ಕಳಚೂರಿಯ ಭು(ಬ)
ಬವಿ ಚಕ್ರವರ್ತಿರಾಯ ಮುರಾರಿ ಸೋಯಿದೇವ ವರ್ಷದ ೨ನೆಯ
ಸರ್ವಧಾರಿ ಸಂವತ್ಸರ ದುತ್ತರಾಯಣ ಸಂಕ್ರಮಣದೊಳು ಹಲವು
ಮಹಾದನಂಗಳಮ್ಮಾಡಿ"[೨೪]

ಬಲದೇವರಸ ತನ್ನ ಕೈಯಿಂದ ದಾರಾಳಪೂರ್ವಕವಾಗಿ ದಾನವನ್ನು ಮಾಡಿದನು ಎಂಬ ವಿಷಯವಿದೆ. ಈ ಶಾಸನದ ಪ್ರಕಾರ ೧೧೯೯ರವರೆಗೆ ಗಂಗಾಂಬಿಕೆಯ ತಂದೆ ಬದುಕಿದ್ದನು ಎಂದು ತಿಳಿಯುತ್ತದೆ. ರಾಯಮುರಾರಿ ಸೋಅದೇವನಿಗೂ ಬಲದೇವ ಮಂತ್ರಿಯಾಗಿದ್ದನು ಎಂದು ಊಹಿಸಬಹುದಾಗಿದೆ. ಕಾವ್ಯಗಳು ಹೇಳುವ ಬಲದೇವ ಮಂತ್ರಿ ಈ ಶಾಸನ ಹೇಳುವ ಬಲದೇವರಸ ಒಂದೇ ಎಂದು ಗ್ರಹಿಸಬಹುದು. ಇವೆರಡು ಶಾಸನಗಳು ಬಲದೇವ ಕರ್ನಾಟಕದಲ್ಲಿಯೇ ಇದ್ದುದನ್ನು ಹೇಳುತ್ತವೆ. ಮಂಗಳವೇಡೆಯಲ್ಲಿ ಇದ್ದಿರಬಹುದಾದರೂ ಕಲ್ಯಾಣಕ್ಕೆ ರಾಜಧಾನಿ ವರ್ಗಾವಣೆಯಾಗಿರುವುದನ್ನು ಇದು ಸೂಚಿಸುತ್ತದೆ. ಆದರೂ ಇಂಗಳೇಶ್ವರದವರಾಗಿದ್ದರಿಂದ ಇದನ್ನು ಊಹಿಸಬಹುದಾಗಿದೆ. ಈ ಬಲದೇವನ ಮಗಳಾದ ಗಂಗಾಂಬಿಕೆಯ ವಿವಾಹವು ಕೂಡಲಸಂಗಮದಲ್ಲಿ ನೆರವೇರಿರಬಹುದು ಎನ್ನುವುದಕ್ಕೆ ಕೆಲವು ಆಧಾರಗಳನ್ನು ನೀಡಬಹುದು.

ಬಸವಣ್ಣನ್ನೊಂದಿಗೆ ಗಂಗಾಂಬಿಕೆಯ ವಿವಾಹವು ತನ್ನ ಸೋದರತ್ತೆಯ ಮಗನಾದ ಬಸವಣ್ಣನೊಂದಿಗೆ ನೆರವೇರಿರುವುದಕ್ಕೆ ಪ್ರಾರಂಭವಾಗುತ್ತದೆ. ಅದು ಬಸವಪುರಾಣದಲ್ಲಿ ಇಂತಿದೆ.

ಮಾದಲಾಂಬೆಯ ಸೋದರನು ಶಿವ
ಪಾದಪಂಕಜ ಭಕ್ತಿಯುಕ್ತನು
ಮೇದಿನೀಶ್ವರ ಬಿಜ್ಜಳನ ಭಂಡಾರಿ ಬಲದೇವ
ಆದಿ ಶಿವಭಕ್ತಂಗೆ ಮದುವೆಯ
ನಾದರದಿ ನಾ ಮಾಳ್ಪೆನಲ್ಲದೆ
ಈ ದುಹಿತೆಯಂ ಭವಿಗೆ ಕೂಡನೆಂದೆಂಬ ಭಾಷೆಯಲಿ[೨೫]

ಬಲದೇವನು ಬಸವಣ್ಣನ ತಾಯಿ ಮಾದಲಾಂಬೆಯ ಸಹೋದರನಾಗಿದ್ದು, ಮಗಳು ಗಂಗಾಂಬಿಕೆಯನ್ನು ಶಿವಭಕ್ತರಾದವರಿಗೆ ಕೊಡುವೆನು ಹೊರತು ಭವಿಗಳಿಗೆ ಕೊಡುವುದಿಲ್ಲವೆಂದು ನುಡಿಯುವ ಮೂಲಕ ತನ್ನ ಮಗಳನ್ನು ಬಸವಣ್ಣನಿಗೆ ಕೊಡಬೇಕೆಂದು ನಿರ್ಧರಿಸಿರುತ್ತಾನೆ ಎಂದು ತಿಳಿಯಬಹುದು. ನನ್ನ ಮಗಳನ್ನು ನೀವು ಮದುವೆಯಾಗಬೇಕೆಂದು ಬಲದೇವನು ಬಸವಣ್ಣನ ಬಳಿಗೆ ಬಂದು ಕೇಳುವ ಸಂದರ್ಭ ಹೀಗಿದೆ.

ಎನ್ನ ಮಗಳಂ ಸ್ವೀಕರಿಸಿ ನೀ
ವೆನ್ನನುದ್ಧರಿಸುವುದು ವಿಶ್ವಜ
ಗುನ್ನುತೈಕಾಮಾತ್ರ ಸಜ್ಜನ ಭಕ್ತಿ ಚಾರಿತ್ರ
ಎನ್ನ ಭಕ್ತಿ ಪ್ರಾರ್ಥನೆಗಳಂ
ಮನ್ನಿಸೆನುತಾ ಬಸವನನುಮತ
ದಿನ್ನಗರಿಯಂ ಶೋಭನಾರ್ಥವಲಂಕರಿಸವೇಳ್ದು[೨೬]

ಜನಪದ ಬಸವಪುರಾಣದಲ್ಲಿಯೂ ಈಕೆಯ ವಿವಾಹದ ಉಲ್ಲೇಖವಿರುವುದನ್ನು ಕಾಣಬಹುದಾಗಿದೆ.

ನಮ್ಮ ಮಗಳ ಗಂಗಾಂಬೆ ನಿಮಗೆ ಲಗ್ನ ಮಾಡುವೆನು
ನಮ್ಮ ಪಟ್ಟಣಕೆ ದಯಮಾಡಿ
ಗುರುವಿನಿಂದ ಅಪ್ಪಣೆ ಪಡೆದುಕೊಂಡು ಬಸವಣ್ಣ
ಪಿಪ್ಪಲ ಪಟ್ಟಣಕೆ ಬೀಜ ಮಾಡುತಾರೆ
ಪಿಪ್ಪಲ ಪಟ್ಟಣಕೆ ಬಂದಾಗ ಬಸವಣ್ಣ
ಮದುವೆ ಕಲ್ಯಾಣ ಅವರ್ಗೆ ಮಾಡಿದರು
ಸೋದರಮಾವ ನೀವು ಸುಖವಾಗಿ ಬಾಳಿ ಬಸವಣ್ಣ[೨೭]

ಬಸವಣ್ಣನಿಗೆ ನಮ್ಮ ಮಗಳು ಗಂಗಾಂಬಿಕೆಯನ್ನು ನಿಮಗೆ ಲಗ್ನ ಮಾಡಿಕೊಡುವೆನೆಂದು ಮಂಗಳವಾಡೆಗೆ ಕರೆಯಲು ಕೂಡಲಸಂಗಮಕ್ಕೆ ಬಂದನೆಂದು ಮತ್ತಲ್ಲಿಯೇ ಅವರ ವಿವಾಹವನ್ನು ಮಾಡಿರಬಹುದೆಂದು ಊಹಿಸಬಹುದಾಗಿದೆ. ಕರಪಾಲ ಬಸವಪುರಾಣವು ಈಕೆಯ ವಿವಾಹದ ಬಗ್ಗೆ ತಿಳಿಸುತ್ತದೆ. ಇಲ್ಲಿ ಮದುವೆಯ ನಿಮಿತ್ತವಾಗಿ ನಗರ ಅಲಂಕಾರಗೊಂಡಿದ್ದು ಹಾಗೂ ಕನ್ಯಾ ಅಲಂಕಾರ, ವರನ ಅಲಂಕಾರ ಮಾಡಿದ್ದನ್ನು ಈ ರೀತಿಯಾಗಿ ವರ್ಣಿಸಲಾಗಿದೆ.

ಈ ಕಾವ್ಯದಲ್ಲಿ ಗಂಗಾಂಬಿಕೆಯನ್ನು ಸರ್ವ ಅಲಂಕಾರ ಭೂಷಿತಳನ್ನಾಗಿ ಮಾಡಿ ಬಸವಣ್ಣನೊಡನೆ ವಿವಾಹ ಮಾಡಿದ್ದು ಗೊತ್ತಾಗುತ್ತದೆ. ಹಾಗೆಯೇ ಜನಪದ ಕಥನ ಗೀತೆಯೊಂದರಲ್ಲಿ ಬಸವಣ್ಣ ಮತ್ತು ಗಂಗಾಂಬಿಕೆಯರ ಮದುವೆಯ ವಿಚಾರವನ್ನು ಪ್ರಸ್ತಾಪಿಸಲಾಗಿದೆ.

"ಗುರುವಿನ ಅಪ್ಪಣೆ ಹರನ ಕರುಣೆಯೆಂದು
ಕರಪಿಡಿದು ಕಟ್ಟಿದ ಮಾಂಗಲ್ಯ ಗಂಗಾಗ
ವರಸತಿ ಎಂದು ಒಪ್ಪಿದ"[೨೮]

ಈ ಪದ್ಯವು ಬಸವಣ್ಣನು ಗುರುವನ್ನು ಮತ್ತು ಹರನನ್ನು ಎಂಬ ವಿಚಾರ ಪ್ರಸ್ತಾಪಿಸಿದ್ದು, ಗುರುವೆಂದರೆ ಸಂಗಮನಾಥನೆಂದು ಇದಕ್ಕೆ ಶಿವನ ಆಶೀರ್ವಾದವು ಇದ್ದುದಕ್ಕಾಗಿ ಗಂಗಾಂಬಿಕೆಯನ್ನು ಸತಿಯನ್ನಾಗಿ ಮಾಡಿಕೊಂಡನೆಂದು ತಿಳಿಯಬಹುದು.

ಆದರೆ ಬಸವಪುರಾಣದಲ್ಲಿ ಮದುವೆಯ ನಂತರದಲ್ಲಿ ಕೂಡಲಸಂಗಮಕ್ಕೆ ಬಸವ ದಂಪತಿಗಳು ಬಂದಿರಬಹುದು ಎಂದು ತಿಳಿಸುತ್ತದೆ.

"ಮುಂಗಡೆಯೊಳಿದೆ ಒಪ್ಪಿ ಕಪ್ಪಡಿ
ಸಂಗಮೇಶ್ವರದಲ್ಲಿ ಮದ್ಗುರು
ಲಿಂಗವಿದ್ದನೆಯ್ದೆ ನಾವವರಹಿಗಳಂ ಕಂಡು
ಹಿಂಗದರ್ಚಿಸಿ ನಿಮ್ಮ ಕರುಣಾ
ಪಾಂಗದಿಂ ಭಕ್ತ್ಯಂಗನೆಯನಾ
ಲಿಂಗಿಸುವೆನೆನುತಾ ಮಹಾಭಕ್ತರ ನಿರೂಪದಲಿ"[೩೦]

ಬಸವ ಮತ್ತು ಗಂಗಾಂಬಿಕೆಯರ ಮದುವೆಯು ಮಹಾಮನೆಯಲ್ಲಿದ್ದಾಗ ಅವನ ಉಪನಯನಕ್ಕೆಂದು ಬಂದಿದ್ದ ಸೋದರಮಾವ ಬಲದೇವನು ತನ್ನ ಮಗಳಾದ ಗಂಗಾಂಬಿಕೆಯನ್ನು ಕೊಟ್ಟು ಮದುವೆ ಮಾಡುವನು. ಸಮಾರಂಭ ಮುಗಿದೊಡನೆ ಬಸವನು ಮುಂಗಡೆಯಲ್ಲೇ ಇರುವ ಕೂಡಲಸಂಗಮದಲ್ಲಿ ತನ್ನ ಗುರುಲಿಂಗರಿರುವರೆಂದೂ ಅವರ ಪಾದಗಳನ್ನರ್ಚಿಸಿ ಭಕ್ತಂಗನೆಯನಾಲಂಗಿಸಬೇಕೆಂದು ಹೇಳಿ ಹೆಂಡತಿ ಮತ್ತು ಅಕ್ಕ ನಾಗಲಾಂಬಿಕೆಯೊಡನೆ ಸಂಗಮಕ್ಕೆ ಬರುವನು. ಸಂಗಮಾಲಯಕ್ಕೆ ಬರುತ್ತಲೇ ಸಂಗಮನು ತಪಸ್ವಿಯ ವೇಶದಲ್ಲಿ ಬಂದು ಬಸವಣ್ಣನಿಗೆ ಉಪದೇಶ ಕೊಡುವನು. ಈ ಸಂದರ್ಭದಲ್ಲಿ ಕೂಡಲಸಂಗಮ ಪುರವನ್ನು ಭೀಮಕವಿಯು ಮನದುಂಬಿ ಹೊಗಳುತ್ತಾನೆ.

"ಇಷ್ಟ ಸದ್ಗುರುವಿಪ್ಪ ಪುರವದು
ದೃಷ್ಟಿಗೋಚರವಾಗೆಸೆಯಲು
ತೃಷ್ಟಭಕ್ತಿಯೊಳಲ್ಲಿಗಲ್ಲಿಗೆ ವಂದಿಸುತ ಬಸವ
ಶಿಷ್ಟದಿಂ ಕಾಣ್ಬಳತೆಯಲಿನಡೆ
ವಪ್ಪು ದೂರಂಕೀರ್ತಿಸುತ್ತೊಸೆ
ದಷ್ಟಮಂತ್ರದೊಳಿಂತು ಯೋಜನ ಮಾತ್ರ ವೈತಂದು"[೩೧]

ಬಸವಣ್ಣನು ಕೂಡಲಸಂಗಮವನ್ನು ಪ್ರವೇಶ ಮಾಡುವಾಗ ಅವನಲ್ಲಿ ಇರುವಂಥ ಕಾತುರತೆಯನ್ನು ಅವನು ಧಾವಿಸಿದ ಪರಿಯಿಂದ ದೃಢ ಮಾಡಿಕೊಳ್ಳಬಹುದುಈ ಕ್ಷೇತ್ರವು ಬಸವಣ್ಣನ ಇಷ್ಟ ಸದ್ಗುರುವಿನ ಸ್ಥಾನವಾಗಿದೆ. ಆ ಪುರವು ನೋಟಕ್ಕೆ ಅಗೋಚರವೆಂಬಂತೆ ಭಾಸವಾಗುತ್ತದೆ. ಉತ್ಕೃಷ್ಟವಾದ ಭಕ್ತಿಯಿಂದ ಬಸವನು ಅಲ್ಲಿ ಇದ್ದವರಿಗೆಲ್ಲ ವಂದಿಸುತ್ತಾ ಕೂಡಲಸಂಗಮವನ್ನು ಪ್ರವೇಶಿಸುತ್ತಾನೆ. ಈ ಸಂದರ್ಭವನ್ನು ಸ್ವರ್ಗದೋಪಾದಿಯಲ್ಲಿ ವರ್ಣಿಸುತ್ತದೆ.

"ಪುರದ ನದಿಗಳು ಪುಣ್ಯತೀರ್ಥೋ
ತ್ಕರವುಳಿದ ದೇವಾಲಯಗಳು
ಹರನಿವಾಸಂಗಳು ಗಿರಿಗಳುಂ ಕಾಂಚನಾದ್ರಿಗಳು

ತರುಗಳಂ ರುದ್ರಾಕ್ಷತರುಗಳು
ಪರಿಮಿತದ ವನವದು ಕುಸುಮವ
ಲ್ಲರಿಗಳಾ ಕಣಿಗಳು ವಿಭೂತಿಯ ಕಣಿಗಳಾಗಿರ್ಕು"[೩೨]

ಕೂಡಲಸಂಗಮದಲ್ಲಿ ಹರಿಯುವಂಥ ನದಿಗಳು ಪುಣ್ಯ ತೀರ್ಥವನ್ನು ನೀಡುವಂಥವುಗಳು, ಅಲ್ಲಿರುವ ದೇವಾಲಯಗಳು ಹರನ ಅಂದರೆ ಶಿವನ ನಿವಾಸಗಳು, ಅಲ್ಲಿರುವ ಬೆಟ್ಟಗಳು ಬಂಗಾರದವುಗಳು, ಅಲ್ಲಿಯ ಗಿಡ-ಮರಗಳು ರುದ್ರಾಕ್ಷಿಯನ್ನು ಬೆಳೆಯುವಂಥವುಗಳು, ಬಹಳಷ್ಟು ಬೆಳೆಯುವಂಥ ಹೂವಿನ ವನಗಳು, ಅಲ್ಲಿರುವಂತಹ ಕಣಿವೆಗಳು ವಿಭೂತಿಯ ಕಣಿವೆಗಳಾಗಿವೆ. ಅಂದರೆ ಕೂಡಲಸಂಗಮವು ಶಿವನು ನೆಲೆಸಿರುವಂತ ಸ್ವರ್ಗವಾಗಿದೆ ಎಂದರೆ ತಪ್ಪಾಗಲಾರದು.

ಮುಂದುವರಿದು ಕೂಡಲಸಂಗಮದ ಪ್ರಾಣಿಗಳನ್ನು ಮತ್ತು ಮನುಷ್ಯರನ್ನು ಹೋಲಿಸುವ ಪರಿಯನ್ನು ನೋಡಿದರೆ ಕವಿಯ ಭಾವಾಭಿಲಾಷೆಯ ಉತ್ಕಟತೆಯು ಎಷ್ಟಿತ್ತು ಎಂದು ತೋರುತ್ತದೆ.

"ಆ ಪಶುಗಳುಂ ಕಾಮದೇನುಗ
ಳಾಪುರದ ಹೋರಿಗಳು ನಂದಿಯ
ರೂಪಿನಂತಹವಾ ಕೊಳಂಗಳು ತಾವು ಸರಸಿಗಳು
ಆಪುರದ ನರರೀಶ್ವರಾರ್ಚಕ
ರಾಪುರದ ಚರಜೀವ ಸಂತತಿ
ರೂಪಿಸಲು ವಸುಮತಿಗೆ ಕಾರಣ ಪುರುಷ ರೂಪಗಳು"[೩೩]

ಕೂಡಲಸಂಗಮದಲ್ಲಿ ಇರುವಂಥ ಪಶುಗಳೆಲ್ಲವು ಕಾಮಧೇನುಗಳಂತೆ ಅಲ್ಲಿರುವಂಥೆ ಹೋರಿಗಳು ನಂದಿಯ ಸ್ವರೂಪವು ಅಲ್ಲಿ ಕೊಳಗಳೆಲ್ಲವು ಕಮಲಮಯವಾದವುಗಳು, ಆ ಪುರದಲ್ಲಿ ಇರುವಂಥ ಮನುಷ್ಯರು ಈಶ್ವರನ ಅರ್ಚಕರು, ಅಲ್ಲಿಯ ಜೀವ ಸಂತತಿಯು ಅಳಿವಿಲ್ಲದದು ಎಂದು ಹೇಳುವ ಮೂಲಕ ಕೂಡಲಸಂಗಮಕ್ಕೆ ಬಸವನು ಬರುವಾಗ ಅವನ ಮನಸ್ಥಿತಿಯು ಆ ಊರಿನ ಬಗ್ಗೆ ಮತ್ತು ಸಂಗಮೇಶ್ವರನ ಮೇಲೆ ಇಟ್ಟಿರುವ ಭಕ್ತಿಯ ಪರಿಯನ್ನು ಸೂಚಿಸುವಂಥದ್ದಾಗಿದೆ. ಕೂಡಲಸಂಗಮದ ನಾರಿಯರು ಪತಿವ್ರತಾ ಶಿರೋಮಣಿಯಂತೆ ಮಾತನಾಡುವುದೆಲ್ಲ ತತ್ವವಾಗಿರುವುದು. ಅವರಾಡುವ ಭಾಷೆಯು ಮತ್ತು ಮಾತುಗಳು ತೂರ್ಯಭಾವದಿಂದ ಕೂಡಿರುವಂಥದು. ಒಟ್ಟಾರೆಯಾಗಿ ಸಂಪೂರ್ಣ ಮುಕ್ತಿ ನಿಧಿಯಾಗಿರುವ ಸ್ಥಳ ಕೂಡಲಸಂಗಮವಾಗಿದೆ ಎಂದು ಹೇಳಬಹುದು.

"ಧರೆಗೆ ಕಪ್ಪಡಿ ಸಂಗಮೇಶ್ವರ
ಪುರವೆಸೆವುದಲ್ಲಿ ಪ್ರಸಿದ್ಧೋ
ದ್ಧರಣ ಕೂಡಲಸಂಗಮೇಶನ ಮಂದಿರಕೆ ಪೋಗಿ
ನೆರೆದ ಭಕ್ತರು ತನ್ನನಿದಿರ್ಗೊಳು

ತಿರೆ ತದೀಯದ್ವಾರದೊಳು ಸ
ದ್ಗುರುಪದಕೆ ಸಾಸ್ಟಾಂಗವೆಱಗಿಯಲರ್ದು ಪೊಡವಟ್ಟು"[೨೪]

ಕೂಡಲಸಂಗಮವು ಭೂಮಿಗೆ ಪ್ರಸಿದ್ಧಿಯನ್ನು ಪಡೆದಿತ್ತು. ಅಲ್ಲಿ ಪ್ರಸಿದ್ಧನಾದ ಕೂಡಲಸಂಗಮೇಶನ ಮಂದಿರವು ಅಲ್ಲಿಗೆ ಬಸವಣ್ಣನೆಂದು ಹೇಳುತ್ತಾ ಅಲ್ಲಿಯ ಭಕ್ತರನ್ನು ಕಣ್ತುಂಬಿಕೊಳ್ಳುತ್ತಾನೆ. ಬಸವಣ್ಣನೆಂದರೆ ಸಂಗಮೇಶ್ವರನಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಮಾಡುವ ಮೂಲಕ ಹರ್ಷಿತನಾಗುತ್ತಾನೆ. ಬಸವನನ್ನು ನೋಡಿದ ಸಂಗಮೇಶನಿಗೂ ಸಂತಸವಾಗುತ್ತದೆ. ನಂತರ ತನ್ನ ಮೂಲ ರೂಪವನ್ನು ಬದಲಾಯಿಸಿ ದೇಗುಲದ ಹೊರಗೆ ಬರುತ್ತಾನೆ. ಹೀಗೆ ಇರುವಂಥ ಸಂದರ್ಭದಲ್ಲಿ ಬಸವನು ಸಂಭ್ರಮದಿಂದ ಇರುವುದನ್ನು ಈ ರೀತಿಯಾಗಿ ಉಲ್ಲೇಖಿಸುತ್ತಾನೆ.

"ಇತ್ತ ಸದ್ಗುರು ಮೂರ್ತಿಣಯಂ ರಾ
ಣುತ್ತ ಧಿಕ್ಕನೆ ಹೆದರಿ ಸಂಭ್ರಮಿ
ಸುತ್ತ ಬಸವನು ಪಿರಿದು ಭಯಮು ಮನತಿ ಸುಭಕ್ತಿಯಮಂ
ಚಿತ್ತದೊಳು ಪುರಿಗೊಂಡು ಹರಷಂ
ಬೊತ್ತು ತಾವೊಂದೊಂದು ದೊಂದಣಿ
ಸುತ್ತವಿದೆ ಮತ್ತೊಡನೆ ಸಾಷ್ಟಾಂಗದೊಳಱಗಿ ನಮಿಸಿ"[೨೫]

ಸದ್ಗುರು ಮೂರ್ತಿಯಾದ ಸಂಗಮೇಶ್ವರನನ್ನು ಕಾಣುತ್ತಲೆ ಬಸವ ಒಮ್ಮೆಲೆ ಹೆದರುತ್ತಾನೆ, ಸಂಭ್ರಮಿಸುತ್ತಾನೆ, ಭಯ-ಭಕ್ತಿಯಿಂದ ಚಿತ್ತದಲ್ಲಿ ಏಕೋಭಾವದಿಂದ ಸಾಷ್ಟಾಂಗ ನಮಸ್ಕಾರಗಳನ್ನು ಸಲ್ಲಿಸುತ್ತಾನೆ.

ಕಪ್ಪಡಿ ಸಂಗಮದಲ್ಲಿ ಭಕ್ತಿ ಸಾಧನೆಗೈದು ವಿದ್ಯಾಭ್ಯಾಸವನ್ನು ಮುಗಿಸಿ ಕಾಯಕ ಮಾಡಬೇಕು ಎಂಬ ವಿಚಾರದಿಂದ ಪರಾವಲಂಬಿ ಜೀವನ ನಡೆಸಲು ಮುಂದಾದ ಬಸವಣ್ಣ ಉದ್ಯೋಗಕ್ಕಾಗಿ ತಲಕಾಡು ನಾಡಿನ ಮಂಗಳವೇಡಕ್ಕೆ ಬರುತ್ತಾನೆ. ಬಸವಣ್ಣ ಮಂಗಳವೇಡಕ್ಕೆ ಬಂದ ಸಂದರ್ಭದಲ್ಲಿ ಬಿಜ್ಜಳನು ಚಾಲುಕ್ಯ ಸಾಮ್ರಾಜ್ಯವನ್ನು ಕಸಿದುಕೊಂಡಿದ್ದು ಇನ್ನೂ ಚಕ್ರವರ್ತಿಎಂದು ಘೋಷಿಸಿಕೊಂಡಿರಲಿಲ್ಲ. ಮಹಾ ಮಂಡಳೇಶ್ವನಾಗಿದ್ದು ಪ್ರಬಲ ಅರಸನಾದ ಕಾರಣ ಚಾಲುಕ್ಯ ಸಾಮಂತನಾಗಿದ್ದ ಸಣ್ಣಪುಟ್ಟ ಅರಸರು ಕಪ್ಪಕಾಣಿಕೆಯನ್ನು ಕೊಡುತ್ತಿದ್ದರು. ಆ ಸಮಯದಲ್ಲಿ ನೇರವಾಗಿ ಬಸವಣ್ಣ ಬಿಜ್ಜಳನ ಕರಣ ಶಾಲೆಗೆ ಬರುತ್ತಾನೆ. ಅಲ್ಲಿ ಲೆಕ್ಕವನ್ನು ಬರೆಯುತ್ತಿದ್ದ ಗಣಕರನು ಕಂಡರೂ ಅವರ ಮುಂದೆ ಕರಣರು ಕುಳಿತಿರುವುದನ್ನು ದಂಡನಾಥರು ಬಂದುಹೋಗುತ್ತಿರುವುದನ್ನು ಲಂಚಕೊಡುವವರನ್ನು ಕಂಡರು. ಹಾಗೆಯೇ ಲೆಕ್ಕವನ್ನು ಒಪ್ಪಿಸಲು ಬಂದ ರಾಜ ಪುತ್ರನನ್ನು ಆಳುಗಳು ಬೆದರಿಸುವ ದೃಶ್ಯವನ್ನು ಕಂಡು ಬೆರಗಾದರು.

ಆ ಕರಣಶಾಲೆಯಲ್ಲಿ ಮುಖ್ಯಾಧಿಕಾರಿ ಕಮ್ಮಕುಲದ ಸಿದ್ದದಂಡಾಧಿಪನೆಂಬ ಭಂಡಾರಿ ತನ್ನ ಲೆಕ್ಕಗಳನ್ನು ಕುರಿತು ಕೇಳಿದಾಗ ಗಣಕರು ತಪ್ಪಾಗಿ ಲೆಕ್ಕವನ್ನು ಒಪ್ಪಿಸುತ್ತಾರೆ. ಅಲ್ಲಿಯೇ ಇದ್ದ ಬಸವಣ್ಣ ತಪ್ಪಾದ ಲೆಕ್ಕಗಳನ್ನು ಸರಿಪಡಿಸಿ ಸಿದ್ದದಂಡಾಧಿಪತಿಗಳಿಗೆ ಐವತ್ತು ಲಕ್ಷದಷ್ಟು ಹಣವನ್ನು ಉಳಿತಾಯ ಮಾಡಿದನು. ಬಸವಣ್ಣನ ಕುಶಾಗ್ರ ಬುದ್ಧಿಗೆ ಮೆಚ್ಚಿ ತನ್ನ ಭಂಡಾರದಲ್ಲಿ ನೇಮಿಸಿಕೊಳ್ಳಲು

ಬಯಸಿ ಬಿಜ್ಜಳ ಮಹಾರಾಜನಲ್ಲಿಗೆ ಕರೆದುಕೊಂಡು ಹೋಗುತ್ತಾನೆ. ಬಸವಣ್ಣನ್ನು ಹೊಗಳಿ ನೂರೊಂದು ಹೊನ್ನನ್ನು ಅವರ ಕಾರ್ಯಕ್ಕೆ ಗೊತ್ತು ಮಾಡುತ್ತಾನೆ. ಹಾಗೆಯೇ ಇನ್ನೊಂದು ವಿಚಾರವೆಂದರೆ, ಬಿಜ್ಜಳನ ಆಸ್ಥಾನದಲ್ಲಿಯೇ ಸೋದರ ಮಾವಂದಿರಾದ ಸಿದ್ದರಸ ಮತ್ತು ಬಲಬೇವರು ಕೆಲಸ ಮಾಡುತ್ತಿರುವುದು ಬಾಂಧವ್ಯಕ್ಕೆ ತಳಹದಿಯಾಗುತ್ತದೆ. ಕಾಲಾಂತರದಲ್ಲಿ ಸಿದ್ಧ ದಂಡಾಧಿಪನು ಅಸುನೀಗಲು ಬಿಜ್ಜಳ ಮಹಾರಾಜ ಅವರ ಭಂಡಾರಿ ಪದವಿಯನ್ನು ಬಸವಣ್ಣನವರಿಗೆ ಕೊಡುತ್ತಾನೆ. ಇದರಿಂದ ಹಿರಿಯ ಅಧಿಕಾರಿಗಳಿಗೆ ಇರಬೇಕಾದ ಪದವಿ ದಂಡನಾಥ ಎಂಬ ವಿಶೇಷ ಬಸವಣ್ಣನಿಗೆ ಇದ್ದು ಬಿಜ್ಜಳನ ಆಸ್ಥಾನದಲ್ಲಿ ಪ್ರಮುಖ ಸ್ಥಾನ–ಮಾನ ಸಿಕ್ಕಿರುವುದು ವಿಶೇಷವಾಗಿದೆ. ಸನ್ಯಾಸದಲ್ಲಿ ಆಸಕ್ತಿ ಇರದ ಬಸವಣ್ಣನಿಗೆ ವೈವಾಹಿಕ ಜೀವನದಲ್ಲಿ ಇದ್ದುಕೊಂಡು ಸಾಧನೆ ಮಾಡಬೇಕು ಎಂಬುದು ಅವರ ನಿಲುವು. ಸತಿ ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವನಿಗೆ ಎಂಬ ವಚನದಂತೆ ಗಂಗಾಂಬಿಕೆ ನೀಲಾಂಬಿಕೆ ಎಂಬ ಇಬ್ಬರು ಪತ್ನಿಯರಿದ್ದು, ಗಂಗಾದೇವಿ ಬಲದೇವನ ಮಗಳು. ನೀಲಾಂಬಿಕೆ ಸಿದ್ದರಸನ ಮಗಳು. ಬಲದೇವ, ಸಿದ್ದರಸರು ಸಹೋದರರಾಗಿದ್ದರೆಂದು ಚರಿತ್ರೆಯಿಂದ ತಿಳಿದುಬರುತ್ತದೆ. ಬಸವಣ್ಣನವರ ಸಂಸಾರಿಕ ಜೀವನ ಅತ್ಯಂತ ಸುಖಮಯವಾಗಿದ್ದು, ಇಬ್ಬರೂ ಪತ್ನಿಯರು ಸಾಮಾಜಿಕ, ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸಿ ಸಮಾಜವನ್ನು ತಿದ್ದುವ ಕೆಲಸ ಮಾಡಿದ್ದು ಗೋಚರಿಸುತ್ತದೆ. ಗಂಗಾಂಬಿಕೆ ಗಂಗಾಪ್ರಿಯ ಕೂಡಲಸಂಗಮದೇವ, ನೀಲಲೋಚನೆ ಸಂಗಯ್ಯ ಎಂಬ ವಚನಗಳ ಅಂಕಿತದೊಂದಿಗೆ ವಚನಗಳನ್ನು ರಚಿಸಿದ್ದು, ಪ್ರಮುಖವಾದ ಘಟ್ಟ, ಗಂಗಾಂಬಿಕೆ ಒಬ್ಬ ಮಗ ಜನಿಸಿದ್ದು ಆತನಿಗೆ ಚಿಕ್ಕ ಸಂಗಯ್ಯ ಎಂದು ಹೆಸರಿಡಲಾಗಿದೆ. ಈ ಮಗು ಚಿಕ್ಕ ವಯಸ್ಸಿನಲ್ಲಿಯೇ ನಿಧನ ಹೊಂದಿದನೆಂದು ಹೇಳಲಾಗುತ್ತದೆ.

ಬಸವಣ್ಣ ಶಿವಭಕ್ತರಿಗಾಗಿಯೇ ತನ್ನ ಮನೆಯನ್ನು ಮುಕ್ತ ಮನಸ್ಸಿನಿಂದ ತೆರೆದಿಟ್ಟು ಅವರಿಗೆ ಆತಿಥ್ಯವನ್ನು ಸಮರ್ಪಕವಾಗಿ ಮಾಡುತ್ತಿದ್ದುದನ್ನು ಕೇಳಿ ದೇಶದ ನಾನಾ ಭಾಗಗಳಿಂದ ಅನೇಕ ಶರಣರು ಇಂತಹ ಸಾಧಕನನ್ನು ಕಂಡು ಕಲ್ಯಾಣದಲ್ಲಿ ಬಂದು ಸೇರತೊಡಗಿದರು. ಬಿಜ್ಜಳನ

ಕಲ್ಯಾಣದ ಶಿವಶರಣರ ಚಾರಿತ್ರಿಕ ವ್ಯಕ್ತಿತ್ವವನ್ನು ದಾಖಲಿಸಿದ ಮೊದಲ ಕವಿ ಹರಿಹರ. ಬಸವಣ್ಣನವರ ಜೀವನ ವೃತ್ತಾಂತ ಮತ್ತು ಭಕ್ತಿ ಸಾಧನೆಯನ್ನು ನಿರೂಪಿಸುವ ಬಸವರಾಜ ದೇವರ ರಗಳೆಯಲ್ಲಿ ನಾಗಲಾಂಬಿಕೆಯ ಪ್ರಸ್ತಾಪ ಬರುತ್ತದೆ. ಹಾಗೆಯೇ ತೆಲುಗಿನ ಪಾಲ್ಕುರಿಕೆ ಸೋಮನಾಥ ಕವಿಯ ಬಸವ ಪುರಾಣ, ಭೀಮ ಕವಿಯ ಬಸವ ಪುರಾಣ, ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ, ಸಿಂಗಿರಾಜನ ಸಿಂಗಿರಾಜಪುರಾಣ. ಶಾಂತಲಿಂಗ ದೇಶಿಕವಿಯ ಭೈರವೇಶ್ವರ ಕಾವ್ಯದ ಕಥಾಮಣಿ ಸ್ತೋತ್ರರತ್ನಾಕರ ಮುಂತಾದ ಪ್ರಾಚೀನ ಗ್ರಂಥಗಳಲ್ಲಿ ಅಕ್ಕ ನಾಗಮ್ಮನ ಜೀವನ ವೃತ್ತಾಂತವನ್ನು ಕಾಣಬಹುದು.[೪೮]

ಅಕ್ಕ ನಾಗಮ್ಮಳು ಇಂದಿನ ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿಯ ಇಂಗಳೇಶ್ವರ ಗ್ರಾಮದ ಶೈವಬ್ರಾಹ್ಮಣ ದಂಪತಿಗಳಾದ ಮಾದರಸ, ಮಾದಲಾಂಬಿಕೆಯ ಮಗಳಾಗಿ ಜನಿಸಿದಳು. ತಮ್ಮ ಜಗಜ್ಯೋತಿ ಬಸವೇಶ್ವರ, ಮಗ ಷಟ್‌ಸ್ಥಲ ಚಕ್ರವರ್ತಿ ಅವಿರಳ ಜ್ಞಾನಿ ಚೆನ್ನಬಸವಣ್ಣ ಇಂತಹ ಪರಿಸರದಲ್ಲಿದ್ದ ಅಕ್ಕನಾಗಮ್ಮಳು ಭಕ್ತಿ, ಭಾವ, ಪ್ರೀತಿ, ಕರುಣೆ, ಎಲ್ಲವೂ ಸಹಜವಾಗಿಯೇ ಕರಗತವಾಗಿದ್ದುಂಟು.

ಬಾಗೇವಾಡಿಯ ಸಮೀಪದ ಇಂಗಳೇಶ್ವರವು ಮಾದರಸನ ಪತ್ನಿಯಾದ ಮಾದಲಾಂಬಿಕೆಯ ತವರೂರು. ಶಿವರಾಯನ ಮಗ ವಾಸುದೇವ, ವಾಸುದೇವನಿಗೆ ನಾಲ್ಕು ಜನ ಮಕ್ಕಳಿದ್ದು, ಬಲದೇವ, ನೀಲಕಂಠ, ಸಿದ್ದರಾಯ (ಸಿದ್ದರಸ), ಮಾದಲಾಂಬಿಕೆ. ಬಲದೇವ ಮತ್ತು ಸಿದ್ದರಸರು ಮಂಗಳವೇಡಗೆ ಹೋದರು. ಅವರು ಅಲ್ಲಿಯ ಅರಸು ಬಿಜ್ಜಳನ ಆಸ್ಥಾನದಲ್ಲಿ ಮಹಾಮಂತ್ರಿ (ಬಲದೇವ) ಮಾದಲಾಂಬಿಕೆಯ ಅಣ್ಣನ ಮಗನು. ಈ ಶಿವಸ್ವಾಮಿ ಮತ್ತು ನಾಗಮ್ಮನವರ ಏಕೈಕ ಮಗನೆ ಚೆನ್ನಬಸವಣ್ಣ. ಬಲದೇವ ಮಂತ್ರಿಯ ಏಕೈಕ ಮಗಳೇ ಗಂಗಮ್ಮ ಅಥವಾ ಗಂಗಾಂಬಿಕೆ. ಸಿದ್ದರಸ ಮಂತ್ರಿಯ (ಭಂಡಾರಿ) ಏಕೈಕ ಮಗಳೇ ನೀಲಮ್ಮ.

ಬಸವಣ್ಣನಿಗೆ ಪ್ರತಿಯೊಂದು ಹಂತದಲ್ಲಿ ಪಾಲನೆಯಿತ್ತು ಪೋಷಣೆಯ ಜೊತೆಗೆ ತಿಳುವಳಿಕೆಯನ್ನು ನೀಡುತ್ತಿರುವುದನ್ನು ಕಾಣುತ್ತೇವೆ. ಲಾಲನೆ ಮಾಡುವುದರಲ್ಲಿ ತಾಯಿಯ ಸ್ಥಾನವನ್ನು ಬಸವಣ್ಣನಿಗೆ ದೊರಕಿಸಿಕೊಟ್ಟ ಕೀರ್ತಿ ಅಕ್ಕನಾಗಮ್ಮನದು.

ಬಸವನೆ ಮುಖ ಸೆಜ್ಜೆ ಬಸವನೆ ಅಮಳೋಕ್ಯ
ಬಸವನನಾನೆತ್ತಿ ಮುದ್ದಾಡಿಸುವೆನು
ಬಸವಾ ಸಂಗನ ಬಸವಿದೇವಾ ಜಯತು
ಬಸವಗೂ ಎನಗೂ ರಾಸಿಕೂಟವುಂಟು
ಬಸವಣ್ಣ ಪ್ರಿಯ ಚೆನ್ನಸಂಗಯ್ಯನಲ್ಲಿ
ಬಸವನ ಬೆಸಲಾದ ಬಾಣಿತಿ ನಾನಯ್ಯ
ಬಸವಾ ! ಬಸವಾ ! ಬಸವಾ![೪೯]

ಮೇಲಿನ ಸಾಲುಗಳು ಬಸವಣ್ಣನಿಗೆ ಮಾತೃ ಸ್ಥಾನದ ಗೌರವಾಭಿಮಾನಗಳನ್ನು ಕೊಟ್ಟ ವಿಚಾರಗಳನ್ನು ವ್ಯಕ್ತಪಡಿಸುತ್ತವೆ.

ಬಸವಣ್ಣ ವೈದಿಕಶಾಹಿ ಆಚರಣೆ ಕರ್ಮಾಧಿ ಕಟ್ಟಳೆಗಳನ್ನು ತೊಡೆದು ಹಾಕಿ ಕಪ್ಪಡಿ ಸಂಗಮಕ್ಕೆ ಬರುವ ಸಂದರ್ಭದಲ್ಲಿ ತಮ್ಮನೊಡನೆ ಅಕ್ಕ ನಾಗಮ್ಮ, ಚೆನ್ನಬಸವಣ್ಣನನ್ನು ಕರೆದುಕೊಂಡು ಬಂದಿದ್ದುಂಟು. 'ಆ ಕಾಲದಲ್ಲಿ ಕೂಡಲ ಸಂಗಮವು ಪ್ರಸಿದ್ಧವಾದ ಧಾರ್ಮಿಕ ಹಾಗೂ ವಿದ್ಯಾಕೇಂದ್ರವಾಗಿದ್ದು ಕಾಶಿ, ಕೇದಾರ, ಶ್ರೀಶೈಲ, ಸೌರಾಷ್ಟ್ರಗಳಂಥ ಅನೇಕ ಧರ್ಮಕ್ಷೇತ್ರಗಳಿಂದ ವಿದ್ವಾಂಸರು, ದಾರ್ಶನಿಕರೂ ಅಲ್ಲಿಗೆ ಬರುತ್ತಿದ್ದರು. ಹಾಗಾಗಿ ಅಲ್ಲಿ ನಡೆಯುತ್ತಿದ್ದ ವಿವಿಧ ಮತ

ಧರ್ಮಗಳ ಚರ್ಚೆಗಳನ್ನು ಕೇಳಿ ಅನುಭವ ಪಡೆಯುವ ಅವಕಾಶ ದೊರಕಿತು. ಹಾಗಾಗಿಯೇ ತನ್ನ ಶಿವಯೋಗ ಸಾಧನೆಯಿಂದ ಅರಿವು ಕಂಡ ಅಕ್ಕ ನಾಗಮ್ಮ ಶಿವಶರಣೆಯಾದಳು. ಅನೇಕ ಅನುಭಾವ ವಿಚಾರಗಳಿಂದ ಆಧ್ಯಾತ್ಮದ ತುತ್ತ ತುದಿಗೇರಿದ ಅಕ್ಕ ನಾಗಮ್ಮನ ವ್ಯಕ್ತಿತ್ವ ಅಪ್ಯಾಯಮಾನವಾದುದು.

ಅಕ್ಕನಾಗಮ್ಮ ತಮ್ಮ ಬಸವಣ್ಣನ ಎಲ್ಲ ಮಹಾ ಕಾರ್ಯಗಳ ರೂವಾರಿಯಾಗಿದ್ದರೂ ಕಾರ್ಯ ಸಿದ್ಧಿಯ ಎಲ್ಲ ಶ್ರೇಯಸ್ಸನ್ನು ತಮ್ಮನಿಗೆ ನೀಡಿದ್ದಾಳೆ. ಗಂಗಮ್ಮ ಸತ್ಯಂಪೇಟೆ ಅವರು ಅಕ್ಕ ನಾಗಮ್ಮನ ಕುರಿತು ಮಾತನಾಡುತ್ತ ಆ ವಿಶಾಲ ಹೃದಯ ಶರಣೆಯ ಚಿತ್ರಣವನ್ನು ಹೀಗೆ ಕೊಡುತ್ತಾರೆ.

ಅಕ್ಕ ನಾಗಾಯಿಯದು ಚೊಕ್ಕ ಚಿನ್ನದಂಥ ಅಚ್ಚ ಬದುಕು ಒಳಗೆ ಅರುಹಿದ ಅರವಟ್ಟಿಗೆ ಹೊರಗೆ ತುಂಬಿಹರಿಯುವ ದಾಸೋಹಭಾವ ಎತ್ತ ಹೊರಳಿದರೂ ಲಿಂಗಸಂಪನ್ನೆ. ನಿಜವಾಗಿಯೂ ಅವಳು ಕ್ರಾಂತಿಮಾತೆಯೇ ಸರಿ. ಅಕ್ಕ ನಾಗಮ್ಮನ ನಿಷ್ಕಳಂಕ ಬದುಕು ಆಕೆಯ ಮಾತೃವಾತ್ಸಲ್ಯ ಕರ್ತವ್ಯವನ್ನು ಪೂರೈಸುವ ಧೀಮಂತಗುಣ, ನಿರ್ದಾಕ್ಷಿಣ್ಯನಡೆ ಹಾಗೂ ಆಕೆಯ ಸಹೃದಯತೆಯನ್ನು ಕೊಂಡಾಡಿ ಅನೇಕ ಶರಣರು ಹೃದಯ ತುಂಬಿ ಶಬ್ದಾಂಜಲಿಯನ್ನು ಅರ್ಪಿಸಿದ್ದಾರೆ.

ನೀಲಾಂಬಿಕೆಯು ಅಕ್ಕನಾಗಮ್ಮನಲ್ಲಿ ತಾಯಿಯ ಸ್ವರೂಪವನ್ನು ಕಂಡಿದ್ದು ಹೀಗೆ ಹೇಳುತ್ತಾಳೆ. ಸ್ಪಷ್ಟ ನುಡಿಗಳಿಗೆ ಹೆಸರಾದ ಸಿದ್ಧರಾಮ ಶರಣರು ಆಕೆಯನ್ನು ಹೆತ್ತವ್ವನೆಂದೇ ನಂಬಿ ಅವಳ ಕುರಿತಾಗಿ ಈ ಮುಂದಿನಂತೆ ಹೇಳುತ್ತಾಳೆ. ಇದಲ್ಲದೆ ಪ್ರಭುದೇವರಾದಿಯಾಗಿ ಎಲ್ಲ ಶರಣರನ್ನು ಸ್ತುತಿಸುತ್ತ ಸಿದ್ಧರಾಮ ಈ ತಾಯಿಗೂ ಸಮೋನ್ನತ ಸ್ಥಾನ ನೀಡಿ ಗೌರವಿಸಿದ್ದಾರೆ.

ಬಸವಣ್ಣನ ಪ್ರಸಾದವ ಕೊಂಡು ಎನ್ನಂತರಂಗ ಶುದ್ಧವಾಗಿತ್ತಯ್ಯ
ಮುಕ್ತಾಯಕ್ಕಳ ಪ್ರಸಾದವ ಕೊಂಡು ಎನ್ನಬಹಿರಂಗ ಶುದ್ಧವಾಗಿತ್ತಯ್ಯ[೫೩]

ಮಡಿವಾಳ ಮಾಚಯ್ಯನವರು ವಚನವೊಂದರಲ್ಲಿ ಅಕ್ಕ ನಾಗಾಯಿ, ಮಿಂಡ ಮಲ್ಲಿನಾಥ. ಹಡಪದ ಅಪ್ಪಣ್ಣ, ಮೊಗವಾಡದ ಕೇಶಿರಾಜ, ಕೋಲಶಾಂತಯ್ಯ ಮೊದಲಾದ ಶಿವಗಣಂಗಳೆಲ್ಲರೂ ಬಸವರಾಜನ ಬಯಲ ಬೆರಸಿದರು ಎನ್ನುವ ಸೂಚನೆಗಳಲ್ಲಿ ಅಕ್ಕ ನಾಗಮ್ಮನ ಲಿಂಗೈಕ್ಯದ ಸ್ಥಾನ ನಿರ್ದೇಶನವಿಲ್ಲದಿದ್ದರೂ ಚೆನ್ನಬಸವಣ್ಣವರು ಲಿಂಗೈಕ್ಯರಾಗುವ ಪೂರ್ವದಲ್ಲಿಯೇ ಅಕ್ಕನಾಗಮ್ಮ ಐಕ್ಯಳಾದುದು ದೃಢಪಡುತ್ತದೆ.

ಬಸವಣ್ಣ ಪ್ರಿಯ ಚೆನ್ನಸಂಗಯ್ಯ ಅಂಕಿತದಲ್ಲಿ ನಾಗಲಾಂಬಿಕೆಯು ವಚನ ರಚಿಸಿದ್ದಾಳೆ. ಸದ್ಯಕ್ಕೆ ಅಕ್ಕನಾಗಮ್ಮನ ಹದಿನಾಲ್ಕು ವಚನಗಳು ಮಾತ್ರ ಗೋಚರಿಸಿದರೂ ಅಕ್ಕ ನಾಗಮ್ಮ ಬಹುದೊಡ್ಡ ಸಂಖ್ಯೆಯಲ್ಲಿ ವಚನ ರಚಿಸಿದಂತೆ ಸಿದ್ಧರಾಮ ಶಿವಯೋಗಿಯ ವಚನವೊಂದು ತಿಳಿಸುತ್ತದೆ. 'ಎಮ್ಮಕ್ಕ ನಾಗಾಯಿಯ ವಚನ ಮೂರು ಲಕ್ಷದ ತೊಂಬತ್ತಾರು ಸಾವಿರ' ಎನ್ನುವ ಸಿದ್ಧರಾಮೇಶ್ವರರ ಹೇಳಿಕೆಯು ಅಕ್ಕನಾಗಮ್ಮನ ಲಭ್ಯವಾಗದಿರುವ ಅಪಾರ ವಚನ ವಾಙ್ಮಯದತ್ತ ಬೆಳಕು ಚೆಲ್ಲುತ್ತದೆ.

ನೀಲಾಂಬಿಕೆ

ನೀಲಮ್ಮ, ನೀಲಲೋಚನೆ, ನೀಲಾಂಬಿಕೆ ಎನ್ನುವ ನಾಮಾಂತರಗಳಿಂದ ಕನ್ನಡ ಕಾವ್ಯಗಳಲ್ಲಿ ಪ್ರಸ್ತಾಪಗೊಂಡಿರುವ ನೀಲಲೋಚನೆ ಬಸವಣ್ಣನವರ ಪತ್ನಿ, ಬಸವಣ್ಣನವರ ಚರಿತ್ರೆಯನ್ನು ನಿರೂಪಿಸುವ ವೀರಶೈವ ಕಾವ್ಯ ಪುರಾಣಗಳಲ್ಲಿ ನೀಲಾಂಬಿಕೆಯ ಹೆಸರು ಉಲ್ಲೇಖಿತಗೊಂಡಿರುವುದನ್ನು ಕಾಣಬಹುದಾಗಿದೆ. ಬಸವರಾಜ ದೇವರ ರಗಳೆ, ಭೀಮಕವಿಯ ಬಸವಪುರಾಣದಲ್ಲಿ ನೀಲಮ್ಮನ ಪ್ರಸ್ತಾಪ ಬರುತ್ತದೆ.

ಭೀಮಕವಿಯ ಪ್ರಕಾರ ಬಸವಣ್ಣನವರು ಮದುವೆಯಾದುದು ತಮ್ಮ ಸೋದರ ಮಾವನಾದ ಬಲದೇವ ಮಂತ್ರಿಯ ಮಗಳಾದ ಗಂಗಾದೇವಿಯನ್ನು ಮಾತ್ರ. ಬಸವಣ್ಣನವರ ಜೀವನ ಚಿತ್ರಣ ನೀಡುವ ಎಲ್ಲ ಕನ್ನಡ ಕಾವ್ಯಗಳು ಗಂಗಾಂಬಿಕೆ ಬಸವಣ್ಣನವರ ಮೊದಲ ಪತ್ನಿ ಎನ್ನುವ ವಿಚಾರವನ್ನು ಒಪ್ಪಿಕೊಂಡಿವೆ. ಲಕ್ಕಣ್ಣ ದಂಡೇಶ ಕವಿಯ ಶಿವತತ್ವ ಚಿಂತಾಮಣಿಯಲ್ಲಿ ನೀಲಾಂಬಿಕೆಯ ಪ್ರಸ್ತಾಪ ಬರುತ್ತದೆ. 'ತನ್ನನುಜೆ ಕಿರಿಯಳಾ ತರುಣಿ ನೀಲಾಂಬಿಕೆಯನೊಲಿದಿತ್ತು ಬಸವಗಂ ಹಿರಿದು ವಿಭವದಿಂದ ಮದುವೆಯಂ ಮಾಡಿದನೆಂದು ಹೇಳುತ್ತಾನೆ. ನೀಲಾಂಬಿಕೆಯು ಬಿಜ್ಜಳನ ಕಿರಿಯ ಸಹೋದರಿ ಎಂಬ ಅಭಿಪ್ರಾಯ ಇದೆ ಸಿದ್ದನಂಜೇಶನ 'ಗುರುರಾಜ ಚಾರಿತ್ರ' ಬಿಜ್ಜಳನ ಸಾಕುತಂಗಿಯಾದ ನೀಲಲೋಚನೆಯು ಸಿದ್ದರಸ ಮಂತ್ರಿಯ ಮಗಳೆನ್ನುವುದನ್ನು ಸಮರ್ಥಿಸುತ್ತದೆ. ಬಿಜ್ಜಳ ಮತ್ತು ನೀಲಲೋಚನೆಯ ಸಹೋದರತ್ವದ ಸಂಬಂಧವನ್ನು ಸಿದ್ದನಂಜೇಶ ಕವಿಯು ವಿವರಿಸುತ್ತಾನೆ. ಆದರೆ ಸಿಂಗಿರಾಜ ಕವಿಯು ಪ್ರಸ್ತುತ ಸಂಗತಿಗೆ ಹೆಚ್ಚಿನ ಮಹತ್ವ ಕೊಟ್ಟು ಸಿದ್ದರಸ ಪದ್ಮ ಗಂಧಿಯರ ಮಗಳು ನೀಲಲೋಚನೆ ಎನ್ನುವ ಸಂಗತಿಯನ್ನು ಸ್ಪಷ್ಟಪಡಿಸುತ್ತಾನೆ.

> ಸಿದ್ಧರಸ ದಣ್ಣಾಯಕರಸಿ ಪುಣ್ಯ
> ಶೀಲದೇವತೆ ಪದ್ಮಗಂಧಿಯಾಕೆಯ ಉದರದಲ್ಲಿ ಬಳಿಕ ಜನಿಸಿದ್ದಾಕೆ
> ನೀಲಲೋಚನೆಯೆಮಗೆ ತಂಗಿಯಹುಳಾಕೆಯನು
> ನೀಲಲೋಚನೆ ಬಸವಗೀವೆನೆನು ತುತ್ಸಾಹ
> ದಾಳಪದಲಿಪಟ್ಟು ವದುವೆಂದು ಮದುವೆಯಂ ಮಾಡಿದನೃಪ ಬಸವಂಗೆ[೩೮]

ಸಿದ್ದರಸ–ಪದ್ಮಗಂದಿಯರ ಮಗಳಾದ ನೀಲಲೋಚನೆ ಬಿಜ್ಜಳನಿಗೆ ಸಹೋದರಿಯಾದ ಹಿನ್ನೆಲೆಯಲ್ಲಿ ಸಿಂಗಿರಾಜ ಕವಿಯು ಹೀಗೆ ವಿವರಿಸಿದ್ದಾನೆ. ಬಿಜ್ಜಳನ ತಂದೆ ಪೆರ್ಮಾಡಿ ವೀರ ಮರಣವನ್ನಪ್ಪಿದಾಗ ಬಿಜ್ಜಳನ ತಾಯಿ ಚವಲಾದೇವಿ ಗಂಡನೊಂದಿಗೆ ಸತಿ ಹೋಗಲು ನಿರ್ಧಾರ ಮಾಡುತ್ತಾಳೆ. ಆಗ ಹಸುಗೂಸಾಗಿದ್ದ ಬಿಜ್ಜಳನ ತಮ್ಮ ಕರ್ಣದೇವನ ಪಾಲನೆಯ ಹೊಣೆಯನ್ನು ಸಿದ್ಧರಸ ಪದ್ಮಗಂಧಿಗೆ ಒಪ್ಪಿಸುತ್ತಾಳೆ. ಕರ್ಣದೇವನನ್ನು ಸಿದ್ಧರಸ ಪದ್ಮಗಂಧಿಯರು ತಮ್ಮ ಮಗಳು ನೀಲಲೋಚನೆಯೊಂದಿಗೆ ಸಾಕಿ ಸಲಹುತ್ತಾರೆ. ಹೀಗೆ ಬಿಜ್ಜಳನಿಗೆ ಕರ್ಣದೇವ ನೀಲಲೋಚನೆ ತಮ್ಮ ತಂಗಿಯರಾಗಿ ಬೆಳೆಯುತ್ತಾರೆ. ಸಾಕುತಂಗಿ ನೀಲಲೋಚನೆಯನ್ನು ಅಭಿಮಾನ ಪ್ರೀತಿಯುಳ್ಳ

ಬಿಜ್ಜಳ ಮಂತ್ರಿ ಬಸವಣ್ಣನವರ ಗುಣ ಸಾಮರ್ಥ್ಯಕ್ಕೆ ಮೆಚ್ಚಿ ಮಂತ್ರಿ ರಾಜರ ಸಂಬಂಧ ಹೆಚ್ಚು ಬಂಧುರವಾಗಲೆಂದು ತಂಗಿ ನೀಲಲೋಚನೆಯ ವಿವಾಹವನ್ನು ಬಸವಣ್ಣನವರೊಂದಿಗೆ ನೆರವೇರಿಸುತ್ತಾನೆ.

ಗಂಗಾಂಬಿಕೆಗೆ ಸಿದ್ಧರಸನಂತೆ ನೀಲಾಂಬಿಕೆಗೆ ಬಾಲ ಸಂಗಯ್ಯ ಎಂಬ ಹೆಸರಿನ ಮಗ ಇದ್ದನೆಂದು ಕೆಲವು ವೀರಶೈವ ಕಾವ್ಯಗಳು ಸ್ಪಷ್ಟಪಡಿಸುತ್ತವೆ. ಹರಿಹರನು ಬಾಲ ಸಂಗಯ್ಯ ಗಂಗಾಂಬಿಕೆ ಮಗನೆಂದೂ ಹೇಳಿದರೆ ಶಿವತತ್ವ ಚಿಂತಾಮಣಿಯಲ್ಲಿ ಕವಿ ಲಕ್ಕಣ್ಣ ದಂಡೇಶ ಸಂಗಯ್ಯ ನೀಲಾಂಬಿಕೆಯ ಮಗನೆಂದು ಸ್ಪಷ್ಟಪಡಿಸಿದ್ದಾರೆ.

ಅವಳ ಕಂದ ಬಾಲಸಂಗ ನಿನ್ನ ಕಂದ ಚೆನ್ನಲಿಂಗ
ಎಂದು ಹೇಳಿದರಮ್ಮಾ ಎನ್ನ ಒಡೆಯರು
ಫಲನಿಲ್ಲದ ಕಂದನಿರ್ಪನವಳಿಗೆ
ಎನಗೆ ಫಲವಿಲ್ಲ ಕಂದನಿಲ್ಲ[೩೯]

ನೀಲಾಂಬಿಕೆ, ಗಂಗಾಂಬಿಕೆಯ ಮಕ್ಕಳು ಅಕಾಲ ಮರಣವಾದಂತೆ ವಚನದ ಸೂಚನೆಯಿದ್ದು ಭೈರವೇಶ್ವರ ಕಾವ್ಯದ ಕಥಾಮಣಿಸ್ತೋತ್ರ ರತ್ನಾಕರದಲ್ಲಿಯೂ ಇಂತಹದೊಂದು ಸೂಚನೆಯು ದೊರಕುತ್ತದೆ.

ನೀಲಾಂಬಿಕೆಯು 'ಬಸವಪ್ರಿಯ ಕೂಡಲ ಸಂಗಮದೇವಾ' ಎಂಬ ಅಂಕಿತವನ್ನು ಇಟ್ಟುಕೊಂಡು ವಚನಗಳನ್ನು ರಚಿಸಿದ್ದು, ಇದುವರೆಗೂ ೨೮೮ ವಚನಗಳು ದೊರಕಿವೆ. ನೀಲಾಂಬಿಕೆಯ ಅನುಭಾವದ ನೆಲೆ ಬಸವಣ್ಣನವರಷ್ಟೇ ಉಜ್ವಲವಾದುದು. ತನ್ನ ಇರುವು ಮತ್ತು ಅರಿವಿನ ಸಮಸ್ತ ನೆಲೆಗಳಿಗೆ ಬಸವಣ್ಣನಲ್ಲಿಯೇ ಉತ್ತರ ಕಂಡು ಕೊಂಡಿರುವ ನೀಲಲೋಚನೆ, ಬಸವಣ್ಣನಿಂದ ಹೊಸ ಹುಟ್ಟನ್ನು ಪಡೆದುಕೊಂಡಿದ್ದಾಳೆ. ಲೋಕದಲ್ಲಿದ್ದು ಲೋಕ ಧರ್ಮವನ್ನು, ದೇಹ ಧಾರಿಯಾಗಿದ್ದು ದೇಹ ಭಾವವನ್ನು ಮೀರಿ ಭಾವ ನಿರ್ಭಾವವಾಗಿ ಹೃದಯದ ಕತ್ತಲೆ ಕಳೆದುಕೊಂಡು 'ಹೃದಯ ಪ್ರಸನ್ನೆ'ಯಾಗಿ ಬದುಕಿನ ಸ್ವಾನುಭಾವದ ವಿವೇಚನೆ ವಚನಗಳಲ್ಲಿ ದಟ್ಟವಾಗಿದೆ.

ನೀಲಾಂಬಿಕೆಯ ಬಹುತೇಕ ವಚನಗಳು ಬಸವ ಕೇಂದ್ರದ ಸುತ್ತ ಪ್ರಾರಂಭವಿಸುವ ಭಾವ ದುಂಬಿಗಳಾಗಿ ತೋರುತ್ತವೆ. ಬಸವಣ್ಣನವರ ವಿಯೋಗ ದುಃಖದಿಂದ ತತ್ತರಿಸಿದ ನೀಲಲೋಚನೆಯ ವ್ಯಥೆಯ ಕಥೆಗಳಂತಿರುವ ಬಹುತೇಕ ವಚನಗಳಲ್ಲಿ ಆಕೆಯ ಆರ್ತತೆ, ಅನಾಥ ಭಾವ, ದಿಗ್ಭ್ರಮೆ ದುಃಖ ಮಡುಗಟ್ಟಿನಿಂತಿದೆ.

ಬಸವಣ್ಣ ಮತ್ತು ನೀಲಲೋಚನೆಯ ದಾಂಪತ್ಯವು ಲೌಕಿಕ ನೆಲೆಯ ನಿರೀಕ್ಷೆಗಳಿಂದ ಗಂಡು ಹೆಣ್ಣಿನ ದೇಹ ಸಂಬಂಧಿನೆಲೆಯ ಕಾಮ ವಾಸನೆಯಿಂದ ಮುಕ್ತವಾದ ಆತ್ಮ ಸಂಬಂಧಿಯಾದದ್ದು. ಪರಸ್ಪರರ ಆಧ್ಯಾತ್ಮ ಸಾಧನೆಗೆ ಪೂರಕ ಪೋಷಕರಾಗುತ್ತ ದಾಂಪತ್ಯ ಸಂಬಂಧವನ್ನು ಪ್ರಾಪಂಚಿಕ

ನೆಲೆಯಿಂದ ಪಾರಮಾರ್ಥದ ನೆಲೆಗೇರಿಸಿಕೊಂಡು ಶ್ರೇಷ್ಠ ಮಾದರಿಯೊಂದನ್ನು ನೀಲಾಂಬಿಕೆಯ ವಚನವೊಂದು ಕಟ್ಟಿ ಕೊಡುತ್ತದೆ.

ಮಡದಿ ಎನಲಾಗದು ಬಸವಂಗೆ ಎನ್ನನು
ಪುರುಷನೆನಲಾಗದು ಬಸವನ ಎನಗೆ
ಉಭಯದ ಕುಳವ ಹರಿದು ಬಸವಂಗೆ ಶಿಶುವಾನಾದೆನು
ಬಸವವೆನ್ನ ಶಿಶುವಾದನು
ಪ್ರಮಥರು ಪುರಾತರು ಸಾಕ್ಷಿಯಾಗಿ
ಸಂಗಯ್ಯನಿಕ್ಕಿದ ದಿಬ್ಬದ ಮೀರದೆ ಬಸವನೊಳಗಾನಡಗಿದೆ[೪೦]

ಬಸವಣ್ಣ ಒಡ್ಡಿದ ಒರೆಗಲ್ಲಿಗೆ ಬಂಗಾರವಾಗಿ ಮೆರೆದ ನೀಲಾಂಬಿಕೆ ಅವನನ್ನು ಬಂಗಾರವಾಗಿಸುವಲ್ಲಿ ಬಹುದೊಡ್ಡ ಪಾತ್ರ ಮಾಡಿದಳು ಅಜಗಣ್ಣ, ಕಕ್ಕಯ್ಯ, ಚಿಕ್ಕಯ್ಯ, ಬಸವ, ಚೆನ್ನಬಸವ, ಪ್ರಭು, ಚೀಲಾಳ, ಇಹಃಪಗೆಯಾಂಡ ಮಾದರ ಚೆನ್ನಯ್ಯ ಮೊದಲಾದ ಶರಣರ ಒಡನಾಟ ಪ್ರಭಾವಗಳನ್ನು ತೆರೆದ ಮನಸ್ಸಿನಿಂದ ಒಪ್ಪಿಕೊಂಡು ತನ್ನ ವ್ಯಕ್ತಿತ್ವವನ್ನು ಅರಳಿಸಿಕೊಂಡವಳು.

ಬಸವಣ್ಣನವರು ತಮ್ಮ ಒಂದು ವಚನದಲ್ಲಿ ನೀಲಲೋಚನೆಯ ವಿಷಯವನ್ನು ಪ್ರಸ್ತಾಪಿಸುತ್ತಾರೆ.

ಕಾಮನೇಮವೆಂಬ ಸಿಂದು ಬಲ್ಲಾಳನ ವಧುವ
ಸರ್ವಾನುಭವನದೊಡೆಯ ಸಂಗಮದೇವರು ಬೇಡುವಂತಲ್ಲ
ಎನ್ನ ಸತಿ ನೀಲಲೋಚನೆ ಪೃಥ್ವಿಗಗ್ಗಳೆಯ ಚೆಲುವೆ
ಆಕೆಯನು ಸಂಗಮದೇವಾ ನೀ ಜಂಗಮರೂಪವಾಗಿ ಬಂದು
ಎನ್ನ ಮುಂದೆ ಸಂಗವ ಮಾಡುತ್ತಿರಲು
ಎನ್ನೊಡನಿರ್ದ ಸತಿಯೆಂದು ಮಾಯಕ್ಕೆ ಮರುಗಿದೆನಾದೊಡೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ[೪೧]

ಕೋಪವನ್ನು ನಿಗ್ರಹಿಸಿಕೊಳ್ಳುವ ಪರಿಯನ್ನು ಮತ್ತು ತನ್ನ ಅಂತಃಸತ್ವ ಗುಣವನ್ನು ತಿಳಿಸುವ ಸಂದರ್ಭದಲ್ಲಿ ಸಂಗಮದೇವನು ಯಾವ ರೀತಿಯಾಗಿ ಇರುವನೋ ಅವನ ಅನುಯಾಯಿಯಾಗಿ ತಾನು ಇರುವುದಾಗಿ ಹೇಳಿಕೊಳ್ಳುತ್ತಾನೆ. ಎನ್ನ ಸತಿ ನೀಲಲೋಚನೆ ಪೃಥ್ವಿಗೆ ಅತಿಯಾದ ಚೆಲುವೆಯಾಗಿದ್ದಳು ಎಂಬ ಅಂಶವನ್ನು ಅವರು ಉಲ್ಲೇಖಿಸುವುದನ್ನು ನೋಡಿದರೆ ಬಸವಣ್ಣನವರ ನೆಚ್ಚಿನ ಮಡದಿಯಾಗಿದ್ದಳೆಂದು ತಿಳಿಯಬಹುದು.

ನೀಲಲೋಚನೆಯ ಹೆಸರಿನಲ್ಲಿ ಸಂಗ, ಸಂಗಪ್ರಭು, ಸಂಗಮನಾಥ, ಸಂಗಯ್ಯ, ಸಂಗನ ಗುರುಬಸವಾ, ಬಸವಪ್ರಿಯ ಕೂಡಲ ಸಂಗಮದೇವಾ ಮುದ್ರಿಕೆಯ ಅನೇಕ ವಚನ, ಸ್ವರವಚನಗಳು ಸಿಗುತ್ತವೆ. ಇವಳದೆಂದು ವಿದ್ವಾಂಸರು ಸೂಚಿಸುವ ಪ್ರಸಾದ ಸಂಪಾದನೆಯ ಕೃತಿಯ ಬಗೆಗೆ ಸಂದೇಹವಿದೆ. ಇಷ್ಟು ಇವಳ ಸಾಹಿತ್ಯ ಚಿಕ್ಕಗಾತ್ರ, ಅನುಭಾವಿಕ ಪ್ರಜ್ಞೆಗಳು ಇವಳ ವಚನದ

ಮುಖ್ಯ ಲಕ್ಷಣವೆನಿಸಿವೆ. ಬಸವನ ವ್ಯಕ್ತಿತ್ವವನ್ನು ಕುರಿತು ಹೇಳುತ್ತಾ ತನಗೆ ಆತ ಗಂಡನೂ ಹೌದು. ಗುರುವೂ ಹೌದು ಎಂಬುದನ್ನು ಸ್ಪಷ್ಟಪಡಿಸುತ್ತಾಳೆ. ಧನ್ಯತೆ ಕಾರಣವಾಗಿ ತಾನು ಹೆಣ್ಣೆಂಬ ಆಂಗಿಕ ಪ್ರಜ್ಞೆಯನ್ನು ಮರೆತು ದೈವೀ ಪ್ರಜ್ಞೆಯಿಂದ ಜೀವನ ನಡೆಸಿದವಳು. ಎಂಬ ವಚನದಲ್ಲಿ ಅವಳ ಜೀವನ ಕ್ರಮವನ್ನು ಕಾಣಬಹುದು. ನಿಜಶರಣೆ ಲಿಂಗವಶದಲ್ಲಿ ಬದುಕುವಳಾಗಿ ಸುಖ ದುಃಖಗಳ ಪರಿಧಿಯನ್ನು ಮೀರಿದ ಭಾವನೆ ಅವಳದು. ಹಾಡುತ್ತಾ ಹಾಡುತ್ತಾ ನೀಲಾಂಬಿಕೆಯು ತನ್ನ ಲಿಂಗದಲ್ಲಿ ಅಡಗಿದಳು. ಈ ನುಡಿಯನ್ನು ತಂಗಡಗಿಯ ಜನರು ಈಗಲೂ ಹಾಡುತ್ತಾರೆ. ಅವರು ಈ ಹಾಡನ್ನು ನಮಗೆ ಕಳಿಸಿ ಕೊಟ್ಟಿದ್ದಕ್ಕೆ ನಾವು ಅವರಿಗೆ ಕೃತಜ್ಞರಾಗಿದ್ದೇವೆ. ಅದನ್ನು ನಾವು ಇದ್ದಕ್ಕಿದ್ದ ಹಾಗೆ ಇಲ್ಲಿ ಪ್ರಕಟಿಸಿದ್ದೇವೆ.

ನೀಲಾಂಬಿಕೆಯ ಐಹಿಕ ಕಳೇಬರವನ್ನು ಜನರು ಇಲ್ಲಿಯೇ ಭೂಮಿಗತ ಮಾಡಿ ಆಕೆಯ ಸಮಾಧಿಯ ಪೂರ್ವಕ್ಕೆ ನೀಲಾಂಬಿಕೆಯ ದೇವಾಲಯವನ್ನು ಅದರ ಪಶ್ಚಿಮಕ್ಕೆ ಹಡಪದಪ್ಪಣ್ಣಯ್ಯನ ದೇವಾಲಯವನ್ನೂ ಕಟ್ಟಿಸಿದ್ದಾರೆ. ದೇವಾಲಯದ ಶಿಖರವು ಕೃಷ್ಣೆಯ ವಿಶಾಲವಾದ ಪಾತ್ರದ ಮಗ್ಗಲು ಬಹುದೂರದಲ್ಲಿ ಕಾಣಿಸುತ್ತದೆ. ಯಾತ್ರಿಕರು ಅದನ್ನು ನೋಡಿ ನೀಲಾಂಬಿಕೆಯನ್ನು ಮೊದಲು ನೆನೆದು ಆ ಮೇಲೆ ಕೂಡಲ ಸಂಗಮನಾಥ ದೇವಾಲಯಕ್ಕೆ ನಮಸ್ಕರಿಸಲು ತೆರಳುತ್ತಾರೆ.

ತಂಗಿ ಅಡಗಿದ್ದರಿಂದ ಈ ಗ್ರಾಮಕ್ಕೆ ತಂಗಡಗಿ ಎಂಬ ಹೆಸರನ್ನು ಜನರು ಇಟ್ಟು ಅದನ್ನು ಈ ವರೆಗೂ ಹಾಗೆಯೇ ಕರೆಯುತ್ತ ಬಂದಿದ್ದಾರೆ.

ಗಂಗಾಂಬಿಕೆ

ಬಸವಣ್ಣನವರ ಪತ್ನಿಯರಲ್ಲಿ ಗಂಗಾಂಬಿಕೆಯು ಒಬ್ಬಳು ಹನ್ನೆರಡನೆಯ ಶತಮಾನದ ಉತ್ತರಾರ್ಧದಲ್ಲಿ ಕಲ್ಯಾಣವನ್ನು ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡು ಆಳ್ವಿಕೆಯನ್ನು ನಡೆಸಿದ ಬಿಜ್ಜಳನ ಮಂತ್ರಿ ಬಲದೇವರ ಮಗಳು. ಬಲದೇವ ಮಂತ್ರಿ ಬಸವಣ್ಣನವರ ತಾಯಿಯಾದ ಮಾದಲಾಂಬಿಕೆಯ ಅಣ್ಣ. ಅಂದರೆ ಬಸವಣ್ಣನವರ ಮೊದಲ ಪತ್ನಿ ಗಂಗಾಂಬಿಕೆಯೆಂದು ಸ್ಪಷ್ಟಪಡಿಸುತ್ತದೆ. ಹರಿಹರನಿಂದ ಹಿಡಿದು ಮುಂದೆ ಬಂದ ಪಾಲ್ಕುರಿಕೆಯ ಸೋಮನಾಥ, ಭೀಮಕವಿ, ಲಕ್ಕಣ್ಣ ದಂಡೇಶ, ಸಿದ್ದನಂಜೇಶ, ವಿರೂಪಾಕ್ಷ ಪಂಡಿತ, ಸಿಂಗಿರಾಜ ಕವಿ ಮತ್ತು ಶಾಂತಲಿಂಗದೇಶಿಕ ಮುಂತಾದ ಕವಿಗಳು ತಮ್ಮ ಕೃತಿಗಳಲ್ಲಿ ಗಂಗಾಂಬಿಕೆಯನ್ನು ಬಸವಣ್ಣನವರ ಹಿರಿಯ ಪತ್ನಿಯೆಂದು ಹೇಳುತ್ತಾರೆ.

ಹರಿಹರ ಕವಿ ಗಂಗಾಂಬಿಕೆಯನ್ನು 'ಸತ್ಕುಲ ಸಾದೃಶ್ಯ ಮಪ್ಪ ಸುಶೀಲೆ' ಎಂದೂ , ಭೀಮಕವಿ ಶಕ್ತಿತಿಗೆ ಲಕ್ಷ್ಮಿಗೆ ರೋಹಿಣಿಗೆ ಭಾರತಿಗೆ ರತಿಗೆ ಪುಲೋಮಜೆಗರುಂದತಿಗೆ ಸೀತೆಗೆ ಜಾಹ್ನವಿಗೆ ರವಿಸತಿಗೆ ಮರುಮಡಿ ದ್ಯತಿ ಸರಿಪ್ರಭೆ ಜಾಣ್ಮೆ ರೂಪುನ್ನತಿ ಪತಿವ್ರತಾದಾಚರಣೆ ಸಂತರ ಪವಿತ್ರತೆ

ತೇಜವೆಂಬಿವಮಿಂಡ ಗಂಗಾಯಿ ಎಂದು ಗಂಗಾಂಬಿಕೆಯ ಸಚ್ಚಾರಿತ್ರ್ಯ ಸೌಂದರ್ಯವನ್ನು ಬಣ್ಣಿಸಿದ್ದಾನೆ. 'ಪತಿಭಕ್ತಿ ಗುಣಸಂಪನ್ನೆ' ಯಾದ ಗಂಗಾಂಬಿಕೆ 'ಗುರುಲಿಂಗ ಭಜನಾಸನ್ನೆ'ಯೂ ಆಗಿದ್ದಳೆಂದು ಭೀಮಕವಿಯ ಹೇಳಿಕೆ. ಗಂಗಾಂಬಿಕೆಯ ವಿವಾಹದ ಪ್ರಸಂಗ, ಬಸವಣ್ಣನವರ ಉಪನಯನ, ಬಲದೇವ ಮಂತ್ರಿ ಬಸವಣ್ಣನಿಗೆ ಗಂಗಾಂಬಿಕೆಯನ್ನು ಕೊಟ್ಟು ಮದುವೆ ಮಾಡುವ ಕಲ್ಯಾಣದಿಂದ ಬಸವಣ್ಣನವರು ಕೂಡಲಸಂಗಮಕ್ಕೆ ಬರುವಾಗ ಗಂಗಾಂಬಿಕೆಯನ್ನು ಕರೆದುಕೊಂಡು ಬರುವ ಎಲ್ಲ ಸನ್ನಿವೇಷವನ್ನು ಕಾವ್ಯದಲ್ಲಿ ಭೀಮಕವಿ ಚಿತ್ರಿಸಿದ್ದಾನೆ. ಗಂಗಾಂಬಿಕೆಗೆ ಮಗನೊಬ್ಬನಿದ್ದನೆಂದು ಹರಿಹರ ಕವಿಯು ಪ್ರಸ್ತಾಪಿಸುತ್ತ 'ಸುಮೂಹೂರ್ತದೊಲು ಸುಪುತ್ರನುದ್ಭವಿಸೆ' ಸಿದ್ಧರಸನೆಂದು ನಾಮಕರಣ ಮಾಡಲಾಯಿತೆಂದು ಹರಿಹರ ಹೇಳಿದರೆ. ಕವಿ ಸಿದ್ಧನಂಜೇಶ 'ಗಂಗಾಂಬಿಕೆಯ ಪವಿತ್ರ ಗಂರ್ಭದಿಂ ಬಾಲಸಂಗಯ್ಯನೆಂಬ ಸುತನುದಿಸಿದಂ' ಎಂದು ಸ್ಪಷ್ಟಪಡಿಸುತ್ತಾನೆ. 'ಮುಕ್ತಿಕಂಠಾಭರಣದಲ್ಲಿಯೂ ಗಂಗಾಂಬಿಕೆಯ ಮಗ ಬಾಲಸಂಗಯ್ಯ ಎನ್ನುವ ಚಿತ್ರವಿದ್ದು, ಗಂಗಾಬಿಕೆಯ ವಚನವೊಂದು ಬಾಲಸಂಗಯ್ಯ ನೀಲಲೋಚನೆಯ ಮಗನೆನ್ನುವುದನ್ನು ದೃಢಪಡಿಸುತ್ತದೆ. 'ಅವಳ ಕಂದ ಬಾಲಸಂಗ ನಿನ್ನ ಕಂಡ ಚೆನ್ನಲಿಂಗ ಎಂದು ಹೇಳಿದರಮ್ಮಾ ಎನ್ನ ಒಡೆಯರು ಫಲನಿಲ್ಲದ ಕಂಡರ್ಪನವಳಿಗೆ ಎನಗೆ ಫಲವಿಲ್ಲ ಕಂದನಿಲ್ಲ ಎನ್ನುವಲ್ಲಿ ಗಂಗಾಂಬಿಕೆಯ ವೇದನೆ ಮುಡುಗಟ್ಟಿದ್ದನ್ನು ಕಾಣಬಹುದು. ಗಂಗಾಂಬಿಕೆಯ ಕೆಲವು ವಚನಗಳಲ್ಲಿ ಪುತ್ರ ವಿಯೋಗದಿಂದ ದುಃಖಾರ್ತವಾದ ಭಾವಸ್ಥಿತಿಯನ್ನು ಸೂಚಿಸುತ್ತದೆ.'[೨]

ಶಿವಶರಣರ ಕಾಲಜ್ಞಾನದ ವಚನಗಳ ಹಿನ್ನೆಲೆಯಲ್ಲಿ ಫ.ಗು.ಹಳಕಟ್ಟಿಯವರು ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸುತ್ತಾರೆ. 'ಕಲ್ಯಾಣ ಕ್ರಾಂತಿಯ ತರುವಾಯ ಶರಣರು ಆಪತ್ತಿನಲ್ಲಿ ಸಿಲುಕಿಕೊಂಡಾಗ ಗಂಗಾಂಬಿಕೆಯೂ ಅಕ್ಕನಾಗಮ್ಮ ನೊಂದಿಗೆ ಶರಣರ ತಂಡದೊಡನೆ ಕೂಡಿಕೊಂಡು ಬೆನ್ನಟ್ಟಿದ್ದ ಅಳಿಯ ಬಿಜ್ಜಳನ ಸೈನ್ಯದೊಂದಿಗೆ ಕಾದಾಡುತ್ತ ತೋರಗಲ್ಲು, ಕಾತರವಳ್ಳಿ ಕಾಳಗಗಳಲ್ಲಿ ಪಾಲ್ಗೊಂಡು, ಉಳಿವೆಯ ಕಡೆಗೆ ಪ್ರಯಾಣ ಬೆಳೆಸುತ್ತಾಳೆ. ಕಾತರವಳ್ಳಿಯಿಂದ ಮೂರ್ನಾಲ್ಕು ಮೈಲಿ ಅಂತರದಲ್ಲಿರುವ ಮಲಪ್ರಭಾನದಿಯ ದಡದಲ್ಲಿ ಗಂಗಾಂಬಿಕೆಯ ಸಮಾಧಿಯಿದ್ದು 'ಗಂಗಮ್ಮನ ಗುಡಿ' ಎಂದು ಜನ ಕರೆಯುತ್ತಾರೆಂದು ಫ.ಗು.ಹಳಕಟ್ಟಿಯವರು ತಿಳಿಸುತ್ತಾರೆ.

ಗಂಗಾಂಬಿಕೆಯ ವಚನಗಳಲ್ಲಿ ಪತಿ ನಿಷ್ಠ ಭಾವ ಎದ್ದು ಕಾಣುತ್ತಿದ್ದು, ಸದ್ಯಕ್ಕೆ ಒಂಬತ್ತು ವಚನಗಳು ಮಾತ್ರ ಸಿಕ್ಕಿವೆ. 'ಗಂಗಾಪ್ರಿಯ ಕೂಡಲಸಂಗ' ಎಂಬ ವಚನಗಳ ಅಂಕಿತನಾಮದೊಂದಿಗೆ ರಚನೆಗೊಂಡ ವಚನಗಳಲ್ಲಿ ಮೂರು ಆಧ್ಯಾತ್ಮಿಕ ನಿಲುವನ್ನು ಸ್ಪಷ್ಟಪಡಿಸುತ್ತಿವೆ. ಆರು ವಚನಗಳು ಮಗನನ್ನು ಕಳೆದುಕೊಂಡ ದುಃಖ ನೋವು ವ್ಯಥೆಯ ಭಾವವನ್ನು ವ್ಯಕ್ತಪಡಿಸುತ್ತವೆ. ಗಂಗಾಂಬಿಕೆಯ ವಚನ ಲೋಕವನ್ನು ಸೂಕ್ಷ್ಮಾತಿಸೂಕ್ಷ್ಮವಾಗಿ ಗ್ರಹಿಸಿದಾಗ ಅಂತರಂಗದ ಭಾವಾನುಭವಗಳ ಪ್ರಾಪಂಚಿಕ ಬದುಕಿನ ನೋವು ನಲಿವಿನ ಚಿತ್ರಣವನ್ನು ಕಾಣಬಹುದು. ಚಿಕ್ಕವಯಸ್ಸಿನಲ್ಲಿ ಮರಣಹೊಂದಿದ ಮಗನ ಪ್ರೀತಿ ವಾತ್ಸಲ್ಯ ಮರೆಯಲಾಗದ ನೋವು, ತಾಯಿ ಹೃದಯದ ಸಂಕಟ ವಚನದ ಮೂಲಕ ಅಭಿವ್ಯಕ್ತಿಗೊಂಡಿದೆ.

ಬಸವಣ್ಣನವರ ಐಕ್ಯ

ಹರಿಹರ ಕವಿಯ ಬಸವರಾಜ ದೇವರ ರಗಳೆಯಲ್ಲಿನ ವರ್ಣನೆ ಹಾಗೂ ಇತರ ಸಂಗತಿಗಳ ಆಧಾರದಿಂದ ಶ್ರೀ ಬಸವೇಶ್ವರರು ಮೊದಲಿಗೆ ಕಂಡದ್ದು, ಆರಂಭಿಸಿದ್ದು ಕಪ್ಪಡಿ ಸಂಗಮ ಊರಲ್ಲಿಯ ಕೂಡಲಸಂಗಮೇಶ್ವರನೆಂದು ಹೇಳಬಹುದಾದ್ದರಿಂದ ಅಲ್ಲಿಯ ದೇವಸ್ಥಾನದೊಡನೆಯೂ ಅವರು ಸಂಬಂಧ ಬರುವುದು. ಕೂಡಲಸಂಗಮಕ್ಕೆ ಸಂಬಂಧಿಸಿದ ಎಲ್ಲ ಮಹತ್ವದ ಸ್ಥಳಗಳೊಡನೆ ಅವರ ಸಂಬಂಧ ಹೊಂದಿದ್ದರ ಪ್ರಭಾವದಿಂದಲೇ ಅವರು ಕೂಡಲಸಂಗಮದ ಸಂಗಮೇಶ್ವರನನ್ನು ಗಂಡ, ತಂದೆ ಎಂದೆಲ್ಲ ತಮ್ಮ ವಚನಗಳಲ್ಲಿ ಬರೆದಿದ್ದಾರೆ. ಕೂಡಲಸಂಗಮದಲ್ಲಿ ಅವರು ಮೊದಲಿಗೆ ನೆಲೆನಿಂತು ಜ್ಞಾನ ಸಂಪಾದನೆಯನ್ನು ಮಾಡಿದ ವಿಚಾರಗಳನ್ನು ಅದರಲ್ಲಿ ಹೀಗೆ ಕಾಣಬಹುದು.

ಎನ್ನ ಗಂಡ ಬರಬೇಕೆಂದು
ಎನ್ನಂತರಂಗವೆಂಬ ಮನೆಯ ತೆಱಹುಮಾಡಿ
ಅಷ್ಟದಳವೆಂಬ ಓವರಿಯೊಳಗೆ
ನಿಜನಿವಾಸವೆಂಬ ಹಾಸಿಗೆ ಹಾಸಿ
ಧ್ಯಾನ ಮೌನವೆಂಬ ಮೇಲುಕಟ್ಟ ಕಟ್ಟಿ
ಜ್ಞಾನವೆಂಬ ದೀಪವ ಬೆಳಗಿ
ನಿಷ್ಠಯೆಗಳೆಂಬುಪಕರಣಂಗಳ ಹರಡಿಕೊಂಡು
ಪಶ್ಚಿಮ ದ್ವಾರವೆಂಬ ಬಾಗಿಲ ತೆರೆದು
ಕಂಗುಳೇ ಪ್ರಾಣವಾಗಿ ಹಾರುತಿರ್ದೆನಯ್ಯಾ
ನಾನು ಬಾರೆನೆಂದು ಉಮ್ಮಳಿಸಿಹೆನೆಂದು
ತಾನೇ ಬಂದು ತನ್ನ ಹೃದಯ ಸಿಂಹಾಸನದ ಮೇಲೆ
ಮೂರ್ತಿಗೊಂಡಡೆ ಎನ್ನ ಮನದ ಬಯಕೆ ಸಮವಾಯಿತ್ತು
ಹಿಂದೆ ಹನ್ನೆರಡು ವರ್ಷದಲ್ಲಿ ಚಿಂತನೆಯಿಂದ ನಿಶ್ಚಿಂತವಾಯಿತ್ತು
ಕೂಡಲಸಂಗಮದೇವ ಕೃಪಾಮೂರ್ತಿಯಾದ ಕಾರಣ
ಆನು ಬದುಕಿದೆನು[೪೩]

ಈ ವಚನದಲ್ಲಿ ಕೂಡಲಸಂಗಮದಲ್ಲಿ ಅವರಿದ್ದ ಅನುಭವದ ವಿಚಾರಗಳನ್ನು ತಿಳಿಸುತ್ತದೆ ಮತ್ತು ಸಂಗಮೇಶ್ವರನ ಕೃಪೆ ಅವರು ಸಾಧಿಸುವ ಹಂಬಲದ ವಿಚಾರಗಳು ಮೂಡಿರುವ ಪರಿಯನ್ನು ತಿಳಿಸುತ್ತದೆ. ಸಂಗಮನಾಥನನ್ನು ಗಂಡ ಎಂಬ ಪದ ಬಳಸುವುದರ ಮೂಲಕ ಅವನು ಅಂತರಂಗವನ್ನು ಹೊಕ್ಕು ಮನೆ ಮಾಡಿರುವನೆಂದು ಮತ್ತು ಜ್ಞಾನ ಸಾಧನೆಗೆ ಧ್ಯಾನ–ಮೌನಗಳೆಂಬ ಜ್ಞಾನದ ದೀಪವನ್ನು ಬೆಳಗಿಸಿದನೆಂದು ನಂತರ ನಾನು ಬರುವುದಿಲ್ಲವೆಂದರೂ

ಸಂಗಮನಾಥನೇ ಬಂದು ನನ್ನ ಹೃದಯ ಸಿಂಹಾಸನವನ್ನು ಅಲಂಕರಿಸಿದನೆಂದು. ಆದ್ದರಿಂದಲೇ ನನ್ನ ಬಾಲ್ಯದ ಹನ್ನೆರಡು ವರ್ಷಗಳು ಚಿಂತೆಯಲ್ಲಿ ಕಳೆದ ದಿನಗಳು ನಿಶ್ಚಿಂತವಾದವು. ಇದು ಕೂಡಲಸಂಗಮನ ಕೃಪೆಯಿಂದ ಸಾಧ್ಯವಾಗಿತ್ತು ಎಂದು ಹೇಳುವ ಮೂಲಕ ಪ್ರಾರಂಭದ ದಿನಗಳನ್ನು ನೆನೆಯುತ್ತಾರೆ. ಈ ಎಲ್ಲ ಸ್ಮರಣೆಯಿಂದಲೇ ಅವರು ಕೊನೆಗೆ ಐಕ್ಯವಾಗುವ ಸಂದರ್ಭದಲ್ಲಿ ಸಂಗಮನಾಥನಲ್ಲಿಗೆ ಬಂದರೆಂಬುದು ಬಹಳ ಮುಖ್ಯವಾದ ಸಂಗತಿಯಾಗಿದೆ.

ಕೂಡಲಸಂಗಮಕ್ಕೆ ಐಕ್ಯವಾಗಲು ಬಂದರೆನ್ನುವುದಕ್ಕೆ ಮತ್ತೊಂದು ವಚನದಲ್ಲಿ ಅವರೇ ಹೇಳಿದಂತೆ ತನ್ನ ಮಗನಿಗೆ 'ಚಿಕ್ಕಸಂಗಯ್ಯ' ಎಂದು ಸಂಬೋಧಿಸಿ ಅವನನ್ನು ಸಂಗಮನಾಥನ ಪ್ರತಿರೂಪವಾಗಿ ಕಾಣುವ ಪರಿಯನ್ನು ಇಲ್ಲಿ ಸ್ಮರಿಸಬಹುದು.

> "...ಪ್ರತ್ಯಕ್ಷವಾಗಿ ಸಿರಿಯೊಳಸೆಟ್ಟಿ ಚಂಗಳೆಪ್ಪೆಯರ ಮನೆಗೆ ಬಂದ
> ಅವರ ಮಗನ ಬೇಡುವಂತಲ್ಲ ಸಂಗಮದೇವಾ
> ನಿಮ್ಮ ಹೆಸರ ಚಿಕ್ಕಸಂಗಯ್ಯನಿದ್ದಿಹನು
> ನೀ ಜಂಗಮರೂಪವಾಗಿ ಬಂದು ಆತನ ಹಿಡಿದು
> ಎನ್ನ ಮುಂದೆ ಹೆಪಗುಡಿಯ ಕಟ್ಟಿ ಚೆನಿಖಂಡಹ ಮಾಡಿ
> ಬಾಣಸವ ಮಾಡುವಾಗಲೂ
> ಎನ್ನುದರದಲ್ಲಿ ಬಂದ ಪುತ್ರನೆಂದು ಮಾಯಕ್ಕೆ ಮರುಗಿದೆನಾದೊಡೆ
> ನಿಮ್ಮಾಣೆ ನಿಮ್ಮ ಪ್ರಮಥರಾಣೆ"೪೪

ಬಸವಣ್ಣನಿಗೆ ಯಾವ ಮಾಯೆಯ ಕಾಟವಿಲ್ಲ ಎಂಬ ವಿಷಯ ಈ ಪ್ರಸ್ತುತ ವಚನ ಮನವರಿಕೆ ಮಾಡಿಕೊಡುತ್ತದೆ. ತನ್ನ ಉದರದಲ್ಲಿ ಬಂದಿರುವ ಮಗನಿಗೆ ಚಿಕ್ಕಸಂಗಯ್ಯನೆಂದು ಕರೆದುದಲ್ಲದೆ ಸಾಕ್ಷಾತ್ ಸಂಗಮನಾಥನೆ ಬಂದು ಅವನನ್ನು ಹೆಡೆಮುರಿಗೆ ಕಟ್ಟಿ ತುಂಡು ಮಾಡಿದರೂ ನನ್ನ ಹೊಟ್ಟೆಯಲ್ಲಿ ಬಂದಿರುವನೆಂಬ ಮಮಕಾರವಿಲ್ಲ ಎಂದು ಹೇಳುವ ಮೂಲಕ ಬಸವಣ್ಣನು ಮಾಯಾಜಾಲಕ್ಕೆ ಸಿಲುಕಿಲ್ಲ ಎಂದು ತಿಳಿಯುತ್ತದೆ. ಬಹುಶಃ ಬಸವಣ್ಣನವರ ಇಂಥ ಅವಸ್ಥೆಯನ್ನು ನೋಡಿದಾಗ ಅವರಿಗೆ ನಿರ್ಮೋಹತತ್ವ ಪ್ರಾಪ್ತಿಯಾಗಿ ಯಾವ ಆಸೆ-ಪಾಸೆಗಳಿಲ್ಲದೆ ಎಲ್ಲವನ್ನು ತ್ಯಜಿಸಿ ನಿಲ್ಲುವಂಥ ಗುಣ ಅವರಿಗೆ ಕೊನೆಗಾಲದಲ್ಲಿ ಪ್ರಾಪ್ತಿಯಾಗುತ್ತದೆಂದು ಹೇಳಬಹುದು.

ಬಸವೇಶ್ವರರ ಐಕ್ಯದ ವಿಚಾರವಾಗಿ ಹಲವಾರು ಅಭಿಪ್ರಾಯಗಳು ಚರ್ಚಿತವಾಗಿ ವಿವಾದಗಳಾಗಿಯೂ ಮಾರ್ಪಟ್ಟಿವೆ. ಆದರೆ ಅವನ್ನು ಪರಿಶೀಲಿಸಿದಾಗ ಬಹುಶಃ ಕಾವ್ಯಗಳಲ್ಲಿ ಉಲ್ಲೇಖವಾದಂತೆ ಅವರು ಸ್ವಯಂ ಪ್ರೇರಿತರಾಗಿ ಐಕ್ಯರಾದರು ಎಂದು ಅನ್ನಿಸುತ್ತದೆ. ಬಸವಣ್ಣನವರು ಮಾಯೆಯನ್ನು ತ್ಯಜಿಸಿ ಯಾವುದೇ ಬಂಧನಗಳಿಲ್ಲದೆ ಸಂಗಮನಾಥನನ್ನು ಸಂಪೂರ್ಣವಾಗಿ ಅವಗಾಹನೆ ಮಾಡಿಕೊಂಡು ಪ್ರಾಪಂಚಿಕ ಜಗದ ವಿದ್ಯೆಗಳನ್ನು ಅರಿತು ಸತ್ಯದರ್ಶನವಾಗಿ ಹೀಗೆ ಸ್ವಯಂ ಐಕ್ಯದ ಬಗ್ಗೆ ಹೆಚ್ಚು ಉಲ್ಲೇಖಗಳು ಪ್ರಾಪ್ತವಾಗುವುದರಿಂದ ಇದು ಸತ್ಯವೆನಿಸುತ್ತದೆ.

ಇಂತು ಬಸವಂ ಮರ್ತ್ಯದೊಳಗೆ ಮಹಿಮೆಯ ಬೀಱ
ಸಂತತಂ ಕೆಲಕಾಲ ಶಿವಸುಖದೊಳೋಲಾಡಿ
ಶಿದ್ರೋಹವಂಗೈದು ಬಿಜ್ಜಳನ ಕೊಲಿಸುತಂ
ಭವಹರಣ ಶರಣ ಸದ್ಗೋಷ್ಠಿಯಂ ಸುಲಿಸುತಂ
ಕಪ್ಪಡಿ ಸಂಗಮೇಶ್ವರನಲ್ಲಿಗೈತಂದು
ನಿಷ್ಠೆಮಿಗೆ ತುತಿಗೈದು ಪೊತಮಟ್ಟು ಕೈಮುಗಿದು
ದೇವ ಎನ್ನಂಬಿಕದೆ ಪೊರೆದ ಕೂಡಲಸಂಗ
ದೇವ ಎನ್ನುತೆಯ ಮುತ್ತತ ಕೂಡಲಸಂಗ
ಷಟ್ತ್ರಿಂ ತತ್ವಕ್ಕಲೇತ ಕೂಡಲಸಂಗ
ನಿತ್ಯ ನಿರ್ಮಲ ನಿಷ್ಕಳಂಕ ಕೂಡಲಸಂಗ[೪೫]

ಬಸವಣ್ಣ ಭೂಮಿಯಲ್ಲಿ ಮಹಿಮಾ ಪುರುಷನಾಗಿ ಮಹಿಮೆಯನ್ನು ಬೀರಿ ಶಿವ ಸುಖದಲ್ಲಿ ಓಲಾಡಿ ಶಿವ ದ್ರೋಹವನ್ನು ಮಾಡಿದ ಶರಣರಿಗೆ ಹಿಂಸೆಯನ್ನು ನೀಡಿದ್ದನ್ನು ತಾಳುವುದಿಲ್ಲ. ಬಸವನು ಬಿಜ್ಜಳನನ್ನು ಕೊಲ್ಲಿಸುತ್ತಾನೆ ಎಂದು ಹರಿಹರ ಹೇಳುವುದನ್ನು ನೋಡಿದರೆ ಶಿವ ನಿಂದನೆಯನ್ನು ಬಸವನು ಸಹಿಸುತ್ತಿರಲಿಲ್ಲವೆಂದು ತಿಳಿಯುತ್ತದೆ. ಬಿಜ್ಜಳನ ಕೊಲೆಯ ನಂತರ ಬಸವಣ್ಣ ಕಪ್ಪಡಿಸಂಗಮಕ್ಕೆ ಬಂದನೆಂದು ಬಹಳ ನಿಷ್ಠೆಯಿಂದ ಸಂಗಮನಾಥನಿಗೆ ಕೈಮುಗಿದು ದೇವಾ ನನ್ನನ್ನು ಬಿಡದೆ ಕಾಯಬೇಕು ಎಂದು ಪರಿಪರಿಯಾಗಿ ಬೇಡಿಕೊಳ್ಳುತ್ತಾನೆ. ನೀನು ನನ್ನ ಒಡೆಯ ಮುತ್ತಾತ ಮತ್ತು ತತ್ವಕ್ಕೆ ಅತೀತನಾದವನು. ನಿಷ್ಕಳಂಕನು ಎಂದು ಬೇಡುತ್ತಾ ಸಂಗಮನಾಥನ ಸಾನಿಧ್ಯದಲ್ಲಿ ಇರುತ್ತಾನೆ.

ದೇವಭವದೀಯಾಜ್ಞೆಯಂ ಕೊಂಡು ಶಂಕರಾ
ದೇವ ಮರ್ತ್ಯದ ಲೀಲೆ ಪೂರೈಸೆ ಶಶಿಧರಾ
ಸಾಕುಮಾಡ್ಯೆ ತಂದೆ ಲೋಕದಾಟನ ನಿನ್ನು
ಸಾಕಾರವಲ್ಲದ ನಿರಾಕಾರ ವೆಡೆಗೊಂ (ಡಿನ್ನು)
ತೆಱಿಮುಗೊಂಡು ತಂದೆ ಬಂದಿಹೆನು ಸಬವನು ನೊಂದೆ
ತೆಱಪಗೊಂಡ ಕರುಣಬ್ದಿ ತೆಱಮುಗೊಂಡು ಭಕ್ತ್ಯಾರ್ತಿ
ತೆಱಿಮುಗೊಂಡು ತಂದೆ ಕೂಡಲಸಂಗ ಭಕ್ತಾಂಗ
ಎನಲು ಸಂಗಮದೇವ ಬಸವನ ನೀರೀಕ್ಷಿಸುತ
ತೆಱಹ ತನ್ನೊಳು ಕೊಟ್ಟು ಬಸವನಂ ಸೈತಿಟ್ಟು
ನೋಡುತಿರೆ ಭಕ್ತರೆಲ್ಲರ ಮುಂದೆ ಬಸವಣ್ಣ
ಗಾಢದಿಂ ಶಿವನೊಳಗೆ ಬೆರೆದು ತಾ ಬಯಲಾದ[೪೬]

ಲೋಕದಾಟವ ಸಾಕುಮಾಡು ನನ್ನನ್ನು ನಿನ್ನ ಹತ್ತಿರ ಕರೆದುಕೋ ಎಂಬ ಮಾತುಗಳನ್ನು ಹೇಳುವ ಮೂಲಕ ಸಾಕಾರವಲ್ಲದ ನಿರಾಕಾರಕ್ಕೆ ನನ್ನ ಕರೆದುಕೋ, ನಾನು ನೊಂದು ಬಂದಿದ್ದೇನೆ ಎಂದು ಹೇಳುತ್ತಾನೆ. ನನ್ನನ್ನು ಭವಬಂಧನದಿಂದ ಮುಕ್ತನನ್ನಾಗಿ ಮಾಡು ತಂದೆ ಎಂದು ಹೇಳುವುದನ್ನು ನೋಡಿದಾಗ ಬಸವಣ್ಣನವರಿಗೆ ಸಂಪೂರ್ಣವಾಗಿ ಜಿಗುಪ್ಸೆ ಬಂದಿದೆಯೆಂದು ತೋರುತ್ತದೆ. ಮನುಷ್ಯ ಜೀವನದ ನಶ್ವರತೆಯು ತಿಳಿಯುತ್ತದೆ. ಹೀಗೆ ಸಂಗಮನಾಥನ ಮುಂದೆ ಬೇಡಿಕೊಳ್ಳುತ್ತಾ ಭಕ್ತರೆಲ್ಲರ ಎದುರಿಗೆ ಬಸವಣ್ಣ ಶಿವನೊಳಗೆ ಬೆರೆದು ತಾ ಬಯಲಾದ ಎಂದು ಹರಿಹರನು ಹೇಳುವುದನ್ನು ನೋಡಿದಾಗ ಬಸವಣ್ಣನವರಿಗೆ ಇಹಲೋಕದ ಅನ್ಯಾಯ, ಅರಾಜಕತೆ, ಅಸ್ಪೃಶ್ಯತೆ ಎಲ್ಲವನ್ನು ನೋಡಿ ಎಷ್ಟೇ ಪ್ರಯತ್ನಿಸಿದರೂ ಅದು ಅಳಿಯದಿರಲು ಮನನೊಂದು ಕೂಡಲಸಂಗಮನಲ್ಲಿ ಐಕ್ಯವಾದನೆಂದು ಈ ಹರಿಹರನ ರಗಳೆಯು ಸ್ಪಷ್ಟಪಡಿಸುತ್ತದೆ.

ಆದರೆ ಹರಿಹರ 'ಬಸವರಾಜ ದೇವರ ರಗಳೆ'ಯಲ್ಲಿನ ಶಿವದ್ರೋಹವಂ ಗೈದ ಬಿಜ್ಜಳ ಕೊಲಿಸುತಂ ಎಂಬ ಸಾಲು ಹರಿಹರನದಲ್ಲ ಪಾಲ್ಕುರಿಕೆ ಸೋಮನಾಥನ 'ಬಸವಪುರಾಣಮು' ರಚಿತವಾದ ಮೇಲೆ ಅದನ್ನೋದಿದ ಒಬ್ಬ ಬುದ್ಧಿವಂತ ಲಿಪಿಕಾರ ರಗಳೆಯ ೧೩ನೇ ಸ್ಥಲದ ಉತ್ತರಾರ್ಧವನ್ನು ಸೃಷ್ಟಿಸಿ ಸೇರಿಸಿರಬಹುದು ಎಂದು ಎಸ್. ವಿದ್ಯಾಶಂಕರ ಅವರು ಅಭಿಪ್ರಾಯಪಡುತ್ತಾರೆ.[೪೭] ಪಾಲ್ಕುರಿಕೆಯ ಸೋಮನಾಥನ 'ಬಸವಪುರಾಣಮು' ದ್ವಿಪದ ಪುರಾಣ ಕಾವ್ಯವನ್ನು ಕಾಕತೀಯ ರಾಜನಾದ ಪ್ರತಾಪರುದ್ರನು ಶಪಿಸಿ ಅಗ್ರಹಾರವೊಂದನ್ನು ಬಹುಮಾನವಾಗಿ ಕವಿಗೆ ಕೊಟ್ಟನೆಂದು ತಿಳಿದುಬರುತ್ತದೆ. ಇದರಿಂದ ೧೨ನೆಯ ಶತಮಾನದ ಕೊನೆಯ ಭಾಗದಲ್ಲಿ ಈ ಕೃತಿ ರಚನೆಗೊಂಡಿರಬಹುದೆಂದು ತೀರ್ಮಾನಿಸಬೇಕಾಗುತ್ತದೆ. ಪಾಲ್ಕುರಿಕೆ ಸೋಮನಾಥನಿಗೆ ಬಸವಣ್ಣನ ಬಗ್ಗೆ ಅಪಾರ ಭಕ್ತಿ-ಗೌರವಗಳಿದ್ದು, 'ಬಸವಪುರಾಣಮು'ವನ್ನು ರಚಿಸಿದ ಸೋಮನಾಥನು ಬಸವಣ್ಣನನ್ನು ಕಂಡಿರುವ ಸಾಧ್ಯತೆ ಕಡಿಮೆ. ಅವನಿಗೆ ಶ್ರೀಶೈಲಕ್ಕೆ ಯಾತ್ರಾರ್ಥಿಗಳಾಗಿ ಹೋದ ಕರ್ನಾಟಕದ ಭಕ್ತರುಗಳಿಂದ ತಿಳಿದಿರುವ ಸಾಧ್ಯತೆ ಹೆಚ್ಚು ಎಂದು ಕೆಲವರ ಅಭಿಪ್ರಾಯಗಳಿವೆ.[೪೮] ಕಲ್ಯಾಣದಿಂದ ಬಂದ ಬಸವಣ್ಣ ಗುರುವಾದ ಶಿವನನ್ನು ಮನದುಂಬಿ ಸ್ತುತಿಸುವನು. ಗುರುಮೂರ್ತಿಗಳ ಪಾದಗಳಿಗೆರಗುವನು. ಗುರುಮೂರ್ತಿಯು ಪ್ರಸಾದವನ್ನಿತ್ತು ಬಸವಣ್ಣನನ್ನು ತನ್ನಲ್ಲಿ ಅಡಗಿಸಿಕೊಳ್ಳುತ್ತ ಗುಡಿಯನ್ನು ಪ್ರವೇಶಿಸುವನು. ಭೀಮಕವಿಯಲ್ಲಿ ಬಸವಣ್ಣನ ಐಕ್ಯದ ಪ್ರಸ್ತಾಪ ಬಂದಿರುವುದು ಹೀಗೆ.

ಬದಕದೊಳಗಂತುದುಕವೇ ಬೆರ
ಸಿದ ತೆಐದಿ ಪಾಲೊಳಗೆ ಪಾಲ್ಬೆರ
ಸಿದವೊಲಾಖ್ಯದೊಳಾಖ್ಯವೇ ತಾ ಬೆರಸಿದಂದದಲಿ
ಸದಮಲಾತ್ಮಕ ಬಸವ ಸಶಿವಾ
ಮುದಿತ ಸಮುದಯ ಹೃದಯ ಸದ್ಗುರು
ಪದವಿಯೊಳು ಶಿವಲಿಂಗದೊಳೆ ನೀನೈಕ್ಯವಾದೆಯಾ[೪೯]

ನೀರಿನಲ್ಲಿ ನೀರು, ಹಾಲಿನಲ್ಲಿ ಹಾಲು ಗೊತ್ತಾಗದಂತೆ ಹೇಗೆ ಬೆರೆಯುತ್ತದೆಯೋ ಹಾಗೆ ಬಸವಣ್ಣನು ಹೃದಯ ಸದ್ಗುರುವಿನಿಂದ ಶಿವಲಿಂಗದಲ್ಲಿ ಐಕ್ಯವಾದನೆಂದು ತಿಳಿಯುತ್ತದೆ. ಆದರೆ ಕೃಷ್ಣಾ ಮತ್ತು ಮಲಪ್ರಭಾ ನದಿಗಳು ಕೂಡುವ ಎಡೆಯಲ್ಲಿ ಬಸವಣ್ಣ ಐಕ್ಯನಾದನೆಂಬ ಪರಂಪರಾಗತ ನಂಬಿಕೆಗೂ ಪಾಲ್ಕುರಿಕೆ ಸೋಮನಾಥ ಭೀಮಕವಿಯ ನಿರೂಪಣೆಗೂ ಹೊಂದಿಕೆಯಾಗುವುದಿಲ್ಲ. ಗುರುರೂಪ ಧರಿಸಿ ಬಂದ ಸಂಗಮನಾಥನಲ್ಲಿ ಬಸವಣ್ಣ ಐಕ್ಯನಾದನೆಂಬ ಸಂಗತಿ 'ಕಾವ್ಯಸತ್ಯ'ವಾಗಿ ಕಂಡುಬರುವುದರಿಂದ ಬಸವಪುರಾಣದ ಕರ್ತೃಗಳು ಅದನ್ನು ನಿರೂಪಿಸಿದಂತೆ ತೋರುತ್ತದೆ.[೫೦]

ಲಿಂಗತತ್ವದೊಳಿಹ ಬಸವಗಣ
ಪುಂಗವನನಲ್ಲಿ ಭಿವರ್ಣಿಸುತ್ತಂ
ಲಿಂಗವಂತನು ಮಾದಿರಾಜನು ಲಿಂಗಭಕ್ತರಿಗೆ
ಜಂಗಮ ಪ್ರತಿಗೆ ಮುಕಳಿತಕ
ರಂಗಳಿಂ ಬಿನ್ನೈಸಿ ಕೂಡಲ
ಸಂಗಮೇಶ್ವರದಿಂದವಾ ಶ್ರೀಗಿರಿಗೆ ಗಮನಿಸಿದ[೫೧]

ಹೀಗೆ ಲಿಂಗತತ್ವದೊಳಗೆ ಇದ್ದಂತ ಬಸವಗಣವೆಲ್ಲವು ಬಸವನನ್ನು ವರ್ಣಿಸುತ್ತ ಲಿಂಗವಂತ ಮಾದಿರಾಜನು ಲಿಂಗಭಕ್ತರಿಗೆ ನೆರೆದ ಜಂಗಮಕ್ಕೆಲ್ಲ ಭಿನ್ನೈಸಿಕೊಂಡು ಕೂಡಲಸಂಗಮೇಶ್ವರದಿಂದ ಶ್ರೀಗಿರಿಗೆ ಅಂದರೆ ಕೈಲಾಸಕ್ಕೆ ಹೊರಟು ಹೋದನೆಂದು ಬಸವಪುರಾಣದಲ್ಲಿ ಚಿತ್ರಿತವಾಗಿದೆ.

ಕೂಡಲಸಂಗಮದಲ್ಲಿ ಕೃಷ್ಣಾ ಮತ್ತು ಮಲಪ್ರಭಾ ನದಿಗಳ ಮಧ್ಯೆ ಇರುವ ಐಕ್ಯಮಂಟಪವೆಂದು ಹೇಳಲಾಗುವ ಇದಕ್ಕೆ ಜನಪದರು, ಜನಸಾಮಾನ್ಯರು ಬಸವಣ್ಣನವರು ಐಕ್ಯರಾದ ಸಮಾಧಿ ಸ್ಥಳವೆಂದು ನಂಬಿದ್ದಾರೆ. ಇದರ ಸುತ್ತ ರಕ್ಷಣೆಗೆಂದು ವೃತ್ತಾಕಾರದ ಗೋಡೆಯನ್ನು ನಿರ್ಮಿಸಲು ಸುಮಾರು ೨೦ ಅಡಿಗಳಿಗೂ ಹೆಚ್ಚು ಆಳವಾದ ತಳಪಾಯವನ್ನು ತೆಗೆದ ಸಂದರ್ಭದಲ್ಲಿ ಗಟ್ಟಿಯಾದ ಬಂಡೆಗಲ್ಲು ಇದ್ದುದ್ದರಿಂದ ಬಹುಶಃ ಇಲ್ಲಿ ಸಮಾಧಿ ಇರಲಿಲ್ಲವೆಂದು ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ಅಭಿಪ್ರಾಯಪಡುತ್ತಾರೆ.[೫೨] ಆದರೆ ನದಿ ತೀರಗಳಲ್ಲಿ ಐಕ್ಯರಾದರೆಂದು ಹೇಳುವ ಕೆಲವು ಶರಣರ ಸಮಾಧಿಗಳು ಇರುವುದರ ಕುರುಹು ಎನ್ನುವಂತೆ ಚೌಡದಾನಪುರದಲ್ಲಿ ಅಂಬಿಗರ ಚೌಡಯ್ಯನದೆಂದು ಹೇಳುವ ಗದ್ದಿಗೆ ಇದೆ. ಹಾಗಾಗಿ ಜನಪದರ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ತಳ್ಳಿಹಾಕುವ ಹಾಗಿಲ್ಲ. ಮೌಖಿಕ ಆಕರವಾಗಿ ಅವುಗಳನ್ನು ನಂಬಬೇಕಾಗುತ್ತದೆ.

ಹಾಗಾದರೆ ಬಸವಣ್ಣನವರ ಐಕ್ಯಸ್ಥಾನ ಯಾವುದು ಎಂಬುವುದರ ಕುರಿತು ಹಲವಾರು ವಚನಕಾರರ ವಚನಗಳನ್ನು ಅವಲೋಕಿಸಿದಾಗ ಅದರ ಬಗ್ಗೆ ಸ್ವಲ್ಪ ಸುಳಿವು ಸಿಕ್ಕಿದಂತಾಗುತ್ತದೆ.

ಬಂದಿತ್ತುದಿನ ಬಸವಣ್ಣ ಕಲ್ಲಿಗೆ
ಚೆನ್ನಬಸವಣ್ಣ ಉಳಿವಿಗೆ
ಪ್ರಭು ಅಕ್ಕ ಕದಳಿದ್ವಾರಕ್ಕೆ ಮಿಕ್ಕಿದ ಪ್ರಮಥರೆಲ್ಲರು ತಮ್ಮ ಲಕ್ಷಕ್ಕೆ[೫೩]

ಎಂಬ ತುರುಗಾಹಿ ರಾಮಣ್ಣನ ಒಂದು ವಚನವು ಸ್ವಲ್ಪ ಗಮನ ಸೆಳೆಯುತ್ತದೆ. ಇದರ ಮೇಲಿಂದ ಮತ್ತು ಕಾಲಜ್ಞಾನ ಕಾವ್ಯಗಳ ಮೇಲಿಂದ ಸಹ ಶರಣರೆಲ್ಲರೂ ಐಕ್ಯವಾಗುವುದನ್ನು ಸಾಮೂಹಿಕವಾಗಿ ಮುಂಚಿತವಾಗಿ ನಿರ್ಧರಿಸಿ ಅದಕ್ಕಾಗಿ ವೈಯಕ್ತಿವಾಗಿ ಮೊದಲೇ ಗೊತ್ತು ಮಾಡಿದ ತಮ್ಮ ತಮ್ಮ ಇಚ್ಛಿತ ಸ್ಥಳಗಳಿಗೆ ಹೋಗಿ ಇಚ್ಛಾಮರಣಿಗಳಾಗಿ ಐಕ್ಯರಾದರೆಂದು ತಿಳಿಯುತ್ತದೆ. ಮೇಲಿನ ವಚನದಲ್ಲಿಯ ಚೆನ್ನಬಸವಣ್ಣ, ಪ್ರಭುದೇವರು, ಅಕ್ಕಮಹಾದೇವಿ ಇವರ ಐಕ್ಯಸ್ಥಳಗಳು ಸ್ಪಷ್ಟವಾಗಿದೆ, ಉಹಾತೀತವಾಗಿವೆ. ಶ್ರೀ ಬಸವಣ್ಣನವರ ವಿಷಯವಾಗಿ ಹೇಳಿದ 'ಕಲ್ಲು' ಯಾವುದು? ಕಲ್ಲು ಪದವು ಆದಿ ಅಂತ್ಯವಾಗಿ ಉಳ್ಳ ಯಾವುದೊಂದು ಹೆಸರಿನ ಊರಿಗೆ ಇದನ್ನು ಅನ್ವಯಿಸಿ ವಾದಿಸುವುದಕ್ಕೆ ಆಸ್ಪದವಿಲ್ಲ. ಯಾಕೆಂದರೆ ಮೇಲೆ ಬರೆದಂತೆ ಬಸವಣ್ಣನವರು ಐಕ್ಯರಾದದ್ದು ಕೂಡಲಸಂಗಮದಲ್ಲಿ ಎಂಬ ವಿಷಯವಾಗಿ ಗ್ರಂಥಗಳಲ್ಲಿ ಜನಸಾಮಾನ್ಯರಲ್ಲಿ ಸಹ ಭಿನ್ನಾಭಿಪ್ರಾಯವಿಲ್ಲ. ಅಂದ ಮೇಲೆ ಕೂಡಲಸಂಗಮದಲ್ಲಿಯೇ ಆ ಕಲ್ಲು ಇರಬೇಕು. ಅಂದು ಈ ಕ್ಷೇತ್ರದಲ್ಲಿರುವ ಹಿಂದೆ ವರ್ಣಿಸಿದ ಬೇರೆ ಬೇರೆ ಕಲ್ಲುಗಳಲ್ಲಿ ಕಲ್ಲು ಬಂಡೆಯ ನಡುಗಡ್ಡೆಯೆಂದೇ ಹೇಳಬೇಕಾಗುತ್ತದೆ. ಇದಕ್ಕೆ ವಾಡಿಕೆಯಲ್ಲಿ 'ಗವಿಗುಂಡದ ಕಲ್ಲು' ಎಂದೇ ಕರೆಯಲಾಗುತ್ತದೆ. ಇಲ್ಲಿರುವ ಗವಿಯೇ ಅದರ ಲಕ್ಷ್ಯವಾಗಿತ್ತು. ಕೂಡಲಸಂಗಮ ಕ್ಷೇತ್ರಕ್ಕೆ ವಿಶೇಷ ಪರಿಚಯದವರಾದ ಅವರು ತಮ್ಮ ಐಕ್ಯದ ಸ್ಥಳವೆಂದು ಇದನ್ನು ಆಯ್ದುಕೊಂಡಿದ್ದು ಸಹಜವಾಗಿದೆ. ಇನ್ನು ಐಕ್ಯವಾದದ್ದು ಹೇಗೆ? ಎನ್ನುವುದನ್ನು ಅವಲೋಕಿಸಿದಾಗ ಶರಣರು ತಮ್ಮ ಐಕ್ಯಕ್ಕಾಗಿ ತಮ್ಮ ಲಕ್ಷಕ್ಕೆ ಹೋದದ್ದು ಸತ್ತ ಮೇಲೆ ತಮ್ಮ ಸಮಾಧಿ ಆಗಬೇಕೆಂದಲ್ಲ ಹಾಗೆ ಯಾವ ಶರಣರ ವಿಚಾರದಲ್ಲೂ ಆಗಿಲ್ಲ. ಅವರು ತಮ್ಮ ಲಕ್ಷಕ್ಕೆ ಹೋಗಿ ಇಚ್ಛಾ ಮರಣಿಗಳಾಗಿ ಸ್ವಲ್ಪ ದಿನಗಳಲ್ಲಿಯೇ ಒಂದು ನಿರ್ದಿಷ್ಟ ದಿನ ಐಕ್ಯರಾದರೆಂದು ತಿಳಿದರೆ ಕಾಲಜ್ಞಾನ ವಚನಗಳಿಂದ ಪ್ರಚಲಿತವಿರುವ ಐತಿಹ್ಯಗಳಿಂದ, ಕಾವ್ಯಗಳಿಂದ ಕೂಡಾ ತಿಳಿಯುತ್ತದೆ.[೫೪]

ಚೆನ್ನಬಸವಣ್ಣನವರು ತಮ್ಮ ಕಾಲಜ್ಞಾನ ವಚನಗಳಲ್ಲಿ ಉಲ್ಲೇಖಿಸಿದಂತೆ ಬಸವಣ್ಣನವರು ಮತ್ತು ಅಲ್ಲಮಪ್ರಭುವಿನ ವಿಚಾರವಾಗಿ ಹೀಗೆ ಹೇಳುತ್ತಾರೆ. ಶರಣು ಶರಣಾರ್ಥಿ ಪ್ರಭುದೇವರಿಗೆ ಶರಣು ಶರಣಾರ್ಥಿ ಎಂಬ ಸಮಯ ಉದಯವಾಗಲು ಎಲ್ಲ ಅಮರಗಣಂಗಳಿಗೆ ಗಣಪರ್ವವಂ ಮಾಡಿ ಪ್ರಭುದೇವರು ತಮ್ಮ ಕರುಣ ಪ್ರಸಾದವಂ ಬಸವೇಶ್ವರ ದೇವರು ಮೊದಲಾದ ಅಸಂಖ್ಯಾತ ಗಣಂಗಳಿಗೆ ಕೊಟ್ಟು ತಮ್ಮ ಲಿಂಗದಲ್ಲಿ ಬಯಲಾಗಲು ಅತ್ತ ಪ್ರಭುದೇವರು ಬಯಲಾಗಲು ಇತ್ತ ಬಸವೇಶ್ವರ ದೇವರು ಎಲ್ಲ ಆ ಅಸಂಖ್ಯಾತನ ಮಹಾಗಣಂಗಳು ಸಹಜವಾಗಿ ಸುಖ–ಸಂತೋಷ–ವಿನೋದದಿಂದಿರುತ್ತಿರಲು ಶ್ರಾವಣಶುದ್ಧ ಪಾಡ್ಯಮಿ ಮಂಗಳವಾರ ರಾತ್ರಿ ನಿಮ್ಮ ಗಣಂಗಳ ಸಮೂಹವು ಉದಯವಾದ ಇಪ್ಪತ್ತೆಂಟು ಗಳಿಗೆಗೆ ನಮ್ಮ ಸಂಗಮೇಶ್ವರ ದೇವರಲ್ಲಿ ಐಕ್ಯವಾದೆವು.[೫೫] ಎಂಬ ವಿಚಾರವನ್ನು ನೋಡಿದಾಗ ಬಸವಣ್ಣನವರು ಸಂಗಮೇಶ್ವರ ದೇವರಲ್ಲಿ ಐಕ್ಯವಾದರೆಂಬುವುದಕ್ಕೆ ಚೆನ್ನಬಸವಣ್ಣನವರ ಕಾಲಜ್ಞಾನ ವಚನವು ಆಧಾರವಾಗಿ ನಿಲ್ಲುತ್ತವೆ. ಹರಿಹರನ ಬಸವರಾಜ

ದೇವರ ರಗಳೆ ಮತ್ತು ಭೀಮಕವಿಯ ಬಸವಪುರಾಣಗಳು ಸಹಿತ ಇದೇ ವಿಚಾರವನ್ನು ಹೇಳುವುದರಿಂದ ಬಸವಣ್ಣನವರು ಕೂಡಲಸಂಗಮದ ಸಂಗಮೇಶ್ವರನಲ್ಲಿ ಐಕ್ಯವಾದರೆಂಬುದಕ್ಕೆ ಆಧಾರವಾಗಿದೆ.

ಮುಂದುವರೆದು ಚೆನ್ನಬಸವಣ್ಣನವರು ತಮ್ಮ ಕಾಲಜ್ಞಾನ ವಚನದಲ್ಲಿ ಬಸವಣ್ಣನವರ ಐಕ್ಯದ ವಿಚಾರವಾಗಿ ಮತ್ತು ನೀಲಾಂಬಿಕೆಯ ವಿಚಾರವಾಗಿ ಹೀಗೆ ನುಡಿಯುತ್ತಾರೆ. "ಸಿದ್ಧರಾಮೇಶ್ವರರು ನೀಲಲೋಚನೆಯಮ್ಮನವರಲ್ಲಿ ಬಸವಣ್ಣನು ಸಂಗಮೇಶ್ವರ ದೇವರಲ್ಲಿ ಹೋದರೆಂದು ನಿರೂಪಿಸಲು ಷಡುರಸಾನ್ನವಂ ನೀಡಿ ಆರೋಗಣೆಯಂ ಮಾಡಿಸಿ ಎನ್ನ ದೇವರ ದೇವಾ ಎಂದು ತಲೆದೂಗುತ್ತಿರಲು ಆನೀಲಲೋಚನೆಯಮ್ಮನವರು ಸಿದ್ಧರಾಮೇಶ್ವರ ದೇವರ ಶೇಷ ಪ್ರಸಾದವಂ ತೆಗೆದುಕೊಂಡು ಸಿದ್ಧರಾಮೇಶ್ವರ ದೇವರಿಗೆ ಪ್ರಸ್ತಾಪಿಸಿದರು"[೫೬] ಎಂದು ಹೇಳಿರುವುದನ್ನು ನೋಡಿದರೆ ಬಸವಣ್ಣನವರು ತಾವು ಕೂಡಲಸಂಗಮದಲ್ಲಿ ಐಕ್ಯವಾಗಬೇಕೆಂಬ ಇಂಗಿತವನ್ನು ತಮ್ಮ ಸಮಕಾಲೀನ ಶರಣರಿಗೆ ಮೊದಲೆ ತಿಳಿಸಿದ್ದರು. ಹೀಗಾಗಿ ಅವರು ತಮ್ಮ ಕಾಲಜ್ಞಾನ ವಚನಗಳಲ್ಲಿ ಬಸವಣ್ಣನವರು ಕೂಡಲಸಂಗಮದ ಸಂಗಮೇಶ್ವರ ದೇವರಲ್ಲಿ ಐಕ್ಯವಾಗುವರೆಂಬ ವಿಚಾರವಾಗಿ ವಿಸ್ತಾರವಾಗಿ ತಿಳಿಸಿದ್ದಾರೆ.

ಈ ಎಲ್ಲ ವಿಚಾರಗಳನ್ನು ಗಮನಿಸಿದಾಗ ಬಸವಣ್ಣನವರು ಪೂರ್ವಕಲ್ಪಿತ ಅಭಿಪ್ರಾಯದಂತೆ ಕೂಡಲಸಂಗಮದಲ್ಲಿ ಐಕ್ಯವಾದರು ಎಂಬುವುದಕ್ಕೆ ಅವರ ಮತ್ತೊಂದು ವಚನ ಅದಕ್ಕೆ ಪ್ರೇರಣೆಯನ್ನು ನೀಡುತ್ತದೆ.

"ನಿಮ್ಮ ಪ್ರಮಥರು ಮೆಚ್ಚಿ ಅಹುದೆಂದು ಒಂಡಂಬಿಟ್ಟು
ಎನ್ನ ಮನದ ತಾರ್ಕಣೆಯಪ್ಪಂತೆ
ನಿಮ್ಮಲ್ಲಿ ಐಕ್ಯವ ಮಾಡಿಕೊಳ್ಳಾ ಕೂಡಲಸಂಗಮದೇವಾ"[೫೭]

ಎಂಬ ವಚನವನ್ನು ಗಮನಿಸಿದಾಗ ಅವರು ಕೂಡಲಸಂಗಮದಲ್ಲಿ ಲಿಂಗೈಕ್ಯರಾಗಲು ತವಕಿಸಿದ್ದಾರೆ. ಇಲ್ಲಿ ಬೀಳ್ಕೊಂಬ ತವಕದಲ್ಲಿದ್ದ ಬಸವಣ್ಣನವರು ಕಲ್ಯಾಣವನ್ನು ತೊರೆದಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಹೀಗೆ ಅಲ್ಲಿಂದ ಬೀಳ್ಕೊಂಡು ಬಂದು ಯಾವ ಸ್ಥಳದಲ್ಲಿ ಐಕ್ಯವಾದರೆಂಬುದು ಯಾವ ವಚನಗಳಲ್ಲಿಯೂ ಉಲ್ಲೇಖಿಸಲ್ಪಟ್ಟಿಲ್ಲ. ಆದರೆ ನಿಮ್ಮಲ್ಲಿ ಐಕ್ಯವ ಮಾಡಿಕೊಳ್ಳಾ ಕೂಡಲಸಂಗಮ ಎಂಬುದು ಅಂಕಿತ ನಿರ್ದೇಶನದಂತೆ ಸ್ಥಾನ ನಿದೇಶನವೂ ಅಹುದೆಂದು ಇಟ್ಟುಕೊಂಡರೆ ಬಸವಣ್ಣನವರು ಕಪ್ಪಡಿ ಸಂಗಮದಲ್ಲಿ ಐಕ್ಯವಾಗಿರುವರೆಂಬುದು ಸ್ಪಷ್ಟವಾಗುತ್ತದೆ. ಕವಿಗಳಲ್ಲಿಯೂ, ಸಹ ಜೀವಿಗಳಾದ ಶಿವಶರಣರ ವಚನಗಳಲ್ಲಿಯೂ ಪ್ರಬಲವಾದ ಆಧಾರಗಳು ಲಭಿಸುತ್ತವೆ. ಆದುದರಿಂದ ಐಕ್ಯಸ್ಥಳ ಕಪ್ಪಡಿ ಸಂಗಮವೆಂದು ತಿಳಿಯುವುದು ಸೂಕ್ತವಾಗಿದೆ.

ಅಡಿ ಟಿಪ್ಪಣಿಗಳು

೧. ಹಿರೇಮಠ ಆರ್.ಸಿ. (ಸಂ), ಬಸವರಾಜ ವಿಜಯಂ, ಪು–xxxviii

೨. ಅದೇ

೩. ಚಿದಾನಂದಮೂರ್ತಿ ಎಂ., ಬಸವಣ್ಣನವರು, ಪು–೨೫

೪. ಅದೇ, ಪುಟ–೨೬

೫. ಅದೇ, ಪುಟ–೪೧

೬. ವೆಂಕಣ್ಣಯ್ಯ ಟಿ.ಎಸ್. (ಸಂ), ಹರಿಹರ ಕವಿಯ ಬಸವರಾಜ ದೇವರ ರಗಳೆ, ಪು–೧೦

೭. ಅದೇ

೮. ಅದೇ, ಪುಟ–೧೧

೯. ಅದೇ, ಪುಟ–೧೨

೧೦. ಅದೇ, ಪುಟ–೧೨

೧೧. ಅದೇ, ಪುಟ–೧೩

೧೨. ಅದೇ, ಪುಟ–೧೫

೧೩. ಅದೇ, ಪುಟ–೧೬

೧೪. ಅದೇ, ಪುಟ–೧೭

೧೫. ಅದೇ, ಪುಟ–೨೨

೧೬. ಅದೇ, ಪುಟ–೨೪

೧೭. ಅದೇ, ಪುಟ–೫೭

೧೮. ಬಸವರಾಜ ಜಗಜಂಪಿ (ಸಂ), ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ–೨, ಪು–೮೪

೧೯. ಅದೇ, ಪುಟ–೨೯೩

೨೦. ಅದೇ, ಪುಟ–೧೫

೨೧. ಅದೇ, ಪುಟ–೧೫

೨೨. ಮ.ನಿ.ಪ್ರ. ಶಾಂತವೀರಸ್ವಾಮಿಗಳು, ಗಂಗಾಂಬಿಕೆ–ನೀಲಾಂಬಿಕೆ: ಒಂದು ಅಧ್ಯಯನ, ಪು–೪೬

೨೩. ದೇವರಕೊಂಡಾರೆಡ್ಡಿ (ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ, ಕೊಪ್ಪಳ ಜಿಲ್ಲೆ, ಪು–೨೦೮

೨೪. ದೇವರಕೊಂಡಾರೆಡ್ಡಿ ಮತ್ತು ಹನುಮಾಕ್ಷಿ ಗೋಗಿ (ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ, ಬೀದರ ಜಿಲ್ಲೆ, ಪು-೨೮

೨೫. ವಿದ್ಯಾಶಂಕರ ಎಸ್. (ಸಂ), ಬಸವಪುರಾಣ, ಪು-೪೪

೨೬. ಅದೇ, ಪುಟ-೪೫

೨೭. ರಾಜಶೇಖರ ಪಿ.ಕೆ. (ಸಂ), ಜನಪದ ಬಸವಪುರಾಣ, ಪು-೩೪

೨೮. ರಾಜಶೇಖರ ಪಿ.ಕೆ. (ಸಂ), ಕರಪಾಲ ಬಸವಪುರಾಣ, ಪು-೨೫

೨೯. ಲಿಂಗಾನುಭರಿ ನೀಲಾಂಬಿಕೆ, ಪು-೪

೩೦. ವಿದ್ಯಾಶಂಕರ ಎಸ್. (ಸಂ), ಭೀಮಕವಿ ಬಸವಪುರಾಣ, ಪು-೫೪

೩೧. ಅದೇ, ಪುಟ-೫೫

೩೨. ಅದೇ, ಪುಟ-೫೫

೩೩. ಅದೇ, ಪುಟ-೫೫

೩೪. ಅದೇ, ಪುಟ-೫೬

೩೫. ಅದೇ, ಪುಟ-೫೬

೩೬. ಶ್ರೀಮತಿ ಎಚ್.ಎಸ್., ಕನ್ನಡ ಮಹಿಳಾ ಚರಿತ್ರೆ, ಪ್ರಸಾರಾಂಗ, ಕನ್ನಡ ವಿ.ವಿ.ಹಂಪಿ, ಪು-೧೧೦

೩೭. ಭೂಸನೂರಮಠ ಶಕುಂತಲಾ (ಸಂ), ಬಸವಪಥ ಸಂಪುಟ-೧೯, ಪು-೧೫

೩೮. ಶ್ರೀಮತಿ ಎಚ್.ಎಸ್., ಕನ್ನಡ ಮಹಿಳಾ ಚರಿತ್ರೆ, ಪ್ರಸಾರಾಂಗ, ಕನ್ನಡ ವಿ.ವಿ.ಹಂಪಿ, ಪು-೧೧೩-೧೧೪

೩೯. ಅದೇ, ಪುಟ-೧೧೪

೪೦. ಅದೇ, ಪುಟ-೧೧೧೮

೪೧. ಕಲಬುರ್ಗಿ ಎಂ.ಎಂ., ಮಾರ್ಗ-೧, ಪು-೧೯೮

೪೨. ಶ್ರೀಮತಿ ಎಚ್.ಎಸ್., ಕನ್ನಡ ಮಹಿಳಾ ಚರಿತ್ರೆ, ಪ್ರಸಾರಾಂಗ, ಕನ್ನಡ ವಿ.ವಿ.ಹಂಪಿ, ಪು-೧೧೩-೧೦೮

೪೩. ಕಲಬುರ್ಗಿ ಎಂ.ಎಂ., ಮಾರ್ಗ-೧, ಪು-೧೯೭

೪೪. ಅದೇ, ಪುಟ-೧೯೮

೪೫. ವೆಂಕಣ್ಣಯ್ಯ ಟಿ.ಎಸ್., ಬಸವರಾಜ ದೇವರ ರಗಳೆ, ಪು-೮೮

೪೬. ಅದೇ, ಪು–

೪೭. ವಿದ್ಯಾಶಂಕರ ಎಸ್. (ಸಂ), ಭೀಮಕವಿ ಬಸವಪುರಾಣ, ಪು–೯

೪೮. ಅದೇ, ಪುಟ–೧೦೦

೪೯. ಅದೇ, ಪುಟ–೭೬೬

೫೦. ಅದೇ, ಪುಟ–೧೦೦

೫೧. ಅದೇ, ಪುಟ–೭೬೬

೫೨. ಶಿವಮೂರ್ತಿ ಶಿವಾಚಾರ್ಯರು ಸಿರಿಗೆರೆ, ಕೂಡಲಸಂಗಮ ಅಳಿವು–ಉಳಿವು, ಪು–xxxvii

೫೩. ಪಾಟೀಲ ಜಿ.ಎಲ್., ಕೂಡಲಸಂಗಮ ಕ್ಷೇತ್ರ, ಪು–೮

೫೪. ಪಾಟೀಲ ಜಿ.ಎಲ್., ಕೂಡಲಸಂಗಮ, ಕರ್ನಾಟಕ ಶಿಕ್ಷಣ ಪ್ರಸಾರಕ ಸಂಘ, ಬಸವನಬಾಗೇವಾಡಿ, ಪು–೧೦

೫೫. ರವೀಂದ್ರನಾಥ ಕೆ. (ಸಂ), ಬಸವಯುಗದ ಶರಣರ ವಚನೇತರ ಸಾಹಿತ್ಯ, ಪು–೩೧೩

೫೬. ಅದೇ, ಪುಟ–೩೪

೫೭. ಕಲಬುರ್ಗಿ ಎಂ.ಎಂ., ಮಾರ್ಗ–೧, ಪು–೨೦೭

ಅಧ್ಯಾಯ : ೮

ಕೂಡಲಸಂಗಮ ಅಭಿವೃದ್ಧಿ ಮಂಡಳಿ

ಅಧ್ಯಾಯ : ಎಂಟು

ಕೂಡಲಸಂಗಮ ಅಭಿವೃದ್ಧಿ ಮಂಡಳಿ

ಕೂಡಲಸಂಗಮ ಕ್ಷೇತ್ರವು ಕರ್ನಾಟಕದಲ್ಲಿ ಅಷ್ಟೇ ಅಲ್ಲ ಇಡೀ ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿಯೇ ಪ್ರಸಿದ್ಧವಾದ ಧಾರ್ಮಿಕ ಮತ್ತು ವಿದ್ಯಾಕೇಂದ್ರವಾಗಿದೆ. ಕೃಷ್ಣಾ ಮತ್ತು ಮಲಪ್ರಭಾ ನದಿಗಳ ಸಂಗಮದ ಸಮ್ಮುಖದಲ್ಲಿರುವ ಸಂಗಮೇಶ್ವರ ಲಿಂಗ ಕೇವಲ ಭಾವುಕರನ್ನು ಮಾತ್ರವಲ್ಲ ತನ್ನ ಸುತ್ತಲಿನ ಪ್ರಕೃತಿ ಪರಿಸರದಿಂದ ನಿರಂತರವಾಗಿ ಹರಿದು ಬಂದ ಸಾಂಸ್ಕೃತಿಕ ಪ್ರತಿಭೆಯಿಂದ ವಿಚಾರವಂತರನ್ನು ಆಚಾರ ನಿಷ್ಠರನ್ನು ಆಕರ್ಷಿಸುತ್ತ ಬಂದಿದೆ. ಹನ್ನೆರಡನೇ ಶತಮಾನದಿಂದ ಪ್ರಸಿದ್ಧ ಶೈವ ಯಾತ್ರಾ ಸ್ಥಳವಾಗಿದ್ದು ಕೂಡಲಸಂಗಮದ ಸಂಗಮೇಶ್ವರ ದೇವಾಲಯ ಮತ್ತು ಐಕ್ಯಮಂಟಪ ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಜಲಾಶಯದ ಹಿನ್ನೀರಿನಲ್ಲಿ ಮುಳುಗಲಿದ್ದವು. ದೇವಾಲಯವನ್ನು ಮೂಲಸ್ಥಳದಿಂದ ಕಿತ್ತು ಬೇರೆ ಕಡೆ ಕಟ್ಟುವ ಪ್ರಯತ್ನಕ್ಕೆ ರಾಜ್ಯವ್ಯಾಪಿ ವಿರೋಧ ಕಂಡುಬಂತು. ಆ ಸಮಸ್ಯೆಗೆ ಪರಿಹಾರ ಸೂಚಿಸಲು ನೇಮಿಸಿದ್ದ ಮುದ್ನಾಳ ಸಮಿತಿಯು ಸಂಗಮೇಶ್ವರ ದೇವಾಲಯವನ್ನು ಇದ್ದ ಸ್ಥಳದಲ್ಲಿಯೇ ಉಳಿಸಬೇಕು. ಮತ್ತು ಸಂಗಮವನ್ನು ಅಂತರಾಷ್ಟ್ರೀಯ ಪ್ರಸಿದ್ಧ ಸ್ಥಳವಾಗಿ ಅಭಿವೃದ್ಧಿಪಡಿಸಬೇಕೆಂದು ಸಲಹೆ ನೀಡಿತು. ಸಮಿತಿಯ ಸಲಹೆಗಳನ್ನು ಒಪ್ಪಿ ಅವುಗಳನ್ನು ಈಡೇರಿಸಲು ರಚಿಸಲ್ಪಟ್ಟ ಒಂದು ವಿಶೇಷ ಕಾಯ್ದೆಯಡಿ ರೂಪಿಸಿಕೊಂಡ ಮಂಡಳಿಯೇ ಕೂಡಲ ಸಂಗಮ ಅಭಿವೃದ್ಧಿ ಮಂಡಳಿ.

ಕೂಡಲಸಂಗಮ ಕ್ಷೇತ್ರದ ಅಭಿವೃದ್ಧಿಯು ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಮುಳುಗಡೆಯಾಗುತ್ತಿದ್ದ ಸಂಗಮೇಶ್ವರ ದೇವಸ್ಥಾನ ಮತ್ತು ಕೂಡಲ ಸಂಗಮದ ಬಹುಭಾಗ ಪ್ರದೇಶವನ್ನು ರಕ್ಷಿಸಿ ಅದನ್ನು ಒಂದು ಪ್ರೇಕ್ಷಣೀಯ ಸ್ಥಳವಾಗಿಸುವ ಉದ್ದೇಶದಿಂದ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಅಲ್ಲಿನ

ಕಾರ್ಯಕ್ರಮಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿಯಲ್ಲಿದ್ದವು. ತದನಂತರ ಅದನ್ನು ಕಂದಾಯ ಇಲಾಖೆಯ ಅಡಿಯಲ್ಲಿ ಮುಂದುವರೆಸಲಾಯಿತು. ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯ ಕಾನೂನಿನಲ್ಲಿ ಅದರ ಉದ್ದೇಶ ಕರ್ತವ್ಯ ಹಾಗೂ ಮಂಡಳಿಯ ರಚನೆಯ ರೂಪುರೇಷಗಳನ್ನು ನೀಡಲಾಗಿದೆ. ಆ ಅಂಶಗಳನ್ನು ೧೯೮೭ರಲ್ಲಿ ಸಲ್ಲಿಸಿದ ಮುದ್ನಾಳ ಸಮಿತಿಯ ವರದಿಯಿಂದ ಪಡೆಯಲಾಗಿದೆ. ಆದರೆ ಆ ವರೆಗೆ ಮಂಡಳಿಯ ರಚನೆಯಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಯಾವುದೇ ಕಾರ್ಯಕ್ರಮಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಯೋಜಿಸಿರಲಿಲ್ಲ. ೧೯೯೭ರಲ್ಲಿ ಅಧಿಕೃತವಾಗಿ ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯನ್ನು ರಚಿಸಲಾಯಿತು. ಮೊದಲು ಮಂಡಳಿಯಲ್ಲಿ ಗದುಗಿನ ಪರಮಪೂಜ್ಯ ಶ್ರೀ ತೋಂಟದಾರ್ಯ ಶ್ರೀಗಳು ಇಳಕಲ್ಲಿನ ಪರಮಪೂಜ್ಯ ಶ್ರೀಗಳು ಸದಸ್ಯರಾಗಿದ್ದರು. ಅವರು ಕೂಡಲ ಸಂಗಮ ಅಭಿವೃದ್ಧಿಯ ಎಲ್ಲ ವಿಚಾರಗಳಲ್ಲಿ, ಹಂತಗಳಲ್ಲಿ, ಯೋಜನೆಗಳಲ್ಲಿ ಮಾರ್ಗದರ್ಶನವನ್ನು ನೀಡುತ್ತಿದ್ದರು. ಅವರು ಅಲ್ಲಿನ ಅಭಿವೃದ್ಧಿ ಯೋಜನೆಯನ್ನು ತಯಾರಿಸುವಾಗ ಮುದ್ನಾಳ ಸಮಿತಿಯ ವರದಿಗೆ ಲಗತ್ತಿಸಿದ್ದ ಕೆಲವು ಕಟ್ಟಡ ನಕ್ಷೆಗಳು ಅವುಗಳ ಗಾತ್ರ ಮತ್ತು ಸ್ವರೂಪವನ್ನು ತಯಾರಿಸಿದ್ದರು. ಹಂತಹಂತವಾಗಿ ಯೋಜನೆಗಳನ್ನು ರೂಪಿಸಲು ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ಈ ಸಮಿತಿಯಲ್ಲಿ ರಾಜ್ಯದ ಅಂದಿನ ಪ್ರಸಿದ್ಧ ಪ್ರಧಾನ ಎಂಜಿನಿಯರ್ ಎಸ್.ಜಿ. ಬಾಳೆಕುಂದ್ರಿ ಮತ್ತು ಮುಗದಂ ಅವರುಗಳು ಈ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಯಶಸ್ವಿಗೊಳಿಸಿದರು.

ಅಭಿವೃದ್ಧಿ ಮಂಡಳಿಯ ರಚನೆ

ನಾರಾಯಣಪುರದ ಹತ್ತಿರ ಕೃಷ್ಣಾನದಿಗೆ ಅಣೆಕಟ್ಟನ್ನು ನಿರ್ಮಿಸುವುದರಿಂದ ಬಸವಸಾಗರದ ಹಿನ್ನೀರಿನಲ್ಲಿ ಕೂಡಲ ಸಂಗಮದಲ್ಲಿ ಕೃಷ್ಣಾ ಹಾಗೂ ಮಲಪ್ರಭಾ ನದಿಗಳ ಸಂಗಮವಾದ ಸ್ಥಳದಲ್ಲಿರುವ ಪುರಾತನವಾದ ಶ್ರೀ ಸಂಗಮೇಶ್ವರ ದೇವಸ್ಥಾನ ಹಾಗೂ ಶ್ರೀ ಬಸವೇಶ್ವರ ಐಕ್ಯ ಮಂಟಪ ಇವುಗಳನ್ನು ಸಂರಕ್ಷಿಸಿ ಅಭಿವೃದ್ಧಿಪಡಿಸುವುದು, ಈ ಕ್ಷೇತ್ರವನ್ನು ಆಧ್ಯಾತ್ಮಿಕ ಕೇಂದ್ರ ಮತ್ತು ಅಂತರಾಷ್ಟ್ರೀಯ ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ಕೂಡಲ ಸಂಗಮ ಅಭಿವೃದ್ಧಿ ಮಂಡಳಿ ಅಧಿನಿಯಮ ೧೯೯೪ನ್ನು ದಿನಾಂಕ ೦೪/೦೨/೧೯೯೮ರ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಮೂಲಕ ಜಾರಿಯಲ್ಲಿ ತಂದಿತು. ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯು ಕೆಳಕಂಡ ಸದಸ್ಯರನ್ನು ಹೊಂದಿದೆ.

೧. ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರಕಾರ ಬೆಂಗಳೂರು, ಅಧ್ಯಕ್ಷರು

೨. ಮಾನ್ಯ ಕಂದಾಯ ಸಚಿವರು, ಸದಸ್ಯರು

೩. ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು, ಸದಸ್ಯರು

೪. ಸಂಸತ್ ಸದಸ್ಯರು ಬಾಗಲಕೋಟೆ, ಸದಸ್ಯರು

೫. ವಿಧಾನಸಭಾ ಸದಸ್ಯರು ಹುನಗುಂದ, ಸದಸ್ಯರು

೬. ವಿಧಾನ ಪರಿಷತ್ ಸದಸ್ಯರು ಬಾಗಲಕೋಟೆ, ಸದಸ್ಯರು

೭. ಅಧ್ಯಕ್ಷರು ಬಸವ ಸಮಿತಿ ಬೆಂಗಳೂರು, ಸದಸ್ಯರು

೮. ಅಧ್ಯಕ್ಷರು ಅಖಿಲ ಭಾರತ ವೀರಶೈವ ಮಹಾಸಭಾ ಬೆಂಗಳೂರು, ಸದಸ್ಯರು

೯. ಆಯುಕ್ತರು (ಪುನರ್ ವಸತಿ ಪುನರ್ ನಿರ್ಮಾಣ ಹಾಗೂ ಭೂ ಸ್ವಾಧೀನ) ಹಾಗೂ ಕಾರ್ಯದರ್ಶಿಯವರು ಕಂದಾಯ ಇಲಾಖೆ ಬಾಗಲಕೋಟೆ, ಸದಸ್ಯರು

೧೦. ರಾಜ್ಯ ಸರ್ಕಾರವು ನಾಮ ನಿರ್ದೇಶಿಸಿದ ಐದು ಜನ ಸದಸ್ಯರು ಶ್ರೀ ಬಸವೇಶ್ವರರು ಅಂಗೀಕರಿಸಿದ ತತ್ವಗಳ ಸಲುವಾಗಿ ಸೇವೆ ಸಲ್ಲಿಸಿದ ಅವರಲ್ಲಿ ಒಬ್ಬ ಮುಖ್ಯ ಅಭಿಯಂತರರ ಹುದ್ದೆಯನ್ನು ಅಲಂಕರಿಸಿದವರು, ಸದಸ್ಯರು

೧೧. ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆಯ ನಿರ್ದೇಶಕರು, ಸದಸ್ಯರು

೧೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ, ಹಣಕಾಸು ಇಲಾಖೆ ನೀರಾವರಿ ಇಲಾಖೆ ಬೆಂಗಳೂರು, ಸದಸ್ಯರು

೧೩. ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತರು, ಸದಸ್ಯರು

೧೪. ಸರ್ಕಾರದ ವಿಶೇಷ ಕಾರ್ಯದರ್ಶಿ ನಿರಾವರಿ ಇಲಾಖೆ ಮತ್ತು ಯೋಜನಾ ಸಮನ್ವಯ ಅಧಿಕಾರಿ ಕೃಷ್ಣಾ ಮೇಲ್ದಂಡೆ ಯೋಜನೆ ಬೆಂಗಳೂರು, ಸದಸ್ಯರು

೧೫. ಜಿಲ್ಲಾಧಿಕಾರಿಗಳು ಬಾಗಲಕೋಟೆ, ಸದಸ್ಯರು

೧೬. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತಿ ಬಾಗಲಕೋಟೆ, ಸದಸ್ಯರು

೧೭. ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆ ಮಹಾ ವ್ಯವಸ್ಥಾಪಕರು ಬಾಗಲಕೋಟೆ, ಸದಸ್ಯರು

೧೮. ಕರ್ನಾಟಕ ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯ ಇಲಾಖೆ ನಿರ್ದೇಶಕರು, ಸದಸ್ಯರು

೧೯. ಆಯುಕ್ತರು, ಕೂಡಲಸಂಗಮ ಅಭಿವೃದ್ಧಿ ಮಂಡಳಿ, ಸದಸ್ಯರು

ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯ ಆಡಳಿತ ಕಛೇರಿಯ ಸರಕಾರ ಆದೇಶ ಸಂಖ್ಯೆ ಆರ್.ಡಿ ೧೨೭ ಆರ್.ಇ.ಎಚ್. ೯೭ ಬೆಂಗಳೂರು ದಿನಾಂಕ : ೧೩.೦೩.೧೯೯೭ರ ಮೂಲಕ ಕಾರ್ಯ ನಿರ್ವಹಣೆಯನ್ನು ಪ್ರಾರಂಭಿಸಿತು. ಮಂಡಳಿಗೆ ಮೊದಲ ಹಂತದಲ್ಲಿ ೧೯೯೯ರಲ್ಲಿ ಕಾಮಗಾರಿಗಳಿಗಾಗಿ ಸರ್ಕಾರವು ೩೦೫೮.೨೭ ಲಕ್ಷ ರೂಪಾಯಿ ಹಣವನ್ನು ಬಿಡುಗಡೆ ಮಾಡಿತು.

ಅಭಿವೃದ್ಧಿ ಮಂಡಳಿ ರಚನೆಯಾದಾಗಿನಿಂದ ವಿಶೇಷಾಧಿಕಾರಿಯಾಗಿ ಡಾ. ಎಸ್.ಎಂ. ಜಾಮದಾರ್‌ರವರು ಅಭಿವೃದ್ಧಿಯ ರೂಪುರೇಷೆಗಳನ್ನು ಆಧುನಿಕ ವಿಶೇಷತೆಗಳೊಂದಿಗೆ ನೀಲನಕ್ಷೆಗಳನ್ನು

ತಯಾರಿಸಿಕೊಂಡು ಸಭೆಗಳನ್ನು ಕರೆಯುವುದರ ಮೂಲಕ ಸಂಗಮದ ಅಭಿವೃದ್ಧಿಗೆ ಚಾಲನೆಯನ್ನು ನೀಡಿದರು. ಕರ್ನಾಟಕದಲ್ಲಿ ಅನೇಕ ನದಿ ಸಂಗಮಗಳಿವೆ ಆದರೆ ಈ ಕೂಡಲ ಸಂಗಮವು ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿಯನ್ನು ಪಡೆದದ್ದು ಈ ಕ್ಷೇತ್ರ ಬಸವಣ್ಣನವರ ಬಾಲ್ಯದ ದಿನಗಳನ್ನು ಕಳೆದದ್ದು, ಶಿಕ್ಷಣ ಪಡೆದದ್ದು, ಮತ್ತು ಅಂತ್ಯದ ಅರಿವಾದಾಗ ತಮ್ಮ ಆರಾಧ್ಯ ದೇವರು ಸಂಗಮನಾಥನ ಸನ್ನಿಧಿಯಲ್ಲಿ ದೇಹ ತ್ಯಾಗ ಮಾಡಿದ್ದು, ಈ ಎಲ್ಲ ವಿಶೇಷತೆಗಳಿಂದ ಇದೊಂದು ಪ್ರಸಿದ್ಧ ಸ್ಥಳವಾಗಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವಂತಾಗಬೇಕೆಂದು ಅಭಿವೃದ್ಧಿ ಮಂಡಳಿಯು ತನ್ನ ಯೋಜನೆಗಳನ್ನು ವಿಭಿನ್ನವಾಗಿ ಮತ್ತು ವಿಶೇಷವಾಗಿ ರೂಪುಗೊಳಿಸಿಕೊಂಡಿತು.

ತುಲನಾತ್ಮಕವಾಗಿ ಪಾಕಿಸ್ತಾನದ ಲಾಹೋರ ಸಮೀಪದ ನಾನಕಾನಾದಲ್ಲಿಯ ಗುರುದೇವ ನಾನಕರ ಭವ್ಯವಾದ ಜನ್ಮ ಸ್ಥಾನದ ಕಟ್ಟಡವನ್ನು ಮತ್ತು ಅವರು ಐದು ಸ್ಥಳಗಳಿಗೆ ಹೋದಲ್ಲಿ ನಿರ್ಮಿಸಲಾಗಿರುವ ಬೃಹತ್ ಗುರುದ್ವಾರಗಳನ್ನು ಕೂಡಲಸಂಗಮದ ಪ್ರಸ್ತಾವಿತ ಹೊಸ ಕಟ್ಟಡಗಳಿಗೆ ಬೆತ್ಲಹೇಮ್‌ದಲ್ಲಿ ಕ್ರಿಸ್ತನ ಜನ್ಮಸ್ಥಾನದ ಭವ್ಯವಾದ ಚರ್ಚ ಆಪ್ ನೆಟಿವಿಟಿ ಇದ್ದರೆ ಅವನು ಸತ್ತ ಸ್ಥಳದಲ್ಲಿ ಮತ್ತೊಂದು ಭವ್ಯವಾದ 'ಚರ್ಚ ಆಪ್ ಹೋಲಿ ಸೆಪಲ್ಕರ್' ಇದೆ ಅದೇ ರೀತಿ ಜರ್ಮನಿಯ ಐಜಲ್‌ಬೆನ್ ಮತ್ತು ವಿಟೆನ್‌ಬರ್ಗನಲ್ಲಿ ಮಾರ್ಟೀನ್ ಲೂಥರರವರ ಸ್ಮರಣ ಸ್ಥಳಗಳನ್ನು ಭವ್ಯವಾಗಿ ಸುಂದರವಾಗಿ ಇರಿಸಿದ ರೀತಿಯಲ್ಲಿ ಕೂಡಲಸಂಗಮದ ಕಟ್ಟಡಗಳನ್ನು ರೂಪಿಸಿದರೆ ಅದಕ್ಕೆ ಹೆಚ್ಚಿನ ಮಹತ್ವ ಬರುತ್ತದೆ. ಎಂದು ಸಮಿತಿಯ ಸದಸ್ಯರು ಮತ್ತು ವಿಶೇಷಾಧಿಕಾರಿಗಳು ಆದ ಎಸ್.ಎಂ. ಜಾಮದಾರರವರು ಸರ್ಕಾರದ ಅನುಮೋದನೆಯನ್ನು ಪಡೆಯುವುದಕ್ಕೋಸ್ಕರ ಅಂದಿನ ಮುಖ್ಯಮಂತ್ರಿಗಳಾದ ಜೆ.ಎಚ್.ಪಟೇಲರನ್ನು ಭೇಟಿಯಾಗಿ ಅನುಮೋದನೆಯನ್ನು ಪಡೆದುಕೊಳ್ಳುತ್ತಾರೆ.

ಮುದ್ನಾಳ ಸಮಿತಿಯು ಸಂಗಮೇಶ್ವರ ದೇವಾಲಯವನ್ನು ಇದ್ದಲ್ಲಿಯೇ ಉಳಿಸಬೇಕು ಮತ್ತು ಐಕ್ಯ ಮಂಟಪದ ಸುತ್ತ ಒಂದು ಒಣ ಬಾವಿಯನ್ನು ಕಟ್ಟಿ ಮೆಟ್ಟಿಲುಗಳ ಮೂಲಕ ಅಲ್ಲಿಗೆ ಹೋಗಲು ಬಾವಿಯವರೆಗೆ ಸಂಗಮನಾಥನ ಗುಡಿಯಿಂದ ಸೇತುವೆಯನ್ನು ನಿರ್ಮಾಣ ಮಾಡಲು ಮತ್ತು ಯಾತ್ರಿ ನಿವಾಸ, ಸಭಾ ಭವನ, ಬಸವ ಅಂತರಾಷ್ಟ್ರೀಯ ಕೇಂದ್ರ, ಗ್ರಂಥಾಲಯ ಮತ್ತು ಮ್ಯೂಜಿಯಮ್‌ಗಳ ಕಟ್ಟಡಗಳನ್ನು ಕಟ್ಟಲು ಸಮಿತಿಯು ಸೂಚಿಸುತ್ತದೆ. ಬಸವ ಅಂತರಾಷ್ಟ್ರೀಯ ಕೇಂದ್ರದ ನಕ್ಷೆಯೊಂದನ್ನು ಬಿಟ್ಟು ಉಳಿದ ನಾಲ್ಕು ಕಟ್ಟಡಗಳ ನಕ್ಷೆಗಳು ಆಗ ಚಾಲ್ತಿಯಲ್ಲಿದ್ದ ಸಾಮಾನ್ಯ ಪಿ.ಡಬ್ಲ್ಯೂ.ಡಿ ಇಲಾಖೆಯ ಕಟ್ಟಡಗಳ ನಕ್ಷೆಗಳಂತೆ ಇದ್ದವು. ಅವುಗಳನ್ನು ಬದಲಿಸಿ ಬೃಹತ್ ಗಾತ್ರದ ಹೊಸ ನಕ್ಷೆಗಳನ್ನು ತಯಾರಿಸಲು ಜಾಮದಾರರವರು ನಿರ್ಧರಿಸುತ್ತಾರೆ. ಅವುಗಳೊಂದಿಗೆ ಸಮಿತಿಯ ವರದಿಯಲ್ಲಿಲ್ಲದ ಸುಮಾರು ಇಪ್ಪತ್ತು ಹೊಸ ಕಾರ್ಯಕ್ರಮಗಳನ್ನು ಸೇರಿಸಲು ಸಲಹೆ ಸೂಚನೆಗಳನ್ನು ನೀಡುತ್ತಾರೆ. ಕೇವಲ ಒಂದು ನೂರು ಎಕರೆ ಸೀಮಿತವಾದ ಕೂಡಲ ಸಂಗಮ ಕ್ಷೇತ್ರದ ವ್ಯಾಪ್ತಿಯನ್ನು ಆರುನೂರು ಎಕರೆಗೆ ಹೆಚ್ಚಿಸಿ ಬೇರೆ ಬೇರೆ ಉದ್ದೇಶಕ್ಕೆ

ವಶಪಡಿಸಿಕೊಂಡು ಕಾಲಿ ಬಿದ್ದಿದ್ದ ಜಮೀನನ್ನು ಸೇರಿಸಿ ದೊಡ್ಡಪ್ರಮಾಣದ ಉದ್ಯಾನ ನಿರ್ಮಾಣ ಮಾಡುವ ಪ್ರಸ್ತಾಪವನ್ನು ತಯಾರಿಸುತ್ತಾರೆ.

ಭವ್ಯ ಪ್ರವೇಶ ಮಹಾದ್ವಾರ ಸುಂದರವಾದ ಬಸವ ವೃತ್ತ, ಒಂದೆರಡು ಕಲ್ಯಾಣ ಮಂಟಪಗಳು ನೂರಾರು ಅಂಗಡಿ ಮುಂಗಟ್ಟುಗಳು ಒಂದು ದೊಡ್ಡ ಬಸ್‌ನಿಲ್ದಾಣ, ರಥದ ಶೆಡ್ ಗುಡಿಯ ಸುತ್ತಲೂ ಪೌಳಿಗಳು ಮತ್ತು ಎತ್ತರವಾದ ವಿಮಾನ ಗೋಪುರ ಒಂದು ಕಿಲೋಮೀಟರ್ ಉದ್ದದ ರಥ ಬೀದಿ ಪೂಜಾವನ ಗುಡಿಯ ಆವರಣದ ನೆಲಕ್ಕೆ ಸಿಮೆಂಟ ಮತ್ತು ಕಲ್ಲಿನ ಹಾಸಿಗೆ ಗುಡಿಯ ಹೊರಗೆ ಸುಂದರವಾದ ಉದ್ಯಾನವನ ಎಲ್ಲ ಕಟ್ಟಡಗಳಿಗೆ ಹೋಗಲು ಅಂದವಾದ ರಸ್ತೆಗಳು ಸಿಬ್ಬಂದಿಯ ವಸತಿ ಗೃಹಗಳು ಸುಂದರವಾದ ಕಛೇರಿ ದೊಡ್ಡಗಾತ್ರದ ದಾಸೋಹ ಭವನ ನೂರು ಅಡಿ ಅಗಲದ ಎರಡು ಕಿ.ಮೀ. ಉದ್ದದ ದ್ವಿಮುಖ ರಸ್ತೆ ರಸ್ತೆಗೆ ಹೊಂದಿಕೊಂಡು ಇಬ್ಬದಿಗೆ ಚರಂಡಿಗಳು ಪಾದಾಚಾರಿ ಪಥಗಳು ಮತ್ತು ಅಂದವಾದ ಕಂಪೌಂಡುಗಳು ಒಂದು ವಿಶೇಷವಾದ ಅತಿಥಿ ಗೃಹ, ಒಂದು ಉಪಹಾರ ಗೃಹ, ದೊಡ್ಡ ಪ್ರಮಾಣದ ಶೌಚಾಲಯ ಮತ್ತು ಸ್ನಾನಗೃಹಗಳನ್ನು ಹೊಸ ಪ್ರಸ್ತಾವನೆಗೆ ಸೇರಿಸಿ ಎರಡು ಹಂತದಲ್ಲಿ ಅಭಿವೃದ್ಧಿಪಡಿಸಬಹುದಾದ ಹೊಸ ಯೋಜನೆ ರೂಪಿಸಲಾಯಿತು. ಆಗಿನ ಅದರ ಅಂದಾಜು ವೆಚ್ಚ ನಲವತ್ತು ಕೋಟಿ ರೂಪಾಯಿಗಳು.

ಮಂಡಳಿಯ ಪ್ರಥಮ ಸಭೆ ಮೇ ೨೭-೧೯೯೭ ರಂದು ಕೂಡಲ ಸಂಗಮದಲ್ಲಿಯೇ ನಡೆಯಿತು. ಅಂದಿನ ಮುಖ್ಯಮಂತ್ರಿಗಳಾದ ಜೆ.ಎಚ್. ಪಟೇಲ್‌ರವರು ಅಧ್ಯಕ್ಷತೆ ವಹಿಸಿದ್ದರು. ಮಂಡಳಿಯ ಪ್ರಥಮ ಸಭೆಯಲ್ಲಿ ಕೂಡಲ ಸಂಗಮ ಕ್ಷೇತ್ರವನ್ನು ಎರಡು ಹಂತದಲ್ಲಿ ಅಭಿವೃದ್ಧಿಪಡಿಸಲು ಮತ್ತು ಮೊದಲ ಹಂತಕ್ಕೆ ಕನಿಷ್ಟ ನಲವತ್ತು ಕೋಟಿ ರೂಪಾಯಿಗಳು ಖರ್ಚಾಗಬಹುದೆಂದು ಅದನ್ನು ಸರ್ಕಾರದ ಪರವಾಗಿ ನೀರಾವರಿ ಇಲಾಖೆಯಿಂದ ಕಂದಾಯ ಇಲಾಖೆಯ ಪುನರ್ ವಸತಿ ಆಯುಕ್ತರಿಗೆ ನೀಡಬೇಕೆಂದು ನಿರ್ಣಯವಾಯಿತು. ಈ ಎಲ್ಲ ಕೆಲಸಗಳಿಗೆ ಮೊದಲ ಹಂತವಾಗಿ ಆಯುಕ್ತರಿಂದ ಮೂವತ್ತು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲು ಅವಕಾಶ ದೊರಕಿತು. ಈ ಕಾರಣದಿಂದಾಗಿ ಕೂಡಲಸಂಗಮ ಅಭಿವೃದ್ಧಿಯು ಸಮರೋಪಾದಿಯಲ್ಲಿ ಬೆಳವಣಿಗೆಯಾಗಲು ನಾಂದಿಯಾಯಿತು. ಕೂಡಲಸಂಗಮ ರಾಷ್ಟ್ರೀಯ ಹೆದ್ದಾರಿ ೧೩ರ ರಿಂದ ೮ ಕಿ.ಮೀ. ದೂರವಿದೆ. ಅದೇ ಹೆದ್ದಾರಿಯಿಂದ ದಕ್ಷಿಣಕ್ಕೆ ೧೦೦ ಕಿ.ಮೀ. ದೂರದಲ್ಲಿ ಐತಿಹಾಸಿಕ ಪ್ರಸಿದ್ಧ ವಿಜಯನಗರದ ಹಂಪಿ ಇದೆ. ಉತ್ತರಕ್ಕೆ ೨೫ ಕಿ.ಮೀ. ಅಂತರದಲ್ಲಿ ಆಲಮಟ್ಟಿ ಜಲಾಶಯ ಮತ್ತು ಉದ್ಯಾನಗಳಿವೆ. ಅಲ್ಲಿಂದ ೬೫ ಕಿ.ಮೀ. ದೂರದಲ್ಲಿ ಇತಿಹಾಸ ಪ್ರಸಿದ್ಧ ಬಿಜಾಪುರ ಆದಿಲ್‌ಶಾಹಿಯ ಗೋಲಗುಮ್ಮಟವಿದೆ. ಪಶ್ಚಿಮಕ್ಕೆ ३೦ ರಿಂದ ೫೦ ಕಿ.ಮೀ. ದೂರದಲ್ಲಿ ವಿಶ್ವ ಪರಂಪರೆಯ ತಾಣಗಳ ಪಟ್ಟಿಗೆ ಸೇರಿದ ಐಹೊಳೆ, ಪಟ್ಟದಕಲ್ಲು, ಬಾದಾಮಿಗಳಿವೆ. ಇವೆಲ್ಲವುಗಳಿಗೆ ಕೇಂದ್ರ ಬಿಂದುವೆನಿಸುವ ಸ್ಥಳದಲ್ಲಿ ನೆಲೆಸಿರುವ ಕೂಡಲ ಸಂಗಮ ಅಪಾರವಾದ ಜಲರಾಶಿಯ ಬದಿಯಲ್ಲಿದೆ. ಮತ್ತು ಬಸವಕ್ಷೇತ್ರವೆಂದು ಸಾಕಷ್ಟು ಪ್ರಸಿದ್ಧವಿದೆ. ಕರ್ನಾಟಕ,

ಮಹಾರಾಷ್ಟ್ರ ಹಾಗೂ ಆಂಧ್ರ ಪ್ರದೇಶದಿಂದಲೂ ಜನರು ಬರುತ್ತಾರೆ. ಈ ಹಿನ್ನೆಲೆಯಲ್ಲಿ ಕೂಡಲ ಸಂಗಮವನ್ನು ಒಂದು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವುದು ಸೂಕ್ತವೆಂದು ನಿರ್ಣಯಿಸಿ ಅಭಿವೃದ್ಧಿ ಮಂಡಳಿಯು ತನ್ನ ಕಾರ್ಯಗಳನ್ನು ಕೈಗೊಂಡಿತೆನ್ನಬಹುದು.

ಕೂಡಲಸಂಗಮ ಅಭಿವೃದ್ಧಿ ಮಂಡಳಿ ಕೈಗೊಂಡ ಯೋಜನೆಗಳು

ಪ್ರವಾಸೋದ್ಯಮಕ್ಕೆ ಸುಲಭ ಸಂಚಾರ ಸಾಗಾಟ ವ್ಯವಸ್ಥೆ ಅದರ ಅವಶ್ಯಕತೆಯನ್ನು ಸುಲಭಗೊಳಿಸಲು ಹಲವಾರು ಯೋಜನೆಗಳನ್ನು ರೂಪಿಸಲು ಇಲ್ಲಿಯವರೆಗಿನ ಸಭೆಗಳು ಮತ್ತು ಮಂಡಳಿಯು ಕೈಗೊಂಡ ನಿರ್ಣಯದನ್ವಯ ಪ್ರಗತಿಕಾರ್ಯಗಳನ್ನು ಈ ಮೂಲಕ ಕಾರ್ಯರೂಪಗೊಳಿಸಿತು. ಅವುಗಳಲ್ಲಿ ಪ್ರಮುಖವಾಗಿ ಫುಟ್‌ಪಾತ್, ಚರಂಡಿ ಮತ್ತು ಅಲಂಕೃತ ಕಂಪೌಂಡ್, ಮಹಾದ್ವಾರ, ಬಸವ ಸರ್ಕಲ್, ಬಸ್‌ನಿಲ್ದಾಣ, ರಾಜಗೋಪುರ ಸಣ್ಣ ಕಲ್ಯಾಣ ಮಂಟಪ, ಪಾಕಶಾಲೆ, ವಿಶ್ರಾಂತಿ ಕೋಣೆಗಳು, ಅಲಂಕೃತ ಚಪ್ಪರ ಮತ್ತು ವೇದಿಕೆ, ಉದ್ಯಾನವನಗಳು ಐಕ್ಯ ಮಂಟಪದ ಬಾವಿಯ ಅಲಂಕರಣ, ದೋಣಿ ವ್ಯವಸ್ಥೆ, ರಥ ನಿಲಯ ಮತ್ತು ರಥ ಬೀದಿ, ಅಂಗಡಿ ಮಳಿಗೆಗಳು, ದಾಸೋಹ ಭವನ, ಯಾತ್ರಿನಿವಾಸ, ಕುಡಿಯುವ ನೀರಿನ ಪೂರೈಕೆ, ಉಪಹಾರ ಮಂದಿರ, ವಿಶಾಲ ಉದ್ಯಾನವನಗಳು, ವಚನ ಸಾಹಿತ್ಯ ಸಂಶೋಧನ ಕೇಂದ್ರ, ಗ್ರಂಥಾಲಯ, ಬಸವ ಅಂತರಾಷ್ಟ್ರೀಯ ಕೇಂದ್ರ ಹೀಗೆ ಹತ್ತು ಹಲವು ಬಗೆಯ ಬೆಳಗು ತರುವ ಕಾರ್ಯಗಳನ್ನು ಅಭಿವೃದ್ಧಿ ಮಂಡಳಿಯು ಹಮ್ಮಿಕೊಂಡಿದ್ದು ಅವುಗಳ ಸ್ಥೂಲನೋಟವನ್ನು ಈ ಮುಂದಿನಂತೆ ನೋಡಬಹುದಾಗಿದೆ.

ಮಹಾದ್ವಾರ

ರಾಷ್ಟ್ರೀಯ ಹೆದ್ದಾರಿಯಿಂದ ಕೂಡಲ ಸಂಗಮಕ್ಕೆ ಪ್ರವೇಶವಾಗುವ ಮುನ್ನ ಚಾಲುಕ್ಯ ಶೈಲಿಯ ಇಪ್ಪತ್ತು ಕಲ್ಲಿನ ಕಂಬಗಳ ಮೇಲೆ ನಿಂತಿರುವ ಈ ಮಹಾದ್ವಾರ ಒಂದು ನೂರು ಅಡಿ ಅಗಲ ಮತ್ತು ತೊಂಬತ್ತು ಅಡಿ ಎತ್ತರವಾಗಿದೆ. ಸಂಗಮೇಶ್ವರ ದೇವಾಲಯ ಎರಡು ಕಿ.ಮೀ. ದೂರ ಇರುವ ಅಂತರದಲ್ಲಿ ರಸ್ತೆಗೆ ಆಕರ್ಷಕವಾಗಿ ಭವ್ಯವಾದ ಮಹಾದ್ವಾರವನ್ನು ಕಲ್ಲಿನಲ್ಲಿ ಕಟ್ಟಿ ಅಲ್ಲಿಯವರೆಗೆ ಕೂಡಲ ಸಂಗಮ ಕ್ಷೇತ್ರದ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ. ಈ ಮಹಾದ್ವಾರದ ಪ್ರಥಮ ನಕ್ಷೆಯನ್ನು ಕಿರಣ್ ಶಂಕರರವರು ನೀಡಿದ್ದರು. ಅದರ ಪ್ರಕಾರ ಕಟ್ಟಿದ ನಂತರ ಮಹಾದ್ವಾರ ಸ್ವಲ್ಪ ಛಂದಸ್ಸನ್ನು ಕಳೆದುಕೊಂಡಿದ್ದರಿಂದ ಅದನ್ನು ಸರಿಪಡಿಸಲು ತಮಿಳುನಾಡಿನ ದೇವಾಲಯ ವಾಸ್ತುಶಿಲ್ಪಿ ಕುಮಾರೇಶನ್ ಅವರಿಂದ ಹೊಸ ನಕ್ಷೆಯನ್ನು ರೂಪಿಸಿ ೨೦ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಈ ಮಹಾದ್ವಾರವನ್ನು ನಿರ್ಮಿಸಲಾಯಿತು.

ಸಭಾಭವನ

ಕೂಡಲ ಸಂಗಮದಲ್ಲಿ ವಿಶೇಷವಾದ ಕಟ್ಟಡವೆಂದರೆ ಅಲ್ಲಿಯ ಬೃಹತ್ ಸಭಾಭವನ. ಇದರ ಪ್ರಾರಂಭಿಕ ನಕ್ಷೆ ಕಿರಣ ಶಂಕರರವರು ನೀಡಿದ್ದರು. ಅದನ್ನು ಸುಮಾರು ೭೦ಪ್ರತಿಶತ ಎಸ್.ಎಂ.

ಜಾಮದಾರ್‌ರವರು ಬದಲಿಸಿ ನಾಲ್ಕು ಮಂಟಪಗಳನ್ನು ಮೊದಲ ಮಹಡಿಯನ್ನು, ಕಲಾತ್ಮಕ ಅಂಶಗಳನ್ನು, ಹೊಸ ರೀತಿಯ ಆಸನಗಳನ್ನು ನಿರ್ಮಾಣ ಮಾಡುವ ಗುರಿಯೊಂದಿಗೆ ಇದರ ಮೇಲ್ಭಾವಣಿ ವಿನ್ಯಾಸವನ್ನು ಅದ್ಭುತವಾಗಿ ತಯಾರಿಸಿದವರು ಟಿ.ಆರ್.ಎಫ್.ಐ.ನ ತಜ್ಞ ವಿಶ್ವನಾಥರವರು. ಕುಸುರಿನ ಕೆಲಸ ಮಾಡಿದವರು. ಕುಮಾರೇಶನ್, ಕಟ್ಟಡ ನಿರ್ಮಿಸಿದವರು ಕರ್ನಾಟಕ ಲ್ಯಾಂಡ ಆರ್ಮಿ ಕಾರ್ಪೋರೇಶನ್ ಎಂಜಿನಿಯರಗಳಾದ ಮಹಾಶೆಟ್ಟಿ, ಗುರುಮೂರ್ತಿ ಮತ್ತು ಸೋಮಶೇಖರರವರು. ಚತ್ತಿನ ಕೆಲಸವನ್ನು ಮುಂಬೈನ ಅಕ್ರೋಮಿಕ್ ಇಂಡಿಯಾ ಕಂಪನಿಯವರು ನಿರ್ಮಿಸಿದರು.

ಈ ಸಭಾಭವನದ ವಿಶೇಷತೆ ಎಂದರೆ ಐದು ಸಾವಿರ ಜನರಿಗೆ ಕುಳಿತುಕೊಳ್ಳಲು ಆಸನಗಳಿರುವ ವರ್ತುಲಾಕಾರದ ಮಂಟಪ. ಈ ಸಭಾಭವನವನ್ನು ಬಸವ ತತ್ವ ಪ್ರಚಾರಕ್ಕಾಗಿ ಕಟ್ಟಲಾಯಿತಾದರೂ, ಅದರಲ್ಲಿ ಎಲ್ಲ ತರಹದ ದೊಡ್ಡ ಕಾರ್ಯಕ್ರಮಗಳಿಗೆ ಅನುಕೂಲತೆಯಾಗಿದೆ. ನಾಟಕ ಪುರಾಣ, ಸಂಗೀತ, ನೃತ್ಯ, ಮದುವೆ, ಚರ್ಚಾಗೋಷ್ಠಿಗಳನ್ನು ಧಾರಾಳವಾಗಿ ನಡೆಸಬಹುದು. ೧೨೦ ಅಡಿ ಉದ್ದ, ೫೦ ಅಡಿ ಅಗಲದ ರಂಗಮಂಟಪಕ್ಕೆ ಎಡ–ಬಲಗಳಲ್ಲಿ ಮಹಿಳೆಯರಿಗೆ ಮತ್ತು ಪುರುಷರಿಗೆ ಪ್ರತ್ಯೇಕವಾಗಿ ಸುಸಜ್ಜಿತ ಡ್ರೆಸ್ಸಿಂಗ್ ರೂಮ್‌ಗಳಿವೆ. ಶಾಶ್ವತವಾಗಿ ಅತ್ಯಾಧುನಿಕ ಬೆಳಕು ಹಾಗೂ ಧ್ವನಿಯಂತ್ರಗಳನ್ನು ಅಳವಡಿಸಲಾಗಿದೆ. ಮೊದಲನೆಯ ಮಹಡಿಯಲ್ಲಿ ಕಲಾಕಾರರಿಗೆ, ಅತಿಥಿಗಳಿಗೆ ವಸತಿ ಕೋಣೆಗಳಿವೆ. ಗಣ್ಯ ವ್ಯಕ್ತಿಗಳು ಹಿಂದಿನ ದ್ವಾರದಿಂದ ವೇದಿಕೆಗೆ ಬರಬಹುದು. ಅಲ್ಲೊಂದು ಸುಸಜ್ಜಿತ ಲಾಂಜ್‌ಇದೆ. ವರ್ತುಲಾಕಾರದ ಕಟ್ಟಡಕ್ಕೆ ನಾಲ್ಕು ದಿಕ್ಕುಗಳಿಗೆ ಒಂದೇ ರೀತಿಯ ಮಹಾದ್ವಾರಗಳಿವೆ. ಅವುಗಳನ್ನು ಭಾರತೀಯ ಮಂಟಪ ಶೈಲಿಯಲ್ಲಿ ಕಟ್ಟಿ ಎತ್ತರದ ಗೋಪುರಗಳನ್ನು ಅಳವಡಿಸಲಾಗಿದೆ. ಸಭಾಭವನದ ಮಧ್ಯದ ಚತ್ತು ಗುಮ್ಮಟದ ಶೈಲಿಯಲ್ಲಿ ಇನ್ನೂರು ಅಡಿ ವ್ಯಾಸ ಮತ್ತು ನೂರು ಅಡಿ ಎತ್ತರವಿದೆ. ಈ ಗುಮ್ಮಟ ವಿಜಯಪುರದ ಗೋಲ ಗುಮ್ಮಟಕ್ಕಿಂತ ಒಂದೂವರೆ ಪಟ್ಟು ದೊಡ್ಡದಿದೆ. ಅದು ಇಸ್ಲಾಮಿಕ್ ಶೈಲಿಯನ್ನು ಪ್ರತಿನಿಧಿಸುತ್ತದೆ. ಜಿಯೋ ಡೆಸಿಕ್ ತಂತ್ರವನ್ನು ಬಳಸಿ ಸ್ಟೆನ್‌ಲೆಸ್ ಸ್ಟೀಲ್ ಸೀಟ್‌ಗಳನ್ನು ಹೊಂದಿಸಿ ಈ ಗೋಪುರದ ಮೇಲೆ ೨೫ ಅಡಿ ಎತ್ತರದ ೧೫ ಅಡಿ ಅಗಲದ ಅಲಂಕೃತ ಕಳಶವಿದೆ. ನೆಲಮಹಡಿಯಲ್ಲಿ ಎರಡು ಸಾಲುಗಳಲ್ಲಿ ಸುಂದರವಾದ ಭಾರತೀಯ ಶೈಲಿಯ ಕಂಬಗಳನ್ನು ರೋಮನ್ ಶೈಲಿಯ ಕೋಲೊನೇಡನಂತೆ ಹೈಪೋಸ್ಟೈಲಿನಲ್ಲಿ ಕಟ್ಟಲಾಗಿದೆ. ಈ ಕಂಬಗಳೇ ಸಂಪೂರ್ಣ ಕಟ್ಟಡದ ಭಾರವನ್ನು ಹೊತ್ತು ನಿಂತಿವೆ. ಗ್ರೀಕ್ ಮಾದರಿಯನ್ನು ಸ್ವಲ್ಪ ಮಾರ್ಪಡಿಸಿ ಅರ್ಧ ವರ್ತುಲಾಕಾರದಲ್ಲಿ ಗ್ಯಾಲರಿಗಳನ್ನು ನಿರ್ಮಿಸಿ ನೆಲಕ್ಕೆ ಭದ್ರವಾಗಿ ಅಂಟಿಸಿದ ಆಸನಗಳನ್ನು ಅಳವಡಿಸಲಾಗಿದೆ. ಜಗತ್ತಿನಲ್ಲಿ ಪ್ರಪ್ರಥಮ ಥಿಯೇಟರ್ ಕಲ್ಪನೆಯನ್ನು ಗ್ರೀಕರು ನೀಡಿದರೆಂದು ಇತಿಹಾಸದಿಂದ ತಿಳಿಯುತ್ತದೆ. ಎಸ್.ಎಂ. ಜಾಮದಾರ್ ಕಲ್ಯಾಣ ಪುನರುತ್ಥಾನ ಪುಟ–೭೦ ಆ ಶೈಲಿಯಲ್ಲಿ ವರ್ತುಲಾಕಾರದ ರಂಗಸಜ್ಜಿಕೆ ಮಧ್ಯದ ಕೆಳಮಟ್ಟದಲ್ಲಿದ್ದರೆ ಇಲ್ಲಿ ಅದು ಎದುರಿಗೆ ಸ್ವಲ್ಪ ಎತ್ತರಿಸಿದ

ಜಾಗದಲ್ಲಿದೆ. ಅದರ ಉದ್ದ ೧೨೦ ಅಡಿ ಅಗಲ ೪೦ ಅಡಿ ಅದನ್ನು ಬಸವವೇದಿಕೆ ಎಂದು ಕರೆಯಲಾಗಿದೆ.

ಹೀಗೆ ಜಾಗತಿಕ ಶೈಲಿಯ ಅಂಶಗಳನ್ನು ಬಳಸಿ ಕಟ್ಟಿದ ಈ ಮಂಟಪದಿಂದ ಜಾಗತಿಕ ಮಟ್ಟದ ಶಾಶ್ವತ ಮಾನವೀಯ ಮೌಲ್ಯಗಳನ್ನು ಬೋಧಿಸುವ ಬಸವ ತತ್ವಗಳನ್ನು ಪ್ರಚಾರ ಮಾಡಲು ಮೆರಗು ತರಲಾಗಿದೆ. ರಂಗ ಮಂಟಪವನ್ನು ಬಸವ ವೇದಿಕೆ ಎಂದು ಹೆಸರಿಸಿ ನಾಲ್ಕು ಮಹಾದ್ವಾರಗಳಿಗೆ ಗಂಗಾಂಬಿಕೆ, ನೀಲಾಂಬಿಕೆ, ಮತ್ತು ಅಕ್ಕನಾಗಮ್ಮ ಹಾಗೂ ಚೆನ್ನಬಸವಣ್ಣ ಎಂದು ಹೆಸರನ್ನು ಇಡಲಾಗಿದೆ. ಈ ಸಭಾ ಭವನವನ್ನು ರಾಜ್ಯಮಟ್ಟದ ಅನೇಕ ಕಾರ್ಯಕ್ರಮಗಳಿಗೆ ಬಳಸಲಾಗುತ್ತಿದೆ. ಜಾತ್ರೆಯ ಮುನ್ನ ನಡೆಯುವ ನಾಟಕ, ಸಾಹಿತ್ಯ, ಸಂಗೀತ, ಪ್ರವಚನಗಳಿಗೆ ಸಾಮಾನ್ಯವಾಗಿ ಉಪಯೋಗಿಸಿದರು ಅನುಕೂಲಸ್ಥರ ಮದುವೆಗಳು ದೂರದರ್ಶನದ ಕೆಲವು ಕಾರ್ಯಕ್ರಮಗಳು ರಾಜ್ಯ ಮತ್ತು ರಾಷ್ಟ್ರಮಟ್ಟದ ಅನೇಕ ಕಾರ್ಯಕ್ರಮಗಳು ಇಲ್ಲಿ ನಡೆಯುತ್ತವೆ.

ಸಭಾಭವನದ ಸುತ್ತ ೪೦ ಅಡಿ ಅಗಲದ ವರ್ತುಲ ರಸ್ತೆ ಮತ್ತು ಅದರ ಸುತ್ತಲೂ ಸುಂದರವಾದ ಉದ್ಯಾನವನವಿದೆ. ಬಸವವೃತ್ತದಿಂದ ಸಭಾಭವನಕ್ಕೆ ಬರುವ ೨೦೦ ಮೀಟರ್ ದೂರದ ಮಾರ್ಗ ಇಬ್ಬದಿಯಲ್ಲಿ ಮರಗಳನ್ನು ಬೆಳೆಸಿರುವುದರಿಂದ ಈ ಪ್ರದೇಶ ಅತ್ಯಂತ ರಮಣೀಯವಾಗಿ ಪ್ರವಾಸಿಗರನ್ನು ತಣಿಸುತ್ತದೆ. ಸಂಜೆಯ ಸುಮಾರಿಗೆ ವಚನ ಗಾಯನದ ಅಹ್ಲಾದಕರ ಸಂಗೀತ ಮೂಡಿ ಬರುತ್ತದೆ. ಒಟ್ಟಿನಲ್ಲಿ ಕೂಡಲ ಸಂಗಮಕ್ಕೆ ಹೆಚ್ಚಿನ ಮಟ್ಟದಲ್ಲಿ ಪ್ರವಾಸಿಗರನ್ನು ಆಕರ್ಷಿಸುವಲ್ಲಿ ಈ ಸಭಾಭವನ ಪ್ರಮುಖವೆನಿಸಿದೆ.

ಬಸವ ಅಂತಾರಾಷ್ಟ್ರೀಯ ಕೇಂದ್ರ

ಕೂಡಲ ಸಂಗಮದಲ್ಲಿ ಇನ್ನೊಂದು ಅತ್ಯಂತ ಭವ್ಯ ಕಟ್ಟಡವೆಂದರೆ ಬಸವ ಅಂತರಾಷ್ಟ್ರೀಯ ಕೇಂದ್ರ ಇದರ ಮೂಲ ಪರಿಕಲ್ಪನೆ ಮತ್ತು ನಕ್ಷೆಯನ್ನು ಅಂದು ರಾಜ್ಯದ ಮುಖ್ಯ ವಾಸ್ತು ಶಿಲ್ಪಿಗಳಾಗಿದ್ದ ಅಯ್ಯಂಗಾರರವರು ತಯಾರಿಸಿ ಮುದ್ನಾಳ ಸಮಿತಿಗೆ ನೀಡಿದ್ದರು. ಯಾವ ಉದ್ದೇಶಕ್ಕೆ ಬಳಸಲು ಈ ಕಟ್ಟಡವನ್ನು ಸೂಚಿಸಲಾಗಿತ್ತು ಎಂಬುದರ ಬಗ್ಗೆ ಮುದ್ನಾಳ ಸಮಿತಿಯ ವರದಿಯಲ್ಲಿ ಹೆಚ್ಚು ವಿವರಗಳಿಲ್ಲ ಅದರ ಎತ್ತರವು ಬಹಳ ಕಡಿಮೆ ಇತ್ತು ಜಾಮದಾರರವರು ಕೇರಳದ ಕಾಲಡಿಯಲ್ಲಿರುವ ಶಂಕರ ಮೆಮೋರಿಯಲ್ ಗೋಪುರವನ್ನು ನೋಡಿ ಬಂದ ಮೇಲೆ ಈ ಕಟ್ಟಡದ ಎತ್ತರವನ್ನು ಮೂರು ಪಟ್ಟು ಬೆಳೆಸಿ ಉಳಿದ ಭಾಗಗಳನ್ನು ಅದೇ ಪ್ರಮಾಣದಲ್ಲಿ ಹೆಚ್ಚಿಸಲು ನಿರ್ಣಯವನ್ನು ತೆಗೆದುಕೊಂಡರು. ಕಲಾತ್ಮಕ ಕೆಲಸಗಳನ್ನು ಕುಮಾರೇಶನ್ ಮಾಡಿದರೆ, ಈ ಕಟ್ಟಡದ ಸಂಪೂರ್ಣ ರಚನಾ ವಿನ್ಯಾಸವನ್ನು ವಿಶ್ವನಾಥರವರು ಕಾಲಕಾಲಕ್ಕೆ ಮಾರ್ಗದರ್ಶನ ಮಾಡಿದರು. ಕರ್ನಾಟಕ ಲ್ಯಾಂಡ್ ಆರ್ಮಿ ಅದನ್ನು ಕಟ್ಟಿತು.

ಬಸವತತ್ವದ ಎರಡು ಸಿದ್ಧಾಂತಗಳಾದ ಷಟ್‌ಸ್ಥಲ ಮತ್ತು ಅಷ್ಟಾವರಣವನ್ನು ಅನುಸರಿಸಿ ಬಸವ ಅಂತರಾಷ್ಟ್ರೀಯ ಕೇಂದ್ರದ ವಿನ್ಯಾಸವನ್ನು ರೂಪುಗೊಳಿಸಲಾಗಿದೆ. ಮೊದಲಿನ ಸಿದ್ಧಾಂತವು

ಮಾನವನ ವ್ಯಕ್ತಿತ್ವದ ವಿಕಾಸದ ಆರು ಹಂತಗಳಿಗೆ ಸಂಬಂಧಿಸಿದ್ದು ಆ ಆರು ಹಂತಗಳಿಗೆ ಒಂದೊಂದು ಹೆಸರಿದೆ. ಹಾಗೂ ಅವುಗಳಿಗೆ ಸಂಬಂಧಿಸಿದ ಉನ್ನತ ಆಧ್ಯಾತ್ಮಿಕ ವಿಚಾರಗಳಿವೆ. ಎರಡನೆಯ ಸಿದ್ಧಾಂತವು ಮಾನವನನ್ನು ಸುತ್ತುವರೆದ ಎಂಟು ಪ್ರಕಾರದ ಶಕ್ತಿಗಳಿವೆ ಅಥವಾ ಸಂಸ್ಕಾರಗಳಿವೆ. ಅವುಗಳ ಪ್ರಭಾವದಲ್ಲಿ ಬೆಳೆಯುತ್ತ ಮಾನವ ಹಂತ ಹಂತವಾಗಿ ಸಿದ್ಧಿಸ್ಥಳ ತಲುಪುತ್ತಾನೆ ಅಥವಾ ಆತ್ಮ ಸಾಕ್ಷಾತ್ಕಾರ ಪಡೆಯುತ್ತಾನೆಂಬ ಈ ಎರಡು ಸಿದ್ಧಾಂತಗಳ ತಾತ್ಪರ್ಯ. ಬಸವ ಕೇಂದ್ರದ ಕಟ್ಟಡವು ಆರು ಅಂತಸ್ತುಗಳನ್ನು ಹೊಂದಿದೆ. ಈ ಕಟ್ಟಡಕ್ಕೆ ಎಂಟು ಮಗ್ಗಲುಗಳಿವೆ. ೧೫೦ ಅಡಿ ಅಗಲದ ಅಷ್ಟಕೋನದ ಈ ಕಟ್ಟಡ ಆರು ಅಂತಸ್ತುಗಳನ್ನು ಹಾಗೂ ಒಂದು ದೊಡ್ಡ ಗೋಲಾಕಾರದ ಗುಂಬಜ ಕಳಸವನ್ನು ಹೊಂದಿ ೨೨೦ ಅಡಿ ಎತ್ತರವಾಗಿದೆ. ಹಂತ ಹಂತವಾಗಿ ಮೇಲೆ ಹೋದಂತೆ ಅದರ ಅಗಲ ೧೫೦ ಅಡಿಗಳಿಂದ ೩೦ ಅಡಿಗಳಿಗೆ ಕಿರಿದಾಗುತ್ತ ಹೋಗುತ್ತದೆ. ಸಾಂಕೇತಿಕವಾಗಿ ವ್ಯಕ್ತಿತ್ವದ ಉನ್ನತೋನ್ನತ ಹಂತಗಳನ್ನು ತಲುಪುವವರ ಸಾಂಖ್ಯ ಹಂತಗಳು ಮೇಲೇರುವಂತೆ ಕಡಿಮೆಯಾಗುತ್ತದೆ. ಎಂಬುದನ್ನು ಅದು ಸೂಚಿಸುತ್ತದೆ. ಅದು ವಾಸ್ತವಿಕ ಸತ್ಯವು ಹೌದು.

ಕ್ಲೀಷ್ಟವಾದ ಆಧ್ಯಾತ್ಮಿಕ ವಿಚಾರಗಳನ್ನು ಭೌತಿಕವಾಗಿ ಕಟ್ಟಡಗಳ ನಕ್ಷೆಯಲ್ಲಿ ಅಳವಡಿಸುವುದು ಕಷ್ಟ ಈ ಆಧ್ಯಾತ್ಮಿಕ ವಿಚಾರಗಳನ್ನು ಮನೋವೈಜ್ಞಾನಿಕ ಹಾಗೂ ಸಾಮಾಜಿಕ ವಿಜ್ಞಾನಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಲು ಈ ಕಟ್ಟಡದ ವಿನ್ಯಾಸ ಮಹತ್ವಪೂರ್ಣದ್ದಾಗಿದೆ.

ಪ್ರಾರ್ಥನಾ ಮಂದಿರ

ಬಸವ ಅಂತರಾಷ್ಟ್ರೀಯ ಕಟ್ಟಡದ ಗೋಪುರದ ಒಳಗಡೆ ಸುಮಾರು ೩೦೦ ಚದುರಡಿಯಷ್ಟು ದೊಡ್ಡದಾದ ವರ್ತುಲಾಕಾರದ ಹನ್ನೆರಡು ಎತ್ತರದ ಕೋಣೆ, ಗೋಪುರದೊಳಗೆ ಗೋಚರಿಸುತ್ತದೆ. ಅದರ ಮೇಲಿನ ಚತ್ತನ್ನು ತಲೆಯೆತ್ತಿ ನೋಡಿದರೆ ಹತ್ತತ್ತು ಅಡಿಗಳ ಎತ್ತರದಲ್ಲಿ ಒಂದೊಂದರಂತೆ ನಾಲ್ಕು ಚಕ್ರಗಳು ೪೦ ಅಡಿ ಎತ್ತರದಲ್ಲಿ ಕಾಣುತ್ತ ವಿಚಿತ್ರ ಆಧ್ಯಾತ್ಮಿಕ ಮನೋಭಾವವನ್ನು ಮೂಡಿಸುತ್ತವೆ. ಆದ್ದರಿಂದ ಆ ಕೋಣೆಯನ್ನು ಒಂದು ಪ್ರಾರ್ಥನಾ ಮಂದಿರವಾಗಿ ನಿರ್ಮಿಸಿದ್ದಾರೆ. ಆರನೆಯ ಮಹಡಿಯಿಂದ ಪ್ರಾರ್ಥನಾ ಮಂದಿರಕ್ಕೆ ಹೋಗಲು ಲೋಹದ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಪ್ರಾರ್ಥನಾ ಕೋಣೆಗೆ ಕಿಟಕಿ ಬಾಗಿಲುಗಳನ್ನು ಅಳವಡಿಸಿ ಅದರೊಳಗೆ ಬಿಳಿಯ ಅಮೃತ ಶಿಲೆಯಲ್ಲಿ ಬಸವಣ್ಣನವರ ೩ ಅಡಿ ಎತ್ತರದ ಬಸವಣ್ಣನವರ ಮೂರ್ತಿಯನ್ನು ಇಡಲಾಗಿದೆ. ಈ ಆವರಣದಲ್ಲಿ ಭಕ್ತರು ಧ್ಯಾನ ಮಾಡಲಿಕ್ಕೆ ಅವಕಾಶ ಮಾಡಿಕೊಡಲಾಗಿದೆ.

ಮ್ಯೂಜಿಯಂ

ಬಸವ ಅಂತಾರಾಷ್ಟ್ರೀಯ ಕೇಂದ್ರದಲ್ಲಿ ವಿಶಾಲವಾದ ಕೆಳಮಹಡಿಗಳಲ್ಲಿ ಬಸವಣ್ಣನ ಜೀವನ ಸಾಧನೆಗಳನ್ನು ಮತ್ತು ವೀರಶೈವ ಧರ್ಮಕ್ಕೆ ಸಂಬಂಧಿಸಿದ ಆಚಾರ ವಿಚಾರಗಳನ್ನು ಶರಣರ

ತತ್ವಗಳನ್ನು ನಿರ್ಮಾಣ ಮಾಡಬೇಕೆಂಬ ಉದ್ದೇಶದಿಂದ ನಾಡಿನ ವಿದ್ವಾಂಸರುಗಳನ್ನು ಮಠಾಧಿಪತಿಗಳನ್ನು ಶರಣ ಸಂಸ್ಕೃತಿ ತಜ್ಞರನ್ನು ಹಿರಿಯ ರಾಜಕಾರಣಿಗಳನ್ನು ಮಂಡಳಿಯ ಆಯುಕ್ತರು ಸಭೆ ಸೇರಿಸಿ ಕೆಲವೊಂದಿಷ್ಟು ನಿರ್ಣಯಗಳನ್ನು ತೆಗೆದುಕೊಳ್ಳಲು ಪ್ರಯತ್ನಿಸಿದರು. ಆದರೆ ಸಮಿತಿಯಲ್ಲಿ ಒಮ್ಮತ ಮೂಡದ ಕಾರಣದಿಂದ ಮ್ಯೂಜಿಯಂನ ಕಾರ್ಯ ಸದ್ಯ ತಟಸ್ಥದಲ್ಲಿದೆ. ಒಂದು ಮ್ಯೂಜಿಯಂನ್ನು ಏಕೆ ಸ್ಥಾಪಿಸಬೇಕು, ಅದು ಹೇಗಿರಬೇಕು, ಎಂಬ ಅಂಶಗಳಿಗೆ ಸ್ಪಷ್ಟತೆಯ ಸಲುವಾಗಿ ಮೂರ್‍ನಾಲ್ಕು ಸಭೆಗಳು ನಡೆದರೂ ಒಮ್ಮತದ ಅಭಿಪ್ರಾಯಗಳು ಬರದೇ ಇದ್ದುದರಿಂದ ಮ್ಯೂಜಿಯಂ ಸಂಬಂಧಿತ ವಿಷಯದಲ್ಲಿ ಪ್ರೇರಣೆ ಸ್ಫೂರ್ತಿ ಒಂದು ಧರ್ಮದ ವಿಷಯಗಳನ್ನು ಸಾರುವ ಮ್ಯೂಜಿಯಂನ್ನು ಸರ್ಕಾರದ ಖರ್ಚಿನಲ್ಲಿ ಜಾತ್ಯಾತೀತ ರಾಷ್ಟ್ರದಲ್ಲಿ ನಿರ್ಮಾಣ ಮಾಡಬಹುದೇ? ಆದ್ದರಿಂದ ಕೂಡಲ ಸಂಗಮದ ಮ್ಯೂಜಿಯಂ ವೀರಶೈವ ಅಥವಾ ಲಿಂಗಾಯತ ಧರ್ಮದ ವಿಷಯಗಳ ಮ್ಯೂಜಿಯಂ ಆಗಲು ಅವಕಾಶವಿಲ್ಲ ತಮ್ಮ ಸ್ವಂತ ಖರ್ಚಿನಲ್ಲಿ ಆ ಧರ್ಮದ ಅಭಿಮಾನಿಗಳು ಆ ರೀತಿಯ ಮ್ಯೂಜಿಯಂನ್ನು ಮತ್ತೆಲ್ಲೋ ಕಟ್ಟಿಕೊಳ್ಳಬಹುದು. ಎಂಬ ವಿಷಯಗಳು ಕೇಳಿದ್ದುದರಿಂದ ಅದು ತಟಸ್ಥವಾಯಿತೆನ್ನಬಹುದು.

ಐಕ್ಯ ಮಂಟಪ

ಧಾರ್ಮಿಕ ಮಹತ್ವದ ಸಂಗಮದ ಐಕ್ಯಮಂಟಪ ಮುಳುಗುವ ಸಂದರ್ಭ ಬಂದಾಗ ಸಕಾಲದಲ್ಲಿ ಎಚ್ಚೆತ್ತ ಸರ್ಕಾರ ಅದನ್ನು ಇದ್ದಲ್ಲಿಯೇ ಕಾಪಾಡಲು ಅದರ ಸುತ್ತಲೂ ಒಂದು ಒಣ ಬಾವಿಯನ್ನು ಕಟ್ಟಿ ಅಲ್ಲಿಗೆ ಹೋಗಲು ಸೇತುವೆ ನಿರ್ಮಿಸುವ ನಿರ್ಣಯ ತೆಗೆದುಕೊಂಡಿತು. ಆದರೆ ೧೯೮೨ರ ಸುಮಾರಿಗೆ ಆ ಒಣ ಬಾವಿಯನ್ನು ಕಟ್ಟಿದ ಎಂಜಿನಿಯರ್‌ಗಳ ನಿರ್ಲಕ್ಷದಿಂದ ಕಳಪೆ ಗುಣಮಟ್ಟದಿಂದ ಸಾಕಷ್ಟು ಸೋರಿ ಒಣ ಬಾವಿಯಲ್ಲಿ ನೀರು ತುಂಬಿಕೊಳ್ಳುತ್ತಿತ್ತು. ಅಲ್ಲದೆ ಅವರು ಕಟ್ಟಿದ ಸೇತುವೆ ಅಷ್ಟೇನು ಆಕರ್ಷಣೀಯವಾಗಿಲ್ಲದ್ದರಿಂದ ಸೋರಿಕೆಯನ್ನು ನಿಲ್ಲಿಸಲು ತಜ್ಞರ ಸಲಹೆ ಪಡೆದು ಅಭಿವೃದ್ಧಿ ಮಂಡಳಿಯು ಸರಿಪಡಿಸಿ ಬಾವಿಯ ಮೆಟ್ಟಿಲುಗಳಿಗೆ ನೆಲಕ್ಕೆ ಗೋಡೆಗೆ ಅಗ್ನಿಶಿಲೆಯ ಕಲ್ಲುಗಳನ್ನು ಜೋಡಿಸಿ ಅಂದವಾಗುವಂತೆ ಮಾಡಿದ್ದಾರೆ. ಅದರ ಮೇಲೆ ಚಂದದ ಮಂಟಪವನ್ನು ಕಟ್ಟಿ ಮಂಟಪದಲ್ಲಿ ಒಂದು ಶಿವಲಿಂಗವನ್ನು ಸ್ಥಾಪಿಸಿದೆ. ೬೫ ಮೆಟ್ಟಿಲುಗಳನ್ನು ಇಳಿದು ಏರಿ ಹೋಗಲು ಸಾಧ್ಯವಾಗದವರು ಮೇಲಿನ ಲಿಂಗಕ್ಕೆ ಪೂಜೆ ಸಲ್ಲಿಸುತ್ತಾರೆ. ಸೇತುವೆಯನ್ನು ಮಳೆ ಬಿಸಿಲುಗಳಿಂದ ರಕ್ಷಣೆ ಒದಗಿಸಲು ಅದರ ಚಾವಣಿಗೆ ದಪ್ಪದಾದ ಸ್ಟೀಲ್ ಸೀಟುಗಳನ್ನು ಕಮಾನಿನಾಕಾರದಲ್ಲಿ ಜೋಡಿಸಿದ್ದಾರೆ. ಅದರ ನೆಲಕ್ಕೆ ಮತ್ತು ಕಿರುಗೋಡೆಗೆ ಅಗ್ನಿ ಶಿಲೆಯ ಕಲ್ಲುಗಳನ್ನು ಜೋಡಿಸಿದ್ದಾರೆ. ಹೀಗೆ ಒಳಹೋಗುವ ಮತ್ತು ಹೊರಬರುವ ದಾರಿಗಳನ್ನು ಬೇರ್ಪಡಿಸಿ ಜನಸಂದಣಿಯನ್ನು ನಿಯಂತ್ರಿಸಲು ಯೋಜನೆಯನ್ನು ಮಾಡಿದ್ದಾರೆ. ಪ್ರತಿ ವರ್ಷ ಸುಮಾರು ೩೦ ಲಕ್ಷ ಜನರು ಅಲ್ಲಿಯ ಲಿಂಗ ದರ್ಶನ ಪಡೆಯುತ್ತಾರೆ. ಬಹುಶಃ ಈ ಐಕ್ಯ ಮಂಟಪದ ಸೌಂದರ್ಯದಿಂದಲೇ ಪ್ರವಾಸಿಗರು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲಿದ್ದಾರೆ.

ರಥ ನಿಲಯ ಮತ್ತು ರಥ ಬೀದಿ

ನಾರಾಯಣ ಜಲಾಶಯ ಕಟ್ಟುವ ಪೂರ್ವದಲ್ಲಿ ಕೂಡಲ ಸಂಗಮದ ಹತ್ತಿರ ಕೃಷ್ಣಾ ನದಿಯ ಪಾತ್ರವು ಸುಮಾರು ೩೦ ಅಡಿಯಷ್ಟು ಆಳದಲ್ಲಿತ್ತು. ಮಹಾಪೂರ ಬಂದಾಗ ಹೆಚ್ಚು ತೊಂದರೆಯಾಗುತ್ತಿತ್ತು. ೫೦-೬೦ ವರ್ಷಗಳಲ್ಲಿ ಒಮ್ಮೊಮ್ಮೆ ಬರುವ ದೊಡ್ಡ ಮಹಾಪೂರದಲ್ಲಿ ಗುಡಿಯೊಳಗೆ ನೀರು ಬರುತ್ತಿದ್ದಿತು. ನಾರಾಯಣಪುರ ಜಲಾಶಯ ಕಟ್ಟಿದ ನಂತರ ಜಲಾಶಯದಲ್ಲಿ ನಿಲ್ಲುವ ಹಿನ್ನೀರಿನಿಂದ ಹೂಳು ತುಂಬಿ ಕಾಲಿ ಇದ್ದ ಜಾತ್ರಾಸ್ಥಳ ತೇರಿನ ಬೀದಿಗಳು ಸಂಪೂರ್ಣ ಮುಳುಗುತ್ತಿದ್ದವು. ಅಲ್ಲದೆ ಗುಡಿಗೆ ಬರಲು ರಸ್ತೆಯನ್ನು ಎತ್ತರಿಸಿದಾಗ ತೇರಿನ ಬೀದಿಯಲ್ಲಿ ಒಂದು ಕಿ.ಮೀ ಮಣ್ಣು ಅಗೆದು ಹತ್ತಾರು ಅಡಿ ಆಳದ ಗುಂಡಿಗಳಿದ್ದವು. ಆ ಗುಂಡಿಗಳನ್ನು ಮಂಡಳಿಯವರು ಹತ್ತಡಿಯಷ್ಟು ಎತ್ತರಿಸಿ ಅರ್ಧ ಕಿ.ಮೀ. ಉದ್ದ ಮತ್ತು ೧೦೦ ಅಡಿ ಅಗಲದಲ್ಲಿ ಹಿಂದಿನ ರಥಬೀದಿಯನ್ನು ರಸ್ತೆಯ ಎಡಭಾಗದಲ್ಲಿ ನಿರ್ಮಿಸಿದ್ದಾರೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಶ್ರೀನಿವಾಸಮೂರ್ತಿ ಹಾಗೂ ಶ್ರೀಧರನ್ ಅವರ ಸಲಹೆಗಳನ್ನು ಪಡೆದು ರಥಬೀದಿಯನ್ನು ಭದ್ರವಾಗಿ ಕಟ್ಟಿದ್ದಾರೆ. ರಾಜಗೋಪುರದಿಂದ ೨೦೦ ಅಡಿ ಅಂತರದಲ್ಲಿ ಒಂದು ದೊಡ್ಡ ಶೆಡ್ಡನ್ನು ಕಟ್ಟಿ ಅದರೊಳಗೆ ಎರಡು ಬೃಹತ್ ರಥಗಳನ್ನು ನಿಲ್ಲಿಸಲಾಗುತ್ತದೆ. ಸುಮಾರು ೪೦ ಅಡಿ ಎತ್ತರದ ರಥ ಶೆಡ್ಡಿನ ಮೇಲಿನಿಂದ ಜಾತ್ರೆಯಲ್ಲಿ ಗಣ್ಯ ವ್ಯಕ್ತಿಗಳಿಗೆ ರಥಯಾತ್ರೆಯನ್ನು ವೀಕ್ಷಿಸಲು ಮತ್ತು ಸಂಜೆ ನಡೆಯುವ ಮದ್ದುಗುಂಡುಗಳ ಕಾರ್ಯಕ್ರಮಕ್ಕೆ ವೀಕ್ಷಣೆಗೆ ಬಹಳ ಉಪಯೋಗವಾಗಿದೆ.

ದೋಣಿ ವ್ಯವಸ್ಥೆ

ಪ್ರವಾಸಿಗರ ಮನರಂಜನೆಗಾಗಿ ದೋಣಿಸೇವೆ ಲಭ್ಯವಿದೆ. ಖಾಸಗಿಯವರು ಬಾಡಿಗೆ ಆಧಾರದ ಮೇಲೆ ದೋಣಿ ನಡೆಸುತ್ತಾರೆ. ಇದು ಅಲ್ಲಿಗೆ ಬರುವ ಅಸಂಖ್ಯ ಪ್ರವಾಸಿಗರಿಗೆ ಮನರಂಜನೆ ಒದಗಿಸಿದೆ. ಮಲಪ್ರಭಾ ನದಿಯಾಚೆ ತಲುಪಲು ಸರ್ಕಾರ ಒಂದು ಪ್ರತ್ಯೇಕ ದೋಣಿಯ ನಾವೆಯನ್ನು ಸಾರಿಗೆ ಇಲಾಖೆ ಒದಗಿಸಿದೆ. ಐಕ್ಯಮಂಟಪದ ಸುತ್ತಲೂ ದೋಣಿವಿಹಾರವನ್ನು ಮಾಡಿಸುತ್ತಾರೆ. ಹಬ್ಬಹರಿದಿನಗಳ ಸಂದರ್ಭದಲ್ಲಿ ಐಕ್ಯ ಮಂಟಪದಿಂದ ತಂಗಡಗಿಯ ನೀಲಮ್ಮನ ಐಕ್ಯಮಂಟಪದವರೆಗೆ ದೋಣಿವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಇದು ಸ್ಥಳೀಯ ಸುತ್ತಮುತ್ತಲಿನ ಹಳ್ಳಿಯವರಿಗೆ ಮತ್ತು ಪ್ರವಾಸಿಗರಿಗೆ ಜಲವಿಹಾರಕ್ಕೆ ಅನುಕೂಲವಾಗಿದೆ.

ಅಂಗಡಿ ಮಳಿಗೆಗಳು

ಪ್ರವಾಸಿಗರ ಅನುಕೂಲಕ್ಕೆ ಒಂದು ನೂರು ಅಂಗಡಿ ಮುಂಗಟ್ಟುಗಳನ್ನು ಕಟ್ಟಿ ಬಾಡಿಗೆಗೆ ನೀಡಲಾಗಿದೆ. ನೂರಾರು ಕುಟುಂಬಗಳಿಗೆ ಅವು ಉದ್ಯೋಗ ನೀಡಿವೆ. ಪ್ರವಾಸಿಗರಿಗೆ ಅಗತ್ಯ ವಸ್ತುಗಳು, ಸಿಹಿ ತಿನಿಸುಗಳು, ಕಾಣಿಕೆಗಳು, ಕರಕುಶಲ ವಸ್ತುಗಳು, ಟೀ ಸ್ಟಾಲ್‌ಗಳು ಮತ್ತು ಇತರೆ ಸೌಕರ್ಯ ಸೇವೆಗಳನ್ನು ಒದಗಿಸುತ್ತವೆ. ಮಂಡಳಿಯ ವತಿಯಿಂದ ಅಂಗಡಿ ಮಳಿಗೆಗಳನ್ನು

ಕಟ್ಟುವ ಪೂರ್ವದಲ್ಲಿ ಖಾಸಗಿಯವರೆ ಮನಸ್ಸಿಗೆ ಬಂದಂತೆ ಗುಡಿಸಲು ಶೆಡ್‌ಗಳನ್ನು ಹಾಕಿಕೊಂಡಿದ್ದರು. ಆದರೆ ಮಂಡಳಿಯು ನಿರ್ಮಿಸಿದ ಮಳಿಗೆಗಳಿಂದ ಮತ್ತೊಂದು ಆದಾಯದ ಮೂಲವೂ ಆಯಿತು. ಅಂಗಡಿಗಳು ವ್ಯವಸ್ಥಿತವಾಗಿ ರೂಪುಗೊಂಡವು.

ದಾಸೋಹ ಭವನ

ದಾಸೋಹ ತತ್ವ ಬಸವಣ್ಣನವರು ಭೋದಿಸಿದ ಮಹತ್ವದ ಅಂಶ ಅದನ್ನು ಪರಿಣಾಮಕಾರಿಯಾಗಿ ಆಚರಿಸಲು ಒಂದು ಬೃಹತ್ ದಾಸೋಹ ಭವನದ ಅವಶ್ಯಕತೆಯನ್ನು ಅರಿತ ಮಂಡಳಿಯು ಬೃಹತ್ತಾದ ಭವನವನ್ನು ನಿರ್ಮಿಸಲು ಕಾರ್ಯವನ್ನು ಕೈಗೆತ್ತಿಕೊಂಡಿತು. ಅದಕ್ಕಾಗಿ ಆಧುನಿಕ ಶೈಲಿಯ ನೂತನ ದಾಸೋಹ ಭವನ ನಿರ್ಮಾಣ ಮಾಡಲಾಗಿದೆ. ಇದರ ನಕ್ಷೆಯನ್ನು ಕಿರಣ್ ಶಂಕರ್‌ರವರು ತಯಾರಿಸಿದ್ದಾರೆ. ವಾಸ್ತುಶಿಲ್ಪದ ಅಲಂಕರಣರ ಕಾರ್ಯವನ್ನು ಕುಮಾರೇಶನ್ ಅವರು ನಿರ್ವಹಿಸಿದ್ದಾರೆ. ಇದು ೧೫,೦೦೦ ಚದುರಡಿ ವಿಸ್ತಾರವಾಗಿದ್ದು ಸುತ್ತಲೂ ೧೨ ಅಡಿ ಅಗಲದ ವರಾಂಡಾ ಹೊಂದಿದೆ. ಪಿರಾಮಿಡ್ ಶೈಲಿಯ ಚಾವಣಿಯನ್ನು ೩೫ ಅಡಿ ಎತ್ತರದಲ್ಲಿ ಮಧ್ಯದ ಚೌಕಾಕಾರದ ೧೦೦೦೦ ಚದುರಡಿ ಕ್ಷೇತ್ರವನ್ನು ೧೦೦೦ ಜನರಿಗೆ ಏಕಕಾಲಕ್ಕೆ ಊಟ ನೀಡಲು ಉಪಯೋಗಿಸಲಾಗುತ್ತಿದೆ. ಹೆಚ್ಚಾದ ಜನಸಂದಣಿಗೆ ಸ್ವಲ್ಪ ಸಮಯ ಕಾಯಲು ವರಾಂಡಾದಲ್ಲಿ ಅವಕಾಶ ಕಲ್ಪಿಸಲಾಗಿದೆ. ಕಟ್ಟಡದ ಸುತ್ತಲೂ ಸುಂದರವಾದ ಉದ್ಯಾನವನವನ್ನು ನಿರ್ಮಿಸಿದ್ದಾರೆ. ಜನರು ನೀಡಿದ ದಾನದ ಹಣದ ಮೇಲಿನ ಬಡ್ಡಿಯಿಂದ ದಿನನಿತ್ಯ ಸಂಗಮಕ್ಕೆ ಬರುವ ಸಾವಿರಾರು ಪ್ರವಾಸಿಗರಿಗೆ ಉಚಿತ ದಾಸೋಹ ವ್ಯವಸ್ಥೆಯನ್ನು ಮಾಡಿದ್ದಾರೆ. ಪಕ್ಕದಲ್ಲಿ ಪ್ರತ್ಯೇಕ ಅಡಿಗೆ ಮನೆ ಆಹಾರ ಧಾನ್ಯ ದಾಸ್ತಾನು ಮತ್ತು ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಿದ್ದಾರೆ.

ಯಾತ್ರಿ ನಿವಾಸ

ಪ್ರವಾಸಿಗರಿಗೆ ಉಳಿದುಕೊಳ್ಳಲು ಒಂದು ದೊಡ್ಡ ಯಾತ್ರಿನಿವಾಸ ಕಟ್ಟಲಾಗಿದೆ. ಅದರಲ್ಲಿ ಉನ್ನತ ಮಧ್ಯಮ ಮತ್ತು ಸಾಮಾನ್ಯ ವರ್ಗಗಳ ಜನರಿಗೆ ಬೇರೆ ಬೇರೆ ಮೂರು ಪಾರ್ಶ್ವಗಳಿದ್ದರು ಅವು ಹೊರಗಿನಿಂದ ಒಂದೇ ರೀತಿಯಿಂದ ಕಾಣುತ್ತವೆ. ಎಲ್ಲರೂ ಮಧ್ಯದಲ್ಲಿರುವ ಒಂದೇ ದ್ವಾರವನ್ನು ಮತ್ತು ಮಧ್ಯದ ವಿಶಾಲವಾದ ಒಂದೇ ಪ್ರಾಂಗಣವನ್ನು ಬಳಸುವಂತೆ ಕಟ್ಟಡದ ವಿನ್ಯಾಸವಿದೆ. ಕರ್ನಾಟಕ ಲ್ಯಾಂಡ್ ಆರ್ಮಿ ಈ ಕಟ್ಟಡವನ್ನು ಕಟ್ಟಿದೆ. ಉನ್ನತ ವರ್ಗದ ಕೋಣೆಗಳಲ್ಲಿ ಎರಡು ಭಾಗಗಳಿದ್ದು ದೊಡ್ಡದಾಗಿವೆ. ಹವಾನಿಯಂತ್ರಣ ಸೋಪಾಸೆಟ್‌ಗಳೊಂದಿಗೆ ೨೦ ಕೋಣೆಗಳನ್ನು ನಿರ್ಮಿಸಲಾಗಿದೆ. ಮಧ್ಯಮ ವರ್ಗದವರಿಗೆ ೩೪ ಕೋಣೆಗಳನ್ನು ನಿರ್ಮಿಸಲಾಗಿದೆ. ಸಾಮಾನ್ಯ ವರ್ಗದ ಜನರಿಗೆ ೨೦ ಅಥವಾ ೩೦ ಜನ ಮಲಗಲು ವಿಶಾಲವಾದ ೧೫ ಕೋಣೆಗಳನ್ನು ನಿರ್ಮಿಸಲಾಗಿದೆ.

ಎರಡು ಅಂತಸ್ತಿನ ಈ ಕಟ್ಟಡವನ್ನು ಪ್ರತಿ ತಿಂಗಳಿಗೆ ಸುಮಾರು ೩ ಲಕ್ಷ ರೂಪಾಯಿಗಳಿಗೂ ಅಧಿಕವಾಗಿ ಬಾಡಿಗೆಗೆ ನೀಡಲಾಗಿದೆ. ದೇವಾಲಯದ ಪೌಳಿಗಳಲ್ಲಿಯೂ ಬಡ ಯಾತ್ರಿಕರು ಮಲಗುತ್ತಾರೆ. ಅವರು ಗುಡಿಯ ಸಮೀಪದ ಸಾರ್ವಜನಿಕ ಶೌಚಾಲಯ ಹಾಗೂ ಸ್ನಾನಗೃಹಗಳನ್ನು ಬಳಸುತ್ತಾರೆ. ಸಂಗಮದಲ್ಲಿ ವಸತಿ ಮಾಡುವ ಬಹುತೇಕ ಭಕ್ತರು ಬೆಳಿಗ್ಗೆ ಜಲಾಶಯದ ನೀರಿನಲ್ಲಿ ಸ್ನಾನಮಾಡಿ ಗುಡಿಯಲ್ಲಿ ಪೂಜೆ ಸಲ್ಲಿಸುತ್ತಾರೆ.

ಕುಡಿಯುವ ನೀರಿನ ಪೂರೈಕೆ

ಪ್ರತಿನಿತ್ಯ ಬರುವ ಪ್ರವಾಸಿಗರಿಗೆ ಶುದ್ಧವಾದ ನೀರನ್ನು ಒದಗಿಸಲು ದೊಡ್ಡದಾದ ನೀರು ಶುದ್ಧೀಕರಣ ಕೇಂದ್ರ ಸೂಕ್ತ ಪಂಪಿಂಗ್ ಮತ್ತು ವಿತರಣ ವ್ಯವಸ್ಥೆಯನ್ನು ಮಂಡಳಿಯವರು ನಿರ್ಮಿಸಿದ್ದಾರೆ. ಉದ್ಯಾನಗಳಿಗೂ ನದಿಯಿಂದ ನೀರು ಎತ್ತಿ ಬೇರೆ ಸಂಗ್ರಹಣಾ ಟ್ಯಾಂಕ್‌ನಿಂದ ನೀರು ಪೂರೈಸುತ್ತಾರೆ. ಬೆಂಗಳೂರಿನ ಪ್ರಸಿದ್ಧ ಸಲಹಾ ತಜ್ಞ ವಿಶ್ವನಾಥ ಅವರು ಈ ಯೋಜನೆಯ ಸಲಹೆಗಾರರಾಗಿದ್ದರು. ಬೇಸಿಗೆಯಲ್ಲಿ ಜಲಾಶಯ ಖಾಲಿಯಾದಾಗ ನೀರಿನ ಸಮಸ್ಯೆ ಉದ್ಭವಿಸುತ್ತದೆ. ವಿದ್ಯುತ್ ಪೂರೈಕೆ ತೊಂದರೆಯು ಒಮ್ಮೊಮ್ಮೆ ಆಗುತ್ತದೆ.

ಉಪಹಾರ ಮಂದಿರ

ಯಾತ್ರಿನಿವಾಸದ ಎದುರಿಗಿನ ರಸ್ತೆಯ ಇನ್ನೊಂದು ಬದಿಗೆ ಆಧುನಿಕ ಶೈಲಿಯ ಉಪಹಾರ ಗೃಹವನ್ನು ಕಟ್ಟಿ ಬಾಡಿಗೆಗೆ ನೀಡಲಾಗಿದೆ. ಸೇಲ್ ರೂಪ್ ಹೊಂದಿರುವ ವಿಶಾಲವಾದ ಕಟ್ಟಡ ಒಂದೇ ಕಂಬದ ಮೇಲೆ ನಿಂತಿದೆ. ಈ ಕಟ್ಟಡದ ನಕ್ಷೆಯನ್ನು ಕಿರಣ್ ಶಂಕರ್‌ರವರು ನಿರ್ಮಿಸಿದ್ದಾರೆ. ಇಳಿಜಾರು ಮೇಲ್ಛಾವಣಿಯಿಂದ ವಿಶಿಷ್ಟ ವಿನ್ಯಾಸದೊಂದಿಗೆ ನಿರ್ಮಿಸಿದ್ದಾರೆ. ನೋಡುವುದಕ್ಕೂ ಮನೋಹರವಾಗಿ ಯಾತ್ರಾರ್ಥಿಗಳನ್ನು ಆಕರ್ಷಿಸುತ್ತ ಪ್ರಸಿದ್ಧಿಯಾಗಿದೆ. ಮಂಡಳಿಗೆ ಇದರಿಂದ ಉತ್ತಮ ಆದಾಯವೂ ಬರುತ್ತದೆ.

ಉದ್ಯಾನವನಗಳು

ಸುಮಾರು ನೂರು ಎಕರೆ ಪ್ರದೇಶದಲ್ಲಿ ವಿಶಾಲವಾದ ಉದ್ಯಾನವನವನ್ನು ಬೆಳೆಸಲಾಗಿದೆ. ಉದ್ಯಾನವನದೊಳಗೆ ಬಸವ ಅಂತಾರಾಷ್ಟ್ರೀಯ ಕೇಂದ್ರ ಭವ್ಯ ಸಭಾಭವನ ಹೆಲಿಪ್ಯಾಡ್ ಕ್ಯಾಂಟೀನ್ ಅತಿಥಿ ಗೃಹದ ವಚನ ಸಾಹಿತ್ಯ ಸಂಶೋಧನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯದ ಅಧ್ಯಯನ ಕೇಂದ್ರಗಳಿವೆ. ಈ ಎಲ್ಲ ಉದ್ಯಾನವನಗಳ ನಿರ್ಮಾಣದಲ್ಲಿ ತೋಟಗಾರಿಕೆ ಇಲಾಖೆಯ ಸಹಾಯಕ ಶ್ರೀ ರಾಂ ಪುರೇಯವರು ಬಹಳ ಶ್ರಮವಹಿಸಿ ಕಾರ್ಯ ನಿರ್ವಹಿಸಿದ್ದಾರೆ. ಸುಮಾರು ೩೦ ಎಕರೆ ಕ್ಷೇತ್ರದಲ್ಲಿ ಪೂಜಾವನವನ್ನು ಬೆಳೆಸಲಾಗಿದೆ. ಅದರಲ್ಲಿ ವಿವಿಧ ಜಾತಿಯ ಐವತ್ತು ತರಹದ ಹೂಗಿಡಗಳನ್ನು ರುದ್ರಾಕ್ಷಿ, ಕರಕಿ, ಪತ್ರೆ ಇತ್ಯಾದಿ ಪೂಜೆಗೆ ಬೇಕಾಗುವ ಗಿಡಗಳನ್ನು ಬೆಳೆಸಲಾಗಿದೆ. ಹರಿಹರನ ಬಸವರಾಜ ದೇವರ ರಗಳೆಯಲ್ಲಿ ಬರುವ ವಿವಿಧ ಪುಷ್ಪಗಳ

ವರ್ಣನೆಯಂತೆ ಈ ಉದ್ಯಾನವನದಲ್ಲಿ ಗಿಡಗಳನ್ನು ನೆಟ್ಟಿದ್ದಾರೆ. ದೇವಾಲಯದ ನಿತ್ಯ ಪೂಜೆಗೆ ಬೇಕಾಗುವ ಹೂಗಳನ್ನು ಇಲ್ಲಿಂದ ಒದಗಿಸಲಾಗುತ್ತದೆ.

ಅಂದಾಜು ೧೫ ಎಕರೆಯಲ್ಲಿ ತೇಗ, ೩ ಎಕರೆಯಲ್ಲಿ ಗಂಧದ ಮರಗಳು, ೬ ಎಕರೆಯಲ್ಲಿ ಎಣ್ಣೆಯ ಬೀಜದ ಮರಗಳು, ೧೨ ಎಕರೆಯಲ್ಲಿ ಸಪೋಟ, ಪೇರಲ, ನೀರಳೆ, ಹುಣಸೆ, ನುಗ್ಗೆ, ಬಾಳೆಯ ಗಿಡಗಳನ್ನು ಬೆಳೆಸಲಾಗಿದೆ. ಗಂಧದ ಮರಗಳನ್ನು ಬೆಳೆಸುವ ಸಲಹೆಯನ್ನು ಅಂದಿನ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣಾ ಅವರು ನೀಡಿದ್ದಾರೆ. ತೋಟದ ಹಣ್ಣಿನ ಬೆಳೆಯನ್ನು ಹರಾಜು ಮೂಲಕ ಪ್ರತಿ ವರ್ಷ ಮಾರಲಾಗುತ್ತದೆ.

ವಚನಸಾಹಿತ್ಯ ಸಂಶೋಧನ ಕೇಂದ್ರ ಮತ್ತು ಗ್ರಂಥಾಲಯ

ಶರಣ ಸಾಹಿತ್ಯ ಮತ್ತು ಬಸವ ತತ್ವಗಳ ಪ್ರಚಾರ ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ. ಅದಕ್ಕಾಗಿ ಒಂದು ಶರಣ ಸಾಹಿತ್ಯ ಗ್ರಂಥಾಲಯದಲ್ಲಿ ಶರಣ ಸಾಹಿತ್ಯಕ್ಕೂ ಮತ್ತು ಬಸವ ಸಾಹಿತ್ಯಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಖರೀದಿಸಿದ್ದಾರೆ. ತೌಲನಿಕ ಧಾರ್ಮಿಕ ಅಧ್ಯಯನಗಳನ್ನು ಸಂಗ್ರಹಿಸಲಾಗಿದೆ. ಕನ್ನಡ, ಇಂಗ್ಲೀಷ್, ಹಿಂದಿ, ತಮಿಳು, ತೆಲುಗು, ಬಂಗಾಳಿ ಭಾಷೆಗಳಲ್ಲಿ ಭಾಷಾಂತರಗೊಂಡ ವಚನಸಾಹಿತ್ಯದ ಗ್ರಂಥಗಳು ಇಲ್ಲಿವೆ. ಬಸವಣ್ಣನವರನ್ನು ಕುರಿತ ಮೂರು ಚಲನ ಚಿತ್ರಗಳನ್ನು ಸುಮಾರು ೧೫೦ ವಚನ ಸಂಗೀತದ ಸಿಡಿಗಳನ್ನು ಸಂಗ್ರಹಿಸಲಾಗಿದೆ. ಒಟ್ಟು ಸಂಗ್ರಹದ ಖರ್ಚು ಸುಮಾರು ೫೦ ಲಕ್ಷಕ್ಕಿಂತ ಹೆಚ್ಚಿಗೆಯಾಗಬಹುದು. ಗ್ರಂಥಾಲಯಕ್ಕೆ ತನ್ನದೇ ಆದ ಕಟ್ಟಡವಿದೆ. ಇದರ ಸಂಪೂರ್ಣ ನಕ್ಷೆಯನ್ನು ಜಾರ್ಜಿಯನ್ ಶೈಲಿಯಲ್ಲಿ ಡಾರ್ಮರ ವಿಂಡೋಗಳುಳ್ಳ ಮೊದಲ ಮಹಡಿಯೊಂದಿಗೆ ತಯಾರಿಸಲಾಗಿದೆ. ಅದರಲ್ಲಿ ಸಾಮಾನ್ಯ ಓದುಗರ ಕಕ್ಷದ ಜೊತೆಗೆ ಪ್ರತ್ಯಕ್ಷವಾಗಿ ಸಂಶೋಧಕರಿಗೆ ವಿಶೇಷ ಕಕ್ಷಗಳಿವೆ. ಜೊತೆಗೆ ಎರಡು ವಿಶ್ರಾಂತಿ ಕೊಠಡಿಗಳಿವೆ. ಅದೇ ಕಟ್ಟಡದ ಎಡ ಭಾಗದಲ್ಲಿ ಮಂಡಳಿಯ ಕಛೇರಿ ಇದೆ. ಯುರೋಪಿಯನ್ ಮಾದರಿಯ ಈ ಕಟ್ಟಡಕ್ಕೆ ಡೋರ್ಮರ್ ಕಿಟಕಿಗಳು ವರಾಂಡಾದಲ್ಲಿ ಕಮಾನುಗಳು ಸುತ್ತಲೂ ಉದ್ಯಾನವನವಿದೆ.

ಕಲ್ಯಾಣ ಮಂಟಪ

ಮಧ್ಯಮ ವರ್ಗದ ಕುಟುಂಬಗಳ ಮದುವೆಗಾಗಿ ಅಂಗಡಿ ಮಳಿಗೆಗಳಿಂದ ಐದು ನೂರು ಅಡಿ ಅಂತರದಲ್ಲಿ ಒಂದು ಕಲ್ಯಾಣ ಮಂಟಪವನ್ನು, ಅದರ ಬದಿಗೆ ಭೋಜನಾಲಯ ಮತ್ತು ಅಡಿಗೆ ಕೋಣೆಯನ್ನು ಕಟ್ಟಲಾಗಿದೆ. ಸುತ್ತಲೂ ಉದ್ಯಾನವನವಿದೆ. ಎದುರಿನಲ್ಲಿ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಇದೆ. ಇವುಗಳ ನಕ್ಷೆಯನ್ನು ಮತ್ತು ಎರಡನೆಯ ಯಾತ್ರಿನಿವಾಸದ ನಕ್ಷೆಯನ್ನು ಮಂಡಳಿಯ ಸಲಹೆಗಾರರಾದ ಬಸವರಾಜ ಗದ್ವಾಲ್‌ರವರು ತಯಾರಿಸಿ ಕಟ್ಟಡ ನಿರ್ಮಾಣದಲ್ಲಿ ಮಾರ್ಗದರ್ಶನ ಮಾಡಿದ್ದಾರೆ.

ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ

ಕೂಡಲಸಂಗಮ ಅಭಿವೃದ್ಧಿ ಮಂಡಳಿ ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ೧೨.೦೩.೨೦೦೭ರಂದು ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರವನ್ನು ತೆರೆಯಲಾಯಿತು. ಎಸ್.ಎಂ. ಜಾಮದಾರ ಮತ್ತು ಎಂ.ಎಂ. ಕಲಬುರ್ಗಿಯವರ ಪ್ರಯತ್ನದ ಫಲವಾಗಿ ಇದು ಸಾಧ್ಯವಾಯಿತು. ಅವರ ಆಸೆ ಕೂಡಲಸಂಗಮದಲ್ಲಿ ವಿಶ್ವವಿದ್ಯಾಲಯವಾಗಬೇಕೆಂದು ಆದರೆ ಅನೇಕ ಆಡಳಿತಾತ್ಮಕ ತೊಂದರೆಗಳಿಂದ ಎಂ.ಎಂ.ಕಲಬುರ್ಗಿಯವರು ಕುಲಪತಿಗಳು ಆಗಿರುವ ಸಂದರ್ಭದಲ್ಲಿಯೇ ಸ್ಥಾಪನೆಗೊಳ್ಳಬೇಕಿದ್ದ ಕೇಂದ್ರ ಕಾರಣಾಂತರಗಳಿಂದ ಬಿ.ವೈ. ವಿವೇಕ ರೈ ಅವರ ಕಾಲದಲ್ಲಿ ಜಾರಿಗೆ ಬಂದಿತು. ಈ ಕೇಂದ್ರದ ಮೊದಲ ಮುಖ್ಯಸ್ಥರಾಗಿ ಕೆ. ರವೀಂದ್ರನಾಥ ಅವರನ್ನು ನೇಮಿಸಲಾಯಿತು. ಅವರು ಎರಡು ವರ್ಷದ ಅವಧಿಯಲ್ಲಿ ಕೇಂದ್ರದ ಅನೇಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದರು. ರಾಷ್ಟ್ರೀಯ ಅಂತಾರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡು ವಚನ ಸಾಹಿತ್ಯದ ಪ್ರಸಾರವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರತಿಷ್ಠಾಪಿಸುವ ಮತ್ತು ಪ್ರಸಾರಗೊಳಿಸುವ ಉದ್ದೇಶವನ್ನು ಹೊಂದಲಾಗಿದ್ದು, ಆಡಳಿತಾತ್ಮಕವಾಗಿ ಹಂಪಿ ವಿಶ್ವವಿದ್ಯಾಲಯ ಕಾರ್ಯವನ್ನು ನಿರ್ವಹಿಸಿದರೆ, ಕೂಡಲಸಂಗಮ ಅಭಿವೃದ್ಧಿ ಮಂಡಳಿ ಹಣಕಾಸು ವ್ಯವಹಾರವನ್ನು ನೋಡಿಕೊಳ್ಳುತ್ತದೆ. ವಿಚಾರ ಸಂಕಿರಣ ಗ್ರಂಥ ಪ್ರಕಟಣೆಗೆ ಕನಿಷ್ಠ ಮೂರು ಲಕ್ಷ ರೂಪಾಯಿಗಳನ್ನು ಪ್ರತಿ ವರ್ಷ ತೆಗೆದಿಡುತ್ತದೆ. ವಿಶ್ವವಿದ್ಯಾಲಯವು ಹಂಪಿಯ ಕೇಂದ್ರಗಳಿಗೆ ಹಣ ತೆಗೆದಿಡುವಂತೆ ಇಲ್ಲಿಗೂ ತೆಗೆದಿಡಲಾಗುತ್ತದೆ. ಇಲ್ಲಿ ಪಿಎಚ್.ಡಿ., ಎಂ.ಫಿಲ್. ಪದವಿಗಳನ್ನು ಪಡೆದುಕೊಳ್ಳಲು ಅನುಕೂಲ ಕಲ್ಪಿಸಿದ್ದು ಶರಣರ ಬಗ್ಗೆ ಶರಣರ ಸಾಹಿತ್ಯದ ಕುರಿತು ಸಂಶೋಧನೆಯನ್ನು ಮಾಡಲು ಮಾತ್ರ ಅವಕಾಶ ಮಾಡಲಾಗಿದೆ.

ಜೊತೆಗೆ ವಚನ ಸಾಹಿತ್ಯ ಡಿಪ್ಲೋಮಾ ಕೋರ್ಸಗಳನ್ನು ತೆಗೆಯುವ ಉದ್ದೇಶ ಹೊಂದಲಾಗಿದೆ. ಕನ್ನಡ ವಿಶ್ವವಿದ್ಯಾಲಯ ಈ ಕೇಂದ್ರಕ್ಕೆ ಸುಮಾರು ಸಾವಿರ ಪುಸ್ತಕಗಳನ್ನು ಸಂಶೋಧಕರಿಗೆ ಆಕರವಾಗಿ ಬಳಸಿಕೊಳ್ಳಲು ವಿಭಾಗದ ಗ್ರಂಥಾಲಯಕ್ಕೆ ಅನುಕೂಲ ಮಾಡಿ ಕೊಟ್ಟಿದೆ. ಜೊತೆಗೆ ಅಭಿವೃದ್ಧಿ ಮಂಡಳಿಯ ಶರಣ ಸಾಹಿತ್ಯ ಭಂಡಾರದ ಗ್ರಂಥಗಳನ್ನು ಬಳಸಿಕೊಳ್ಳಲು ವ್ಯವಸ್ಥೆಯೂ ಇದೆ. ಹೀಗಾಗಿ ಸಂಶೋಧನೆಗಳಿಗೆ ಅನುಕೂಲವಾಗಿದೆ. ವಚನ ಛಂದೋಲಯ ಎಂಬ ಕೃತಿಯನ್ನು ವಿಭಾಗದಿಂದ ಹೊರತರಲಾಗಿದೆ.

ಕೇಂದ್ರದ ಉದ್ದೇಶಗಳು

ನಾಡಿನ ವಿಶ್ವವಿದ್ಯಾಲಯಗಳು ಮತ್ತು ಮಠಮಾನ್ಯಗಳು ರಾಷ್ಟ್ರೀಯ ಅಂತಾರಾಷ್ಟ್ರೀಯ ಆಸಕ್ತ ಚಿಂತಕರೊಂದಿಗೆ ರಚನಾತ್ಮಕ ಸಂಬಂಧವನ್ನಿಟ್ಟುಕೊಂಡು ಹಲವಾರು ಯೋಜನೆಗಳನ್ನು ಕೇಂದ್ರವು ರೂಪಿಸಿಕೊಂಡಿದೆ. ಹೊರಗಿನ ಅನೇಕ ವಿದ್ವಾಂಸರ ಜೊತೆಗೆ ಚರ್ಚೆಮಾಡುವ ದೃಷ್ಟಿಯಿಂದ ಸಂಪನ್ಮೂಲ ವ್ಯಕ್ತಿಗಳನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಹೀಗೆ ಸಂಶೋಧನೆ, ವಿಚಾರ ಸಂಕಿರಣ,

ಗ್ರಂಥ ಪ್ರಕಟಣೆ, ಚರ್ಚಾಕೂಟ, ಕಮ್ಮಟಗಳನ್ನು ವಿವಿಧ ಕಾಲೇಜುಗಳ ವ್ಯಾಪ್ತಿಯಲ್ಲಿ ಹಮ್ಮಿಕೊಂಡು ಸಂಶೋಧನಾತ್ಮಕ ಅಂಶಗಳನ್ನು ಹೊರತರಲಾಗುತ್ತಿದೆ. ಫ.ಗು. ಹಳಕಟ್ಟಿ ಸಂಶೋಧನಾ ಸಂಸ್ಥೆ ದತ್ತಿನಿಧಿಯನ್ನು ಸಂಶೋಧನೆಗಾಗಿ ಬಿ.ಎಲ್.ಡಿ ಸಂಸ್ಥೆ ಒಂದು ಲಕ್ಷ ರೂಪಾಯಿ ಹಣವನ್ನು ಡಿಫಾಜಿಟ್ ಮಾಡಲಾಗಿದೆ. ಜೊತೆಗೆ ದಿವಂಗತ ಕೆ.ಎಸ್.ವೀರಭದ್ರಪ್ಪನವರ ದತ್ತಿನಿಧಿಯೂ ಕೂಡಾ ಈ ಕೇಂದ್ರಕ್ಕೆ ಪ್ರಾಪ್ತವಾಗಿದೆ. ಇವುಗಳ ಸಹಾಯದಿಂದ ನಾಡಿನ ಬೇರೆ ಬೇರೆ ಕಡೆಗೆ ವಿಚಾರ ಸಂಕಿರಣಗಳನ್ನು ಏರ್ಪಡಿಸಲಾಗುತ್ತದೆ.

ವಚನಸಂಸ್ಕೃತಿಯನ್ನು ಮುಖ್ಯ ಭೂಮಿಕೆಯನ್ನಾಗಿಸಿಕೊಂಡು ವಚನಗಳ ಸರ್ವೇಕ್ಷಣೆ, ಸಂಪಾದನೆ, ಸಂಶೋಧನೆ, ಹೀಗೆ ಬಹುಶಿಸ್ತೀಯ ಅಧ್ಯಯನ ಕೈಗೊಳ್ಳುವ ಮತ್ತು ಅದನ್ನು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವಿದ್ವಾಂಸರ ಅಧ್ಯಯನಕ್ಕೆ ಸಾಧ್ಯವಾಗಿಸುವ ಆಕರ ಕಣಜವನ್ನು ರೂಪಿಸುವ ಬಹುಮುಖ್ಯ ಆಶಯವನ್ನು ಅಧ್ಯಯನ ಕೇಂದ್ರ ಹೊಂದಿದೆ. ಕರ್ನಾಟಕದಲ್ಲಿ ವಚನ ಸಾಹಿತ್ಯ ಶೋಧದ ಪರ್ಯಾಯ ನಾಮ ವಚನ ಪಿತಾಮಹ ಫ.ಗು. ಹಳಕಟ್ಟಿಯವರ ವಚನ ಸಾಹಿತ್ಯ ಸಂಶೋಧನೆ ತುಂಬ ಆಳ ಮತ್ತು ವಿಸ್ತಾರವಾದುದು. ವಚನ ರಗಳೆಗಳ ಸಂಗ್ರಹ, ವಚನಶಾಸ್ತ್ರ ಸಾರ ಸಂಪುಟಗಳು, ಶಿವಶರಣರ ಚರಿತ್ರೆಗಳು, ಶಿವಾನುಭವ ಶಬ್ದಕೋಶ, ಕೆಳದಿ–ಬಿಳದಿ ಹಾಗೂ ಕೆಲವು ಲಿಂಗಾಯತ ಸಂಸ್ಥಾನಿಕರ ವಂಶಾವಳಿಗಳು, ಜೀವನ ಚರಿತ್ರೆಗಳು ಮತ್ತು ಶಿವಾನುಭವ ಪತ್ರಿಕೆ ಹೀಗೆ ಒಂದೆಡೆ ಶೈಕ್ಷಣಿಕ ಹಾಗೂ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ದುಡಿದ ಹಳಕಟ್ಟಿಯವರು ಕರ್ನಾಟಕ ಸಂಸ್ಕೃತಿಯ ವಾರಸುದಾರರಾಗಿದ್ದಾರೆ. ಇವರು ೦೨ ಜುಲೈ ೧೮೮೦ರಲ್ಲಿ ಜನಿಸಿದ್ದು ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ ಇವರ ಜನ್ಮ ದಿನವನ್ನು ವಚನ ಅಧ್ಯಯನ ದಿನವೆಂದು ಘೋಷಿಸಿ ಆಚರಣೆ ಮಾಡಲಾಗುತ್ತದೆ. ವಚನ ಚಳವಳಿ ಪ್ರಸಾರಕರಂತೆ ದುಡಿದ ಫ.ಗು. ಹಳಕಟ್ಟಿಯವರನ್ನು ಕೇಂದ್ರ ಸದಾ ಸ್ಮರಿಸುತ್ತದೆ.

ಸಂಶೋಧನೆ

ವಚನಸಂಸ್ಕೃತಿ ಕುರಿತಂತೆ ತಲಸ್ಪರ್ಶಿ ಹಾಗೂ ಬಹುಶಿಸ್ತೀಯ ಅಧ್ಯಯನ ನಡೆಸುವುದು ವಚನ, ವಚನ ಕಾವ್ಯ, ಕಾಲಜ್ಞಾನ, ಸ್ವರವಚನ, ಶಾಸನ, ಶಿಲ್ಪ, ದೇವಾಲಯ, ಸ್ಥಳ ಮಹಾತ್ಮೆ ಆಚರಣೆ, ನಂಬಿಕೆ ಸಂಪ್ರದಾಯಗಳನ್ನು ಕುರಿತು ಅಧ್ಯಯನ ಮಾಡುವುದು. ವಚನ ಪಿತಾಮಹ ಫ.ಗು. ಹಳಕಟ್ಟಿಯವರಿಂದ ಆರಂಭಗೊಂಡ ವಚನ ಅಧ್ಯಯನದ ಮುಂದಿನ ಮಜಲುಗಳಾಗಿ ಸಮಕಾಲೀನ ಬೌದ್ಧಿಕ, ಶೈಕ್ಷಣಿಕ ಹಾಗೂ ವಿದ್ವತ್ ಅಗತ್ಯಗಳ ಹಿನ್ನೆಲೆಯಲ್ಲಿ ವಚನ ಅಧ್ಯಯನಕ್ಕೆ ಹೊಸ ದಿಕ್ಕನ್ನು ಕಂಡುಕೊಳ್ಳುವುದು. ಐತಿಹಾಸಿಕ ಆಲೋಚನೆಗಳ ಮೂಲಕ ಪರಿಕಲ್ಪನೆಗಳನ್ನು ಆಧಾರವಾಗಿಟ್ಟುಕೊಂಡು ವಚನಗಳಲ್ಲಿ ವ್ಯಕ್ತವಾಗಿರುವ ಚಿಂತನೆಗಳ ಮೂಲ ಬೆಳವಣಿಗೆ ಹಾಗೂ ಪರಿವರ್ತನೆಗಳನ್ನು ಕುರಿತು ಸೈದ್ಧಾಂತಿಕ ವೈಚಾರಿಕ ನೆಲೆಯಲ್ಲಿ ಅಧ್ಯಯನ ಮಾಡುವುದು. ಅನ್ಯಭಾಷಾ ಸಾಹಿತ್ಯದಿಂದ ವಚನಗಳು ಹೇಗೆ ಯಾವ ವಿಚಾರಗಳನ್ನು ತೆಗೆದುಕೊಂಡು ತಮ್ಮ

ವೈಚಾರಿಕ ಲೋಕವನ್ನು ನಿರ್ಮಿಸಿಕೊಂಡವು ಈ ವೈಚಾರಿಕ ಲೋಕ ಜಾಗತಿಕ ಚಿಂತನೆಯ ಹಿನ್ನೆಲೆಯಲ್ಲಿ ಎಂಥಹ ಮಹತ್ವ ಪಡೆದಿದೆ ಎಂಬ ಗುರಿಯನ್ನಿಟ್ಟುಕೊಂಡು ಅಧ್ಯಯನ ಕೈಗೊಳ್ಳುವುದು ಅಂದರೆ ವಚನ ಮತ್ತು ಭಾರತೀಯ ಭಾಷೆ ವಚನ ಮತ್ತು ಜಾಗತಿಕ ಭಾಷಾ ಚಿಂತನೆಗಳ ಕೊಡುಕೊಳ್ಳುವಿಕೆಯನ್ನು ತಳಹದಿ ಮಾಡಿಕೊಂಡು ಅಧ್ಯಯನ ಮಾಡುವುದು. ವಚನ ಸಾಹಿತ್ಯ ಸಂಸ್ಕೃತಿ ಕ್ಷೇತ್ರದಲ್ಲಿ ದುಡಿದ ಪ್ರಾಚೀನ ಕವಿಗಳ, ಟೀಕಾಕಾರರ, ಸಂಯೋಜನಾಕಾರರ ಹಾಗೂ ಆಧುನಿಕ ವಿದ್ವಾಂಸರ, ನಾಟಕಕಾರರ, ಚಿಂತಕರ ಕುರಿತು ಅಧ್ಯಯನ ಕೈಗೊಳ್ಳುವುದು. ವಚನಾಧ್ಯಯನದಲ್ಲಿ ಪಿಎಚ್.ಡಿ. ಹಾಗೂ ಎಂ.ಫಿಲ್. ಅಧ್ಯಯನಗಳಿಗೆ ಕೇಂದ್ರದಲ್ಲಿ ಅವಕಾಶ ಕಲ್ಪಿಸಿಕೊಳ್ಳುವುದು ಹೀಗೆ ಹಲವಾರು ರೀತಿಯಲ್ಲಿ ಸಂಶೋಧನಾತ್ಮಕ ಚಟುವಟಿಕೆಗಳು ಈ ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರದಲ್ಲಿ ನಿರಂತರವಾಗಿ ಸಾಗಿಕೊಂಡು ಬಂದಿದೆ.

ದಾಖಲೀಕರಣ ಮತ್ತು ವಿಶ್ಲೇಷಣೆ

ಜಾಗತಿಕ ಮಟ್ಟದಲ್ಲಿ ವಿದ್ವಾಂಸರು ಮತ್ತು ವಿದ್ಯಾರ್ಥಿಗಳು ವಚನ ಅಧ್ಯಯನ ಕೈಗೊಳ್ಳಲು ಮತ್ತು ಪ್ರೇರೇಪಿಸಲು ವಿದ್ಯುನ್ಮಾನ ಸೌಲಭ್ಯಗಳನ್ನು ಪಡೆದುಕೊಂಡು ಮತ್ತು ಆ ಮಾಧ್ಯಮಗಳಲ್ಲಿ ಕೇಂದ್ರದ ಚಟುವಟಿಕೆಗಳನ್ನು ದಾಖಲೀಕರಣವನ್ನು ಮಾಡುತ್ತ ಶಿಲ್ಪ, ದೇವಾಲಯ, ಆಚರಣೆ, ಜಾತ್ರೆ, ಉತ್ಸವ ಇತ್ಯಾದಿ ಪುರಾತತ್ವ ಆಕರಗಳ ದಾಖಲೀಕರಣ ಕೇಂದ್ರದಿಂದ ನಡೆಯುತ್ತಿದೆ. ಕನ್ನಡ ಹಾಗೂ ಕನ್ನಡೇತರ ಭಾಷೆಗಳಲ್ಲಿ ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಅಧ್ಯಯನದ ಆಕರ ಸೂಚಿಗಳನ್ನು ದತ್ತ ಕಣಜ ರೂಪದಲ್ಲಿ ದಾಖಲೀಕರಿಸಿ ಅಧ್ಯಯನಗಳನ್ನು ಕೇಂದ್ರವು ನಡೆಸುತ್ತಿದೆ.

ವಿಚಾರ ಸಂಕಿರಣ ಮತ್ತು ಉಪನ್ಯಾಸ ಮಾಲೆ

ಪ್ರತಿವರ್ಷ ವಚನಸಾಹಿತ್ಯ ಕುರಿತಾಗಿ ಎರಡು ದಿನಗಳ ಎರಡು ವಚನ ಕಮ್ಮಟಗಳನ್ನು ಏರ್ಪಡಿಸುತ್ತ ಬಂದಿದೆ. ವಚನಪಿತಾಮಹ ಫ.ಗು. ಹಳಕಟ್ಟಿಯವರು ಜನಿಸಿದ ಜುಲೈ ೦೩ನ್ನು ವಚನ ಅಧ್ಯಯನ ದಿನ ಎಂದು ಘೋಷಣೆಮಾಡಿ ಎರಡು ದಿನಗಳ ಕಾಲ ವಚನ ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳುತ್ತ ಬಂದಿದ್ದಾರೆ. ವಚನಕಾರರ ಕಾಯಕ ತತ್ವ ದಾಸೋಹ ಸಿದ್ಧಾಂತ ಸಾಮಾಜಿಕ ಪ್ರಜ್ಞೆ, ಸಮಾನತೆ ಮುಂತಾದವುಗಳನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ವಚನ ಸಾಹಿತ್ಯ ಪರಂಪರೆ ಪ್ರಚಾರ ಹೆಸರಿನಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ವರ್ಷಕ್ಕೆ ಮೂರು ಉಪನ್ಯಾಸಮಾಲೆ ಹಮ್ಮಿಕೊಳ್ಳುತ್ತ ಬರಲಾಗಿದೆ. ವಚನ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ಸರ್ಟಿಫಿಕೇಟ್, ಮತ್ತು ಡಿಪ್ಲೋಮ ಅಲ್ಪಾವಧಿ ಕೋರ್ಸ್‌ಗಳನ್ನು ನಡೆಸುವುದರ ಮೂಲಕ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ.

ಪ್ರಕಟಣೆಗಳು ಮತ್ತು ಅಧ್ಯಯನ ಯೋಜನೆಗಳು

ಸಾಂಸ್ಥಿಕವಾಗಿ ದೀರ್ಘಕಾಲಿಕ ಯೋಜನೆಗಳನ್ನು ಹಾಕಿಕೊಳ್ಳುವುದರ ಮೂಲಕ ವಚನ ಸಾಹಿತ್ಯದ ಮೂಲ ಪರಿಕಲ್ಪನೆಗಳನ್ನು ವಿಸ್ತೃತಗೊಳಿಸುವ ನಿಟ್ಟಿನೊಳಗೆ ಹಲವಾರು ಯೋಜನೆಗಳನ್ನು

ಹಾಕಿಕೊಂಡು ಅವುಗಳನ್ನು ಪ್ರಕಟಣೆಗಳ ರೂಪಗಳಲ್ಲಿ ಹೊರತರುವುದರ ಮೂಲಕ ವಿದ್ವತ್ ಪ್ರಪಂಚಕ್ಕೆ ಕಾಣಿಕೆಗಳಾಗಿ ನೀಡುತ್ತ ಬಂದಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಕೆ. ರವೀಂದ್ರನಾಥ ಅವರ ವಚನ ಸಾಹಿತ್ಯ ಹಸ್ತಪ್ರತಿ ಸೂಚಿ ಸಂಪುಟಗಳು ಮತ್ತು ಡಾ.ಎಸ್.ಎಸ್.ಅಂಗಡಿಯವರ ರಗಳೆ ಸಾಹಿತ್ಯ ಭಾಷೆ ಇವು ದೀರ್ಘಾವಧಿಯ ಯೋಜನೆಗಳ ಮೂಲಕ ಹೊರಬಂದವುಗಳಾಗಿವೆ. ಈ ಅಧ್ಯಯನ ಕೇಂದ್ರದಲ್ಲಿ ಎಂ.ಫಿಲ್. ಮತ್ತು ಪಿಎಚ್.ಡಿ. ಅಧ್ಯಯನಗಳ ಮೂಲಕ ಹಲವು ಮಹಾ ಪ್ರಬಂಧಗಳನ್ನು ಹೊರತರಲಾಗಿದೆ. ದಿಗ್ಗಿ ಸಂಗಮನಾಥ ಒಂದು ಅಧ್ಯಯನ ಎಂಬ ಎಂಫಿಲ್ ಪ್ರಬಂಧವು ಕೆ. ರವೀಂದ್ರನಾಥ ಅವರ ಮಾರ್ಗದರ್ಶನದಲ್ಲಿ ಅನುಪಮಾ ಆದಾಪೂರರವರು ಸಂಶೋಧನೆಯನ್ನು ಪೂರೈಸಿದ್ದಾರೆ.

ಗೋಲಗೇರೆ ಗೊಲ್ಲಾಳೇಶ್ವರ ಒಂದು ಅಧ್ಯಯನ ಎಂಬ ಪಿಎಚ್.ಡಿ ಮಹಾಪ್ರಬಂಧವು ಜಿ.ಬಿ. ಸಜ್ಜನ ಅವರ ಮಾರ್ಗದರ್ಶನದಲ್ಲಿ ಶಿವಶಂಕರಪ್ಪ ಈರಪ್ಪ ಬಿರಾದಾರ ಎಂಬುವರು ೨೦೧೨ರಲ್ಲಿ ಪದವಿಯನ್ನು ಪಡೆದುಕೊಂಡಿದ್ದಾರೆ. ಶಿವಯೋಗ ಮಂದಿರ ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಮಹಾಪ್ರಬಂಧವನ್ನು ಕೆ. ರವೀಂದ್ರನಾಥ ಅವರ ಮಾರ್ಗದರ್ಶನದಲ್ಲಿ ಎ.ಜೆ. ನವೀನಕುಮಾರ ಎಂಬುವರು ೨೦೧೩ರಲ್ಲಿ ಪದವಿಯನ್ನು ಪಡೆದಿದ್ದಾರೆ. ಅದೇ ತೆರನಾಗಿ ಕನ್ನಡ ಟೀಕಿನ ವಚನಗಳು: ಒಂದು ಅಧ್ಯಯನ ಎಂಬ ಮಹಾಪ್ರಬಂಧವನ್ನು ನಾಗರಾಜ ಪ. ನಾಡಗೌಡ್ರ ಅವರು ಕೆ. ರವೀಂದ್ರನಾಥ ಅವರ ಮಾರ್ಗದರ್ಶನದಲ್ಲಿ ೨೦೧೩ರಲ್ಲಿ ಪದವಿಯನ್ನು ಪಡೆದಿದ್ದಾರೆ. ಅಕ್ಕಮಹಾದೇವಿ ವಚನಗಳ ಮೀಮಾಂಸೆ ಎಂಬ ಮಹಾಪ್ರಬಂಧವನ್ನು ಯಮುನವ್ವ ಕೊಣ್ಣೂರು ಇವರು ಎಸ್.ಎಸ್. ಅಂಗಡಿಯವರ ಮಾರ್ಗದರ್ಶನದಲ್ಲಿ ೨೦೧೫ರಲ್ಲಿ ಪದವಿಯನ್ನು ಪಡೆದುಕೊಂಡಿದ್ದಾರೆ. ಹೀಗೆ ವಚನ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿದಂತೆ ಹಲವಾರು ಬಗೆಯ ಅಧ್ಯಯನಗಳು ಇಂದಿಗೂ ನಡೆಯುತ್ತಿವೆ.

ವಚನ ಸಾಹಿತ್ಯ ಛಂದೋಲಯ ಎಂಬ ಕೃತಿಯು ಎಸ್.ಎಸ್. ಅಂಗಡಿಯವರು ರಚಿಸಿದ್ದು ವಿಶ್ವವಿದ್ಯಾಲಯದ ಪ್ರಸಾರಾಂಗವು ಈ ಕೃತಿಯನ್ನು ೨೦೦೮ರಲ್ಲಿ ಪ್ರಕಟಿಸಿದೆ. ವಚನ ಸಾಹಿತ್ಯದಲ್ಲಿಯ ಛಂದಸ್ಸನ್ನು ಈ ಕೃತಿಯೊಳಗೆ ವಿಸ್ತೃತವಾಗಿ ಚರ್ಚಿಸಲಾಗಿದೆ. ಅದೇ ರೀತಿ ಹರಿಹರನ ಲಿಂಗ ನಿರಸನ ರಗಳೆಗಳು ಎಂಬ ಕೃತಿಯು ೨೦೦೯ರಲ್ಲಿ ಪ್ರಕಟವಾಗಿದೆ. ಗುರುಪಾದಪ್ಪ ಮರಿಗುದ್ದಿ ಅವರು ಈ ಕೃತಿಯನ್ನು ರಚಿಸಿದ್ದಾರೆ. ಹಿರಿಯರ ಹಿರಿತನ ಹಿಂದೆನಾಯಿತು ಎಂಬ ಕೃತಿಯನ್ನು ವಿಜಯಕುಮಾರ ಬೋರಟ್ಟಿ ಅವರು ರಚಿಸಿದ್ದು, ಪ್ರಸಾರಾಂಗವು ೨೦೧೦ರಲ್ಲಿ ಇದನ್ನು ಪ್ರಕಟಿಸಿದೆ. ರಾವ್‌ಸಾಹೇಬ ಮಲ್ಲಪ್ಪ ಶಂಕ್ರಪ್ಪ ಸಿಂಹಾಸನ ಎಂಬ ಕೃತಿಯನ್ನು ಜಿ.ಡಿ.ಸಕ್ರಿ ಅವರು ರಚಿಸಿದ್ದು ಇದರ ಸಂಪಾದಕರಾಗಿ ಮಹೇಶ ತಿಪ್ಪಶೆಟ್ಟಿ ಕೆಲಸ ನಿರ್ವಹಿಸಿದ್ದಾರೆ. ಹೆಳವನಕಟ್ಟೆಯವರನ್ನು ಕುರಿತು ಆಂಗ್ಲ ಭಾಷಾ ಪುಸ್ತಕ (ಡಿಸ್ಕವರಿ ಆಫ್ ಚವನಾಸ್) ಈ ಕೃತಿ ವಿಜಯಕುಮಾರ ಬೋರಟ್ಟಿ ೨೦೧೨ರಲ್ಲಿ ಪ್ರಕಟಿಸಿದ್ದಾರೆ. ಹೀಗೆ ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರದ

ಮೂಲಕ ಹಲವಾರು ಕೃತಿಗಳು ಹೊರಬಂದಿರುವುದು ಕೇಂದ್ರದ ಉದ್ದೇಶ ಸಾರ್ಥಕತೆಗೆ ಕನ್ನಡಿಯಾಗಿದೆ.

ಈ ಕೇಂದ್ರದಿಂದ ಇಲ್ಲಿಯವರೆಗೆ ಅನೇಕ ಕಮ್ಮಟಗಳನ್ನು ವಿಚಾರ ಸಂಕಿರಣಗಳನ್ನು ನಾಡಿನ ಬೇರೆ ಬೇರೆ ಸ್ಥಳಗಳಲ್ಲಿ ಹಮ್ಮಿಕೊಳ್ಳುತ್ತ ವಚನ ಸಾಹಿತ್ಯದ ವಿಚಾರಧಾರೆಗಳನ್ನು ನಾಡಿನಾದ್ಯಂತ ಪಸರಿಸಲು ವಿಶ್ವವಿದ್ಯಾಲಯ ಮತ್ತು ವಚನ ಅಧ್ಯಯನ ಕೇಂದ್ರ ಅವಿರತವಾಗಿ ತೊಡಗಿಸಿಕೊಂಡಿವೆ. ಪ್ರಮುಖವಾಗಿ ವಚನ ಸಂಸ್ಕೃತಿಯ ಹಿನ್ನೆಲೆಯಲ್ಲಿಯೇ ಈ ಕಾರ್ಯಕ್ರಮಗಳು ರೂಪುಗೊಂಡಿವೆ. ಪ್ರಮುಖವಾಗಿ ವಚನ ಸಾಹಿತ್ಯ ಸಂವಾದ ಕಮ್ಮಟ, ವಚನ ಸಾಹಿತ್ಯದ ಅನುಸಂಧಾನದ ನೆಲೆಗಳು, ನಿಜಶರಣ ಅಂಬಿಗರ ಚೌಡಯ್ಯನ ವಚನಗಳ ಮುಖಾಮುಖಿ, ಫ.ಗು. ಹಳಕಟ್ಟಿ ಸಾಹಿತ್ಯ ವಿಚಾರ ಸಂಕಿರಣ, ಉರಿಲಿಂಗ ಪೆದ್ದಿ ಸಂಪ್ರದಾಯ ಸಾಹಿತ್ಯ ವಿಚಾರ ಸಂಕಿರಣ, ಹರಿಹರನ ಭೇದ ನಿರಸನ ದೃಷ್ಟಿ ವಿಶೇಷ ಉಪನ್ಯಾಸ, ವಚನ ಸಾಹಿತ್ಯ ಮತ್ತು ಜಾನಪದ ಸಾಹಿತ್ಯ, ಫ.ಗು. ಹಳಕಟ್ಟಿ ದತ್ತಿನಿಧಿ ಕಾರ್ಯಕ್ರಮದ ವಿಚಾರ ಸಂಕಿರಣ, ರಾಜ್ಯ ಮಟ್ಟದ ವಚನ ಸಾಹಿತ್ಯ ಅಧ್ಯಯನ ಕಮ್ಮಟ, ವಚನ ಸಂಸ್ಕೃತಿ ಶಿಬಿರ, ವಚನ ಸಂಸ್ಕೃತಿ ಮತ್ತು ಲಿಂಗ ಸಮಾನತೆ ವಚನ ಕಮ್ಮಟ, ಬಸವನ ಬಾಗೇವಾಡಿ ದೇವಸ್ಥಾನದ ವಾಸ್ತು ಹಿನ್ನೋಟ–ಮುನ್ನೋಟ ವಿಚಾರ ಸಂಕಿರಣ, ತಳವರ್ಗದ ವಚನಕಾರರ ಸಾಮಾಜಿಕ ಸ್ವರೂಪ ಮತ್ತು ವಿಚಾರ ಸಂಕಿರಣ, ಹಸ್ತಪ್ರತಿ ತರಬೇತಿ ಮತ್ತು ಜಾಗೃತಿ ಶಿಬಿರ, ವಚನ ಸಂಗೀತೋತ್ಸವ ಕಾರ್ಯಕ್ರಮ, ಆಧುನಿಕತೆ ಮತ್ತು ದೇಶಿ ಚಿತ್ರಕಲೆ ರಾಷ್ಟ್ರೀಯ ವಿಚಾರ ಸಂಕಿರಣ ಹೀಗೆ ಹಲವಾರು ಕಮ್ಮಟ ಮತ್ತು ವಿಚಾರ ಸಂಕಿರಣಗಳ ಮೂಲಕ ವಚನ ಸಾಹಿತ್ಯದ ಮೇಲೆ ಬೆಳಕು ಚೆಲ್ಲುತ್ತ ಬಂದಿದೆ.

ಅಧ್ಯಾಯ : ೯
ಸಮಾರೋಪ

ಅಧ್ಯಾಯ : ಒಂಬತ್ತು
ಸಮಾರೋಪ

ಕರ್ನಾಟಕದಲ್ಲಿ ಚಾರಿತ್ರಿಕವಾಗಿ, ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹಲವಾರು ಸ್ಥಳಗಳು ಮಹತ್ವವನ್ನು ಪಡೆದುಕೊಂಡಿವೆ. ಇಂತಹ ಸ್ಥಳಗಳನ್ನು ಕುರಿತು ಹಲವಾರು ಅಧ್ಯಯನಗಳು ನಡೆದಿವೆ. ಸ್ಥಳ ಕೇಂದ್ರಿತವಾದ ಅಧ್ಯಯನಗಳಲ್ಲಿ ಪ್ರಮುಖವಾಗಿ ಶ್ರವಣಬೆಳಗೊಳ : ಸಾಂಸ್ಕೃತಿಕ ಅಧ್ಯಯನ, ಕಮಲಾಪುರ : ಒಂದು ಅಧ್ಯಯನ, ಬಂಕಾಪುರ : ಒಂದು ಅಧ್ಯಯನ, ಕೊಪ್ಪಳ ಸಾಂಸ್ಕೃತಿಕ ಅಧ್ಯಯನ ಎಂಬ ವಿಷಯಗಳ ಮೇಲೆ ಅಧ್ಯಯನಗಳಾಗಿವೆ. ಒಂದು ಸ್ಥಳವನ್ನು ಕುರಿತು ಇಡೀಯಾಗಿ ಅಧ್ಯಯನ ಮಾಡುವ ದೃಷ್ಟಿಯಿಂದ ಕೂಡಲಸಂಗಮ ಸಾಂಸ್ಕೃತಿಕ ಅಧ್ಯಯನವೆಂಬ ಪ್ರಸ್ತುತ ಸಂಶೋಧನಾ ಪ್ರಬಂಧವು ಕೂಡಲಸಂಗಮದಲ್ಲಿಯ ಪ್ರಾಚೀನ ಅಂಶಗಳನ್ನು ಇಟ್ಟಿಕೊಂಡು ಅಧ್ಯಯನ ಮಾಡಲಾಗಿದೆ. ಕೂಡಲಸಂಗಮದಲ್ಲಿಯ ಶಾಸನಗಳು ಮತ್ತು ಪ್ರಾಚೀನ ಕಾವ್ಯಗಳಲ್ಲಿ ಉಲ್ಲೇಖವಾಗಿರುವ ಅಂಶಗಳನ್ನು ಇಟ್ಟುಕೊಂಡು ಅಧ್ಯಯನ ನಡೆಸಲಾಗಿದೆ. ಕೂಡಲಸಂಗಮವು ಕಲ್ಯಾಣ ಚಾಲುಕ್ಯರ ಕಾಲದಿಂದ ಪ್ರಸಿದ್ಧಿಯನ್ನು ಪಡೆದು ಪವಿತ್ರ ಕ್ಷೇತ್ರವೆಂಬ ಹೆಗ್ಗಳಿಕೆಯನ್ನು ಪಡೆಯಿತು. ನಂತರ ೧೨ನೆ ಶತಮಾನದಲ್ಲಿ ಬಸವಣ್ಣನವರ ಆಗಮನದ ನಂತರ ಕೂಡಲಸಂಗಮದ ಸಂಗಮನಾಥ ಬಸವಣ್ಣನವರ ಆರಾಧ್ಯ ದೈವವಾಗಿ, ವಚನಗಳ ಅಂಕಿತವಾಗಿ ತನ್ನ ಸ್ಥಳದ ಮಹತ್ವವನ್ನು ಹೆಚ್ಚಿಸಿಕೊಂಡು ಇಂದಿಗೂ ಪ್ರಮುಖ ಧಾರ್ಮಿಕ ಕೇಂದ್ರವಾಗಿ ಜಾಗೃತವಾಗಿದೆ.

ಕೂಡಲಸಂಗಮವು ಸಾಂಸ್ಕೃತಿಕವಾಗಿ ಯಾವ ರೀತಿಯಾಗಿ ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು ಎಂಬ ಅಂಶವನ್ನು ಈ ಅಧ್ಯಯನದ ಮೂಲಕ ತೋರಿಸಿಕೊಟ್ಟಿದ್ದೇನೆ. ಬಹು ಪ್ರಾಚೀನ ಕಾಲದ ಕಾವ್ಯಗಳಾದ ಬಸವರಾಜ ದೇವರ ರಗಳೆ ನಂತರ ಬಸವಣ್ಣನವರನ್ನು ಕುರಿತು ರಚನೆಯಾಗಿರುವ ಬಸವಪುರಾಣ, ಅಮಲಬಸವ ಚಾರಿತ್ರ್ಯ ಹೀಗೆ ಪ್ರಮುಖ ಕಾವ್ಯಗಳಲ್ಲಿ ಬಸವಣ್ಣನವರ ಜೊತೆಗೆ

ಕೂಡಲಸಂಗಮ ಮತ್ತು ಸಂಗಮನಾಥನ ಉಲ್ಲೇಖ ಬರುತ್ತದೆ. ಇವು ಕಾವ್ಯದ ಮೇರಗನ್ನು ಹೆಚ್ಚಿಸುವುದರ ಜೊತೆಗೆ ಸ್ಥಳದ ಮಹ್ವವನ್ನು ಸಹಿತ ತಿಳಿಸಿಕೊಡುತ್ತವೆ. ಕೂಡಲಸಂಗಮ ಪ್ರದೇಶದ ಸ್ಥಳವನ್ನು ಕುರಿತಂತೆ ಹಲವಾರು ಹಿನ್ನೆಲೆಯನ್ನು ಒಳಗೊಂಡಂತೆ ಚರ್ಚಿಸಿ ಸ್ಥಳದ ಮಹತ್ವ ಮತ್ತು ಆ ಅನ್ವರ್ಥಕತೆಯ ಹಿನ್ನೆಲೆಯ ಅಂಶಗಳನ್ನು ಚರ್ಚಿಸುತ್ತ ಅದನ್ನು ಪ್ರಾಕೃತಿಕ ಮತ್ತು ಭಾಷೆಯ ದೃಷ್ಟಿಯಿಂದ ಹೇಗೆ ಕೂಡುಕೊಂಡಿಯಾಗಿ ಪದಬಳಿಕೆಯಾಗಿದೆ ಎನ್ನುವ ಅಂಶಗಳನ್ನು ಅಧ್ಯಯನದಲ್ಲಿ ಬಿಂಬಿಸಲಾಗಿದೆ.

ಕೂಡಲಸಂಗಮ ಪ್ರಾಚೀನ ಕಾಲದಿಂದಲೂ ಹೆಸರುವಾಸಿಯಾಗಿದ್ದಂಥ ಧಾರ್ಮಿಕ ಕ್ಷೇತ್ರ. ಈ ಸಂಗತಿ ಎಲ್ಲರಿಗೂ ತಿಳಿದಿರುವಂಥದ್ದು. ಆಕರಗಳ ಮುಖೇನವಾಗಿ ಅದರ ಪ್ರಾಚೀನತೆಯನ್ನು ನೋಡಲು ಹೊರಟಾಗ ಹಲವಾರು ಲಿಖಿತ ಆಧಾರಗಳು ನಮಗೆ ಸಿಗುತ್ತವೆ. ಕಾವ್ಯ, ಪುರಾಣಗಳು ನಮಗೆ ಮೊದಲನೆಯ ಲಿಖಿತ ದಾಖಲೆಗಳಾಗಿರುತ್ತವೆ. ಇವುಗಳ ಜೊತೆಗೆ ಲಿಖಿತ ಆಕರಗಳಲ್ಲಿ ಶಾಸನಗಳು ಕಾವ್ಯ, ಪುರಾಣಗಳು, ವಚನಗಳು, ಗೆಜೆಟಿಯರ್‌ಗಳು ನೆರವಾಗುತ್ತವೆ. ಮೌಖಿಕ ಆಕರಗಳಲ್ಲಿ ಐತಿಹ್ಯ, ಜನವದಂತಿ, ಜನಪದ ಕಥೆ, ಹಾಡುಗಳು ಹೀಗೆ ಅನೇಕ ಇವೆ. ಇವುಗಳನ್ನು ಅನೇಕರು ತಮ್ಮ ಅನುಕೂಲಕ್ಕೆ ತಕ್ಕಂತೆ ಅಲ್ಪ ಬದಲಾವಣೆಯನ್ನು ಮಾಡಿರಬಹುದಾದರೂ ಅವುಗಳಲ್ಲಿನ ವಿಷಯ ವಸ್ತುಗಳು ಸದಾ ಸತ್ಯಶೀಲವಾಗಿರುತ್ತವೆ. ಇವುಗಳನ್ನು ನೆಚ್ಚಿಯೇ ಅನೇಕ ಸಂಶೋಧನೆಗಳು ನಡೆಯುತ್ತಿದ್ದು, ಇಲ್ಲಿನ ಪ್ರಸ್ತುತ ಅಧ್ಯಯನವು ನಡೆದಿದೆ. ಈ ಹಿನ್ನೆಲೆಯಲ್ಲಿ ಕೂಡಲಸಂಗಮ ಸ್ಥಳನಾಮ ಮಹಾತ್ಮೆಯನ್ನು ಕಾವ್ಯ, ಪುರಾಣ, ಶಾಸನಗಳಿಂದ ನಿರೂಪಿಸುವ ಪ್ರಯತ್ನವನ್ನು ಮಾಡಲಾಗಿದೆ.

ಬಸವಣ್ಣನವರ ಜೀವನದ ಮುಖ್ಯ ಘಟನೆಗಳಲ್ಲಿ ಒಂದೆಂದರೆ ಅವರ ಬಾಗೇವಾಡಿಯನ್ನು ತ್ಯಜಿಸಿದ ಪ್ರಸಂಗ, ಅದಕ್ಕೆ ಕಾರಣ ಉಪನಯನದ ವಿರುದ್ಧ ಸಿಡಿದೆದ್ದು ಎಂದು ಭೀಮ ಕವಿಯ ಬಸವಪುರಾಣ ಹೇಳುತ್ತದೆ. ಆದರೆ ಕಪ್ಪಡಿ ಸಂಗಮಕ್ಕೆ ಬರುವ ಪೂರ್ವದಲ್ಲಿ ಉಪನಯನವಾಗಿದ್ದಿತ್ತೆಂಬ ಸೂಚನೆ ಹರಿಹರನಲ್ಲಿ ಇದೆ. ಬಹುಶಃ ಅಗ್ರಹಾರದಲ್ಲಿ ಬ್ರಾಹ್ಮಣ ಸಮಾಜದೊಂದಿಗೆ ಹೊಂದಿಕೆಯಾಗದೆ ಅಲ್ಲಿಂದ ಹೊರಟಿರುವ ಸಾಧ್ಯತೆಯೂ ಇದೆ. ಆದರೆ ಈ ವಿಷಯದ ಬಗ್ಗೆ ಪುರಾಣ, ಕಾವ್ಯಗಳಲ್ಲಿ ಏಕರೂಪತೆ ಇಲ್ಲ. ಅನಂತರ ಬಸವಣ್ಣನವರು ಕಪ್ಪಡಿ ಸಂಗಮದಲ್ಲಿ ಈಶಾನ್ಯ ಗುರುಗಳ ರಕ್ಷೆಯಲ್ಲಿ ಇದ್ದಿರಬೇಕು. ಆದರೆ ಬಸವಣ್ಣನವರಿಗೆ ಲಿಂಗದೀಕ್ಷೆಯಾದ್ದು ಯಾರಿಂದ ಎಂಬ ಬಗ್ಗೆ ಸ್ಪಷ್ಟತೆ ಇದೆ. ಬಸವಪುರಾಣದಲ್ಲಿ ಜನ್ಮ ಕಾಲದಲ್ಲಿಯೇ ಲಿಂಗದೀಕ್ಷೆಯನ್ನು ಶಿವನೇ ಕೊಡುತ್ತಾನೆಂದು ಹೇಳಲಾಗಿದೆ. ಜಾತವೇದ ಮುನಿಗಳಿಂದ ಆಯಿತೆಂದು ಸಿಂಗಿರಾಜ ಪುರಾಣ ಹೇಳುತ್ತದೆ. ಬಸವಣ್ಣ ಮಂಗಳವಾಡಕ್ಕೆ ಹೋಗುವ ಮೊದಲು ನಂದಿಯಿಂದ ಲಿಂಗ ನೀಡಲ್ಪಟ್ಟಿತ್ತೆಂದು ಹರಿಹರ ನಿರೂಪಿಸುತ್ತಾನೆ. ಆದ್ದರಿಂದ ಈ ವಿಷಯದಲ್ಲಿ ಏಕಾಭಿಪ್ರಾಯವಿಲ್ಲ. ಇದರಿಂದಾಗಿ ಕಪ್ಪಡಿ ಸಂಗಮದಲ್ಲಿ ಬಸವಣ್ಣನಿಗೆ ಶಿವದೀಕ್ಷೆಯಾಯಿತ್ತೆಂದು ಭಾವಿಸಬಹುದೇ ಹೊರತು ಯಾರಿಂದ

ಎಂಬುದು ತಿಳಿಯುವುದಿಲ್ಲ. ಆದರೆ ಬಸವಣ್ಣನವರು ನಂತರದ ಕಾಲದಲ್ಲಿ ತಮ್ಮನ್ನು ಅನುಸರಿಸುವಂತಹ ಮತ್ತು ವಚನಗಳನ್ನು ಆದರ್ಶವಾಗಿಟ್ಟುಕೊಂಡು ಲಿಂಗದೀಕ್ಷೆಯನ್ನು ಪಡೆಯುವಂತಹ ಅನುಯಾಯಿಗಳನ್ನು ಹೊಂದಿದ್ದರೆಂಬುದು ಚೌಡಧಾನಪುರದ ಶಾಸನಗಳು ತಿಳಿಸುತ್ತವೆ.

ಕೂಡಲಸಂಗಮಕ್ಕೆ ಸಂಬಂಧಿಸಿದಂತೆ ಐತಿಹ್ಯಗಳನ್ನು ಹುಡುಕ ಹೊರಟಾಗ ಈ ಕ್ಷೇತ್ರದ ಸುತ್ತಮುತ್ತಲ ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತವೆ. ಸಂಗಮನಾಥ ದೇವರ ವಿಚಾರವಾಗಿ ಹೆಚ್ಚಿನ ಪ್ರಮಾಣದಲ್ಲಿ ಐತಿಹ್ಯಗಳಿವೆ. ಸಂಗಮನಾಥ ತೇರನ್ನು ಎಳೆಯು ಸಂದರ್ಭವನ್ನು ಕುರಿತಂತೆ ಮತ್ತು ಸಂಗಮನಾಥ ದೇವರ ಬಗ್ಗೆ ಇರುವಂಥ ಐತಿಹ್ಯಗಳೇ ಅಧಿಕವಾಗಿವೆ. ತೇರನ್ನು ಎಳೆಯುವ ಸಂದರ್ಭದಲ್ಲಿ ಒಂದೊಂದು ಊರಿನಿಂದಲೂ ಒಂದೊಂದು ವಸ್ತುಗಳನ್ನು ತರುವುದರ ಹಿಂದಿನ ಸ್ವಾರಸ್ಯಕರವಾದ ಐತಿಹ್ಯಗಳು ಮೂಡಿಬಂದಿರುವುದನ್ನು ಈ ಅಧ್ಯಯನದಿಂದ ತಿಳಿದುಕೊಳ್ಳಲಾಗಿದೆ.

ಕೂಡಲಸಂಗಮ ಕ್ಷೇತ್ರವು ಪ್ರಾಚೀನ ಕಾಲದಿಂದಲೂ ಧಾರ್ಮಿಕವಾಗಿ ಮಹತ್ವವನ್ನು ಪಡೆದುಕೊಂಡು ಬಂದಿರುವಂಥ ಕೇಂದ್ರವಾಗಿದೆ. ಕಾಲಕಾಲಕ್ಕೆ ಈ ಕೇಂದ್ರ ಧಾರ್ಮಿಕ ಆಚರಣೆಗಳಲ್ಲಿ ಭಿನ್ನತೆಯನ್ನು ಹೊಂದುತ್ತಾ ಬೇರೆ ಬೇರೆ ಪರಂಪರೆಗಳಿಂದ ಗುರುತಿಸಿಕೊಂಡಿದೆ. ಶಾಸನಗಳಲ್ಲಿ ತಿಳಿಯುವಂತೆ ಹತ್ತನೆಯ ಶತಮಾನದಲ್ಲಿ ಶಿವನ ಆರಾಧನೆಯ ಪ್ರಮುಖ ಶೈವ ಕೇಂದ್ರವಾಗಿ ಪ್ರಾಮುಖ್ಯತೆಯನ್ನು ಪಡೆದು ನಂತರದಲ್ಲಿ ಇಲ್ಲಿಯ ಆಚರಣೆಗಳು ನಾಥ ಸಂಪ್ರದಾಯಕ್ಕೆ ಒಳಪಟ್ಟಿತ್ತು ಎನ್ನುವುದನ್ನು ತಿಳಿಸುತ್ತದೆ. ಶೈವಧರ್ಮದ ಒಂದು ಭಾಗವಾದಂಥ ಕಾಪಾಲಿಕ ಮತ್ತು ಕಾಳಾಮುಖ ಕೇಂದ್ರವಾಗಿಯು ಇದು ಮಹತ್ವವನ್ನು ಪಡೆದಿತ್ತು ಎನ್ನಬಹುದು. ಕೂಡಲಸಂಗಮದ ಪ್ರಾಚೀನ ದೇವಾಲಯಗಳನ್ನು ಮತ್ತು ಇಲ್ಲಿಯ ಶಾಸನಗಳಿಂದ ತಿಳಿಯುವ ಮುಖ್ಯವಾದ ಅಂಶಗಳೆಂದರೆ ಈ ಕೇಂದ್ರ ಶೈವ ಮತ್ತು ನಾಥ ಸಂಪ್ರದಾಯ ಕೇಂದ್ರವಾಗಿ ಅಪಾರ ಪ್ರಮಾಣದ ಜನಾಕರ್ಷಣೀಯ ತಾಣವಾಗಿತ್ತು ಎನ್ನುವುದರಲ್ಲಿ ಸಂಶಯವಿಲ್ಲ. ಶರಣರ ಸ್ಥಳಗಳ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಾಗಿರುವುದನ್ನು ನೋಡಿದಾಗ ಕೂಡಲಸಂಗಮವು ನಾಥ ಸಂಪ್ರದಾಯ ಕೇಂದ್ರವಾಗಿತ್ತು ಎಂಬುವುದನ್ನು ಗಟ್ಟಿಗೊಳಿಸುತ್ತದೆ. ಬಸವಣ್ಣನವರು ಮತ್ತು ಅಲ್ಲಮಪ್ರಭು ಹಾಗೂ ಸಿದ್ಧರಾಮ ಶಿವಯೋಗಿಗಳ ಸ್ಥಳಗಳು ಸಹಿತ ನಾಥಪಂಥ ಕೇಂದ್ರಗಳ ಕುರುಹುಗಳನ್ನು ಹೊಂದಿದಂತೆ ಕೂಡಲಸಂಗಮವೂ ನಾಥಪಂಥಕ್ಕೆ ಸಂಬಂಧಿಸಿದ್ದು ಎಂದು ಹೇಳಬಹುದಾಗಿದೆ.

ಅಧ್ಯಯನದ ಫಲಿತಗಳು :

* ಕೂಡಲಸಂಗಮ ಕುರಿತ ಶಾಸನಗಳು ಸಾಹಿತ್ಯಿಕ ವಿವರಗಳು, ಕಾವ್ಯ-ಪುರಾಣಗಳ ಉಲ್ಲೇಖಗಳು, ಅದರಿಂದ ರಚಿಸಲ್ಪಟ್ಟ ಸಾಹಿತ್ಯವನ್ನು ಅವಲೋಕಿಸಿ ಚರ್ಚಿಸಲಾಗಿದೆ. ಈ ಕ್ಷೇತ್ರಕ್ಕೆ ಸಂಬಂಧಿಸಿದ ಸುಮಾರು ಐದು ಶಾಸನಗಳು, ಕಾವ್ಯ-ಪುರಾಣಗಳಾದ ಬಸವಪುರಾಣ, ಸಿಂಗಿರಾಜ ಪುರಾಣ, ಚನ್ನಬಸವ ಪುರಾಣ, ಗರಣೀಬಸವೇಶ್ವರ ಚಾರಿತ್ರ್ಯ, ಅಮಲಬಸನ ಚಾರಿತ್ರ್ಯ,

ಬಸವರಾಜದೇವರ ರಗಳೆ, ಚನ್ನಬಸವಣ್ಣನವರ ವಚನಗಳು, ಬಸವಣ್ಣನವರ ವಚನಗಳು, ಪ್ರಭುಲಿಂಗಲೀಲೆ, ಶಿವತತ್ವ ಚಿಂತಾಮಣಿ ಹೀಗೆ ಅನೇಕ ವೀರಶೈವ ಮತ್ತು ವೀರಶೈವೇತರ ಕಾವ್ಯಗಳು ಇನ್ನಿತರ ಪೂರಕವಾದ ಗ್ರಂಥಗಳ ಉಲ್ಲೇಖಗಳನ್ನು ಬಳಸಿಕೊಂಡು ವ್ಯವಸ್ಥಿತವಾದ ಅಧ್ಯಯನಕ್ಕೆ ಮಹತ್ವ ಕೊಡಲಾಗಿದೆ. ಕ್ಷೇತ್ರ ಕುರಿತು ಹೆಚ್ಚು ಮಹತ್ವ ಬೀರುವ ಕೃತಿಗಳು ಕಡಿಮೆ ಇವೆಯಾದರೂ ದೊರೆತ ಪ್ರಮುಖ ಆಕರಗಳ ಸಹಾಯದಿಂದ ಇಂತಹ ಒಂದು ಅಧ್ಯಯನದ ಪ್ರಯತ್ನವನ್ನು ಮಾಡಲಾಗಿದೆ.

* ಕೂಡಲಸಂಗಮದ ಆರಂಭಿಕ ನಾಮ ಮತ್ತು ಅದರಲ್ಲಿ ಕಾಲಕಾಲಕ್ಕೆ ಆದ ಬದಲಾವಣೆಯನ್ನು ಸವಿಸ್ತಾರವಾಗಿ ತಿಳಿಸಲಾಗಿದೆ. ಇಲ್ಲಿ ಬರುವ ಶಾಸನಗಳು, ವಚನಗಳು ಮತ್ತು ಕಾವ್ಯ-ಪುರಾಣಗಳನ್ನು ಸಂಪೂರ್ಣವಾಗಿ ಅಧ್ಯಯನಿಸಿ ಅದರಿಂದ ಬಂದ ಅನೇಕ ಫಲಿತಗಳನ್ನು ಪರಾಮರ್ಶಿಸಲಾಗಿದೆ. ಮತ್ತು ಮೌಖಿಕ ದಾಖಲೆಗಳಲ್ಲಿ ಸೂಕ್ತವಾದುದನ್ನು ಆಯ್ದುಕೊಂಡು ತಿಳಿಸಲಾಗಿದೆ. ಐತಿಹ್ಯಗಳು, ವದಂತಿಗಳು ಆಯಾ ಕಾಲಕ್ಕೆ ಬದಲಾವಣೆಗೊಳ್ಳುತ್ತಿದ್ದರೂ ಇಂದಿಗೂ ಉಳಿದು ಬಂದ ನಂಬಲಾರ್ಹವಾದ ಅಂಶಗಳನ್ನು ಇಲ್ಲಿ ತಿಳಿಸಲಾಗಿದೆ. ಜನಪದರ ಕಥೆಗಳು ಧಾರ್ಮಿಕ ಭಾವನೆಗಳಿಂದ ಕೂಡಿ ತಮ್ಮಲ್ಲಿನ ವಿಶೇಷತೆಗಳನ್ನು ಅದಕ್ಕೆ ತಳುಕು ಹಾಕಿದ್ದರೂ ಸ್ಥಳನಾಮದ ದೃಷ್ಟಿಯಿಂದ ಸೂಕ್ತವಾದುದನ್ನು ಇಲ್ಲಿ ತಿಳಿಸಲಾಗಿದೆ.

* ಪ್ರಮುಖವಾಗಿ ದೇವಾಲಯಗಳು, ಅವುಗಳ ಇತಿಸ್ಥಿತಿಗಳ ನಿರ್ಮಾಣ, ದಾನ-ದತ್ತಿ, ಅಲ್ಲಿನ ವೈಶಿಷ್ಟ್ಯ ಮತ್ತು ನಾಡಿನೊಂದಿಗೆ ಗುರುತಿಸಿಕೊಂಡ ಬಗೆಯನ್ನು ಇಲ್ಲಿ ಪರಾಮರ್ಶಿಸಲಾಗಿದೆ. ಮೂರ್ತಿಗಳನ್ನು ಶಿಲ್ಪಕಲೆಯ ಹಿನ್ನೆಲೆಯಲ್ಲಿ ಮೂಡಿಬಂದ ಬಗೆ ಮತ್ತು ಧಾರ್ಮಿಕವಾಗಿ ಬದಲಾವಣೆಗೊಳಪಟ್ಟ ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದ್ದು, ಅವುಗಳನ್ನು ನಾಡಿನ ಅನೇಕ ಧಾರ್ಮಿಕ ಅಂಶಗಳೊಂದಿಗೆ ಮತ್ತು ಮತದೊಂದಿಗೆ ಹೋಲಿಸಿ ವಿಷದಪಡಿಸಲಾಗಿದೆ. ಮತ-ಮಂದಿರಗಳ ಹುಟ್ಟು-ಬೆಳವಣಿಗೆ, ಶೈವ-ವೀರಶೈವದೊಂದಿಗಿನ ನಂಟನ್ನು ಚರ್ಚಿಸಲಾಗಿದೆ. ಅವುಗಳು ನಾಡಿಗೆ ಎಷ್ಟರ ಮಟ್ಟಿಗೆ ಪೂರಕವಾಗಿವೆ ಎಂಬುವುದನ್ನು ಮತ್ತು ಆ ಮಠದಲ್ಲಿನ ವಿಧಿ-ವಿಧಾನಗಳನ್ನು, ಅಲ್ಲಿನ ಸ್ವಾಮಿಗಳನ್ನು ಹೇಳಲಾಗಿದೆ. ಒಟ್ಟಾರೆಯಾದ ಆಚರಣೆಗಳೊಂದಿಗೆ ಹಬ್ಬ-ಹರಿದಿನಗಳು, ಜಾತ್ರೆಗಳನ್ನು ಬಹು ಸೂಕ್ತವಾಗಿ ಮತ್ತು ಸೂಕ್ಷ್ಮವಾಗಿ ಇಲ್ಲಿ ಚರ್ಚಿಸಲಾಗಿದೆ. ಕಾಲದಿಂದ ಕಾಲಕ್ಕಾದ ಬದಲಾವಣೆಯನ್ನು ಮತ್ತು ಅವುಗಳು ಗಳಿಸಿ-ಉಳಿಸಿದ ಸಂಸ್ಕೃತಿಯನ್ನು ಈ ಮೂಲಕ ತಿಳಿಸಲಾಗಿದೆ.

* ಯಾವುದೇ ಕ್ಷೇತ್ರಗಳು ಒಂದು ಪುರಾತನವಾದ ಸಂಸ್ಕೃತಿಯ ನೆಲೆಗಟ್ಟಿನಲ್ಲಿ ತನ್ನನ್ನು ಗುರುತಿಸಿಕೊಂಡು ಉಳಿದು ಬೆಳೆದಿರುತ್ತದೆ. ಆ ಮೂಲಕ ನಾಥ ಸಂಪ್ರದಾಯದ ಉಗಮ ವಿಕಾಸವನ್ನು ಅಲ್ಲಿ ಅದು ಕಂಡುಕೊಂಡ ನೆಲೆ-ಬೆಲೆಯನ್ನು ಚರ್ಚಿಸಲಾಗಿದೆ. ಕೂಡಲಸಂಗಮವೂ ಈ ನಾಥ ಸಂಪ್ರದಾಯದೊಂದಿಗೆ ಬೆಳೆದ ಬಗೆಯನ್ನು ಸೂಕ್ತವಾಗಿ ಪರಾಮರ್ಶಿಸಲಾಗಿದೆ.

ಒಂದು ಸಂಪ್ರದಾಯದಿಂದ ಮುಂದಿನ ಬೆಳವಣಿಗೆಗಳು ಪ್ರಭಾವಕ್ಕೊಳಗಾದ ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದೆ. ಅಲ್ಲದೆ ಶೈವ ಮತ್ತು ವೀರಶೈವಕ್ಕೆ ಇದು ಕೊಟ್ಟ ಕೊಡುಗೆಯನ್ನು, ಬೆಳೆಸಿದ ಬಗೆಯನ್ನು ಇಲ್ಲಿ ಕೂಲಂಕಷವಾಗಿ ಚರ್ಚಿಸಲಾಗಿದೆ.

* ಕೂಡಲಸಂಗಮಕ್ಕೆ ದಕ್ಕಿದ ಪ್ರಶಸ್ತ್ಯವನ್ನು ಪರಿಗಣಿಸಿ ಸರ್ಕಾರ ಇನ್ನಿತರ ಅಭಿವೃದ್ಧಿಗಾಗಿ ಮಾಡಿದ ಪ್ರಾಧಿಕಾರದಂತಹ ಸಂಸ್ಥೆಗಳನ್ನು ಮತ್ತು ಅವುಗಳ ಕಾರ್ಯವೈಖರಿಗಳನ್ನು ಇಲ್ಲಿ ತಿಳಿಸಲಾಗಿದೆ. ಅವುಗಳಿಂದಾದ ಬದಲಾವಣೆಯಿಂದ ಪ್ರಸ್ತುತದಲ್ಲಿ ಅದು ಪ್ರಾವಾಸಿ ಕೇಂದ್ರವಾದ ಬಗೆಯನ್ನು ಹೇಳಲಾಗಿದೆ. ಅಭಿವೃದ್ಧಿ ಮಂಡಳಿಯ ಬೇಕು-ಬೇಡಗಳು, ಅದರ ನಿರ್ಮಾಣದ ಅವಶ್ಯಕತೆ, ಅದು ಇಲ್ಲಿಯವರೆಗೆ ಕೈಗೊಂಡ ಕಾರ್ಯಗಳ ಯಾದಿ ಹೀಗೆ ಅನೇಕ ಬಗೆಯ ವಿಚಾರಗಳನ್ನು ಚರ್ಚಿಸಲಾಗಿದೆ.

* ಕನ್ನಡ ವಿಶ್ವವಿದ್ಯಾಲಯ, ಹಂಪಿ ಮತ್ತು ಕೂಡಲಸಂಗಮದಲ್ಲಿರುವ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರವನ್ನು ಸ್ಥಾಪಿಸಿದ್ದು, ವಚನ ಸಾಹಿತ್ಯವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವುದಕ್ಕೊಸ್ಕರ ಸಂಶೋಧನೆಗಳನ್ನು ಮಾಡಲಾಗುತ್ತದೆ. ಇಲ್ಲಿ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಸಂಶೋಧನೆಗಳು ಹಾಗೂ ವಚನ ಸಾಹಿತ್ಯದ ಅನೇಕ ಆಯಾಮಗಳನ್ನು ಚರ್ಚಿಸಲಾಗಿದೆ. ಈ ಕುರಿತಾಗಿ ಇಂದಿನ ಕಳೆದು ಹೋದ ಅನೇಕಾನೇಕ ವಸ್ತು ವಿಚಾರಗಳನ್ನು ಮರಳಿ ಪಡೆಯುವಲ್ಲಿ ಸಹಕಾರಿಯಾಗಿದೆ. ಇದು ಪ್ರಸ್ತುತ ಕೂಡಲಸಂಗಮದ ಎಲ್ಲ ಭಾವ-ವಿಭಾವಗಳನ್ನು ತಿಳಿಯಲಾಗಿದೆ.

* ಕೂಡಲಸಂಗಮ ಕ್ಷೇತ್ರವು ಪ್ರಾಚೀನ ಕಾಲದಲ್ಲಿ ಶೈವ ಶಾಖೆಯಾಗಿದ್ದು, ಕಾಲಾಂತರದಲ್ಲಿ ವಿವಿಧ ಧರ್ಮ-ವರ್ಗಗಳ ಪವಿತ್ರ ಸ್ಥಳವಾಗಿ ರೂಪಗೊಂಡಿರುವುದನ್ನು ಕಾಣುತ್ತೇವೆ. ಯಾವುದೇ ಒಂದು ಪ್ರದೇಶ, ದೇವಸ್ಥಾನ, ಧಾರ್ಮಿಕ ಕೇಂದ್ರಗಳು ಒಬ್ಬರ ಸೊತ್ತಾಗದೆ ರಾಜಕೀಯ ಸ್ಥಿತ್ಯಂತರಗಳಿಂದ ಬದಲಾವಣೆಗೊಂಡು ವಿವಿಧ ಕಾಲಘಟ್ಟದಲ್ಲಿ ಪರಿವರ್ತನೆಗೊಂಡಿರುವುದನ್ನು ಗಮನಿಸಬೇಕಾದ ಸಂಗತಿ.

* ಕೂಡಲಸಂಗಮ ಸ್ಥಾನದ ಸಮಗ್ರ ಸಾಂಸ್ಕೃತಿಕ, ಚಾರಿತ್ರಿಕ ಅಧ್ಯಯನಗಳಿಂದ ಬಸವಣ್ಣನವರ ವ್ಯಕ್ತಿತ್ವ ವಿಕಸನದ ಪರಿವರ್ತನೆಯ ಪವಾಡ ಸಾದೃಶ್ಯದ ಕ್ಷೇತ್ರವಾಗಿದ್ದು, ಇಂತಹ ಪವಿತ್ರ ಸ್ಥಾನ ಕನ್ನಡಿಗರ ಕಲಾವೈಭವ ಮತ್ತು ಪ್ರಾಚೀನ ಕಾಲದ ವಾಸ್ತುಶಿಲ್ಪ ಪರಾಕಾಷ್ಠತೆಯ ಪ್ರತೀಕವೆಂಬುವುದನ್ನು ಮನಗಾಣಬೇಕಾಗಿರುವುದು ಎಲ್ಲರ ಕರ್ತವ್ಯವಾಗಿದೆ.

* ಕೂಡಲಸಂಗಮ ಕ್ಷೇತ್ರವು ಕರ್ನಾಟಕದಲ್ಲಿ ಅಷ್ಟೇ ಅಲ್ಲ ಇಡೀ ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿಯೇ ಪ್ರಸಿದ್ಧವಾದ ಧಾರ್ಮಿಕ ಮತ್ತು ವಿದ್ಯಾ ಕೇಂದ್ರವಾಗಿದೆ. ಕೃಷ್ಣಾ ಮತ್ತು ಮಲ್ಲಪ್ರಭಾ ನದಿಗಳ ಸಂಗಮದ ಸಮ್ಮುಖದಲ್ಲಿರುವ ಸಂಗಮೇಶ್ವರ ಲಿಂಗ ಕೇವಲ ಭಾವುಕರನ್ನು

ಮಾತ್ರವಲ್ಲ ತನ್ನ ಸುತ್ತಲಿನ ಪ್ರಕೃತಿ ಪರಿಸರದಿಂದ ನಿರಂತರವಾಗಿ ಹರಿದು ಬಂದ ಸಂಸ್ಕೃತಿಕ ಪ್ರತಿಭೆಯಿಂದ ವಿಚಾವಂತರನ್ನು, ಆಚಾರ ನಿಷ್ಠರನ್ನು ಆಕರ್ಷಿಸುತ್ತ ಬಂದಿದೆ. ಹನ್ನೆರಡನೆಯ ಶತಮಾನದಿಂದ ಪ್ರಸಿದ್ಧ ಶೈವ ಯಾತ್ರಾ ಸ್ಥಳವಾಗಿದ್ದು, ಕೂಡಲಸಂಗಮದ ಸಂಗಮೇಶ್ವರ ದೇವಾಲಯ ಮತ್ತು ಐಕ್ಯಮಂಟಪ ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಜಲಾಶಯದ ಹಿನ್ನೀರಿನಲ್ಲಿ ಮುಳುಗಲಿದ್ದವು. ದೇವಾಲಯವನ್ನು ಮೂಲ ಸ್ಥಳದಿಂದ ಕಿತ್ತು ಬೇರೆಕಡೆ ಕಟ್ಟುವ ಪ್ರಯತ್ನಕ್ಕೆ ರಾಜ್ಯವ್ಯಾಪಿ ವಿರೋಧ ಕಂಡುಬಂತು. ಆ ಸಮಸ್ಯೆಗೆ ಪರಿಹಾರ ಸೂಚಿಸಲು ಮುದ್ನಾಳ ಸಮಿತಿಯು ಸಂಗಮೇಶ್ವರ ದೇವಾಲಯವನ್ನು ಇದ್ದ ಸ್ಥಳದಲ್ಲಿಯೇ ಉಳಿಸಬೇಕು ಮತ್ತು ಸಂಗಮವನ್ನು ಅಂತಾರಾಷ್ಟ್ರೀಯ ಪ್ರಸಿದ್ಧ ಸ್ಥಳವಾಗಿ ಅಭಿವೃದ್ಧಿಪಡಿಸಬೇಕೆಂದು ಸಲಹೆ ನೀಡಿತು. ಸಮಿತಿಯ ಸಲಹೆಗಳನ್ನು ಒಪ್ಪಿ ಅವುಗಳನ್ನು ಈಡೇರಿಸಲು ರಚಿಸಲ್ಪಟ್ಟ ಒಂದು ವಿಶೇಷ ಕಾಯ್ದೆಯಡಿ ರೂಪಿಸಿಕೊಂಡ ಮಂಡಳಿಯೇ ಕೂಡಲಸಂಗಮ ಅಭಿವೃದ್ಧಿ ಮಂಡಳಿ. ಇದು ತನ್ನದೇ ಆದ ಕಾರ್ಯ ತತ್ಪರತೆಯನ್ನು ಹೊಂದಿದ್ದು, ಇದರ ಉದ್ದೇಶ ಮತ್ತು ವೈಖರಿಗಳನ್ನು ಅಧ್ಯಯನದ ಮೂಲಕ ತೋರಿಸಿಕೊಟ್ಟಿದ್ದು ಅಧ್ಯಯನದ ಫಲಿತಗಳಲ್ಲೊಂದಾಗಿದೆ.

ಅನುಬಂಧಗಳು

೧. ಶಾಸನಗಳು

೨. ಹಾಡುಗಳು

೩. ವಕ್ತೃವಿವರ

೪. ಛಾಯಾಚಿತ್ರಗಳು

೫. ಪರಾಮರ್ಶನ ಗ್ರಂಥಗಳು

೧. ಶಾಸನಗಳು

ಸಂಗಮೇಶ್ವರ ದೇವಾಲಯದ ಕಂಬದ ಮೇಲೆ

ತ್ರುಟಿತ ಶಾಸನೋಕ್ತ ಕಾಲವು ಸಿಂಹಣದೇವ ವರ್ಷ ೧೪, ಶ್ರೀಮುಖ, ಬ೨, ಆದಿವಾರವೆಂದಿದ್ದು ಇದು ಕ್ರಿ.ಶ. ೪-೮-೧೨೧೩ಕ್ಕೆ ಸರಿಹೊಂದುತ್ತದೆ.

ಮಲಹಾರಿ ತೀರದಲ್ಲಿ ಆಚೇಶ್ವರದೇವರಿಗಾಗಿ ಹೂದೋಟ, ಧೂಪಕ್ಕೆಂದು ದೇವರಾಸಿಜೀಯನಿಗೆ ಚುಂಚನಾದಿಸೆಟ್ಟಿ ಎಂಬುವವನು ದಾನ ನೀಡಿದಂತೆ ತಿಳಿಸುತ್ತದೆ. ದೇವರಿಗೆ ಸಾಸಿರ್ಬ್ಬರು (ಮಹಾಜನರು) ಎಲೆ ಹೇರಿಗೆ ೫೦ ಎಲೆ, ಹೊರಗೆ ೨೫ ಎಲೆಯನ್ನು ಧರ್ಮವಾಗಿ ಬಿಟ್ಟಿರುತ್ತಾರೆ. ಅರವತ್ತೊಕ್ಕಲು ಪ್ರತಿವರ್ಷ ಒಕ್ಕಲಿಗೆ ಒಂದು ಹಾಗದಂತೆ ಬಿಟ್ಟರು. ಆಚೇಶ್ವರದೇವರನ್ನು ಈ ಶಾಸನದಲ್ಲಿ 'ಸಂಗ ಮಹೇಶ' ಎಂದು ಕರೆಯಲಾಗಿದೆ.

೧. ....ಯಾ

೨. ದವ ನಾರಾಣ

೩. ಭುಜಭಳಚಕ್ರವರ್ತಿ ಸಿಂಹ

೪. ಣದೇವ ವರ್ಷದ ೧೪ನೆಯ ಶ್ರೀಮು

೫. ಖ ಸಂವತ್ಸರದ ಶ್ರಾವಣ ಬ ೨ ಆದಿವಾ

೬. (ರದನ್ನು) ಶ್ರೀಮದಾಚೇಸ್ವರದೇವರ ಹೂ

೭. ದೋಟಕ್ಕೆ (ಧೂ)ಪಕಂ ದೇವರಾಸಿಜೀ

೮. .... ಮಲಹಾರಿ ತೀರದೊಳ್ ತಾ ನೆಲಸಿದ್ದಾ

೯. ಚೇಶ್ವರಂ ಮಹೋತ್ಸವದಿಂದಂ ತೊಲ

೧೦. ಗದೆ ಭಕ್ತರ್ಗ್ಗೆಲ್ಲಂ ಸಲೆ ಕುಡು(ತೆ)

೧೧. ಸದಿರ್ಕ್ಕೆ ದೀರ್ಘಮಾಯುಂ ಶ್ರೀ

೧೨. (ಯುಮಂ) ಪರಮ ಗುರುವೆನಿವ

೧೩. ....ಪುತ್ರಂ (ಚುಂಚಿ) ನಾದಿಸೆಟ್ಟಿ

೧೪. ......(ದ)ಯೆಯಿಂ ಪರಮೈಶ್ವ(ರ್ಯ)

೧೫. ಮನಿತ್ತು ಪರಿರಕ್ಷಿಸುತಿರ್ಪ್ಪನಕ್ಕೆ

೧೬. ಸಂಗಮಹೇಶಂ.....

೧೭. ದೇವರಿಗೆ ಸಾಸಿರ್ಬ್ಬರು ಬಿಟ್ಟೆಲೆಯಾ

೧೮. ಯ ಹೇಱಿಂಗೆ ೫೦ ಪೊಱಿಗೆ ೨(೫)

೧೯. ದೇವರಿಗೆಱುವತ್ತೊಕ್ಕಲಾರಂಭದೊ

೨೦. ಕ್ಕಲಲು ವರಿಷಂಪ್ರತಿ ಪಾಗದ

೨೧. ಲೆಕ್ಕದಿಂ ಕೊಟ್ಟು ಬಿಟ್ಟರು ಶೋಕ

೨೨. ಸ್ವ(ದ)ತ್ತಂ ವರದತ್ತಂ ವಾ ಯೋ ಹರೇ

೨೩. ತಿ ವಸುಂಧರಾ(೦) ಷಷ್ಟಿರ್ವ್ವರುಷ

೨೪. ಸಹಪ್ರಾಣಿ ವಿಷಾಯಾಂ ಜಾ

೨೫. ಯತೇ ಕ್ರಿಮೀ

೨೬. ಶ್ರೀ ಚ(೦)ದ್ರಾರ್ಕ್ಕತಾರಂ

೨೭. ಬರಂ ಆರಯ್ದು

೨೮. ಬೆಸಕೆಯ್ದು ನ

೨೯. ಡುಸವರು

೨. ಅದೇ ದೇವಾಲಯದ ಒಳಗಡೆ ಇಟ್ಟಿರುವ ಕಲ್ಲಿನ ಮೇಲೆ

ತ್ರುಟಿತ ಶಾಸನೋಕ್ತ ಕಾಲವು ಚಾಲುಕ್ಯ ವಿಕ್ರಮ ವರ್ಷ ೮೪, ಪ್ರ(ಮಾದಿ), ಕಾರ್ತಿಕ, ಶುಶಿ, ಆದಿವಾರವಾಗಿದ್ದು ಇದು ಕ್ರಿ.ಶ. ೧೮-೧೦.೧೧೬೦ಕ್ಕೆ ಸಮನಾಗುತ್ತದೆ.

ಸರ್ವಸಮಸ್ಯದ ಅಗ್ರಹಾರವಾದ ಕೂಡಲ ಕಪ್ಪಡಿ ಸಂಗಮದ ಮಹಾಜನಗಳ ಕಾರುಣ್ಯದಿಂದ ಚುಂಚಿನಾದಿಸೆಟ್ಟಿ ಹಾಗೂ ಅರುವತ್ತೊಕ್ಕಲು ಕಾಳೇಶ್ವರ ಮತ್ತು ಆಚೇಶ್ವರ ದೇವರಿಗೆ ಕಲಾ ೧೨ ಮತ್ತರು ಭೂಮಿ ನೀಡುತ್ತಾರೆ. ಅರುವತ್ತೊಕ್ಕಲು ಮತ್ತು ಎಲ್ಲಾ ಗಾಣಿಗರು ಸೇರಿ ಗಾಣವನ್ನು ಬಿಡುತ್ತಾರೆ. ಇದಲ್ಲದೆ ಹೂವಿನತೋಟ, ಅಂಗಡಿ, ಒಂದು ಗಾಣವನ್ನು ಬಿಟ್ಟು ಇವುಗಳನ್ನು ಮಹಾಜನರು ನಡೆಸಬೇಕೆಂದು ಹೇಳಿದೆ. ಮಹಾಜನರನ್ನು 'ಸಂಗಮೇಶ್ವರ ದೇವರ ವರಪ್ರಸಾದ'ರೆಂದು ಕರೆಯಲಾಗಿದೆ.

೧. ....ಸ್ವಸ್ತಿ ಶ್ರೀಮಚ್ಚಾಳುಕ್ಯ ವಿಕ್ರಮವರಿಷದ ೮೪ ನೆಯ (ಪ್ರ)....

೨. ರದ ಕಾರ್ತಿಕ ಶುದ್ಧ ೫ ಆದಿತ್ಯವಾರದಂದು ಸ್ವಸ್ತಿ ಯಮ....

೩. ಮ ಧ್ಯಾನಧಾರಣ ಮೌನಾನುಷ್ಠಾನ ಜಪಸ(ಮಾಧಿ)....

೪. ಸಂಪನ್ನರುಂ ಶ್ರೀ ಸಂಗಮೇಶ್ವರದೇವ ಲಬ್ಧವರಪ್ರ....

೫. ಮಚಕ್ರವರ್ತಿಗಳಾದಿ ಬ್ರಹ್ಮಪುರಿಯಪ್ಪ ಸರ್ವ್ವನಮು....

೬. ಗ್ರಹಾರಂ ಕೂಡಲ ಕಪ್ಪಡಿ ಸಂಗಮದ ಶ್ರೀಮನ್ಮೂ....

೭. ಹಾಜನಂಗಳ ಪರಮ ಕಾರುಣ್ಯ ಪ್ರಸಾದದಿಂದಂ ಸಮಸ್ತ ಗುಣ....

೮. ಚುಂಚಿನಾದಿಸೆಟ್ಟಿ ಶ್ರೀ ಕಾಳೇಶ್ವರದೇವರಿಗರುವಣಕ್ಕೆ....

೯. ಕೆಯಿ ಕೊಕ್ಕಿಗೆಱೆಯಿಂ ಬಡಗಣ ಮುತ್ತರು ಹನ್ನೆ....

೧೦. ಶ್ರೀಮದಾಚೇಶ್ವರದೇವರಿಗೆ ಹೂವಿನೂರ ದಾರಿಯ....

೧೧. ನಸಿಯು ಬಟ್ಟೆಯಿಂ ಬಡಗಣ ಗಱೆಗೆಯ್ಯ ಸ್ಥಳ....

೧೨. ಯರುವಣಕ್ಕೆ ಬರಸಿ ಬಿಟ್ಟ ಮತ್ತರು ಹ....

೧೩. ಡು ೧೨ ಆ (ಱುವ)ತ್ತೊಕ್ಕಲು ಮುಕ್ಯವಾಗಿ ಸಮಸ್ತ ತೆ(ಲ್ಲಿ)....

೧೪. .....ರೆದು ಚೇಸ್ವರಗೆ ಗಾಣದಲು....

೧೫. ಮತ್ತವಿರ್ಬ್ಬರು ದೇವರಿಗಂ ಸಮುದಿತವಾಗಿ ಮಾಡಿಸಿ ಕೊಟ್ಟು ಬಿಟ್ಟ ಮ(ತ್ತ)....

೧೬. ಹೂವಿನ ತೋಟ ೧ ಅಂಗಡಿ ಗಾಣ ೧ ಯಿಂತಿನಿತುಂ ಶ್ರೀಮನ್ಮಹಾ (ಜ)

೧೭. ನಂಗಳ ಧರ್ಮ್ಮಂ ಚಂದಾರ್ಕ್ಕ ತಾರಂಬರಂ ಪತಿಪಾಳಿಸುವರು.....ಅನುಪಮ

೧೮. ವಿದ್ವಜ್ಜನ ವಿನುತರ್ಸ್ಸ(ಕ)ಲಶಾಸ್ತ್ರವಿದರೆನಿಪ ಮಹಾಜನಮಂ ಕಾಳೇಸ್ವರನೀವನನುದಿನ

೧೯. ರಕ್ಷಿಸುವ ಪೆರ್ಮ್ಯ ತಾಂ ಜಗವಿದಿತ ಧರೆಯೊಳ್ ಪೂಜ್ಯರೆನಿಪ್ಪ ಸಂಗ

೨೦. ಮದ ಭೂದೇವಾಗ್ರಗಣ್ಯರ್ಗ್ಗೆ ವಿಸ್ತರದಿಂ ಭಾಸುರ ಸಾಂದ್ರ ಚಂದ್ರರುಚಿ

೨೦. ಯಂ ತಾಙ್ದ್ಬಿ ಸತ್ಕೀರ್ತ್ತಿಯಿಂ...ದೆಯ್ವಂ ಶಿವ ಶಂಭು ರುದ್ರನೆನಿಸಿರ್ದ್ದಾಚೇಸ್ವರಂ
ಕೂರ್ತು

೨೨. ತಾಂ ಪರಮೋತ್ಸಾಹದಿನೀಗೆ ಮಂಗಳಮಹಾಶ್ರೀಯಂ ಜಯಶ್ರೀಯು

೨೩. ಮಂ ಮಹಹಾರೀ ತೀರ್ತ್ಥದೊಳ್ ತಾ ನೆಲಸಿರ್ದ್ದಾಚೇಸ್ವರಂ ಮಹೋತ್ಸವದಿಂದಂ

೨೪. ಸೊಲಗೆಣ್ಣೆಯ ಬಿಟ್ಟರು ಚಂದ್ರಾದಿತ್ಯ

೨೫. .....ರುಳಳ ನಡೆಸುವರು

೩. ಅದೇ ದೇವಾಲಯದ ಗೋಡೆಗೆ ಸೇರಿಸಿರುವ ಕಲ್ಲುತುಂಡಿನ ಮೇಲೆ

ತ್ರುಟಿತ ಶಾಸನೋಕ್ತ ಕಾಲವು ಚಾಲುಕ್ಯ ವಿಕ್ರಮ ವರ್ಷ ೮೩, ಬಹುಧಾನ್ಯ (ಶ್ರಾ)ವಣ, ಶು೧೧ ಬ್ರಹಸ್ಪತಿವಾರವೆಂದಿದ್ದು ಇದು ಕ್ರಿ.ಶ. ೭-೮-೧೧೫೮ಕ್ಕೆ ಸಮನಾಗುತ್ತದೆ. ಶಾಸನದ ಉಳಿದ ಭಾಗ ಇಲ್ಲ.

೧. ಸ್ವಸ್ತಿ ಶ್ರೀಮಚ್ಚಾಳುಕ್ಯ ವಿಕ್ರಮ....

೨. (೮೩)ನೆಯ ಬಹುಧ್ಯಾನ್ಯ ಸಂವತ್ಸ....

೩. ವಣ ಶುದ್ಧ ೧೧ ಬ್ರಿಹಸ್ಪತಿವಾ

ಮುಂದಿನ ಉಳಿದ ಭಾಗ ಒಡೆದಿದೆ.

೧. ಪ್ರಾರ್ಥನೆ

ಜಯ ಜಯ ಕೂಡಲಸಂಗಮದೇವನೆ ಜಯ ಭಯ ಪರಿಹರನೆ
ಜಯ ಜಯ ಸರ್ವಾಘೌಘವಿನಾಶನೆ ಜಯ ಮಂಗಳ ಮಯನೆ ॥೧॥

ಜಯ ಜಯ ನಿಗಮಾಗಮ ಸಂಸ್ತುತ್ಯನೆ ಜಯ ಮೃತ್ಯಂಜಯನೆ
ಜಯ ಜಯ ಭಸಿತೋದ್ಧೂಳಿತಗಾತ್ರನೆ ಜಯ ಶಮನಾಂತಕನೆ ॥೨॥

ಜಯ ಜಯ ಸಕಲಾಮಯ ಘನವೈದ್ಯನೆ ಜಯ ವಿಧುಶೇಖರನೆ
ಜಯ ಜಯ ಶುಭವರದಾಭಯ ಹಸ್ತನೆ ಜಯ ಫಣಿಭೂಷಣನೆ ॥೩॥

ಜಯ ಶಿಲಕಂಠನೆ ನಿನ್ನೊಡಗೊದಗಲ್ಕೀ ಹೊಳೆಯೊಳು ಜಲವು
ಮಯಮಾಗಿಹುದಡ್ಡಗಿಸಿಹುದಿದನುಂ ದಾಟಲ್ಕಸದಳವು ॥೪॥

ಅನಘನೆ ನಿನ್ನ ಪದಾಂಬುಜ ದರುಶನ ಕಾತರದೊಳುಬಂದೆ
ಎನಗೀಪರಿಯಡರಡರಿತು ಗತಿಯೇನಿಸಿದಕೀಗಲು ಮುಂದೆ ॥೫॥

ಯಾರಿಹರಿದನು ನಿವಾರಿಪಕರ್ತನು ನೀನಲ್ಲದೆ ಗುರುವೆ
ಪಾರವನ್ನೈದಿಸಿ ಕರುಣದಿ ಪಾಲಿಸು ಮತ್ಸು ಮನಸ ತರುವೆ ॥೬॥

ಎನುತಲಿ ಬಲುಬಗೆಯಿಂದಲೆ ಭಕ್ತಿಯೊಳಂ ಶಿವಮೂರ್ತಿಯನು
ವಿನಯದಿ ಪ್ರಾರ್ಥಿಸಲದಕೊಲಿದವನನು ಚಂದದಿ ಸಲುಹಿದನು ॥೭॥

೨. ಜಾತ್ರೆಯ ಪದ

ಸುತ್ತ ದೇಶದೊಳು। ಉತ್ತಮ ಸಂಗಣ್ಣನ।
ಜಾತ್ರೆಯ ನೋಡುನು ಬಾ।
ಜಾಣರೆಲ್ಲರು ಕೂಡೂಣ ಬಾ।
ಶಿವಶಿವ ಅನ್ನುತ ಹೋಗುನು . ಬಾ ಬಾ ॥ಪ॥
ದವನದ ಹುಣ್ಣಿವೆ ದವನವ ನೋಡು।
ಹುಣ್ಣುವಿ ಆದ ಐದು ದಿವಸಕ್ಕೆ ತೇರು।
ಕೃಷ್ಣ ಮಲಪ್ರಭಾ ಹರಿಯುವುದು ಜೋರು।
ಜಳಕವ ಮಾಡಿ ಜಳಜಳವಾಗಿ। ಗಂಟಾ ನಾದದೊಳು
ಘನಘನವಾಗಿ ಲಿಂಗವ ನೋಡೂನು ಬಾ।
ಸಂಗಣ್ಣನ ಮಹಿಮವ ತೋರುವ ಬಾ।
ಲಿಂಗದ ಸಂಗದೊಳಾಡೂನು ಬಾ ಬಾ ॥೧॥

ಕಳಸ ಕನ್ನಡಿ ಪಾತರಮ್ಯಾಳಾ।
ಸನಾದಿ ಸಂಬಳಾ ಹಾಕ್ಯಾವೋ ತಾಳಾ।
ನಂದಿಕೋಲಿನ ನಡುವ ಸಮ್ಮೆಳನದಿ।
ನಲಿಯುತ್ತಾ ಕುಣಿಯುತ ಪುರವಂತರ ಮ್ಯಾಳಾ।
ಪಾಲ್ಕಿ ಹೊರುವದಕ್ಕೆ ಕೊಟ್ಟಾರ। ತೋಳಾ।
ಛತ್ರಿಯ ಹಿಡಿಯುನು ಬಾ। ಮ್ಯಾಲೆ।
ಚೌರವ ಬೀಸೂನು ಬಾ। ಸಡಗರದಿಂದಲಿ ಹೋಗುನು ಬಾ ಬಾ ॥೨॥

ಬಾಗಲಕೋಟೆಯಿಂದಾ ಬಂದಿತು ಕಳಸಾ।
ನೋಡುತ ಎಲ್ಲರೂ ನಿಂತಾರೊ ಸೊಗಸಾ
ಬಿಚ್ಚ ಗತ್ತಿ ಮೆರವಣಿಗೆಯೂ ತಾಸು।
ಗರಗರ ತಿರುಗುತ್ತ। ಗುಡಿ ಸುತ್ತ ಹಾಕುತ।

ಮೋಜು ಮಜಲಿನೊಳು ಮಳಿಗ್ಯಾಗ ಕೂಡುತ। ಕಳಸವ ನೋಡುನು ಬಾ ॥೩॥
ಕಳಸದ ಪೂಜೆ ಮಾಡುನು ಬಾ। ತೇರಿನ ಸಿಂಗಾರ ನೋಡುನು ಬಾ ಬಾ।

ತೇರಿನ ಮೇಲೆ ಏರೀತು ಕಳಸಾ।
ಸಂಗಣ್ಣನ ತೇರಿನ ಮ್ಯಾಲೆ ಏರೀತು ಕಳಸಾ
ಬೆಳಗಲ್ಲ ಹಗ್ಗ ಬಂದು ಆದೀತೋ ತಾನ
ಗಂಜಾಳತರಗು ಬಂದಾವೊ ತಾನಾ
ಹರಹರಯೆಂದು ಚಪ್ಪಾಳಿ ಇಟ್ಟು
ತೇರು ಸಾಗಿತು ಮುಂದಕ್ಕೆ ಇಷ್ಟು
ಕಬ್ಬು ಬಾಳಿಯ ತೂರುನು ಬಾ
ಉತ್ತುತ್ತಿ ಉಡಲಾಗ ಹಾಕೂನು ಬಾ ಬಾ
ಮೆಟ್ಟಿಗೆ ಬಂದಿತು ನೋಡುನು ಬಾ ಬಾ ॥೪॥

ಧರೆಯೊಳು ಮೆರೆಯುವ ಸಂಗಮದೂರಾ।
ಕೃಷ್ಣ ಮಲಪ್ರಭಾ ಹರಿಯುವುದು।
ಜೋರಾ। ಬಸವಣ್ಣನವರ ಐಕ್ಯದ ಸಾರಾ। ವರವನು ಬೇಡೂತ।
ಊರಿಗೆ ತಿರಗೂತ ಕೂಡಲರೇಶನ ಕೂಡಿ ನಲಿದಾಡುತ।
ಸಂಗಮ ನೋಡುನು ಬಾ ಅದರ ಐಶ್ವರ್ಯ (ಐಸಿರಿ)
ಹೇಳೋನು ಬಾ ಮುಂದಿನ ಜಾತ್ರೆಗೆ ಬರುವೂನು ಬಾ ಬಾ ॥೫॥

ಹುನಗುಂದ ಸಂಸ್ಥಾನ! ಸುತ್ತ ನಾಡಿನ್ಯಾಗ ಹೆಸರ
॥ಚ್ಯಾಲ॥
ಹೀಗೆ ಇರುವವನು ಸಡಗರದಿಂದೆ!
ರಕ್ಕಸಗಿ ಮೆಟ್ಟು ಬಹು ಅಂದೆ!
ಅರಮನಿ ಇತ್ರಿ ಪಸಂದೆ!

ನಿಂತ ಹೊಗಳುವರು ಬಟ್ಟಂಗಿ ಮುಂದೆ
ಕಾಳಿ ಕರ್ಣಿವಾದ್ಯ ಆನಂದ!
ಮಗ ಹುಟ್ಯಾನ ಲಾಲಭುಂದು!
ಆಳುವುದಕ್ಕೆ ರಾಜ್ಯಕ್ಕೆ ಬಂದ!
ಹೀಗೆ ಶಿಸ್ತಿಲಿತ್ತು ದೌಲತ್ತು ಮಾಡುವರು ಕಾರಬಾರತ್ತ!

ದರವರ್ಷ ಅರ್ತಿಲಿಂದ ಆಗುವುದು ಸಂಗಮ ಜಾತ್ರಿ!
ದೊರಿ ಹೋಗುವ ಅಲ್ಲಿಗೆ ಎಷ್ಟು ಹೇಳಲಿ ಐಸಿರಿ
ಸಾವಿರ ಕಾಲಮಂದಿ ಸಂಕುರಲಿ ಕೈಚೂರಿ
ಹಿಡಸಿಕೊಂಡು ಡೆಂಕನಿಸಾನಿ ಮುಂದೆ ನಗಾರಿ
ಕಾಳಿಕರ್ನಿ ಹಲಗಿ ಸಮದ್ದು ಗುಂಡಿನ ಆರ್ಭಟ ಭಾರಿ
ಎಡಬಲಕ್ಕೆ ಕುದುರಿ ಕೊಡಿ ಹಿಡಿದಿರು ಆಪ್ತಗಿರಿ
ಸುತ್ತಮುತ್ತ ಸಿಪಾಯ್ದೆರು ಪೋಷರಕಾಗಿ ಪರಿವಾರ
ಅಬ್ಬರದಿಂದ ಮುಂದೆ ಬಿಡಸುತ ಹೊಂಟಾರ ದಾರಿ!

॥ಚ್ಯಾಲ॥

ತೇರಿನ ಮುಂದೆ ಪೂರ್ಮಾಸಿ!
ನಿಂತರು ಹೋಗಿ ಜಮಾಸಿ
ಮೋಜಿನ ರಾಜ ಹೌಸಿ
ನೋಡಿ ಜನ ಆದಿತೋ ಖುಷಿ
ಹತ್ತೆಂಟು ಕಾಯನು ಒಡೆಸಿ
ಬಂಗಾರದ ಕಳಸ ಮೇಲಿಡಸಿ
ತನ್ನ ಹುಕುಮಿನಿಂದ ರಥ ಎಳಸಿ

೩. ಲಾವಣಿ ಪದ

ಸುತ್ತ ದೇಶದೊಳಗೆ ಇರುವ ಮೂಂಜೂರಾ!!!
ಕಳಸದ ಮಜಕೂರು ಹೇಳುವೆನು ನಾ ಪುರ
ಕಳಸದ ಮಜಕೂರು ಹೇಳುವೆನು ನಾ ಪುರ
ರಕ್ಕಸಗಿ ಯಂಬದ ಊರಾ। ಕಳಸ ಕಳಸುತಿದ್ದರು ದೇಸಾಯಿ ಮನೆಯವರ
ಕೊಲೆ ಸುಲಿಗೆ ಹೆಚ್ಚಾಯಿತು ರಜಾಕಾರ ಹಾವಳಿ ಆವಾಗಿನ ಕಾಲಕ್ಕಿತ್ತು।
ದಿಂಡಿನೊಳಗೆ ತಳೆದಿತ್ತು। ತಂದಿಯು ಸತ್ತುಹೋದ
ಕ್ವಾಟಿಗೆ ದಿಂಡ ಕಟ್ಟಿ ಕಳಿಸಿದ್ದ। ಬಣಗಾರ ಅಂಗಡಿಗೆ ಹೇರಿಸಿದ್ದ ॥೧॥

ದಿಂಡ ತೂಕ ಮಾಡ್ಯಾರೋ।
ಎತ್ತದ ಸಲುವಾಗಿ ಅರ್ಧ ಬಾಜಾರ ಕಲ್ಲು ಹಚ್ಯಾರೊ
ಅಳ್ಳಿಯ ಹಿರದಾರೊ ಕಳಸವ ಹೊಂಡಿಸ್ಯಾಂರೊ। ಇಬ್ಬರ ನ್ಯಾಯ ಮಾಡ್ಯಾರೊ
ಬಂದಾನೋ ಸಂಗಣ್ಣ। ಕೊಡುವುದಿಲ್ಲೊ ಯಣ್ಣಾ ಸಾವಿರಗಟ್ಟಲೆ ಕೇಳಣ್ಣ।
ಬೇಡಿದರ ಬರೋದಿಲ್। ಬಂದಿದ್ದು ಕಳಿಸುವುದಿಲ್ಲ।
ನ್ಯಾಯ ಮಾಡೋ ನನ್ನ ಮ್ಯಾಲಾ ॥೨॥

ನ್ಯಾಯವನ್ನು ನಡೆಸ್ಯಾನೋ। ಕೋರ್ಟಿನೊಳಗೆ ನುಡಿದಾನೋ
ಕೊಡಿಸಿರಿ ಕಳಸವನ್ನು। ನಾನು ಬಿಡುವುದಿಲ್ಲೊ।
ಸರ್ಕಾರವು ಎರವು ಆದಿತಲ್ಲ। ಪದ್ಧತಿಯಂತೆ ನಾವು।
ಕಳಸ ತೇರಿಗೆ ಕಳಿಸತೇವು। ನಿಮ್ಮ ಆಜ್ಞೆ ನಡೆಸುವೆವು ॥೩॥

ಬಣಗಾರ ಅಂಗಡಿ ಮಾಲಿಕರು ಬೇಡಿ ಕಳಸವ ಕೊಡುವುದಿಲ್ಲ।
ಏನು ಮಾಡಿದರು ಬಿಡುವುದಿಲ್ಲ। ಕೊಂಡು ಹೇಳಥಾರೊ
ಕೂಡ್ರಿಸಿ ಒಂದು ದಿನವು। ಹೋಗುವಾಗ ಪೂಜೆಯು ಮಾಡೆವು।
ಅದರಂತೆ ಠರಾವಿಸಿ। ಮಾಡ್ಯಾನೋ ಹೂವಿನ ಅಗಸಿ ಮಳಗ್ಯಾಗ ಕೂಡ್ರಿಸಿ।
ರಾತ್ರಿ ಏಳಕ್ಕ ಕಳಸವು ಹೊಂಡಸಿ ಪಾರೆದಾಗ ಕಳಿಸಿ ॥೪॥

ಬಾಗಲಕೋಟೆ ಬಿಟ್ಟಿತು ಮಲ್ಲಾಪುರ ಹಾದಿಲೇ ಕಿರಸೂರಿಗೆ ಬಂದಿತು।
ಭಗವತಿ ಮೇಲೆ ಹಾಯ್ದು ಹಳ್ಳೂರ ತಲುಪಿತ್ತು। ಅಲ್ಲಿಂದ ಪೂಜೆ ನಡೆದಿತ್ತು
ಬೇವೂರು ಬಿಡುವುದರೊಳಗೆ ರಾತ್ರಿ ಮೂರು ಆಗಿತ್ತು।
ಗುರುವಿನ ಕಟ್ಟೆಗೆ ಬಂದಿತ್ತು। ಹಾಲಕೇರಿ ಮನೆಯವರು
ಉತ್ರಿಯ ಒಯ್ದಾರೊ ಕರಕೊಂಡು ಬಂದಾರೊ ॥೫॥

ಚವಡ ಕಮಲದಿನ್ನಿಗೆ ಬಂದಿತು ಕಳಸವು। ಕಳಸ ಕಟ್ಟೆಗೆ ಕೂಡಸ್ಯಾರೊ
ಸಂಗಮದವರು ದಾರಿಯ ನೋಡ್ಯಾರೋ। ಪಾಲಕಿ ಮೆರವಣಿಗೆಯವರು।
ಕಳಸ-ಕನ್ನಡಿಯವರು। ಮುಂದೆ ಪಾತರದವರು ಚೌರ ಹಾಕುತ
ಇವರು ಕರಿಯಲಿಕ್ಕೆ ಹೋದರು ಗುಡಿ ಸುತ್ತಿ ಹಾಕಿದರು ॥೬॥

ಸಂಜೆಯ ಐದಕ್ಕೆ ತೇರನ್ನು ಎಳೆಸಿದರು। ಅಭಿಷೇಕ ಪೂಜೆ ಮಾಡಿಸಿ
ಮೆರವಣಿಗೆ ಮೂಲಕ ಬಾಗಲಕೋಟೆಗೆ ಕಳಸವ ಕಳಿಸಿದರು।
ಧರೆಯೊಳಗೆ ಮೆರದಿತ್ತು ಸಂಗಮದ ಊರು ಇತ್ತು।
ಸಂಗಮನಾಥನ ವಾಸ ಅಲ್ಲಿ। ಸಾರಂಗಮಂಠೇದ ಮಠ ಇಲ್ಲಿ
ಕವಿ ಕೂಡಲರೇಶಾರ ಈ ಪದ ಕೇಳಿದರೆ
ಪಾಪವು ನದಶಾ ಪುಣ್ಯವು ಹಮೇಶಾ ॥೭॥

೪. ಕಪ್ಪಡಿ ಸಂಗಣ್ಣನ ಕಳಸದ ಕಥೆ

ನಾಡಿನ ಜನ ಕೇಳಿ ಹೇಳತಿನಿ ಕಪ್ಪಡಿ ಸಂಗಣ್ಣನ ಕಳಸದ ಕಥೆ
ಹೆಚ್ಚು ಕಡಿಮೆ ನೂರನಲವತ್ತು ವರ್ಷದ ಹಿಂದೆ
ನಡಿದಂತಹ ಹಕಿಕತ ಸಂಗಮನಾಥನ ಬಂಗಾರ ಕಳಸ
ಹತ್ತಿ ದಿಂಡಾಗ ಹೋಗಿದ್ದ ಕತೆ ಇದು ಬಹಳ ಸೊಗಸೈತಿ
ಚಿತ್ತ ಕೊಟ್ಟು ಕೇಳಿರಿ। ಇದು ಕಟ್ಟಿದ ಕತೆ ಅಲ್ಲರಿ
ಹೋಗಿದ್ದ ಭಾಗ್ಯ; ಮರಳಿ ಬರುವಂಗ ಆಗಿ ಜಾತರಿ ನಡಿದೈತ್ರಿ॥

ಹೊನ್ನಗುಂದ ನಾಡಿನ್ಯಾಗ ರಕ್ಕಸಗಿ ಸಂಸ್ಥಾನ ತಲೆ ಎತ್ತಿ ಮೆರೆದೈತಿ
ಪ್ರತಿನಿತ್ಯ ತಪ್ಪದ ಸಂಗಮನಾಥನಿಗೆ ಮೀಸಲ ಎಡೆ ಬರತಿರತೈತಿ
ಸಂಗಮೇಶ್ವರನ ತೇರಿಗೆ ಬಂಗಾರ ಕಳಸ ಮಾಡಿಸಿಕೊಡುವುದು
ದೇಸಾಯಿಯವರ ಇಚ್ಛೆ ಆಗಿರತೈತಿ। ಸಂಗಮನಾಥನೆ
ಕಳಸದ ರೂಪದಿ ನಿಲ್ಲುವಂಗ ಆಗೈತಿ॥

ಸಂಗಮನಾಥನ ತೇರಿಗೆ ದರವರ್ಷ
ದೇಸಾಯಿಯವರ ಮನೆಯಿಂದ ಕಳಸ ಬರತಿರತೈತಿ
ಬಿಚ್ಚುಗತ್ತಿಯ ಮೆರವಣಿಗೆ ಆರತಾಸ ಪದ್ಧತಿ ಚಂದ ಇರತೈತಿ
ಮುಂದ ನಡದೈತಿ ದೊಡ್ಡದೊಂದು ಫಜೀತಿ
ಚಿತ್ತ ಕೊಟ್ಟು ಕೇಳಿರಿ ಕಳಸದ ಮಹಿಮಾ ಬಹಳ ದೊಡ್ಡದೈತಿ ॥

ಎಲ್ಲಿ ಬೇಕಲ್ಲಿ ಆವಾಗಿನ ಕಾಲಕ್ಕ ರಜಾಕಾರರ ಹಾವಳಿ ಹೆಚ್ಚಾಗಿರತೈತಿ
ಕೊಲೆ-ಸುಲಿಗೆ, ದರೋಡೆ ಬಿಡಲಾರದಂಗ ಸಾಗಿರತೈತಿ
ಕಳಸವ ಎಲ್ಲಿಡಬೇಕೆಂಬುದು ದೇಸಾಯಿಯವರಿಗೆ ಚಿಂತಿಯಾಗಿರತೈತಿ
ಹಾವಳಿ ಕಡಿಮೆಯಾಗುವವರೆಗು ಬೆಳೆದಂತಹ ಹತ್ತಿ ದಿಂಡಲ್ಲಿ
ಇಡಬೇಕೆಂದು ನಿರ್ಧಾರ ಆಗಿರತೈತಿ॥

ಬೆಳೆದಂತಹ ದಿಂಡುಗಳನ್ನು ಎಲ್ಲಾನು ಬಿಡದ ಸಂತೆಗೆ ಕಟ್ಟೈತಿ
ಸಂಗಣ್ಣನ ಕಳಸ ಇರುವಂತಹ ದಿಂಡು ಇದರಲ್ಲಿ ಸೇರಿರತೈತಿ
ದಿಂಡನ್ನು ಹೊತ್ತು ನಡೆದಂತಹ ಜೋಡೆತ್ತು ಹೇಳತಾವ ಈ ರೀತಿ
ಸಂಗಮನಾಥನನ್ನು ಹೊತ್ತು ನಡದಿವಿ ನಮಗಂಥ ಭಾಗ್ಯ ದೊರಕೈತಿ॥
ನೂರಾರು ದಿಂಡುಗಳು ಬಂದು ಬಾಗಲಕೋಟೆ ಅಡತಿ ಅಂಗಡಿ ಸೇರಿರತೈತಿ
ಮುಂದಿನ ದಿನದಾಗ ಹತ್ತಿ ತೂಕ ಮಾಡುವ ಕೆಲಸ ನಡದೈತಿ
ಸಂಗಣ್ಣನ ಕಳಸ ಇರುವ ದಿಂಡಿನ ಸರತಿ ತೂಕಕ್ಕ ಬಂದೈತಿ
ಅಂಗಡಿ ಒಳಗಿನ ತೂಕದ ಕಲ್ಲು ಹಚ್ಚಾಕ ಮುಗಿದಿರತೈತಿ॥

ಇಡೀ ಅರ್ಧ ಬಾಜಾರಿನ ಕಲ್ಲು ಬಿಡಲಾರದ ಹಚ್ಚೈತಿ
ಅದು ಹೆಂಗ ಮ್ಯಾಗ್ ಎತ್ತತೈತಿ। ಏಳಬಾರದು
ಅನ್ನೋದು ಸಂಗಣ್ಣನ ಇಚ್ಛೆ ಆಗಿರತೈತಿ। ಸಂಶಯಗೊಂಡು
ಬಿಚ್ಚಿ ನೋಡಿದಾಗ ಬಂಗಾರ ಕಳಸ ಹೊಂದೈತಿ! ॥

ಕಳಸ ಬಾಗಲಕೋಟೆ ಅಡತಿ ಅಂಗಡಿ
ತಲುಪೈತಿ ಅನ್ನುವ ಸುದ್ದಿ ನಾಡೆಲ್ಲ ಹಬ್ಬೈತಿ
ಹುನಗುಂದ ನಾಡಿನ ದೇಸಾಯಿಯವರ ದಂಡು
ಬಾಗಲಕೋಟೆಗೆ ದೌಡು ಮಾಡೈತಿ
ನಮ್ಮ ಕಳಸ ನಮಗೆ ಕೊಡಬೇಕು ಅನ್ನುವ ಪ್ರಸ್ತಾವ ಇಟ್ಟೈತಿ॥

ನಮ್ಮ ಕಳಸ ನಮಗ ಕೊಡುವಂಗ ಮಾಡಿರಿ
ಸಂಗಣ್ಣನ ತೇರಿನ ಕಳಸ ಇದು ಐತಿ
ಹೇಳತಾರ ದೇಸಾಯಿರ, ಬೇಕಾದರ ಏಳು ಕೊಡ ಬಂಗಾರ
ನಿಮಗ ಕೊಡತೈತಿ ಬಂದ ಭಾಗ್ಯವನ್ನು ಬಿಡುವುದಿಲ್ಲ
ಅನ್ನೋದು ಬಾಗಲಕೋಟೆ ಜನರ ವಾದ ಆಗೈತಿ
ಬೇಕಾದರ ನಮ್ಮ ಮ್ಯಾಗ ನ್ಯಾಯ ಮಾಡಿರಿ ಅನ್ನೊತನಕ ನಿಂತೈತಿ॥

ಕಳಸದ ಸಲುವಾಗಿ ಭರದಿಂದ ಕೋರ್ಟಿನೊಳಗೆ ನ್ಯಾಯ ನಡದೈತಿ
ಬಾಗಲಕೋಟೆ ಭಕ್ತರ ಭಕ್ತಿ ನ್ಯಾಯದೊಳಗ ಗೆದ್ದೈತಿ
ಎಲ್ಲೆರ ಇರಲಿ ಸುರಕ್ಷಿತ ಇದ್ದರೆ ಸಾಕು
ಎಂಬುದು ದೇಸಾಯಿಯವರ ನಿಲುವಾಗ್ಯೆತಿ
ಸಂಗಣ್ಣನ ಕಳಸ ಶಾಶ್ವತವಾಗಿ ಬಾಗಲಕೋಟ್ಯಾಗ
ಇರುವಂತ ತೀರ್ಪು ಹೊಂದೈತಿ॥

ಬಾಗಲಕೋಟೆ ಭಕ್ತರು, ಕೇಳುವ ಮಾತು ಇದು ಆಗಿರತೈತಿ
ವರ್ಷಪೂರ್ತಿ ಎಲ್ಲಿರಬೇಕು, ಹೇಗಿರಬೇಕು ಕಳಸ ಬಂಗಾರದೈತಿ
ಬ್ರಿಟಿಷ ಆಡಳಿತದಾಗ ಕಲಾದಗಿ ಜಿಲ್ಲೆಯ
ಬಾಗಲಕೋಟೆ ತಾಲೂಕು ಇರತೈತಿ
ಕಿಲ್ಲಾ ಭಾಗದ ನಾರಾಯಣ ದೇವರ ಗುಡಿಯಾಗ
ಇರಬೇಕೆನ್ನುವುದು ತಹಸೀಲ್ದಾರರ ತೀರ್ಪಾಗ್ಯೆತಿ
ಬಾಗಲಕೋಟೆಯ ಜನರು ಸಂಗಣ್ಣನ ಭಕ್ತರು
ನಿಂತು ಹೇಳ್ತಾರ ನಮ್ಮದೊಂದು ಮಾತೈತಿ
ಪದ್ಧತಿಯಂತೆ ಪ್ರತಿ ವರ್ಷಕ ಒಂದು ಸಲ ಜಾತ್ರೆಗೆ ಕಳಸದ ಕಳಿಸತೈತಿ
ಎಂದಿನಂತೆ ನಿಮ್ಮ ತೇರು ಸಂಭ್ರಮದಿಂದ ಎಳೆವಂತಾಗತೈತಿ
ಎನ್ನುವ ಮೂಲಕ ಭಕ್ತರ ಹೃದಯ ವೈಶಾಲ್ಯತೆ ಮೆರೆದೈತಿ॥

ಅಡತಿಯ ಅಂಗಡಿ ಮಾಲಿಕರು ಹೇಳುವ ಮಾತು ಒಂದೈತಿ
ಬಂಗಾರ ಕಳಸ ನಮ್ಮ ಅಡತಿ ಅಂಗಡಿಗೆ
ದಿಂಡಿನಲ್ಲಿ ಬಂದಿದ್ದು ಕರೆ ಐತಿ ಜಾತ್ರೆಗೆ ಹೋಗಾಗ ಕಳಸ
ನಮ್ಮ ಅಂಗಡ್ಯಾಗ ಕೂರಿಸಿ ಪೂಜೆ ಮಾಡಬೇಕೆನ್ನುವುದು ಐತಿ
ಅದರಂಗ ಪದ್ಧತಿ ಇನ್ನು ಬಿಡದಂಗ ಸಾಗೈತಿ॥

ದವನದ ಹುಣ್ಣಿಮೆಯಾದ ಐದು ಜಾತ್ರಿ ನಡೆತೈತಿ
ಪದ್ಧತಿಯಂತೆ ಪಾದಯಾತ್ರೆಯ ಮೂಲಕ
ಬಾಗಲಕೋಟೆಯಿಂದ ಕಳಸ ಬರತೈತಿ
ಹರಕೆಯ ಹೊತ್ತ ಭಕ್ತ ಜನತೆ ಕಳಸಕ್ಕ ಕುಲಾಯಿ ಹೊದಿಸುತೈತಿ
ನಾಡಿನ ಜನಕ ಕಳಸದ ಕಥೆ ತಿಳಿಯಲಿ ಅಂತ ಕವಿ
ಅದಪ್ಪ ಗೊರಚಿಕನವರ ಪದಕಟ್ಟಿ ಭಕ್ತಿಲಿ ಹಾಡಿದ್ದ ಆಗೈತಿ

೫. ಕಪ್ಪಡಿ ಸಂಗಯ್ಯನ ನೆನೆಯುತಾ ಸಾಗಿರಿ ದಾರಿ

ಕೂಡಲಸಂಗಮನಾಥನ ಕಳಸಕ ನಡೆಯುವ ಭಕ್ತರೆ
ಕಳಸದ ಮಾರ್ಗ ತಿಳಿಸುವೆನು ಕೇಳಿರಿ
ಕಪ್ಪಡಿ ಸಂಗಯ್ಯನ ನೆನೆಯುತ ಸಾಗಿರಿ ದಾರಿ
ಭಕ್ತಿಯಿಂದಲೇ ಕಳಸದ ಹೊರಲಾಕ ತಲೆಯನ್ನು ಕೊಡಿರಿ

ತಹಸೀಲ್ದಾರ ಕಚೇರಿಯಿಂದ ಹೊರಬಂದ ಕಳಸ
ಕಪ್ಪಡಿ ಬಜಾರ ನಾರಾ ಅಂಗಡಿಯಲ್ಲಿ
ಕೂರುವುದು ಸಂಜೆ ಐದರ ತನಕ
ಬಾಗಲಕೋಟೆಯ ಭಕ್ತರು ಹಾರ
ಕುಲಾಯಿ ಹಾಕುವರು ಕಳಸಕ
ಶಿರೂರ ಅಗಸಿ ದಾಟುವುದು ಸಂಜೆ ಏಳಕ್ಕೆ॥

ರೈಲ್ವೆ ಹಳಿ ಮೂಲಕ ಮುಂದಕ ಸಾಗಿರಿ
ಕಲ್ಲು-ಮುಳ್ಳುಗಳು ಹೂವೆಂದು ತಿಳಿಯಿರಿ
ರಾಮರೋಡ್ ಮಠವ ಕಂಡು ಕಿರಸೂರ ತಲುಪಿರಿ
ಭಕ್ತಿಲೆ ಕೈ ಮುಗಿದು ಕಿರಸೂರು ಭಕ್ತರ
ಪೂಜಾ ಸೇವೆಯ ನೋಡಿರಿ॥

ಕಿರಸೂರಿಂದ ಭಗವತಿ ಕಡೆಗೆ ಸಾಗಿ
ಭಗವತಿ ಭಕ್ತರು ನಿಂತಾರ ಕಳಸದ ಸ್ವಾಗತಕ್ಕಾಗಿ
ಅನ್ನ ಪ್ರಸಾದವ ಮಾಡಿಸ್ಯಾರ ಸಂಗಮನಾಥನ ಭಖ್ತರಿಗಾಗಿ
ಭಕ್ತಿಲೇ ನುಡಿತಾರ ದರವರ್ಷ ಕಳಸ
ಬರುತಲಿ ದರುಶನ ತೋರುವುದಕ್ಕಾಗಿ॥

ಭಗವತಿ ದೈವಕ್ಕೆ ಕೈ ಮುಗಿದು ಹಳ್ಳೂರಕ ನಡೆಯಿರಿ
ಹಳ್ಳೂರಕ ಕಳಸ ಬಂದ್ಯೆತಿ ಅಂದಾರ
ತಲೆಯೆತ್ತಿ ನಮಿಸುವ ಹಳ್ಳೂರ ಬಸವೇಶ್ವರ ತಿಳಿಯಿರಿ
ಹುರುಪಿಲೆ ಮೆರವಣಿಗೆ ಮಾಡಿಸಿ ಕಳಸ ಕಳಸ್ತಾರ
ಹಳ್ಳೂರು ಭಕ್ತರು ನೋಡಿರಿ॥

ಆಕಳ ಕಟ್ಟೆಯಿಂದ ಹೆದ್ದಾರಿ ದಾಟಿ
ಗಂಜ್ಯಾಳ ಸಾಹುಕಾರ ಅರವಟ್ಟಿಗೆ ತಲುಪಿ
ಎಡ-ಬಲಕ ಹೊಲದಾಗ ಭಕ್ತರ ಪೂಜೆಯ ಸ್ವೀಕರಿಸಿ
ಗುರುವಿನ ಕಟ್ಟೆ ಕಳಸದ ಕಟ್ಟೆಯಲ್ಲಿ ಕಳಸವ ಕೂರಿಸಿ
ಸಂಗಮ ತಲುಪುವದರೊಳಗೆ ಸೂರ್ಯೋದಯ ಹೊತ್ತು ಆಗಿರತೈತಿ॥

ತೇರಿನ ಬಸವನ ಸಂಗಮನಾಥನ ಗುಡಿ ಐದು ಸುತ್ತು ಹೊಡಿತೈತಿ
ಸಂಗಮ ಭಕ್ತರ ಪೂಜೆ ಪಡೆಯುತ ಅಗಸಿ ಒಳಗೆ ನಡಿತೈತಿ
ಸಂಜೆ ಐದರ ನಂತರ ಪಂಚಮಿ ಮಿತಿಯಲ್ಲಿ
ಕಳಸವ ಮೇಲಿರಿಸಿ ತೇರನ್ನು ಎಳೆತೈತಿ
ಸಂಗಮನಾಥನ ಜಾತ್ರೆಗೆ ಬಂದ ಭಕ್ತರ ಜನ್ಮ ಪಾವನ ಆಗತೈತಿ॥

೬. ಕಳಸ ಆಗುವುದು ಏಳು ಮಲ್ಲಿಗೆ ತೂಕ

ಏನ್ ಕಳಸ। ಎಂಥಾ ಕಳಸ॥
ತಮ್ಮ ಆಳೆತ್ತರದ ಬಂಗಾರದ ಕಳಸ
ಸುತ್ತ ನಾಡಿನೊಳಗ ಮತ್ತೆಲ್ಲಿ ಇಲ್ಲ
ಇಂತಹ ಕಳಸ ಏನು ಸೊಗಸ
ಪಾದಯಾತ್ರೆಯ ಮೂಲಕ ತರುವರು
ತೇರಿನ ಬಂಗಾರದ ಕಳಸ॥

ಕಸಿವಿಲಿ ಹೊಬೇಡ ತಮ್ಮ ಬಂಗಾರ ಕಳಸ
ಆದಿತೋ ತಮ್ಮ ಜೀವನದಾಗ ಜೋಕ
ಭಕ್ತಿಲೇ ಹೊರೋ ತಮ್ಮ ಸಂಗಮನಾಥನ ಕಳಸ
ಆಳೆತ್ತರದ ಕಳಸ ಆಗುವುದು ಏಳು ಮಲ್ಲಿಗೆ ತೂಕ॥

ಬಾಗಲಕೋಟೆ, ಮಲ್ಲಾಪುರ, ಕಿರಸೂರು, ಭಗವತಿ, ಹಳ್ಳೂರು, ಬೇವೂರು
ಸಾಗರದಂತೆ ಹರಿದು ಬರುವರು ಭಕ್ತರು ಸಾವಿರಾರು
ದಾರಿಯುದ್ದಕ್ಕೂ ಕಳಸಕ ಬೀಳುವುದು ಭಕ್ತಿಯ ಹೂ-ಹಾರ
ಸಂಗಮನಾಥ ಬಹುಪರಾಕ್! ಕಪ್ಪಡಿನಾಥ ಬಹುಪರಾಕ್!
ಎಂದು ಹರುಷದಿ ನಲಿಯುವರು॥

ಬಂಗಾರ ಕಳಸ ತೇರಿನ ಬಸವನ ಗುಡಿಗೆ ಬಂದರ
ಆರುತಿ ಹಿಡಿದ ಮುತ್ತೈದರ ಅದರ ಹಿಂದೆ ಸಾಗುವರ
ಸಂಗಮದ ಜನಕ್ಕೆಲ್ಲ ಎಷ್ಟೊಂದು ಸಡಗರ
ಬಾಗಲಕೋಟೆಯ ಬಂಗಾರ ಕಳಸ ಬಂದೈತಿ ಅಂದಾರ

ಬಂಗಾರ ಕಳಸಕ ಐತಿ ಇತಿಹಾಸ ನಾಲ್ಕೈದು ತಲೆಮಾರು

ಭಕ್ತಿಲೇ ಹಾಕು ಕಳಸಕ ಕುಲಾಯಿ ಹೂ-ಹಾರ
ಆಗುವುದು ನೋಡು ತಮ್ಮ ಬಂದ ಕಷ್ಟಗಳ ದೂರ
ಭಕ್ತಿಲೇ ಕಪ್ಪಡಿ ಸಂಗಯ್ಯನ ಕಳಸವನ್ನು ಹೊತ್ತು ಸಾಗಿದರ॥

ಕಳಸದ ಮುಂದ ಇದ್ದಲಗಿ ಹಿಲಾಲ
ಕಳಸ ಬಂದಾಗ ಜೋರಾಗಿ ಕುಣಿಯುವವು ನಂದಿಯ ಕೋಲು
ಮುಂದ ಮುಂದಕ ಸಾಗುತ್ತಾವ ಹಲಗಿ ಕರಡಿಯ ಮಜಲು
ಹರುಷ ಹೆಚ್ಚಾಗಿ ಸುರಿಸುವುದು ಮಳೆಯನ್ನು ಮುಗಿಲು॥

೭. ಸಂಗಮನಾಥ ಕಳಸವಾಗಿ ನಿಂತ

ಬಾಗಲಕೋಟೆಯಿಂದ ಬಂಗಾರದ ಕಳಸ ಬಂತು
ಭಕ್ತರಿಗೆ ದರ್ಶನವ ತೋರಲು ಬಂತು
ದಾರಿಯುದ್ದಕ್ಕೂ ಹಾರ-ಕುಲಾಯಿ ಪಡೆಯುತ ಬಂತು
ಕಪ್ಪಡಿ ಶಿವನ ಜಾತ್ರೆಗೆ ಕಳಸ ಬಂತು

ಪರಶಿವನೆ ಕಳಸವಾಗಿ
ಬಂಗಾರ ಕಳಸ ತೇರಿಗೆ ಸಿಂಗಾರವಾಗಿ
ಕಳಸವ ಕಂಡು ಭಕ್ತರು ಧನ್ಯವಾಗಿ
ಭಕ್ತಿಲೆ ನುಡಿದರು ಕಪ್ಪಡಿ ದೇವನೆ ನಿಂತಾನ ಕಳಸವಾಗಿ

ರಕ್ಕಸ (ಅಮರವತಿ) ಸರದೇಸಾಯಿಯವರ ಕಳಸ
ಹತ್ತಿಯ ದಿಂಡಾಗ ಬಾಗಲಕೋಟೆಗೆ
ಹೋಗಿದ್ದ ಕಥೆ ಇದು ಬಾಳ ಸೊಗಸ
ತಪ್ಪದೇ ಬರತೈತಿ ಜಾತ್ರೆಗೆ ದರವರ್ಷ
ಕಂಡಾಗ ಕಳಸ ಭಕ್ತರ ಮೊಗದಲ್ಲಿ ಹರುಷ

ಪಾದಯಾತ್ರೆಯ ಮೂಲಕ ತರುವರು
ಕಲ್ಲು ಮುಳ್ಳನ್ನು ಹೂವೆಂದು ತುಳಿಯುವರು
ಕಪ್ಪಡಿ ಸಂಗಮನಾಥ ಬಹುಪರಾಕ। ಎನ್ನುವರು
ಕೂಡಲಸಂಗಮನಾಥ ಬಹುಪರಾಕ। ಎನ್ನುವರು

ಎಡ ಬಲಕ ಸಶಸ್ತ್ರ ಪಡೆಯ ಪೊಲೀಸ್ ಬೆಂಗಾವಲಿನವರು
ತಲೆಯ ಮೇಲೆ ಹೊತ್ತು ತರುವರು ಬೂದೂರಿ,
ಗೊರಚಿಕನವರ, ಪೂಜಾರಿ ಸಂಗಮನಾಥನ ಅರ್ಚಕರು
ಛತ್ರಿ ಛಾಮರ ಹಿಡಿದು ಸ್ವಾಗತ

ಮಾಡಿಕೊಳ್ಳುವರು ಹಾಳಕೇರಿ ಮನೆತನದವರು
ಭಕ್ತಿಲೇ ಚೌರವ ಬೀಸುವರು ಚೌಧರಿ ಮನೆತನದವರು
ಬೆಳ್ಳಿಯ ಛತ್ರಿಕಿ ಕಳಸದ ಮೇಲೆ
ಕಳಸ ಬಂದಾಗ ನದರಿ ಮೊಳಗುವವು ಹಲಗಿ ಕರಡಿಯ ಮಜಲು
ಸಡಗರದಿಂದ ಕುಣಿಯುವವು ನಂದಿಯ ಕೋಲು

ಸಂಗಮನಾಥ ಬಂಗಾರ ಕಳಸವಾಗಿ ನಿಂತ
ಧನ್ಯರಾದರು ಭಕ್ತರು ಕಳಸವ ಕಂಡರು ಅಂತ
ಸೂರ್ಯ–ಚಂದ್ರರು ಇರುವವರೆಗೂ ಬರುತಿರಲಿ
ಕಳಸ ಜಾತ್ರೆಗೆ ಅಂತ ಶಿರಮಣಿದು ನಮಿಸುವೆ
ಸಂಗಮನಾಥನ ಪ್ರತಿರೂಪ ಅಂತ

೮. ಸಂಗಮನಾಥನ ಜೀವನ ಚರಿತ್ರೆ ಪದ

ಆದಿ ಕಾಲವಣ್ಣಾ। ಜಾಲಿ ಬೆಳೆದಿತಣ್ಣ। ಯಲ್ಲಿಂದ ಬಂದಾನಣ್ಣಾ।
ಕಪ್ಪಡಿ ಸಂಗಣ್ಣಾ। ಕೈಲಾಸದಲ್ಲಿ ನಡದೀತು ಗದ್ದಲ। ಅತ್ಯಾಚಾರ ನಡೆದಿತ್ತು।
ಋಷಿಯ ರೂಪ ತಾಳಿದ ಪರಮಾತ್ಮನೆ ಇಳಿದ ಅವನೆ ಸಂಗಣ್ಣ ॥ಪ॥

ಅತ್ಯಾಚಾರ ಅಳಿದು। ಜ್ಞಾನವ ತಿಳಿದು। ಕ್ವಾಟದುರ್ಗಕ್ಕೆ ಬಂದ ಅಲ್ಲಿ
ವಾಸ ಮಾಡೇನಂದ। ಭಕ್ತಿಯ ಬೀಜಾಯಿಟ್ಟನೋ ತೇಜಾ। ಉದ್ಧಾರ ಮಾಡಿದ
ಅಲ್ಲಿಂದ ಬಂದ ತಂಗಡಯಿಂದ। ದಾರಿಯ ತಪ್ಪಿದ ॥೧॥

ನಲಿಯುತ ನಡಿಯುತ ಅಡಿಹಾಳ ಬಿಡವುತು। ಕಮದತ್ತಗಿಗೆ ಬಂದ।
ಅಲ್ಲಾಡುತ ಬೆಳಗಲ್ಲಿಗೆ ಹೋದ ಊರಿನ ಜನರು। ಕೇಳುತ ನಿಂತಾರು
ಎಲ್ಲಿಂದ ಬಂದಾರಿವರು ಗುರು ಮಂತ್ರ ಹೇಳಿದ।
ಗುರ್ತುವು ಇರಲಿ ಅಂದ। ಗಂಜಿಹಾಳಗೆ ಬಂದ ॥೨॥
ಗಂಜಿಹಾಳ ಗ್ರಾಮದವರು। ಕೇಳುವ ಯಾವ ಸ್ವಾಮಿಗಳು ನೀವು ಹೇಳಿರಿ
ಎಲ್ಲಿಂದ ಬಂದಿರಿ। ಅದನ್ನೇನು ಕೇಳುವಿರಿ। ದಾರಿಯ ತಪ್ಪುತರಿ ನನ್ನ
ಬೆಟ್ಟ ಅಗಲೇರಿ। ಅಲ್ಲಿಂದ ಬಂದು ಇದ್ದಲಗಿ ಹೊಳಿ ಮುಂದ
ಉಪವಾಸ ಮೂರುದಿಂದು ॥೩॥

ಇದ್ದಲಗಿ ಹೊಳಿಮುಂದ। ಇದ್ದಿಂದ ಮಾಡ್ಯಾನೋ ಗುರ್ತು ಒಂದು
ನಾಡ ಗೌಡ್ರ ನಿಂತಾರು ಅವನ ಮುಂದಗುಡಿಯ ಕಟ್ಟುವೆವು
ಗುಡಿಸಲು ಹಾಕುವೆವು। ಇಲ್ಲೆ ಇರಿ ನೀವು ನಾಮಾತ್ರ ಇರುವುದಿಲ್ಲ ನನ್ನ ಕಾಲ
ನಿಂದ್ರುದಿಲ್ಲ. ಪ್ರೇಮವಿರಲಿ ನನ್ನ ಮ್ಯಾಲ ॥೪॥

ಹೊತ್ತವು ಮುಳುಗಿತು। ಕತ್ತಲ ಹರಿದೀತು। ಕಳಿಸಿ ಬಿಡ್ರಿ ತುರ್ತು
ನಿಮ್ಮ ಮ್ಯಾಲ ಇರಲಿ ನಮ್ಮ ಗುರುತು। ಅಲ್ಲಿಂದ ಬಂದಾರೋ

ರುದ್ರ ಪಾದಕ ನಿಂತಾರೋ। ಪೂರಾ ಕಳಿಸುವೆ ನಾವು
ಆರ್ಶಿವಾದ ಕೊಡಿರಿ ನೀವು। ಬರುವೆವು ಒಂದು ದಿನವು ॥೫॥

ಅಲ್ಲಿಂದ ಸಂಗಮಕ ಬಂದಾನೋ। ವಾಸವ ಮಾಡ್ಯಾನೋ
ಭಕ್ತಿಯ ನುಡಿಸ್ಯಾನೊ ಸುತ್ತಮುತ್ತಲಿನ ಜಾಲಿಯ ಕಡಿಸ್ಯಾನೊ
ಗುಡಿಯನ್ನು ಕಟ್ಟಿಸಿ ಗುರ್ತವ ಮಾಡಿಸಿ ಪವಾಡನ್ನು ಬೆಳಸಿ ಬಾರದ
ಜನರಿಗೆ ಬುದ್ದಿಯ ಕೊಟ್ಟು ಭಕ್ತರನ್ನು ಕಾದನೊ ॥೬॥

ಸುತ್ತ ಜನಕ್ಕೆಲ್ಲ ಒತ್ತಿ ಹೇಳಿದ ಬುದ್ದಿ ಜಾತ್ರಿಯ ಮಾಡಿರಿ
ಚೈತ್ರವದಿ ಪಂಚಮಿ ಐತ್ರಿ ಬೆಳಗಲ್ಲ ಮಂದಿ ಹಗ್ಗವ ತಂದರು
ಇದ್ದಲಗಿ ಅವರು ಹಿಲಾಲ ತಂದರು ಪಾದಗಟ್ಟಿ ಹತ್ಯಾರು ॥೭॥

ಕಳಸವ ಬರುತ್ತಿತ್ತು ಅಮರಾವತಿಗಿ ಊರ ಇತ್ತು
ಹುನಗುಂದ ಮ್ಯಾಲೆ ಹಾಯ್ತು ಉದಯಕ್ಕ
ಸಂಗಮ ಸೇರಿತು ಪಲ್ಲಕಿ ಮೆರವಣಿಗೆ
ಕರೆಯಲಿಕ್ಕೆ ಹೋಗಿತ್ತು ಗೌ ಮುಳಗಿ ಸೇರಿತು
ಸಂಜೆಯ ಐದಕ್ಕೆ ದೈವವು ಕೂಡಿತ್ತು ತೇರವು ಸಾಗಾಯಿತು ॥೮॥

ಧರೆಯೊಳು ಮೆರೆದಿತು ಸಂಗಮ ಊರ ಇತ್ತು ಸಂಗಮೇಶನ
ವಾಸವಾಯಿತು ಕೃಷ್ಣ ಮಲಪ್ರಭ ಕೂಡಿದ್ದಾಯಿತು
ಗುರುಲಿಂಗ ಸಂಗ ವಾಕ್ಯವಾಯಿತು ಕೂಡಲರೇಶನ
ಕೂಡುವ ಮುಂದೆ ಪದವಾ ಮಾಡಿದ್ದಾಯಿತು ॥೯॥

ವಕ್ತೃವಿವರ

ಕ್ರಸಂ.	ಹೆಸರುಗಳು	ಊರು	ವಯಸ್ಸು	ಉದ್ಯೋಗ
೧.	ರಾಮರೆಡ್ಡಿ ದೇಸಾಯಿ	ಅಮರಾವತಿ	೮೫	ವಿಶ್ರಾಂತ ಜೀವನ
೨.	ರಾಘವೇಂದ್ರ ಜಾಗಿರದಾರ	ಗಂಜಾಳ	೬೦	ಒಕ್ಕಲುತನ
೩.	ದೀಲಿಪಕುಮಾರ ಜಾಗಿರದಾರ	ಗಂಜಾಳ	೫೫	ಒಕ್ಕಲುತನ
೪.	ಸಂಗಪ್ಪ ಮ. ಕುಂಬಾರ	ಬೆಳಗಲ್ಲ	೫೦	ಒಕ್ಕಲುತನ
೫.	ಶೇಖಪ್ಪ ಅಂಬಿಗೇರ	ಬೆಳಗಲ್ಲ	೬೦	ಒಕ್ಕಲುತನ
೬	ಮಹಾಂತಪ್ಪ ಚಂ. ಅಂಗಡಿ	ಬೆಳಗಲ್ಲ	೬೬	ದೇವಸ್ಥಾನದ ಅಧ್ಯಕ್ಷ
೭	ಶ್ರೀಶೈಲ ಅಂಗಡಿ	ಬೆಳಗಲ್ಲ	೪೫	ವ್ಯಾಪಾರ
೮.	ಚರಮೂರ್ತಯ್ಯ ಹಿರೇಮಠ	ಬೆಳಗಲ್ಲ	೭೬	ಒಕ್ಕಲುತನ
೯.	ಮುತ್ತಪ್ಪ ಬೇನಾಳ	ಇದ್ದಲಗಿ	೪೬	ಒಕ್ಕಲುತನ
೧೦	ವಿ.ವಿ. ಚಿತ್ತವಾಡಿಗಿ	ಇದ್ದಲಗಿ	೫೯	ನೌಕರಿ
೧೧.	ಸಿ.ಡಿ. ನಾಡಗೌಡ	ಇದ್ದಲಗಿ	೬೬	ಒಕ್ಕಲುತನ
೧೨.	ವಿ.ಡಿ. ಪತ್ತಾರ	ಇದ್ದಲಗಿ	೭೩	ಅಕ್ಕಸಾಲಿಗ
೧೩.	ಸಂಗಪ್ಪ ನಾ. ಬಳಿಗಾರ	ಇದ್ದಲಗಿ	೬೮	ವ್ಯಾಪಾರ
೧೪.	ಎಸ್.ವೈ. ಪಂಚಾಳ	ಇದ್ದಲಗಿ	೬೧	ನಿವೃತ್ತ ಶಿಕ್ಷಕ
೧೫.	ಅಮರಯ್ಯಸ್ವಾಮಿ ಕೋಟೂರು	ಕೂಡಲಸಂಗಮ	೬೦	ಅರ್ಚಕ
೧೬	ಕರಿಸಂಗಯ್ಯ ಕಾತೇದಾರ	ಕೂಡಲಸಂಗಮ	೬೦	ಅರ್ಚಕ
೧೭.	ಸಿದ್ಧಯ್ಯ ಮ. ಪುರಾಣಿಕ	ಕೂಡಲಸಂಗಮ	೬೨	ಅರ್ಚಕ
೧೮.	ಕುಡ್ಲಯ್ಯ ಕೋಟೂರ	ಕೂಡಲಸಂಗಮ	೬೩	ಅರ್ಚಕ
೧೯.	ಮಲ್ಲಯ್ಯ ಬ. ಸೂಲಿಬಾವಿ	ಕೂಡಲಸಂಗಮ	೬೧	ಅರ್ಚಕ
೨೦.	ನೂರೊಂದಪ್ಪ ಬದೂರಿ	ಕೂಡಲಸಂಗಮ	೬೦	ಕಳಸದ ಸೇವಕ
೨೧.	ಮಲ್ಲಪ್ಪ ಗೊರಚಿಕ್ಕನವರ	ಕೂಡಲಸಂಗಮ	೫೫	ವ್ಯಾಪಾರ
೨೨.	ರುದ್ರಪ್ಪ ಬದೂರಿ	ಕೂಡಲಸಂಗಮ	೫೫	ಒಕ್ಕಲುತನ
೨೩.	ಗುಂಡಪ್ಪ ಗೊರಚಿಕ್ಕನವರ	ಕೂಡಲಸಂಗಮ	೪೬	ಪ್ರಾಧಿಕಾರ ನೌಕರ
೨೪.	ಸಂಗಯ್ಯ ಪೂಜಾರ	ಕೂಡಲಸಂಗಮ	೬೫	ಅರ್ಚಕ
೨೫.	ಬಸವರಾಜ ಕಳ್ಳಿ	ಕೂಡಲಸಂಗಮ	೪೮	ಪ್ರಾಧಿಕಾರ ನೌಕರ
೨೬	ಎಂ.ವಿ. ದಾನಪ್ಪನವರ	ಕೂಡಲಸಂಗಮ	೭೮	ಗ್ರಂಥಪಾಲಕರು

ಛಾಯಾಚಿತ್ರಗಳು



ಬಸವಣ್ಣನವರ ಐಕ್ಯ ಮಂಟಪದ ಹಳೆಯಸ್ಮಾರಕ



ಬಸವೇಶ್ವರ ಐಕ್ಯ ಮಂಟಪ




ಸಂಗಮನಾಥನ ದೇವಾಲಯದ ಹೊರಗೋಡೆಯಲ್ಲಿರುವ
ನಾಗರಶಿಲ್ಪ, ಹಾವಾಡಿಗ ಶಿಲ್ಪ



ಸಂಗಮನಾಥನ ದೇವಾಲಯದ ಹೊರಗೋಡೆಯಲ್ಲಿರುವ
ಮಿಥುನ ಶಿಲ್ಪ



ಇದ್ದಲಿಗಿಯ ಹಿಲಾಲ



ಬೆಳಗಲ್ಲಿನಲ್ಲಿರುವ ಸಂಗಮನಾಥ ದೇವಾಲಯದ
ನೀಲ ನಕ್ಷೆ ಬಂಡೆಯ ಮೇಲಿರುವದು.



ಸಂಗಮನಾಥನ ದೇವಾಲಯದ ಆವರಣದಲ್ಲಿರುವ ಶಾಸನ ಶಿಲ್ಪ



ಬಸವಣ್ಣನವರ ಐಕ್ಯಮಂಟಪದ ಹಳೆಯ ಸ್ಮಾರಕ



ದಾಸೋಹ ಭವನ



ಗೂಳಿ ಬಸವೇಶ್ವರ ದೇವಸ್ಥಾನಕೂಡಲಸಂಗಮ



ಸಂಗಮನಾಥ ದೇವಾಲಯದ ಹೊರ ಗೋಡೆಯ ಮೇಲಿರುವ ಶಿಲ್ಪ



ಸಂಗಮನಾಥನ ದೇವಾಲಯದ ಹೊರಗೋಡೆಯಲ್ಲಿರುವ ಕೆತ್ತನೆಯ ಆಕೃತಿ



ಬಸವೇಶ್ವರ ಶಿಲ್ಪ ನಂದಿ



ಸಂಗಮನಾಥ ದೇವಾಲಯದ ಒಳಭಾಗ



ಸಂಗಮನಾಥನ ದೇವಾಲಯದ ಆವರಣದಲ್ಲಿರುವ
ವೀರಭದ್ರ ಶಿಲ್ಪ



ಜಾತವೇದ ಮುನಿಯ ಗದ್ದುಗೆ



ಸಂಗಮನಾಥನ ತೇರಿಗೆ ಬಂಗಾರದ ಕಳಸಹಾಕುತ್ತಿರುವುದು



ಬೆಳಗಲ್ಲ ಗ್ರಾಮದಿಂದ ತೇರಿನ ಮಿಣಿ ತರುತ್ತಿರುವುದು



ಸಂಗಮನಾಥನ ಜಾತ್ರೆಗೆ ಸೇರಿರುವ ಜನಸ್ತೋಮ



ಗಂಜಿಹಾಳದಿಂದ ತೇರಿಗೆ ಕಟ್ಟಲು ಬಾಳೆಕಂಬ ತರುತ್ತಿರುವ



ಸಂಕ್ರಮಣದಂದು ಸಂಗಮದಲ್ಲಿ ನೆರೆದಿರುವ ಜನಸ್ತೋಮ



ಬೆಳಗಲ್ಲನಲ್ಲಿರುವ ತೇರಿನ ಮಿಣಿ



ನೀಲಾಂಬಿಕೆಯ ಸ್ಮಾರಕ ತಂಗಡಗಿ



ಸಭಾಭವನ



ಸಂಗಮನಾಥನ ದೇವಾಲಯದಲ್ಲಿರುವ ಜೋಡಿ ನಂದಿಮೂರ್ತಿಗಳು



ಬಸವಧರ್ಮಪೀಠ ಕೂಡಲಸಂಗಮ



ಸಭಾಮಂಟಪ



ಬಸವನಬಾಗೇವಾಡಿಯಲ್ಲಿರುವ ಬಸವೇಶ್ವರ ಸ್ಮಾರಕ



ದಾಸೋಹಭವನ ಕೂಡಲಸಂಗಮ



ಐಕ್ಯ ಮಂಟಪಕ್ಕೆ ಹೋಗುವ ಸೇತುವೆ



ಇಂಗಳೇಶ್ವರದಲ್ಲಿ ನಿರ್ಮಿಸಿದ ಮಾದಲಾಂಬಿಕೆಯ ತವರು ಮನೆ ನವನಿರ್ಮಾಣ ಕಟ್ಟಡ



ಬಾಗೇವಾಡಿಯ ಬಸವೇಶ್ವರರ ಸ್ಮಾರಕ ಭವನ



ಬಸವ ಅಂತರಾಷ್ಟ್ರೀಯ ಕೇಂದ್ರ



ನವೀಕೃತ ಬಸವಣ್ಣನವರ ಐಕ್ಯಮಂಟಪ

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಗ್ರಂಥಗಳು

೧. ಅರವಿಂದ ಮಾಲಗತ್ತಿ, **'ಕನ್ನಡ ವಿಷಯ ವಿಶ್ವಕೋಶ ಜಾನಪದ'**, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೨೦೦೬

೨. ಅಂಗಡಿ ಎಸ್.ಎಸ್., **'ಸಂಕೀರ್ಣ ವೃತ್ತಿ ಪದಕೋಶ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೩. ಉಮಾಪತಿ ಎಸ್. (ಸಂ), **'ಬಸವೇಶ್ವರ ಪುರಾಣದ ಕಥಸಾರ'** ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೬

೪. ಕಪಟರಾಳ ಕೃಷ್ಣರಾವ್, **'ಸುರಪುರ ಸಂಸ್ಥಾನದ ಇತಿಹಾಸ'**, ಮಂಜುನಾಥ ಪ್ರಕಾಶನ, ಬೆಂಗಳೂರು, ೧೯೭೭

೫. ಕಲಬುರ್ಗಿ ಎಂ.ಎಂ.(ಸಂ), **'ಹರಿಹರನ ರಗಳೆಗಳು'** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ, ೧೯೯೯

೬. ಕಲಬುರ್ಗಿ ಎಂ.ಎಂ., **'ಉತ್ತರ ಕರ್ನಾಟಕ ಜಾನಪದ ಸಾಹಿತ್ಯ'**, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೮

೭. ಕಲಬುರ್ಗಿ ಎಂ.ಎಂ., **'ಕನ್ನಡ ಸಂಪಾದನಾ ಶಾಸ್ತ್ರ'**, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೬

೮. ಕಲಬುರ್ಗಿ ಎಂ.ಎಂ., **'ಐತಿಹಾಸಿಕ'** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೧

೯. ಕಲಬುರ್ಗಿ ಎಂ.ಎಂ., **'ಕರ್ನಾಟಕದ ಕೈಫಿಯತ್ತಗಳು'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ್ಯ, ೧೯೯೪

೧೦. ಕಲಬುರ್ಗಿ ಎಂ.ಎಂ., **'ಮಾರ್ಗ'** (ಸಂಪುಟ–೧), ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೦

೧೧. ಕಲಬುರ್ಗಿ ಎಂ.ಎಂ., **'ಮಾರ್ಗ'** (ಸಂಪುಟ–೪), ಸಪ್ನ ಬುಕ್ ಹೌಸ್, ಬೆಂಗಳೂರು,೨೦೧೦

೧೨. ಕಲಬುರ್ಗಿ ಎಂ.ಎಂ., **'ಶಾಸನಗಳಲ್ಲಿ ಶಿವಶರಣರು'**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೪

೧೩. ಕಾಪಸೆ ರೇವಪ್ಪ, **'ಮಲ್ಲಿಗೆಯ ದಂಡೆ'**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೪

೧೪. ಕೆಳದಿ ಗುಂಡಾ ಜೋಯಿಸ, **'ಲಿಂಗಣ್ಣ ಕವಿಯ ಕೆಳದಿ ನೃಪವಿಜಯ'**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೭

೧೫. ಗಿರಿಸಾಗರ ಪಿ.ವೈ., **'ಬಾಗಲಕೋಟೆ ತಾಲೂಕು ದರ್ಶನ'**, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೭

೧೬. ಗುಂಜಾಳ ಎಸ್. ಆರ್., **'ವಿದ್ವಾಂಸರ ದೃಷ್ಟಿಯಲ್ಲಿ ಬಸವಣ್ಣ'**, ಬಸವತತ್ವ ಪ್ರಸಾರ ಸಂಸ್ಥೆ, ಧಾರವಾಡ, ೨೦೦೮

೧೭. ಗುರುಪಾದ ಮರಿಗುದ್ದಿ, '**ವೀರಶೈವಾಮೃತ ಪುರಾಣ ವಿವೇಚನೆ**', ನಿಜಲಿಂಗೇಶ್ವರ ಗ್ರಂಥಮಾಲೆ ನಿಡಸೋಸಿ, ಬೆಳಗಾವಿ – ೨೦೦೧

೧೮. ಗೊರಚಿಕ್ಕನವರ ಎ.ಎಂ., '**ಬಂಗಾರದ ಕಳಸ**', ಸಂಗಮ ಪ್ರಕಾಶನ, ಕೂಡಲಸಂಗಮ, ೨೦೧೨

೧೯. ಗೋಪಾಲರಾವ್ ಎಚ್.ಎಸ್., '**ಕಲ್ಯಾಣಿ ಚಾಲುಕ್ಯರ ದೇವಾಲಯಗಳು : ಒಂದು ಸಾಂಸ್ಕೃತಿಕ ಅಧ್ಯಯನ**', ಪ್ರಾಚ್ಯವಸ್ತು ಮತ್ತು ವಸ್ತುಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೧೯೯೩

೨೦. ಚಂದ್ರಶೇಖರ ಎಂ. (ಸಂ), '**ವಿರೂಪಾಕ್ಷ ಪಂಡಿತನ ಚನ್ನಬಸವಪುರಾಣ**', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೯೭೯

೨೧. ಚಿದಾನಂದಮೂರ್ತಿ ಎಂ, '**ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**', ಪ್ರಸಾರಾಂಗ, ಮೈಸೂರು, ೧೯೬೬

೨೨. ಚಿದಾನಂದಮೂರ್ತಿ ಎಂ, '**ಲಿಂಗಾಯತ ಅಧ್ಯಯನಗಳು**', ವಾಗ್ದೇವಿ ಪುಸ್ತಕಗಳು, ಮೈಸೂರು, ೧೯೮೬

೨೩. ಚಿದಾನಂದಮೂರ್ತಿ ಎಂ, '**ಸಂಶೋಧನೆ**', ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು, ೨೦೦೨

೨೪. ಚಿದಾನಂದಮೂರ್ತಿ ಎಂ., '**ಬಸವಣ್ಣನವರು**', ನ್ಯಾಷನಲ್ ಬುಕ್ ಟ್ರಸ್ಟ್ ಆಪ್ ಇಂಡಿಯಾ, ಹೊಸದೆಹಲಿ, ೨೦೦೯

೨೫. ಚಿದಾನಂದಮೂರ್ತಿ ಎಂ., '**ಸ್ಥಾವರ – ಜಂಗಮ**', ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೪

೨೬. ಚೆನ್ನಬಸಪ್ಪ ಬೆಟ್ಟದೂರು, 'ಕಾಯಕ ಪರಿಣಾಮಿ', ಚೆನ್ನಬಸವ ಪಟ್ಟದೇವರ ಶತಮಾನೋತ್ಸವ ಸಮಿತಿ, ಹಿರೇಮಠ ಬಾಲ್ಕಿ

೨೭. ಜತ್ತಿ ಬಿ.ಡಿ., '**ನನಗೆ ನಾನೇ ಮಾದರಿ**' ಲೋಕ ಶಿಕ್ಷಣ ಟ್ರಸ್ಟ್ ಗ್ರಂಥಮಾಲೆ, ಹುಬ್ಬಳ್ಳಿ, ೧೯೮೬

೨೮. ಜಾಮದಾರ ಎಸ್.ಎಂ., '**ಕಲ್ಯಾಣ ಪುನರುತ್ಥಾನ**', ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು, ೨೦೧೪

೨೯. ತಪಸ್ವಿಕುಮಾರ, '**ಕನ್ನಡ ಒಗಟುಗಳು**', ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು, ೧೯೭೬

೩೦. ತಿಪ್ಪೇರುದ್ರಸ್ವಾಮಿ ಎಚ್., (ಸಂ), **ಅಮುಗೆ ದೇವಯ್ಯಗಳ ಸಾಂಗತ್ಯ**', ಶಿವರಾತ್ರೀಶ್ವರ ಗ್ರಂಥಮಾಲೆ, ರಾಮಾನುಜ ರಸ್ತೆ, ಮೈಸೂರು, ೧೯೬೫

೩೧. ತಿಪ್ಪೇರುದ್ರಸ್ವಾಮಿ ಎಚ್., 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ', ವಿ.ಕೆ. ಮೂರ್ತಿ ಕೃಷ್ಣಮೂರ್ತಿಪುರ, ಮೈಸೂರು, ೧೯೮೫

೩೨. ದೇವೀರಪ್ಪ ಎಚ್. (ಸಂ), '**ಶಿವತತ್ವ ಚಿಂತಾಮಣಿ**', ಪ್ರಾಚ್ಯವಿದ್ಯಾ ಸಂಶೋಧನಾಲಯ ಮೈಸೂರು, ೧೯೬೦

೩೩. ದೇವೀರಪ್ಪ ಎಚ್., **'ಹಂಪಿಯ ಹರಿಹರದೇವರ ಶರಣಚರಿತ ಮಾನಸಂ'**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೫

೩೪. ನರಸಿಂಹಾಚಾರ್ಯ ಡಿ.ಎಲ್., **'ಕನ್ನಡ ಗ್ರಂಥ ಸಂಪಾದನೆ'**, ಶಾರಾದ ಮಂದಿರ ರಾಮಯ್ಯ ರಸ್ತೆ, ಮೈಸೂರು, ೧೯೭೬

೩೫. ನರಸಿಂಹಾಚಾರ್ ಆರ್., **'ಕರ್ನಾಟಕ ಕವಿ ಚರಿತೆ ೧-೨-೩'**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೨-೭೩-೭೪

೩೬. ನಂಜುಂಡಸ್ವಾಮಿ ಎ.ಎಸ್., **'ಪಾಳೆಗಾರರು ಮತ್ತು ಒಡೆಯರ ಇತಿಹಾಸ'**, ೨೦೧೨

೩೭. ನಾಗಯ್ಯ ಜೆ.ಎಂ., **'ಆರನೆಯ ವಿಕ್ರಮಾದಿತ್ಯನ ಶಾಸನಗಳು : ಒಂದು ಅಧ್ಯಯನ'**, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ, ೧೯೯೨

೩೮. ನಾಗಯ್ಯ ಜೆ.ಎಂ., **'ಬಳ್ಳಾರಿ ಜಿಲ್ಲೆಯ ಸಂಸ್ಕೃತಿಕ ಇತಿಹಾಸ'**, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೨

೩೯. ನಾಗೇಗೌಡ ಎಚ್.ಎಲ್. (ಸಂ), **'ಪ್ರವಾಸಿ ಕಂಡ ಇಂಡಿಯಾ ಭಾಗ-೨'**

೪೦. ನಾಗೇಶ ಎಚ್.ವಿ., **'ಗ್ರಾಮ ವ್ಯಾಸಂಗ'**, ಚಂದ್ರನಾಥ ಪ್ರಕಾಶನ, ಧಾರವಾಡ, ೧೯೭೧

೪೧. ನಾಯಕ ಹಾ.ಮಾ. (ಸಂ), **'ಕನ್ನಡ ಸಾಹಿತ್ಯ ಚರಿತೆ'**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ

೪೨. ನಾರಾಯಣ ಪಿ. ವಿ., **'ಬಸವಪುರಾಣ'** (ಕನ್ನಡನುವಾದ), ವಸಂತ ಎಂಟರ್ ಪ್ರೈಸಸ್, ಬೆಂಗಳೂರು, ೨೦೦೯

೪೩. ಪರಮಶಿವಯ್ಯ ಜಿ.ಶಂ., **'ಕನ್ನಡ ವೃತ್ತಿ ಗಾಯಕ ಕಾವ್ಯಗಳು'**, ಕನ್ನಡ ಸಾಹಿತ್ಯ, ಬೆಂಗಳೂರು, ೧೯೭೧

೪೪. ಪಾಟೀಲ ಜಿ.ಎಲ್., **'ಕಣ್ಮರೆಯಾಗಲಿರುವ ಕೂಡಲಸಂಗಮ ಕ್ಷೇತ್ರ'**, ಕರ್ನಾಟಕ ಶಿಕ್ಷಣ ಪ್ರಸಾರಕ ಸಂಘ, ಬಾಗೇವಾಡಿ, ೧೯೮೫

೪೫. ಬಸವರಾಜು ಎಲ್., **'ನೂರಾರು ಶರಣರ ಸಾವಿರ ವಚನಗಳು'**, ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು, ೨೦೦೮

೪೬. ಬಸವರಾಧ್ಯ ಎನ್. (ಸಂ), **'ಆರಾಧ್ಯ ಚರಿತ್ರೆ'**, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೦

೪೭. ಬಸವರಾಧ್ಯ ಎನ್. (ಸಂ), **'ಪಾಲ್ಕುರಿಕೆ ಸೋಮನಾಥ ಒಂದು ಅಧ್ಯಯನ'**, ಬಸವ ಸಮಿತಿ ಬೆಂಗಳೂರು ೨೦೦೦

೪೮. ಮಲ್ಲಿಕಾರ್ಜುನ ಕೆ., ಮಾಳಿ ವಿಎಸ್. (ಸಂ), **'ಬಿ.ಆರ್. ಹಿರೇಮಠರ ಶಾಸನ ಅಧ್ಯಯನ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨

೪೯. ಮಲ್ಲಾಪುರ ಬಿ.ವಿ., **'ಜಾನಪದ ಸಂಪದ'**, ಕುಮಾರ ವೀರೇಶ ಪ್ರಕಾಶನ, ಕಲಬುರ್ಗಿ

೫೦. ಮಹೇಶ ತಿಪ್ಪಶೆಟ್ಟಿ, **'ಕೂಡಲಸಂಗಮ ಸಮಾಜೋ-ಧಾರ್ಮಿಕ ಅಧ್ಯಯನ'**, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು, ೨೦೧೬

೫೧. ಮಾಳವಾಡ ಸ.ಸ.(ಸಂ), **'ಸಿದ್ದನಂಜೇಶನ ರಾಘವಾಂಕ ಚಾರಿತ್ರ್ಯ'**, ಮುರುಘಾ ಮಠ, ಧಾರವಾಡ, ೧೯೫೪

೫೨. ರಹಮತ್ ತರೀಕೆರೆ , **‘ಕರ್ನಾಟಕ ಸೂಫಿಗಳು’**, ಪ್ರಸಾರಾಂಗ, ಕನ್ನಡ ವಿ.ವಿ.ಹಂಪಿ, ೧೯೯೮

೫೩. ರಾಜೇಗೌಡ ಹ. ಕ., **‘ಗರಣಿಯ ಬಸವಲಿಂಗ ವಿರಚಿತ ಬಸವೇಶ್ವರ ಕಾವ್ಯ’**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೮೨

೫೪. ವಿಜಯಕುಮಾರ ಮಹಾನುಭಾವಿಗಳು, **‘ಬಸವಣ್ಣನವರು’** (ಚರಿತ್ರೆ ಮತ್ತು ಸಂಸ್ಕೃತಿಯ ಶೋಧಗಳು), ಪ್ರಭುದೇವ ಪ್ರಕಾಶನ, ೨೦೦೯

೫೫. ವಿದ್ಯಾಶಂಕರ ಎಸ್.(ಸಂ), **‘ಭೀಮಕವಿಯ ಬಸವಪುರಾಣ’**, ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು, ೨೦೦೮

೫೬. ವಿದ್ಯಾಶಂಕರ ಎಸ್.(ಸಂ), **‘ವೀರಶೈವ ಪುರಾಣಗಳು ಒಂದು ಅಧ್ಯಯನ’**, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೮

೫೭. ವಿದ್ಯಾಶಂಕರ ಎಸ್. (ಸಂ), **‘ಚಾಮರಸನ ಪ್ರಭುಲಿಂಗ ಲೀಲೆ’** (ಗದ್ಯಾನುವಾದ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೪

೫೮. ವಿದ್ಯಾಶಂಕರ ಎಸ್. (ಸಂ), ರಾಚಪ್ಪ ಆರ್., **‘ವಿರಕ್ತ ತೋಂಟದಾರ್ಯನ ಪಾಲ್ಕುರಿಕೆ ಸೋಮೇಶ್ವರ ಪುರಾಣ’**, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು – ೨೦೧೨

೫೯. ವೆಂಕಟೇಶ ಸಿ., **‘ತೆಲುಗು ದಕ್ಷಿಣಾತ್ಯ ಸಾಹಿತ್ಯ’**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ೧೯೯೯

೬೦. ವೆಂಕಣ್ಣಯ್ಯ ಟಿ.ಎಸ್.(ಸಂ), **‘ಬಸವರಾಜದೇವರ ರಗಳೆ’**, ವೆಂಕಣ್ಣಯ್ಯ ಸ್ಮಾರಕ ರತ್ನಮಾಲೆ ಮೈಸೂರು, ೧೯೯೭

೬೧. ವೇದವ್ಯಾಸರು ಎಚ್.ಕೆ., **‘ಕನಾಟಕದ ಹರಿದಾಸರು’**, ಪರಿಮಳಾ ಸಂಶೋಧನಾ ಮತ್ತು ಪ್ರಕಾಶನ ಮಂದಿರ, ನಂಜನಗೂಡು, ೧೯೬೫

೬೨. ಶಂಭು ಬಳಿಗಾರ , **‘ಹುನಗುಂದ ತಾಲೂಕು ದರ್ಶನ’**, ಬಿ.ಎಚ್.ಎಲ್. ಪ್ರಕಾಶನ, ಬೆಂಗಳೂರು, ೧೯೮೬

೬೩. ಶಾಮರಾಯ ತ.ಸು., **‘ಶಿವಶರಣ ಕಥಾರತ್ನಕೋಶ’**, ವೆಂಕಣ್ಣಯ್ಯ ಸ್ಮಾರಕ ರತ್ನಮಾಲೆ ಮೈಸೂರು, ೧೯೯೭

೬೪. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು, **‘ಕೂಡಲಸಂಗಮ ಅಳಿವು–ಉಳಿವು’**, ತರಳುಬಾಳು ಪ್ರಕಾಶನ, ಶ್ರೀ ತರಳುಬಾಳು ಜಗದ್ಗುರು ಬ್ರಹನ್ಮಠ, ಸಿರಗೇರಿ, ೧೯೮೮

೬೫. ಶೀಲಾಕಾಂತ ಪತ್ತಾರ, **‘ಬಾದಾಮಿ : ಒಂದು ಸಾಂಸ್ಕೃತಿಕ ಅಧ್ಯಯನ’**, ಅಪ್ರಕಟಿತ ಡಿ.ಲಿಟ್. ಪ್ರಬಂಧ, ಕವಿವಿ ಹಂಪಿ

೬೬. ಶೇರ್ ಬಿಎಸ್., **‘ಕರ್ನಾಟಕದಲ್ಲಿ ಸತಿ ಪದ್ಧತಿ’**, ವೀರಶೈವ ಅಧ್ಯಯನ ಅಕಾಡೆಮಿ, ನಾಗನೂರು ರುದ್ರಾಕ್ಷಿಮಠ, ಬೆಳಗಾವಿ, ೧೯೭೬

೬೭. ಸದಾನಂದ ಕನವಳ್ಳಿ (ಸಂ), ಕೆರಿಮನಿ ಸಿ.ವಿ., **‘ವೀರಶೈವ ಸಾಹಿತ್ಯ ಸಮೀಕ್ಷೆ’**, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, ೨೦೧೦

೬೮. ಸಿದ್ಧಯ್ಯ ಪುರಾಣಿಕ , **‘ಹರ್ಡೇಕರ ಮಂಜಪ್ಪನವರು’**, ವೀರಶೈವ ಅಧ್ಯಯನ ಸಂಸ್ಥೆ, ಡಂಬಳ, ಗದಗ, ೧೯೮೦

೬೯. ಹಿರೇಮಠ ಬಿ.ಆರ್., **‘ಶಾಸನಗಳಲ್ಲಿ ಕರ್ನಾಟಕ ವರ್ತಕರು’**, ಪ್ರಸಾರಾಂಗ ಕರ್ನಾಟಕ ವಿವಿ. ಧಾರವಾಡ

೭೦. ಹಿರೇಮಠ ಬಿ.ಕೆ., ‘ಕನ್ನಡ ಹಸ್ತಪ್ರತಿಗಳು : ಒಂದು ಅಧ್ಯಯನ’, ವೀರಶೈವ ಅಧ್ಯಯನ ವೇದಿಕೆ, ಹಿರೇಮಠ, ಬಿಜಾಪುರ, ೧೯೯೨

೭೧. ಹಿರೇಮಠ ಆರ್.ಸಿ.(ಸಂ), **‘ತ್ರಿಷಷ್ಟಿಪುರಾತನ ಚಾರಿತ್ರಂ’**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,೧೯೬೬

೭೨. ಹಿರೇಮಠ ಆರ್.ಸಿ.(ಸಂ), **‘ಬಸವಪುರಾಣ’**, ಮುರುಘಾ ಮಠ, ಧಾರವಾಡ, ೧೯೭೧

೭೩. ಹಿರೇಮಠ ಆರ್.ಸಿ., **‘ಷಡಕ್ಷರಿಯ ಬಸವರಾಜ ವಿಜಯಂ’**, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮

೭೪. ಹಿರೇಮಲ್ಲೂರು ಈಶ್ವರನ್, **‘ಬಸವಣ್ಣ ಮತ್ತು ಲಿಂಗಾಯತ ಧರ್ಮ’** (ಭಾಗ–೨), ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೮



ಅಂತಾರಾಷ್ಟ್ರೀಯ ವಚನ ಅಧ್ಯಯನ ಕೇಂದ್ರ, ಕೂಡಲಸಂಗಮ